
ಕೆಲ್ಲಂಗೆರೆ ತಿಮ್ಮಪ್ಪದಾಸರು

ಜೀವನ ಮತ್ತು ಕೃತಿಗಳು

ಸಂಪಾದಕರು: ಕೆ. ವಿ. ಶ್ರೀನಿವಾಸ್
ಪ್ರೊ. ಜಿ. ಅಶ್ವತ್ಥನಾರಾಯಣ, ಮನೋರಮ



ಕೆಲ್ಲಂಗೆರೆ ತಿಮ್ಮಪ್ಪದಾಸರು

ಜೀವನ ಮತ್ತು ಕೃತಿಗಳು

ಸಂಪಾದಕರು

ಕೆ.ವಿ. ಶ್ರೀನಿವಾಸ್

ಪ್ರೊ. ಜಿ. ಅಶ್ವತ್ಥನಾರಾಯಣ

ಕೆ.ಎಸ್. ಮನೋರಮ ರಮೇಶ್

ಶ್ರೀನಿವಾಸ ಪುಸ್ತಕ ಪ್ರಕಾಶನ

ನಂ. 164/A, ಮೊದಲನೇ ಮಹಡಿ, ಎಂ.ಆರ್.ಎನ್. ಬಿಲ್ಡಿಂಗ್
ಕನಕಪುರ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560 004.

KELLANGERE THIMMAPPADASARU
JEEVANA MATTU KRITHIGALU

Brief lifehistory & literarary works of Kellangere Thimmappadasaru

Editors
K.V. Srinivas
Prof. G. Aswathanarayana
Smt. K.S. Manorama Ramesh

Published by
K.S. Krishnamurthy, on behalf of **Srinivasa Pustaka Prakashana**,
164/A, 1st Floor, M.R.N. Building, Kanakapura Main Road,
Basavanagudi, Bangalore - 560 004. Mob : 9844048406

© K.V. Srinivas

First Edition : 2007

Second Edition : 2023

Pages : 176 + iv + VIII Colour Pages

Price : ₹ 200 ಬೆಲೆ : ರೂ. ೨೦೦

No. of Copies : 1000

70 GSM N.S. Maplitho – 1/8 Demy

Cover Design : **Chandrashekar**

Book Design at : **Page Designers**
Bangalore - 560 004. E-mail : bsmadhu75@gmail.com

Printed at : **Sathyananda Printers**
Pipeline Parallel Road, Cholura Palya,
Bangalore - 560 023.

ಅರ್ಪಣೆ




ಶ್ರೀಮತಿ ಶ್ರೀ ಸಾವಿತ್ರಮ್ಮ   ಶ್ರೀ ಕೆಲ್ಲಂಗೆರೆ ವೆಂಕಟದಾಸಪ್ಪ

(ಪೂಜ್ಯ ತಿಮ್ಮಪ್ಪದಾಸರ ಹಿರಿಯ ಮೊಮ್ಮಗ-ಸೊಸೆ)

ಸರಳ ಜೀವನ, ದೇವರಲ್ಲಿ ಭಕ್ತಿ, ಧರ್ಮನಿಷ್ಠೆ, ಸನ್ನಡತೆ, ಉಪಕಾರ ಬುದ್ಧಿ,
ವಿನಯವಂತಿಕೆ, ಸದ್ಗುಣಗಳಿಂದ, ಸಾತ್ತ್ವಿಕ ಜೀವಿಗಳಾಗಿ
ಬಾಳಿ ಬದುಕಿ
ನಮ್ಮೆಲ್ಲರ ಜೀವನಕ್ಕೆ ಬೆಳಕಾದ
ಕೆಲ್ಲಂಗೆರೆ ವೆಂಕಟದಾಸಪ್ಪ - ಮಾತೋಶ್ರೀ॥ ಶ್ರೀ ಸಾವಿತ್ರಮ್ಮ
ಅವರ ದಿವ್ಯಸ್ಮೃತಿಗೆ
ಭಕ್ತಿಪೂರ್ವಕವಾಗಿ ಈ ಕೃತಿಯನ್ನು ಅರ್ಪಿಸಿದೆ

ಮುನ್ನುಡಿ



ನಾವು ಸಮಾಜದಲ್ಲಿ ಗಣ್ಯರ ಸಾಲಿಗೆ ಸೇರುವುದು ಎರಡು ಬಗೆಯಲ್ಲಿ. ಒಂದು ರೀತಿ ಎಂದರೆ ನಾವೇ ಸಾಧನೆ ಮಾಡಿ ಗಣ್ಯರು ಎನ್ನಿಸಿಕೊಳ್ಳುವುದು; ಅಪೂರ್ವಸಾಧನೆ ಮಾಡಿದ ಹಿರಿಯರು ನಮ್ಮವರು ನಮ್ಮ ಪೂರ್ವಿಕರು ಅವರ ವಂಶಸ್ಥರು ನಾವು ಎಂದು ಹೇಳಿಕೊಳ್ಳುವುದರಿಂದ, ಜನ ಹಾಗಂತ ಗುರುತಿಸುವುದರಿಂದ ಗಣ್ಯರಾಗುವುದು ಇನ್ನೊಂದು ಬಗೆ. ಈ ರೀತಿ ತಮ್ಮ ಹಿರಿಯರಿಂದ ಸಮಾಜದಲ್ಲಿ ಮಾನ್ಯರಾಗುವುದು ಎಲ್ಲರಿಗೂ ದೊರೆಯುವ ಭಾಗ್ಯವಲ್ಲ, ಅದಕ್ಕೆ ಪೂರ್ವಾರ್ಜಿತ ಪುಣ್ಯವಿರಬೇಕು. ಅಂತಹ ಪುಣ್ಯ ನನ್ನ ಪಾಲಿಗಿದೆ ಎಂಬುದು ನನ್ನ ಭಾಗ್ಯವಾಗಿದೆ.

ಕೆಲ್ಲಂಗೆರೆ ತಿಮ್ಮಪ್ಪದಾಸರು ಕನ್ನಡನಾಡಿನಲ್ಲಿ ಅದ್ವೈತ ಹರಿದಾಸರಲ್ಲಿ ಪ್ರಮುಖರಲ್ಲಿ ಒಬ್ಬರು. ಅರಸೀಕೆರೆ ತಿಮ್ಮಪ್ಪದಾಸರು ಎಂತಲೂ ಅವರನ್ನು ಜನ ಕರೆಯುತ್ತಾರೆ. ಅಧ್ಯಾತ್ಮಪ್ರವೀಣರಾಗಿ, ಹರಿಕಥಾ ವಿದ್ವಾಂಸರಾಗಿ, ಕಲಾವಿದರಾಗಿ ಸಾರ್ವಜನಿಕ ಸೇವಾ ದುರಂಧರರಾಗಿ ಸಜ್ಜನ ಸದ್ಗೃಹಸ್ಥರಾಗಿ ಅಪೂರ್ವ ಕೀರ್ತನೆಗಳನ್ನು ಹರಿಕಥೆಗಳನ್ನು ರಚಿಸಿ ಭಕ್ತಕವಿಗಳಾಗಿ ನಾಡಿನಾದ್ಯಂತ ಕಳೆದ ಶತಮಾನದ ಪ್ರಾರಂಭದಲ್ಲಿ ಪ್ರಖ್ಯಾತರಾದವರು ತಿಮ್ಮಪ್ಪದಾಸರು, ಅವರ ಕೊನೆಯ ಮಗ ಅನಂತರಾಮಯ್ಯನವರು ನಮ್ಮ ತಂದೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಇಂಥ ಮಹಾಪುರುಷರ ಮೊಮ್ಮಗ ಎಂಬುದೇ ನಮ್ಮಂಥವರಿಗೆ ನಿಜವಾದ ಪಿತ್ರಾಜಿತ ಆಸ್ತಿಯೆಂದರೆ ತಪ್ಪಿಲ್ಲ. ವಂಶದ ಹಿರಿಮೆ ಮಹಾಪ್ರಯಾಸ ಪುಣ್ಯದವೇ.

ತಿಮ್ಮಪ್ಪದಾಸರು ಕೇವಲ ಕುಟುಂಬವತ್ಸಲರಷ್ಟೇ ಆಗಿರಲಿಲ್ಲ. ಸಮಾಜಸೇವಾ ದುರಂಧರರಾಗಿದ್ದರು. ತಮ್ಮ ಸುತ್ತಮುತ್ತಲಿನ ಜನರ ಕಷ್ಟ ಸುಖಗಳಿಗೆ ಹೆಗಲಿಗೆ ಹೆಗಲು ಕೊಡುತ್ತಿದ್ದರು. ಹೀಗಾಗಿ ಕೇವಲ ಅವರ ಮನೆತನದವರಾದ ನಾವಷ್ಟೇ ಅಲ್ಲ, ಇಡೀ ಊರಿನ ಜನತೆ, ನಾಡಿನ ಸಾಹಿತಿ ವಿದ್ವಾಂಸರು ಅವರನ್ನು ಇಂದಿಗೂ ನೆನೆಯುತ್ತಾರೆ.

ತಿಮ್ಮಪ್ಪದಾಸರ ಮನೆತನ ಪ್ರತಿಭಾವಂತರಿಂದ ಕೂಡಿದ ಮನೆತನ. ದಾಸರ ಮೊಮ್ಮಗ ರಾಮಣ್ಣ ಪ್ರಸಿದ್ಧ ಹರಿಕಥಾ ವಿದ್ವಾಂಸರಾಗಿದ್ದರು. ಮೂರನೇ ಮಗ ನಾರಾಯಣಪ್ಪ ಮೃದಂಗ ವಿದ್ವಾಂಸರಾಗಿದ್ದರು – ಇವರ ಮಗನೇ ಪ್ರಖ್ಯಾತ ಹರಿಕಥಾ ವಿದ್ವಾಂಸ ಮತ್ತು ಸಂಗೀತಕೋವಿದ ವಿಶ್ವೇಶ್ವರ ಅವರು. ಎರಡನೇ ಮಗ ರಂಗಪ್ಪನವರ ಪುತ್ರ ಕೃಷ್ಣಪ್ಪ ಪ್ರತಿಭಾವಂತ ಹಾರ್ಮೋನಿಯಂ ವಾದಕರೂ ಗಾಯಕರಾಗಿದ್ದರು. ಈ ಅಣ್ಣ ತಮ್ಮಂದಿರ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಎಲ್ಲರೂ ನಮ್ಮಜ್ಜ ತಿಮ್ಮಪ್ಪದಾಸರು

ರಚಿಸಿದ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಬ್ಬ ಹರಿದಿನಗಳಲ್ಲಿ ಇಂದು ಹಾಡಿಕೊಳ್ಳುತ್ತಾ ಕೀರ್ತನ ಸಾಹಿತ್ಯ ಸಂಪತ್ತನ್ನು ಉಳಿಸಿಕೊಂಡು ಬಂದಿದ್ದಾರೆ. ಹೀಗೆ ಮನೆತನದ ಕೀರ್ತನ ಕಲಾಪರಂಪರೆಯನ್ನು ಉಳಿಸಿಕೊಂಡು ಬರುವುದು ಸುಲಭವಲ್ಲ; ಅದೊಂದು ಸಾಧನೆ, ಅಪೂರ್ವ ಭಾಗ್ಯ.

ನಮ್ಮ ನಾಡಿನಲ್ಲಿ ರಾಮಾಯಣ, ಮಹಾಭಾರತ, ಭಗವದ್ಗೀತೆಗಳನ್ನು ಹರಿಕಥಾರೂಪದಲ್ಲಿ ಜನರಿಗೆ ರಸಭೋಜನವಾಗಿ ಉಣಿಸುತ್ತಾ ಜನರನ್ನು ಆ ಮೂಲಕ ಸುಸಂಸ್ಕೃತರನ್ನಾಗಿ ಮಾಡಿದ ಹೆಗ್ಗಳಿಕೆ ತಿಮ್ಮಪ್ಪದಾಸರದು. ತಿಮ್ಮಪ್ಪದಾಸರು ತಮ್ಮ ಕಾಲದ ಜನಕ್ಕಷ್ಟೇ ಸಂತೋಷ, ಜ್ಞಾನ ನೀಡಿದವರಲ್ಲ; ಅದನ್ನು ಕೀರ್ತನೆಗಳ ಮೂಲಕ ಹರಿಕಥೆ ಕಾವ್ಯಗಳ ಮೂಲಕ ಬರಹದಲ್ಲಿ ಮೂಡಿಸಿ ನಾಡಿಗೆ ಮಹೋಪಕಾರ ಮಾಡಿದ್ದಾರೆ. ಆದರೆ ದುರ್ದೈವದಿಂದ ಅವರು ರಚಿಸಿದ ಕೀರ್ತನೆ, ಹರಿಕಥೆಗಳ ಸಾಹಿತ್ಯ ಸಿಕ್ಕಿದವರ ಪಾಲಾಗಿ, ಪರಂಪರೆಯಿಂದ ಹಾಡಿಕೊಂಡು ಬಂದವರ ಬಾಯಲ್ಲಷ್ಟೇ ಸ್ವಲ್ಪಮಟ್ಟಿಗೆ ಉಳಿದಿದೆ. ಅವರ ಜೀವನ ವಿವರಗಳನ್ನು ಬಲ್ಲವರು ಕಾಲಧರ್ಮದಿಂದ ಕಣ್ಮರೆಯಾಗಿದ್ದಾರೆ. ಇಂಥ ಸಂದರ್ಭದಲ್ಲಿ ನನ್ನ ಅತ್ತಿಗೆಯ ತಮ್ಮ ಕೆ.ವಿ. ಶ್ರೀನಿವಾಸ್ ಮನೆತನದ ಹಿರಿಯರನ್ನು ಕಿರಿಯರನ್ನು ಬಂಧುಮಿತ್ರರನ್ನು ಹಲವು ವರ್ಷಗಳಿಂದ ಸಂಧಿಸಿ ಕೀರ್ತನೆ, ಮಾಹಿತಿ ಸಂಗ್ರಹಿಸಿ ಬಹಳ ಶ್ರಮದಿಂದ ಪ್ರಕಟಣೆಗೆ ಪ್ರಯತ್ನಿಸಿದ್ದಾರೆ.

ನಾವ್ಯಾರು ಮಾಡಲಾಗದ ಕೆಲಸವನ್ನು ಅವರು ಮಾಡಿ ಮನೆತನದ ಕೊಡುಗೆಯನ್ನು ನಾಡಿಗೆ ಕೊಡಲು ಕಾರಣಕರ್ತರಾಗಿದ್ದಾರೆ. ರಾಜೀವಲೋಚನ (ನನ್ನ ದೊಡ್ಡಪ್ಪನ ಮೊಮ್ಮಗ) ಅಳಿಲು ಸೇವಾ ಸಂಸ್ಥೆಯ ಮಾರ್ಗದರ್ಶನದಲ್ಲಿ ಶ್ರೀನಿವಾಸ ಪುಸ್ತಕ ಪ್ರಕಾಶನದಲ್ಲಿ ಪ್ರಕಟಿಸಲು ಮುಂದೆ ಬಂದಿರುವುದು ಸಂತೋಷದ ವಿಷಯವಾಗಿದೆ. ನಮ್ಮ ಮನೆತನದವರಲ್ಲದಿದ್ದರೂ ದಾಸಸಾಹಿತ್ಯದ ಅಭಿಮಾನದಿಂದ ಕನ್ನಡಪ್ರೇಮದಿಂದ ದಾಸಸಾಹಿತ್ಯ ವಿದ್ವಾಂಸರೂ, ಸಂಶೋಧಕರೂ ವಾಗ್ಮಿಗಳೂ ಆದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಶ್ರೀನಿವಾಸ ಸಂಗ್ರಹಿಸಿದ ಸಾಹಿತ್ಯವನ್ನೆಲ್ಲಾ ಪರಿಷ್ಕರಿಸಿ ತಿದ್ದಿ, ಅದಕ್ಕೆ ಒಂದು ಚೌಕಟ್ಟನ್ನು ಒದಗಿಸಿ ನಿಮ್ಮ ಮುಂದಿರುವ ಗ್ರಂಥರೂಪಕ್ಕೆ ಕಾರಣಕರ್ತರಾಗಿದ್ದಾರೆ. ಈ ಗ್ರಂಥ ಸಂಪಾದನೆಯಲ್ಲಿ ನೆರವಾಗಿರುವ ಅವರನ್ನು, ಶ್ರೀನಿವಾಸನ ಮಗಳು ಮನೋರಮಾ ಶ್ರಮವನ್ನು ಕಂಡು ಸಂತೋಷವಾಗಿದೆ.


ಈ ಗ್ರಂಥದ ಬಿಡುಗಡೆಗೆ ನಾಡಿನ ಪ್ರಖ್ಯಾತ ಸಂಶೋಧಕರೂ ದಾಸಸಾಹಿತ್ಯ ವಿದ್ವಾಂಸರೂ ಆದ ಶ್ರೀನಿವಾಸ ಹಾವನೂರರು ಒಪ್ಪಿರುವುದು ನಮ್ಮೆಲ್ಲರ ಪುಣ್ಯ. ನನ್ನ ಮೇಲಿನ ಅಭಿಮಾನದಿಂದ ಮುನ್ನುಡಿ ಬರೆಯಲು ಕೇಳಿದ್ದಕ್ಕೆ ನಾನು ಆಭಾರಿ ಆಗಿದ್ದೇನೆ. ಈ ಮೂಲಕ ನಾಡಿನ ಪುಣ್ಯಪುರುಷರಾದ ನಮ್ಮಜ್ಜಂದಿರಾದ ತಿಮ್ಮಪ್ಪದಾಸರ ಸ್ಮರಣೆ ಮಾಡಲು ಅವಕಾಶವಾಗಿದೆ.

ನಾಡಿನ ದಾಸಸಾಹಿತ್ಯ ಪ್ರೇಮಿಗಳಿಗೆ ಈ ಗ್ರಂಥ ಸುವರ್ಣ ಕರ್ನಾಟಕದ ಕೊಡುಗೆ ಎಂದು ಭಾವಿಸಿದ್ದೇನೆ.

ತಾ. 22.7.2007 **ಹಾರನಹಳ್ಳಿ ರಾಮಸ್ವಾಮಿ**

ಬೆಂಗಳೂರು

ಸಂಪಾದಕರ ನುಡಿ



ನಿನ್ನೆಯನ್ನು ಮರೆತವನು ಇಂದು ಬಾಳಲಾರ. ಇಂದು ಬಾಳಲಾರದವನು ನಾಳೆಯನ್ನು ನಿರ್ಮಿಸಲಾರ ಎಂಬ ಮಾತೊಂದಿದೆ. ನಾವು ಹುಟ್ಟಿ ಬೆಳೆದ ಊರನ್ನು, ನಮ್ಮ ಪೂರ್ವಜರನ್ನು ನಾವು ಅರ್ಥ ಮಾಡಿಕೊಳ್ಳದಿದ್ದರೆ ಇಂದು ನಾವೇಕೆ ಹೀಗಿದ್ದೇವೆ ಎಂಬುದನ್ನು ತಿಳಿಯಲು ಆಗುವುದಿಲ್ಲ. ನಮ್ಮ ಪೂರ್ವಿಕರ ಸಾಧನೆಗಳ ಫಲಗಳನ್ನು ನಾವು ಉಣ್ಣುತ್ತಿದ್ದೇವೆ. ಅವರು ತೋರಿದ ದಾರಿ ನಮ್ಮ ದಾರಿ ಬೆಳಕಾಗುತ್ತದೆ ಎಂದು ತಿಳಿಯಬೇಕು. ಆದರೆ ಇಂದು ವಸ್ತುಸ್ಥಿತಿ ಹಾಗಿಲ್ಲ. ನಮ್ಮಲ್ಲಿ ಹಿರಿಯರ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಮಾಯವಾಗುತ್ತಿದೆ. ಹಿರಿಯರ ದಾಖಲೆಗಳನ್ನು ಉಳಿಸಿಕೊಳ್ಳುವ, ಆ ಬಗ್ಗೆ ಹೆಮ್ಮೆಪಡುವ ಪ್ರವೃತ್ತಿ ನಮಗಿಲ್ಲ. ಇಂದು ಮನೆಗಳಲ್ಲಿ ಪೂರ್ವಿಕರು ಬಳಸುತ್ತಿದ್ದ ವಸ್ತುಗಳು, ಓದುತ್ತಿದ್ದ ಗ್ರಂಥಗಳು, ಪೂಜಿಸುತ್ತಿದ್ದ ವಿಗ್ರಹ, ಪಠಗಳು, ಹೇಳುತ್ತಿದ್ದ ಕಥೆ, ಹಾಡುಗಳು ನಮ್ಮ ಪಾಲಿಗೆ ಉಳಿದಿಲ್ಲ. ಮನೆಗಳನ್ನು ಬದಲಿಸುತ್ತಿರುವುದರಿಂದ, ಊರು ಬಿಡುತ್ತಿರುವುದರಿಂದ, ಹೊಸವಸ್ತುಗಳಿಗೆ ಆಧುನಿಕ ಜೀವನಶೈಲಿಗೆ ಮಾರು ಹೋಗುತ್ತಿರುವುದರಿಂದ, ಹಿರಿಯರ ಸಂಪರ್ಕವನ್ನು ಕಡಿದುಕೊಳ್ಳುತ್ತಿರುವುದರಿಂದ, ನಾವು ಅನಾಥಪ್ರಜ್ಞೆಯಲ್ಲಿ ತೊಳಲಾಡುತ್ತಿದ್ದೇವೆ. ಊರಿಗೆ ಊರೇ ನಿಮ್ಮ ಮನೆತನದ ಹಿರಿಯರು, ಪೂಜ್ಯರು, ಧನ್ಯರು, ನಾಡಿನಜನಕ್ಕೆ ಮಾದರಿ ಆದವರು. ಅವರ ಗುಣ ವಿಶೇಷಗಳು ಇಂಥವು ಎಂದಾಗ ಅವರ ವಾರಸುದಾರರಾದ ನಮಗೆ ಹೊರಗಿನವರಿಗೆ ತಿಳಿದಷ್ಟೂ ವಿಷಯ ನಮಗೆ ತಿಳಿಯದಿರುವುದು ಶೋಚನೀಯ. ಪರಂಪರೆಯ ಸಂಪತ್ತನ್ನು, ಇತಿಹಾಸ ನಿರ್ಮಿಸಿದ ಹಿರಿಯರ ವಿವರಗಳು ಅಮೂಲ್ಯ ಆಸ್ತಿ ಎಂದು ತಿಳಿಯುತ್ತಿಲ್ಲ. ಪಿತ್ರಾರ್ಜಿತ ಆಸ್ತಿ ಅಪಾರವಾಗಿದ್ದು ಅದು ನಮ್ಮದು ಎಂದು ತಿಳಿಯದವರ ಹಾಗಿದ್ದೇವೆ ಇಂದು.

ನಮ್ಮ ಮನೆತನದ ಹಿರಿಯರಾದ ಕೆಲ್ಲಂಗೆರೆ ತಿಮ್ಮಪ್ಪದಾಸರು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನವರು. 20ನೇ ಶತಮಾನದ ಪ್ರಾರಂಭದಲ್ಲಿ ನಮ್ಮ ನಾಡಿನಲ್ಲಿ ಪ್ರಸಿದ್ಧರಾದ ಕೀರ್ತನಕಾರರು, ವಾಗ್ಗೇಯಕಾರರು, ವಿದ್ವಾಂಸರು ಆದವರು. ಪರೋಪಕಾರಿಗಳು, ಸಜ್ಜನರು, ಕಲಾವಿದರು ಆದವರು. ಉಡುಪಿ, ಶೃಂಗೇರಿ ಪೀಠಾಧಿಪತಿಗಳಿಂದ ನಮ್ಮ ಕೀರ್ತನಕಲೆಯ ಪ್ರತಿಭೆಗಾಗಿ ಸನ್ಮಾನಿತರಾದವರು. ಹೊಳೇನರಸೀಪುರದ ಸಚ್ಚಿದಾನಂದ ಸರಸ್ವತೀಸ್ವಾಮಿಗಳು, ಹೊಸಕೆರೆ ಚಿದಂಬರಯ್ಯನವರು, ಮೊದಲಾದ ಆ ಕಾಲದ ಧಾರ್ಮಿಕ ವಿದ್ವಾಂಸರನ್ನು ಕರೆಸಿ ಶಂಕರಜಯಂತಿ, ರಾಮೋತ್ಸವಗಳನ್ನು ನಡೆಸಿ, ವಿದ್ವತ್ಗೋಷ್ಠಿಗಳನ್ನು ಏರ್ಪಡಿಸಿ

ಜನಪ್ರಿಯರಾದವರು. ಅಂಥ ಪೂಜ್ಯ ಮಹನೀಯರ ಮೊಮ್ಮಕ್ಕಳು ಮರಿಮಕ್ಕಳು ಆದ ನಾವು ನಾಡಿನ ಸುಸಂಸ್ಕೃತ ಕಲಾವಿದ ವಿದ್ವಾಂಸರ ವಂಶಸ್ಥರಾಗಿ ಅವರ ಬಗ್ಗೆ ಏನೂ ತಿಳಿಯದವರಾಗಿದ್ದೆವಲ್ಲ ಎಂಬ ಅರಿವು ಮೂಡಿದಾಗ ಅವರ ಬಗ್ಗೆ ಮಾಹಿತಿ ಸಂಗ್ರಹಿಸಲು ಹೊರಟ ಪರಿಣಾಮ ರಚಿತವಾದ ಗ್ರಂಥವಿದು. ತಿಮ್ಮಪ್ಪದಾಸರ ವಂಶಸ್ಥರೆಲ್ಲ ನೀಡಿದ ಮಾಹಿತಿ, ಸಹಕಾರದಿಂದ ಈ ಗ್ರಂಥ ರೂಪುಗೊಂಡಿದೆ. ಜೀವನವೃತ್ತಾಂತದ ಬಗ್ಗೆ ಅವರು ರಚಿಸಿದ ಹಾಡುಗಳನ್ನು ಕೊಟ್ಟಿದ್ದಾರೆ, ಹಾಡಿದ್ದಾರೆ. ಅವರ ಬಗ್ಗೆ ಮಾಹಿತಿ ಇದ್ದವರ ವಿಳಾಸ ತಿಳಿಸಿದ್ದಾರೆ. ಅವರು ಬರೆದ ಬರಹಗಳನ್ನು ನೀಡಿದ್ದಾರೆ. ಹೀಗೆ ನಾನಾ ಬಗೆಯಲ್ಲಿ ವಂಶಸ್ಥರು ನೆರವಾಗಿದ್ದಾರೆ (ಅನುಬಂಧ ನೋಡಿ). ಅವರೆಲ್ಲರನ್ನು ಕೃತಜ್ಞತೆಯಿಂದ ಅವರ ಉಪಕಾರಕ್ಕಾಗಿ ಸ್ಮರಿಸುತ್ತೇವೆ.

ನಾಡಿನ ಜನಕ್ಕೆ ತಿಮ್ಮಪ್ಪದಾಸರ ಬಗ್ಗೆ ಜೀವನಮಾಹಿತಿ–ಕೃತಿಗಳನ್ನು ನಮಗೆ ದೊರೆತದ್ದನ್ನು ಇಲ್ಲಿ ಪ್ರಕಟಿಸಿದ್ದೇವೆ. ಬಿಟ್ಟುಹೋದ ಸಂಗತಿಗಳನ್ನು ದಯಮಾಡಿ ಬಲ್ಲವರು ತಿಳಿಸಬೇಕು. ಇದ್ದ ಮಾಹಿತಿ, ಕೃತಿಗಳು ಕಾಲರಾಯನ ಮಹಿಮೆಯಲ್ಲಿ ಮರೆಯಾಗಬಾರದು, ನಾಡಿನ ಅಮೂಲ್ಯ ಕೀರ್ತನ ಆಸ್ತಿ ಕಳೆದುಹೋಗಬಾರದು ಎಂಬ ಆಶಯದಿಂದ ಈ ಪ್ರಯತ್ನ ಮಾಡಿದ್ದೇವೆ. ಈ ಕಾರ್ಯದಲ್ಲಿ ತಿಮ್ಮಪ್ಪದಾಸರ ವಂಶಸ್ಥರಲ್ಲದೆ ಇತರ ದಾಸಸಾಹಿತ್ಯ ಪ್ರೇಮಿಗಳಿಂದ, ವಿದ್ವಾಂಸರಿಂದ ನಾನಾ ಬಗೆಯ ನೆರವು ದೊರೆತಿದೆ. ಸಚ್ಚಿದಾನಂದ ಸರಸ್ವತಿಸ್ವಾಮಿಗಳು ತಾವೇ ಬರೆದಿಟ್ಟ ಆತ್ಮಕಥೆಯ ಗ್ರಂಥದಿಂದ ಅಮೂಲ್ಯ ಸಂಗತಿಗಳು ತಿಳಿದುಬಂದಿವೆ. ಹೊಸಕೆರೆ ಚಿದಂಬರಯ್ಯನವರ ಕೀರ್ತನಕಂಠಾಭರಣದಿಂದ ತಿಮ್ಮಪ್ಪದಾಸರ ಕೀರ್ತನೆಗಳನ್ನು ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಹೆಕ್ಕಿಕೊಟ್ಟಿದ್ದಾರೆ. ಮತ್ತು ಸಹಸಂಪಾದಕರಾಗಿ ಈ ಗ್ರಂಥ ಸಂಪಾದನಾ ಕಾರ್ಯದಲ್ಲಿ ಹೆಜ್ಜೆ ಹೆಜ್ಜೆಗೂ ನೆರವಾಗಿದ್ದಾರೆ. ತಿಮ್ಮಪ್ಪದಾಸರ ವಂಶಸ್ಥರಲ್ಲಿ ಗಣ್ಯರಾದ ದಾಸರ ಮೊಮ್ಮಗ ಪ್ರಸಿದ್ಧ ಸಾಹಿತಿ, ನ್ಯಾಯವಾದಿ, ಸ್ವಾತಂತ್ರ್ಯಹೋರಾಟಗಾರ, ಶಿಕ್ಷಣತಜ್ಞ ಹಾರನಹಳ್ಳಿ ರಾಮಸ್ವಾಮಿ ಅವರು ಅನೇಕ ವಿಧದಲ್ಲಿ ನೆರವಾಗಿರುವುದಲ್ಲದೆ ಈ ಗ್ರಂಥಕ್ಕೆ ಮುನ್ನುಡಿಯ ಕಿರೀಟ ತೊಡಿಸಿದ್ದಾರೆ. ಚಿಕಾಗೋನಲ್ಲಿರುವ ಶ್ರೀ ಕೆ.ಎಸ್. ರಾಮಪ್ರಸಾದ್ ಮತ್ತು ಶ್ರೀಮತಿ ಉಷಾ ರಾಮಪ್ರಸಾದ್ ಅವರು ಈ ಗ್ರಂಥದ ಪ್ರಕಟಣೆಗೆ ಹಲವು ಬಗೆಯಲ್ಲಿ ಮೊದಲಿನಿಂದಲೂ ನೆರವಾಗಿದ್ದಾರೆ. ತಿಮ್ಮಪ್ಪದಾಸರ ಮರಿಮಗ ಶ್ರೀ ರಾಜೀವಲೋಚನ ಅವರು ಅಳಿಲು ಸೇವಾ ಸಂಸ್ಥೆಯ ಮಾರ್ಗದರ್ಶನದಲ್ಲಿ ಶ್ರೀನಿವಾಸ ಪುಸ್ತಕ ಪ್ರಕಾಶನದಲ್ಲಿ ಇದನ್ನು ಪ್ರಕಟಿಸಲು ಮುಂದೆ ಬಂದಿದ್ದಾರೆ. ತಿಮ್ಮಪ್ಪದಾಸರ ಮರಿಮಗ ಭಾಗವತ ಕುಟೀರದ ಅನಂತಪದ್ಮನಾಭ (ಪದ್ದು) ಸಮಯಕ್ಕೆ ಸರಿಯಾಗಿ ಛಾಯಾಚಿತ್ರಗಳನ್ನು ಒದಗಿಸಿಕೊಟ್ಟಿದ್ದು ನೆನೆಯಬೇಕಾಗಿದೆ. ಮಗಳು ಮನೋರಮಾ ಜತೆಜತೆಯಾಗಿ ನನ್ನೊಂದಿಗೆ ದುಡಿದಿದ್ದಾಳೆ. ಹೀಗೆ ನೂರು ಕೈಗಳು ಸೇರಿ ರಥ ಎಳೆದಂತೆ, ಹತ್ತಾರು ಜನರ ಸಹಕಾರ, ಸೇವೆ, ಸ್ಫೂರ್ತಿಯಿಂದ ಈ ಕೃತಿ ನಿಮ್ಮ ಮುಂದಿದೆ. ಕನ್ನಡ ದಾಸಸಾಹಿತ್ಯದ ಕೊರತೆಯೊಂದನ್ನು ಈ ಕೃತಿ ಸ್ವಲ್ಪಮಟ್ಟಿಗೆ ನೀಗಿಸಿದೆ ಎಂದು ತಿಳಿದಿದ್ದೇವೆ.


ಪ್ರಕಾಶನ ಮಾಡಿದ ಅಳಿಲು ಸೇವಾ ಪ್ರತಿಷ್ಠಾನದ ಉಪಕಾರ ದೊಡ್ಡದು. ಸುವರ್ಣ ಕರ್ನಾಟಕ ವರ್ಷದಲ್ಲಿ ಕೆಲ್ಲಂಗೆರೆ ತಿಮ್ಮಪ್ಪದಾಸರ ಪ್ರತಿಷ್ಠಾನ ದಾಸ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಇದು ಎಂದು ಭಾವಿಸಿದ್ದೇನೆ.

ಈ ಕೃತಿಯ ಮುಖಪುಟ ರಚಿಸಿಕೊಟ್ಟ ಶ್ರೀ ಬಾಗೂರ್ ಅವರಿಗೆ ಮತ್ತು ಡಿ.ಟಿ.ಪಿ. ಸಹಕಾರ ನೀಡಿದ ಮಧು ಮತ್ತು ಶ್ರೀಧರ್ ಅವರಿಗೆ ಹಾಗೂ ಈ ಪುಸ್ತಕವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಜಾಗೃತಿ ಪ್ರಿಂಟರ್ಸ್ ಅವರಿಗೆ ನಮ್ಮ ವಂದನೆಗಳು.


ಕೆ.ವಿ. ಶ್ರೀನಿವಾಸ್

ಸಂಪಾದಕರ ಪರವಾಗಿ

ಸಂಪಾದಕರು



ಪ್ರೊ. ಜಿ. ಅಶ್ವತ್ಥನಾರಾಯಣ



ಕೆ.ಎಸ್. ಮನೋರಮ ರಮೇಶ್

ಪ್ರಕಾಶಕರ ನುಡಿ

ತಿಮ್ಮಪ್ಪದಾಸರ ಮರಿಮಗ ಶ್ರೀ ರಾಜೀವಲೋಚನ ಅವರ ಮಾರ್ಗದರ್ಶನದಲ್ಲಿ ಶ್ರೀನಿವಾಸ ಪುಸ್ತಕ ಪ್ರಕಾಶನ 2007ರಲ್ಲಿ ಪ್ರಥಮ ಆವೃತ್ತಿಯಾಗಿ ಕೆ.ವಿ. ಶ್ರೀನಿವಾಸ್, ಪ್ರೊ. ಜಿ. ಅಶ್ವತ್ಥನಾರಾಯಣ ಹಾಗೂ ಕೆ.ಎಸ್. ಮನೋರಮ ರಮೇಶ್ ಅವರ ಸಂಪಾದನೆಯಲ್ಲಿ ತೆರೆ ಕಂಡಿದ್ದ **'ಕೆಲ್ಲಂಗೆರೆ ತಿಮ್ಮಪ್ಪದಾಸರು** – ಜೀವನ ಮತ್ತು ಕೃತಿಗಳು' ಪುಸ್ತಕವನ್ನು ಇದೀಗ ನಮ್ಮದೇ ಪ್ರಕಾಶನದಿಂದ ಚಿತ್ರ ಪರಿಷ್ಕರಣೆಯೊಂದಿಗೆ ಮರು ಮುದ್ರಣ ಮಾಡಿ ಪ್ರಕಟಿಸುತ್ತಿದ್ದೇವೆ.

ಪರಿಷ್ಕೃತ ಚಿತ್ರ ಸಂಪುಟಕ್ಕೆ ಸಕಾಲದಲ್ಲಿ ಚಿತ್ರಗಳನ್ನು ಒದಗಿಸಿದ ದಾಸ್ ಪರಿವಾರದವರಿಗೆ ಕೃತಜ್ಞತೆಗಳು.

ಪ್ರಸ್ತುತ ಮರು ಮುದ್ರಣಕ್ಕೆ ಮುಖಪುಟ ರಚಿಸಿಕೊಟ್ಟ ಶ್ರೀ ಚಂದ್ರಶೇಖರ್, ಪುಸ್ತಕ ವಿನ್ಯಾಸ ಮಾಡಿದ ಶ್ರೀ ಮಧು, ಕರಡು ತಿದ್ದಿಕೊಟ್ಟ ಶ್ರೀಮತಿ ರಶ್ಮಿ ಆರ್. ಹೆಬ್ಬೂರು ಹಾಗೂ ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಸತ್ಯಾನಂದ ಪ್ರಿಂಟರ್ಸ್‌ನ ಶ್ರೀ ಸೋಮಶೇಖರ್ ಅವರಿಗೆ ನಮ್ಮ ವಂದನೆಗಳು.

ಪ್ರಕಾಶಕರು

ಪರಿವಿಡಿ

ಭಾಗ – ೩

ಭಾಗ – ೪

ಭಾಗ – ೧

ಕೆಲ್ಲಂಗೆರೆ ತಿಮ್ಮಪ್ಪದಾಸರ ಜೀವನಚರಿತ್ರೆ

ಕೆಲ್ಲಂಗೆರೆ ತಿಮ್ಮಪ್ಪದಾಸರು
(೧೮೩೪-೧೯೨೬)

ಅರಸೀಕೆರೆಯ ಹಿರಿಮೆ

ಗುಡ್ಡ ಬೆಟ್ಟಗಳ ಸಾಲಿನಿಂದ ಕೂಡಿದ ಅರಸೀಕೆರೆ ತಾಲ್ಲೂಕು ಕಲ್ಪವೃಕ್ಷದ ನಾಡೆಂದೇ ಪ್ರಸಿದ್ಧವಾಗಿದೆ. ಅಲ್ಲಲ್ಲಿ ಅನೇಕ ಸಿದ್ಧಪುರುಷರ ತಪೋತಾಣಗಳಿರುವ ಐತಿಹಾಸಿಕ ಸ್ಥಳಗಳು; ಹೊಯ್ಸಳರ ಶಿಲ್ಪಕಲೆಯನ್ನು ಹೊಂದಿದ ದೇಗುಲಗಳು; ಪ್ರಕೃತಿ ದೇವತೆಯ ನಿತ್ಯ ಹಸುರಿನಿಂದ ಕಂಗೊಳಿಸುವ ರಮಣೀಯ ಸ್ಥಳಗಳು; ಕತ್ತೆತ್ತಿ ನೋಡಿದರೆ ಎಲ್ಲೆಲ್ಲೂ ಕಾಣುವ ಬೆಟ್ಟದ ಸಾಲುಗಳು; ಅವುಗಳ ಬುಡದಲ್ಲಿ ಕಾಣುವ ತೆಂಗಿನ ಮರಗಳ ಸಾಲು ಸಾಲುಗಳು. ಇತ್ತ ಗರುಡನ ಗಿರಿ ಬೆಟ್ಟ, ಬಾಣಾವರ ರಾಮೇಶ್ವರ ಗುಡ್ಡ, ಶ್ರೀರಾಮಚಂದ್ರ ಹೋಮ ಮಾಡಿದ ಸ್ಥಳ. ಪ್ರಸಿದ್ಧ ಮಾಲೇಕಲ್ಲು ತಿರುಪತಿಯ ಮಾಲೆ ಆಕಾರದ ಬೆಟ್ಟದ ಸಾಲುಗಳು, ಮಧ್ಯದಲ್ಲಿ ವೆಂಕಟರಮಣಸ್ವಾಮಿ ದೇವಾಲಯ. ಅತ್ತ ಜೇನುಕಲ್ಲು ಸಿದ್ಧೇಶ್ವರ ಬೆಟ್ಟ, ಸಿದ್ಧರ ಬೆಟ್ಟದ ಸಾಲುಗಳು. ಬಹು ಪುರಾತನ ಕಾಲದ ಹಾರನಹಳ್ಳಿ ಕೋಡಮ್ಮನ ದೇಗುಲ, ಹೊಯ್ಸಳ ದೇವಾಲಯಗಳು, ರಂಗನಾಥಸ್ವಾಮಿ ಬೆಟ್ಟದ ಸಾಲು. ೧೫೦೦ ವರ್ಷಗಳ ಹಿಂದಿನ ಕಾಲದ ತಾಳೇಗರಿ ಗ್ರಂಥವಿರುವ ಕೋಡಿಮಠದ ಸನ್ನಿಧಾನ. ಅಲ್ಲಿನ ಯತಿಗಳ ತಪೋತಾಣಗಳು. ಹೀಗೆ ಹೆಸರಿಸುತ್ತಾ ಹೋದರೆ ಕೊನೆ ಮೊದಲಿಲ್ಲ. ಅನೇಕ ಕವಿಗಳು ತತ್ವಜ್ಞಾನಿಗಳಿಗೆ ಜನ್ಮ ನೀಡಿದ ಹಿರಿಮೆ ಅರಸಿಕೆರೆ ತಾಲ್ಲೂಕಿನದು. ಪಕ್ಕದಲ್ಲೇ ಇರುವ ಕವಿ ಲಕ್ಷ್ಮೀಶನ ಹುಟ್ಟೂರು ದೇವನೂರು. ಎಲ್ಲೆಲ್ಲಿ ನೋಡಿದರೂ ಕೆರೆ, ಕುಂಟೆ, ಪುರಾತನ ಕೊಳಗಳಿಂದ ತುಂಬಿರುವ ಕೋಟೆ ಕೊತ್ತಲುಗಳಿಂದಲೂ ತುಂಬಿರುವ ಸಮೃದ್ಧಿಯ ನಾಡು. ಇಂಥ ಚೆಲುವ

ನಾಡಿನಲ್ಲಿ ಜನಿಸಿದ ಕೆಲ್ಲಂಗೆರೆ ತಿಮ್ಮಪ್ಪದಾಸರು, ಕೀರ್ತನಕಾರರು, ಕವಿ, ಮಹಾ ದೈವಭಕ್ತರು, ಅಪರೋಕ್ಷ ಜ್ಞಾನಿಗಳು ಕನ್ನಡ ದಾಸಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದವರು. ಇವರುಗಳ ಸಾಧನೆ, ಕೊಡುಗೆಗಳನ್ನು ಗುರುತಿಸುವಲ್ಲಿ ನನ್ನದೊಂದು ಪುಟ್ಟ ಪ್ರಯತ್ನದ ಫಲವೇ ಈ ಗ್ರಂಥ.

ಹಿನ್ನೆಲೆ

ಕರ್ನಾಟಕ ಭಕ್ತಿ ಪಂಥದಲ್ಲಿ ದಾಸಸಾಹಿತ್ಯದ ಪಾತ್ರ ಬಹಳ ಮಹತ್ವದ್ದು. ಹರಿದಾಸ ಕೀರ್ತನೆಗಳು ಹಾಗೂ ದೇವರ ನಾಮಗಳು ಅನನ್ಯ. ೧೩ನೇ ಶತಮಾನದಲ್ಲೂ ಸುಮಾರಿಗೆ ಶುರುವಾಗಿ ೧೬ನೇ ಶತಮಾನದಲ್ಲಿ ಬಹಳವಾಗಿ ಬೆಳೆದು ೨೦ನೇ ಶತಮಾನದಲ್ಲೂ ಹರಿದು ಬರುತ್ತಿದೆ. ಹೆಸರೇ ಸೂಚಿಸುವಂತೆ ಹರಿಭಕ್ತರಾದ ದಾಸರುಗಳಿಂದ ರಚಿತವಾದ ಸಾಹಿತ್ಯ. ಅದಕ್ಕೂ ಪ್ರಾಚೀನವಾದ ಭಾಗವತ ಪರಂಪರೆಯೊಂದಿಗೆ ಬೆಳೆದುಬಂದಿರುತ್ತದೆ. ಈ ದಾಸಸಾಹಿತ್ಯದಲ್ಲಿ ಭಗವಂತನ ನಾನಾ ರೂಪ ವರ್ಣನೆ, ಭಕ್ತಿ ರೂಪದೊಡನೆ ಬಂದಿರುತ್ತದೆ. ಇದರಲ್ಲಿ ಅಧ್ಯಾತ್ಮ ಪ್ರವಾಹದ ಸುಂದರ ಅಲೆಯ ಪ್ರವಾಹ ಕಾಣಬಹುದು. ದಾಸರು ವೇದಸಾರವನ್ನು ನಾದದೊಂದಿಗೆ ಬೆರೆಸಿ ತತ್ವಬೋಧನೆ ಮಾಡಿದರು. ಸಂಗೀತದ ಮೂಲಕ ಭಕ್ತಿಯನ್ನು ಉದ್ದೀಪನಗೊಳಿಸುವುದು ಅವರ ಉದ್ದೇಶವಾಗಿತ್ತು. ಭಕ್ತನ ಅಂತರಂಗದೊಡನೆ ಶೋಧನೆ, ತತ್ವನಿರೂಪಣೆಯೊಂದಿಗೆ ಜೀವನ ಮೌಲ್ಯಗಳನ್ನು ಜನಸಾಮಾನ್ಯರಿಗೆ ಅವರದೇ ಆದ ಆಡುಭಾಷೆಯಲ್ಲಿ ತಿಳಿಸಿರುವುದನ್ನು ಕಾಣಬಹುದು. ಅನೇಕ ದಾಸರ ಕೃತಿಗಳಲ್ಲಿ ಆಗಿನ ಕಾಲದ ಸುತ್ತಲಿನ ಸಮಾಜದ ಅಂಕುಡೊಂಕು ಕುರಿತು ಕಳಕಳಿಯ ವಿಡಂಬನೆಗಳನ್ನು ಕಾಣಬಹುದು, ಸುಧಾರಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನಗಳನ್ನು ನಾವು ಕಾಣಬಹುದು. ಹೀಗೆ ದಾಸಸಾಹಿತ್ಯವು ಕನ್ನಡ ಸಾಹಿತ್ಯದಲ್ಲೇ ಅಪೂರ್ವವಾದ ಅಂತಃಸತ್ತ್ವದಿಂದ ಕೂಡಿದೆ. ಸಂಗೀತ ಸಾಹಿತ್ಯದ ಸಂಗಮದಲ್ಲಿ ಬದುಕನ್ನೇ ಅರಳಿಸುವ ಶಕ್ತಿಯನ್ನು ಒಟ್ಟಿಗೆ ಒಳಗೊಂಡಿರುತ್ತದೆ. ಇದು ಮುಂದೆ ಪರಂಪರೆಯಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಶ್ರೀಪಾದರಾಯರಿಂದ ಹಿಡಿದು ಕನಕ, ಪುರಂದರ, ವಾದಿರಾಜರು, ವಿಜಯದಾಸರು ಮೊದಲ್ಗೊಂಡು ಈ ಕಾಲದಲ್ಲೂ ವಿಶಿಷ್ಟವಾಗಿ ಬೆಳೆದು ಬಂದಿದೆ. ಅನೇಕ ಕೀರ್ತನಕಾರರುಗಳಿಂದ ಹರಿದು ಬಂದ ಕೀರ್ತನೆಗಳಲ್ಲಿ ಭಕ್ತಿ ಸುಧೆಯ ನಾನಾ ಪ್ರಕಾರಗಳನ್ನು ಕಾಣಬಹುದು.

ಹಿಂದಿನ ಕಾಲದಲ್ಲಿ ಜ್ಞಾನಾರ್ಜನೆಗೆ ಈಗಿನಂತೆ ಹೆಚ್ಚಿನ ಶಾಲಾ ಕಾಲೇಜುಗಳಾಗಲಿ ಅಥವಾ ವಿಶ್ವವಿದ್ಯಾನಿಲಯಗಳಾಗಲಿ ಇರಲಿಲ್ಲ. ಭಕ್ತಿ, ಜ್ಞಾನ, ವೈರಾಗ್ಯ ಮುಕ್ತಿ ಮಾರ್ಗಗಳನ್ನು ಸಾಮಾನ್ಯ ಜನರಿಗೆ ಮುಟ್ಟಿಸುವ ಕೆಲಸವನ್ನು ಒಂದು ಮುಕ್ತ ವಿಶ್ವವಿದ್ಯಾನಿಲಯದಂತೆ ಆಗಿನ ಕಾಲದಲ್ಲಿ ಈ ದಾಸವರೇಣ್ಯರೇ ಮಾಡಿಕೊಂಡು

ಬಂದಿದ್ದಾರೆ. ದೇಶದ ಮೂಲೆ ಮೂಲೆಗಳಿಗೂ ತಿರುಗಿ ಜ್ಞಾನಾರ್ಜನೆ ಕೆಲಸವನ್ನು ಒಂದು ಸಂಚಾರಿ ವಿಶ್ವವಿದ್ಯಾನಿಲಯದಂತೆ ಮಾಡಿಕೊಂಡು ಬಂದಿದ್ದಾರೆ. ಬಡವ ಬಲ್ಲಿದರೆನ್ನದೆ ಜನಸಾಮಾನ್ಯರನ್ನೂ ತಟ್ಟಿ ಎಬ್ಬಿಸಿರುತ್ತಾರೆ. ಜನರಿಗೆ ಸನ್ಮಾರ್ಗದಲ್ಲಿ ಹೋಗುವ ದಾರಿ ತೋರಿಸುವ ಕಾರ್ಯದಲ್ಲಿ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿರುತ್ತಾರೆ. ಈ ದಾಸರ ಕೊಡುಗೆಗಳು ಸಾಮೂಹಿಕ ಬದುಕಿಗೆ ಜೀವಂತ ಶಕ್ತಿಯಾಗಿ ಬೆಸೆದುಕೊಂಡಿದೆ. ಈ ಭಕ್ತಿ ಪಂಥದ ಸಂಘಟನೆ ಬಹು ದೊಡ್ಡ ಸಾಧನೆ. ಕನ್ನಡ ದೇವರ ನಾಮಗಳು ಕೀರ್ತನೆಗಳ ಮೂಲಕ ಹರಿದಾಸರು ಸುಜ್ಞಾನವೆಂಬ ಅಮೃತವನ್ನು ಕುಡಿಸಿ ಹೊಸದೊಂದು ಸಜ್ಜನ ಸಮಾಜವನ್ನು ನಿರ್ಮಾಣ ಮಾಡಿದುದು ಸಾಮಾನ್ಯ ಕೆಲಸವಲ್ಲ. ಜನರಲ್ಲಿ ಸಂಸ್ಕೃತಿ, ಸಭ್ಯತೆಯನ್ನು ನೀತಿಯನ್ನು ಬೆಳೆಸಿದ ಮಹಾ ಸಾಧನೆ ಆಗಿದೆ.

ಇಂತಹ ಹರಿದಾಸ ಸಾಹಿತ್ಯದ ವಿಚಾರಗಳನ್ನು ಸರಿಯಾಗಿ ಗುರುತಿಸುವ ಕೆಲಸವನ್ನು, ಅವರ ಜೀವನ ಚರಿತ್ರೆ, ಸ್ಥಳ, ಸಾಧನೆ ಇವುಗಳನ್ನು ದಾಖಲಿಸುವ ಕೆಲಸಗಳನ್ನು ನಾಡಿನ ಅನೇಕ ಪ್ರತಿಷ್ಠಾನಗಳು, ವಿದ್ವಾಂಸರುಗಳು ಅಹರ್ನಿಶಿ ಪ್ರಯತ್ನ ಮಾಡಿ ಪ್ರಚುರ ಪಡಿಸಿರುತ್ತಾರೆ. ನಾನಾ ರೂಪದ ಕೀರ್ತನೆಗಳು, ದೇವರ ನಾಮಗಳು ಪೂರ್ಣ ವಿವರದೊಂದಿಗೆ ಪ್ರಕಟಿಸಿ ಬೆಳಕಿಗೆ ತಂದಿರುತ್ತಾರೆ. ಆದರೂ ಇನ್ನೂ ಗುಪ್ತಗಾಮಿನಿಯಂತೆ ಹರಿದು ಬಂದಿರುವ ಎಷ್ಟೋ ಹರಿದಾಸ ಸಾಹಿತ್ಯ ಮತ್ತು ಕೃತಿ ರಚನೆಗಳು ಜನರ ಬಾಯಲ್ಲೇ ಉಳಿದುಹೋಗಿವೆ. ಇದಕ್ಕೆ ಕಾರಣ ನಮ್ಮ ಅಸಡ್ಡೆ ಅನಾದರಣೆಗಳೇ ಆಗಿವೆ.

ಈ ದಾಸ ಸಾಹಿತ್ಯದ ಉದ್ದಕ್ಕೂ ವ್ಯಾಪಕವಾಗಿರುವ ಅಂಶ ಭಗವಂತನಲ್ಲಿಯ ಭಕ್ತಿ–ಪ್ರೇಮ ಮತ್ತು ಮುಕ್ತಿ ಮಾರ್ಗ. ಭಕ್ತಿಯ ಪರಿಪೂರ್ಣ ಕಲ್ಪನೆಯ ವಿಚಾರದಲ್ಲಿ ಭಗವತ್ ದೃಷ್ಟಿ ಒಂದೇ ಆಗಿರುತ್ತದೆ. ಇದರಲ್ಲಿ ಭೇದ ಭಾವ ಕಲ್ಪಿಸಬಾರದು. ದಾಸರುಗಳು ಭಕ್ತಿಯೇ ಮುಕ್ತಿಗೆ ಸಾಧನೆ ಎಂದು ಹೇಳುತ್ತಾ ಆಡುಮಾತಿನಲ್ಲಿ, ಸಂಗೀತ ರೂಪದಲ್ಲಿ, ಭಕ್ತಿ ಭಾವದಲ್ಲಿ ತಿಳಿಸುತ್ತಾ ಬಂದ ಜನರೆಲ್ಲರೂ ದಾಸ ಪರಂಪರೆಗೇ ಸೇರಿದವರು. ದೇವರನ್ನು ಕಾಣಲು ಹಲವು ಮಾರ್ಗಗಳು ಇದ್ದಂತೆ. ಇಲ್ಲಿ ಕೆಲವರದು ಹರಿದಾಸ ಸಂಪ್ರದಾಯವಾದರೆ, ಕೆಲವರದು ಭಾಗವತ ಸಂಪ್ರದಾಯವಾಗಿರಬಹುದು. ದಾಸಸಾಹಿತ್ಯದಲ್ಲಿ ಎಲ್ಲರ ಕೊಡುಗೆಗಳೂ ಅಪೂರ್ವವಾದುದೇ. ವಿಶಿಷ್ಟವಾದವುಗಳೇ ಆಗಿರುತ್ತದೆ. ಇಲ್ಲಿ ದಾಸ ಸಾಹಿತ್ಯದ ಮುಖ್ಯ ಉದ್ದೇಶ ಗಮನಿಸಬೇಕು. ದಾಸಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಜ್ಞಾನಿಗಳಾದ ದಾಸರುಗಳು ಲೋಕದ ಜನರ ಅನೀತಿಗಳತ್ತ ಗಮನ ಸೆಳೆದು ನೀತಿ ಮಾರ್ಗವಾದ ಭಕ್ತಿಯತ್ತ ಸೆಳೆದು ಜನರ ಅಂಕುಡೊಂಕುಗಳನ್ನು ತಿದ್ದಿ ಆತ್ಮಶೋಧನೆಯಲ್ಲಿ ಪರಿಶುದ್ಧರನ್ನಾಗಿ ಮಾಡಿರುವ ಮುಖ್ಯ ವಾಹಿನಿಯನ್ನು ಮಾತ್ರ ಗಮನಿಸಬೇಕು.

ಕೆಲ್ಲಂಗೆರೆ ಇತಿಹಾಸ

ಕೆಲ್ಲಂಗೆರೆ ಅರಸೀಕೆರೆಗೆ ಸಮೀಪದಲ್ಲೇ ಇರುವ ಕೆರೆಯ ಪಕ್ಕದಲ್ಲಿರುವ ಹಳೇ ಕಾಲದ ಪಾಳೇಗಾರರು ಇದ್ದ ಸುಂದರ ಗ್ರಾಮ. ಇದು ಪಂಚ ಗ್ರಾಮಗಳಲ್ಲಿ ಒಂದು. ಬಹಳ ಸುಂದರವಾದ ಸ್ಥಳ. ಇಲ್ಲಿ ಪ್ರಕೃತಿ ದೇವತೆಯು ನಿತ್ಯ ಹಸಿರಿನಿಂದ ಆಟವಾಡುತ್ತಿರುವ ಹಳ್ಳಿ. ಊರ ಮುಂದೆ ಹಾಲು ನೀರಿನಂತಿರುವ ಕೆರೆ, ಪಕ್ಕದಲ್ಲೇ ಬತ್ತದ ಗದ್ದೆಗಳ ಸಾಲು. ಕೆರೆಯ ಏರಿ ಪಕ್ಕದಲ್ಲಿ ತೆಂಗು, ಬಾಳೆ, ಅಡಕೆ ತೋಟಗಳ ಸಾಲು. ಈ ಕೆರೆಯ ಮಧ್ಯ ಭಾಗದಲ್ಲಿ ಒಂದು ದ್ವೀಪದಂತೆ ಕಾಣುವ ಶಿವ ದೇವಾಲಯ. ಅದರ ಸುತ್ತಲೂ ಬೆಳೆದ ಹೂ ಗಿಡಗಳು, ತುಳಿಸಿ, ತುಂಬೆ, ಕಣಿಗಲ ಗಿಡಗಳ ರಾಶಿ ರಾಶಿ. ಸಾಯಂಕಾಲ ಸಮಯದಲ್ಲಿ ಸೂರ್ಯಾಸ್ತದ ಸುಂದರ ನೋಟ ನೋಡಲು ಬಲು ಚೆನ್ನ. ಅಲ್ಲಲ್ಲಿ ಊರಿನ ಬ್ರಾಹ್ಮಣ ಕುಟುಂಬದವರು ಧ್ಯಾನ ಸಂಧ್ಯಾವಂದನೆ, ಜಪ ತಪ ಮಾಡುವ ಸುಂದರ ತಾಣ. ಇದನ್ನು ನೋಡುತ್ತಾ ಇದ್ದರೆ ಮೈ ಮನ ಮರೆತು ಹೋಗುತ್ತದೆ. ಇಂತಹ ಸುಂದರ ಊರೇ ತಿಮ್ಮಪ್ಪದಾಸರ ಹುಟ್ಟೂರು 'ಕೆಲ್ಲಂಗೆರೆ'. ಇದು ಹಿಂದಿನ ಚೋಳ ರಾಜರು ಕಟ್ಟಿದ ಕೆರೆ ಎಂಬುದು ಶಿಲಾಶಾಸನದಿಂದ ತಿಳಿದು ಬರುತ್ತದೆ. ಊರಿನ ಪುರಾತನದ ದೇವಾಲಯದ ಶ್ರೀ ಭ್ರಮರಾಂಬಿಕಾ ಗ್ರಾಮದೇವತೆಯ ಪ್ರಭಾವ ಅತ್ಯಂತ ಮಹತ್ವದ್ದು. ಪ್ರಮುಖ ದೇವಾಲಯ ಶ್ರೀ ಲಕ್ಷ್ಮೀನಾರಾಯಣಸ್ವಾಮಿ. ಅಲ್ಲಲ್ಲಿ ಕಾಣುವ ಶಿಲಾ ಶಾಸನಗಳು ಕೋಟೆ ಅವಶೇಷಗಳು ಇಲ್ಲಿವೆ. ದೇವಾಲಯ ಪಶ್ಚಿಮಾಭಿಮುಖವಾಗಿದ್ದು ಲಕ್ಷ್ಮೀಕಾಂತನ ವಿಗ್ರಹ ಬಹಳ ಸುಂದರವಾಗಿದೆ. ಅಲ್ಲದೆ ಮಕರ ಸಂಕ್ರಾಂತಿ ಸಮಯದಲ್ಲಿ ಸೂರ್ಯನ ಬೆಳಕು ಸ್ವಾಮಿಯ ಮುಖದ ಮೇಲೆ ಬೀಳುವುದನ್ನು ನೋಡಬಹುದು. ೧೪೦೦ನೇ ಇಸವಿಯಲ್ಲಿ ಚೋಳ ರಾಜ ನರಸಿಂಹನಾಯಕ ಕಟ್ಟಿಸಿದ ಎಂದು ಶಾಸನದಿಂದ ತಿಳಿದುಬರುತ್ತದೆ. ಊರ ಬಾಗಿಲಿನಲ್ಲಿ ಆಂಜನೇಯಸ್ವಾಮಿ ದೇವಾಲಯ, ಊರ ಮಧ್ಯದಲ್ಲಿ ಶಿವ ಮತ್ತು ಬಸವಣ್ಣ ದೇವಾಲಯ. ಕೆರೆ ಮುಂಭಾಗದಲ್ಲಿ ಗ್ರಾಮದೇವತೆ ದೇವಾಲಯಗಳು. ಅಶ್ವತ್ಥ ಕಟ್ಟೆ, ಸಿಹಿ ನೀರಿನ ಬಾವಿ. ಪುರಾತನ ವೀರಭದ್ರ ಸ್ವಾಮಿ ದೇಗುಲ. ಅಂತರಗಟ್ಟೆ ಅಮ್ಮ ದೇವಾಲಯ, ಈ ಊರಿನ ಪಾಳೇಗಾರ ಕೆಂಗಲ್ ನಾಯಕನೇ ತನ್ನ ಪ್ರೀತಿ ಅರಸಿಯ ಹೆಸರಿನಲ್ಲಿ ಕಟ್ಟಿಸಿದ 'ಅರಸೀಕೆರೆ' ವಿಶಾಲವಾದುದು ಎಂದು ಶಿಲಾಶಾಸನದಿಂದ ತಿಳಿದುಬರುತ್ತದೆ. ಹಿಂದಿನ ಕಾಲದ ಹಳ್ಳಿಗಳೆಂದರೆ ಈಗಿನ ನವ ನಾಗರಿಕತೆಯಿಂದ ದೂರವಾದವುಗಳು. ಆದಷ್ಟು ಮಟ್ಟಿಗೂ ಧರ್ಮ ಜೀವನದ ವಾತಾವರಣ ಶಾಂತಿ ಸುಖಗಳನ್ನು ಉಂಟುಮಾಡುತ್ತಿದ್ದ ಸ್ಥಳಗಳಾಗಿದ್ದವು. ಗ್ರಾಮ ಜೀವನ ಆಧ್ಯಾತ್ಮಿಕ ಜೀವನಕ್ಕೆ ಪ್ರಚೋದಕವಾಗಿರುತ್ತಿದ್ದವು.

ಜನರು ತಮಗೆ ಬೇಕಾದ ಪದಾರ್ಥಗಳನ್ನು ತಾವೇ ಬೆಳೆದುಕೊಂಡು ಹೆಚ್ಚಿನದನ್ನು ಹಂಚುತ್ತಿದ್ದರು. ಹಾಲು, ಮೊಸರು ಯಾರೂ ಮಾರಾಟ ಮಾಡುತ್ತಿರಲಿಲ್ಲ. ಇದು

ಅವಮಾನದ ಕೆಲಸ ಎಂದು ತಿಳಿದಿದ್ದರು. ಊರಿನಲ್ಲಿ ಕೂಲಿಮಠದ ಶಿಸ್ತಿನ ಶಾಲೆ. ಊರಿನಲ್ಲಿ ವೇದಾಧ್ಯಯನ. ಎಲ್ಲರ ಮನೆಯಲ್ಲೂ ಅಮರಕೋಶ ಪಾಠ, ಇಂದ್ರಾಕ್ಷಿ ಸ್ತೋತ್ರ, ಶಿವಕವಚ ಎಲ್ಲ ಹುಡುಗರೂ ಕಲಿಯುತ್ತಿದ್ದರು.

ಹಿಂದಿನ ಕಾಲದಲ್ಲಿ ದುಡ್ಡಿನ ಚಲಾವಣೆ ಅಷ್ಟಾಗಿ ಇರಲಿಲ್ಲ. ಬೆಳೆದವರು ಪದಾರ್ಥಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಸ್ವಾಭಾವಿಕವಾಗಿತ್ತು. ದಾನ ಧರ್ಮಗಳು ಧಾರಾಳವಾಗಿ ನಡೆಯುತ್ತಿತ್ತು. ಊರ ಕೆಲಸಗಳಲ್ಲಿ ನೆರೆ ಹೊರೆಯವರು ಅನ್ಯೋನ್ಯವಾಗಿ ಕೆಲಸ ಮಾಡುತ್ತಿದ್ದರು. ಹೂ, ಹಣ್ಣು, ತರಕಾರಿ, ಕಾಯಿ, ಹಾಲು, ಮೊಸರುಗಳನ್ನು ಮಾರಾಟ ಮಾಡುವುದು ನಾಚಿಕೆಗೇಡೆಂಬ ಭಾವನೆ ಅವರಲ್ಲಿತ್ತು. ಆ ದಿನಗಳಲ್ಲಿ ಚೆನ್ನಾಗಿ ಮಳೆ, ಬೆಳೆ ಆಗುತ್ತಿತ್ತು. ಜನರಿಗೆ ಈಗಿನಂತೆ ಆಶೋತ್ತರಗಳು ಇರುತ್ತಿರಲಿಲ್ಲ. ಊರಿನ ದೇವರ ಕಾರ್ಯಗಳಲ್ಲಿ ಊರಿನ ಎಲ್ಲ ವರ್ಗದ ಜನರೂ, ಒಟ್ಟಾಗಿ ಸೇರಿ ಮತ ಭೇದವಿಲ್ಲದೆ ಕೆಲಸ ಮಾಡುತ್ತಿದ್ದರು. ಬೆಳಿಗ್ಗೆ–ಸಾಯಂಕಾಲ ಎಲ್ಲಾ ಕಂಬ ಸಾಲಿನ ಮನೆಗಳಲ್ಲೂ ವೇದಪಾಠಗಳು. ಪಕ್ಕದ ಹಳ್ಳಿ, ಬಂಡೀ ಹಳ್ಳಿಯ ದೇವರ ಭಟ್ಟರು ಬಂದು ವಿದ್ಯಾರ್ಥಿಗಳಿಗೆ ವೇದ ಪಾಠ, ವ್ಯಾಕರಣ ಪಾಠ ಹೇಳಿ ಕೊಡುತ್ತಿದ್ದರು. ಇದು ಆಗಿನ ಕಾಲದಲ್ಲಿ ಒಂದು ದೊಡ್ಡ ಅಗ್ರಹಾರವಾಗಿತ್ತು. ಇಲ್ಲೇ ಶ್ಯಾನುಭೋಗ ವೆಂಕಟಕೃಷ್ಣಪ್ಪನವರು ಇದ್ದರು. ಅವರಿಗೆ ಇಬ್ಬರು ಹೆಂಡಂದಿರು. ನಿಂಗಮ್ಮ ಮತ್ತು ರಂಗಮ್ಮ. ಮಕ್ಕಳಿಲ್ಲದ್ದರಿಂದ ಎಳವಾರೆ ದಾಸಪ್ಪ ಅವರನ್ನು ದತ್ತು ತೆಗೆದುಕೊಂಡರು. ಇವರು ಶ್ಯಾನುಭೋಗತನ, ಜಮೀನು, ಕೆಲ್ಲಂಗೆರೆ ಸಮಸ್ತ ಆಸ್ತಿ ಪಾಸ್ತಿಗೆ ವಾರಸುದಾರರಾದರು. ದಾಸಪ್ಪನ ಮಗನೇ ತಿಮ್ಮಪ್ಪದಾಸರು. ಇದೂ ಅಲ್ಲದೆ ಈ ಊರಿನಲ್ಲಿ ಮೈಲಾರ ಜೋಯಿಸರು, ಚನ್ನಪ್ಪಯ್ಯನ ಮನೆಯವರು, ಕಾಶೀ ಅಜ್ಜಯ್ಯನ ಮನೆಯವರು, ಅವರ ಮಗ ಮಹಾ ವೇದಾಧ್ಯಯನ ಪಂಡಿತ ಗಂಗಾಧರ ಶಾಸ್ತ್ರಿ ಇವರುಗಳ ದೊಡ್ಡ ಮನೆಗಳೇ ಇದ್ದವು. ೫೦ ಮನೆ ಶ್ರೀ ವೈಷ್ಣವ ಮನೆಗಳು, ಪಕ್ಕದ ಊರು ತಳಲೂರಿನಲ್ಲಿ ೧೦೦ ಮನೆ ಸ್ಮಾರ್ತರುಗಳು, ೧೦೧ ಈಶ್ವರ ದೇವಾಲಯಗಳಲ್ಲಿರುವ ಈ ಎರಡೂ ಗ್ರಾಮಗಳು ಸೇರಿ ದೊಡ್ಡ ಅಗ್ರಹಾರ 'ಹರಿಹರಪುರ' ಎಂಬ ಹೆಸರು ಇದ್ದದ್ದು ತಿಳಿದು ಬರುತ್ತದೆ.

ಇಂತಹ ಸುಂದರ ಗ್ರಾಮ ಪರಿಸರದಲ್ಲಿ ತಿಮ್ಮದಾಸರು ಹುಟ್ಟಿದುದು.

ತಿಮ್ಮಪ್ಪದಾಸರ ಪೂರ್ವಿಕರು

ತಿಮ್ಮಪ್ಪದಾಸರ ಮನೆತನದ ಮೂಲಪುರುಷ ಎಳವಾರೆ ತಿಮ್ಮಪ್ಪಯ್ಯ ಎಂದು ತಿಳಿದುಬರುತ್ತದೆ. ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಹಲವಾರು ತಿಮ್ಮಪ್ಪದಾಸರು ಕಂಡುಬರುತ್ತಾರೆ. ಹಿರಿಯ ಸಾಹಿತಿ ಎಂ.ವಿ. ಸೀತಾರಾಮಯ್ಯನವರು ತಮ್ಮ ವಂಶದವರಾದ ಒಬ್ಬ ತಿಮ್ಮಪ್ಪದಾಸರ ವಿಚಾರ ತಿಳಿಸಿರುತ್ತಾರೆ. ಇವರ ಸ್ಥಳ

ಚಿಕ್ಕನಾಯಕನಹಳ್ಳಿ. ಇವರೂ ಸಹ ಭಾಗವತ ಸಂಪ್ರದಾಯದಿಂದ ಬಂದವರು. ಬಬ್ಬೂರು ಕಮ್ಮೆ ಉಪಪಂಗಡದವರು. ಇವರು ರಚಿಸಿದ ಅನೇಕ ಕೃತಿಗಳನ್ನು 'ಅರ್ಚನ' ಎನ್ನುವ ಪುಸ್ತಕದಲ್ಲಿ ಪ್ರಕಟಿಸಿರುತ್ತಾರೆ. ಇನ್ನೊಬ್ಬರು ವರಾಹ ತಿಮ್ಮಪ್ಪನವರು ಎಂದು ಪ್ರಸಿದ್ಧರಾದ ನೆಕ್ಕರೆ ಕೃಷ್ಣದಾಸರು. ಇವರೂ ಸಹ ಭಾಗವತ ಸಂಪ್ರದಾಯದವರೇ. ಇಲ್ಲಿ ನಾವು ಪ್ರಸ್ತಾಪಿಸಿರುವ ತಿಮ್ಮಪ್ಪದಾಸರು ಇವರಿಬ್ಬರಿಗೂ ಭಿನ್ನರಾದವರು. ಇವರು ಹಾಸನ ಜಿಲ್ಲೆ ಅರಸೀಕೆರೆ ಹತ್ತಿರವಿರುವ ಕೆಲ್ಲಂಗೆರೆಯವರು. ಈ ಪೈಕಿ ಅರ್ಚನ ತಿಮ್ಮಪ್ಪದಾಸರೂ ಹೆಚ್ಚು ಕಮ್ಮಿ ಒಂದೇ ಕಾಲದವರು. ೨೫ ವರ್ಷ ಹಿಂದೆ ಮುಂದಿನವರು. ಇವರುಗಳ ಪೂರ್ವೇತಿಹಾಸ ಏನೆಂದರೆ– ಅವರ ಪೂರ್ವಿಕರ ಸ್ಥಳ ಶ್ರೀರಂಗಪಟ್ಟಣ. ಹಿಂದೆ ಶ್ರೀರಂಗಪಟ್ಟಣ ಮೈಸೂರು ಅರಸುಗಳ ಕಾಲದಲ್ಲಿ ಮುಸಲ್ಮಾನರ ಆಳ್ವಿಕೆಗೆ ಬಂದಾಗ ಅಲ್ಲಿದ್ದ ಬ್ರಾಹ್ಮಣ ಕುಟುಂಬಗಳು ಚೆಲ್ಲಾಪಿಲ್ಲಿಯಾಗಿ ಬೇರೆಡೆಗೆ ವಲಸೆ ಹೋದರು ಎಂದು ತಿಳಿದು ಬರುತ್ತದೆ. ಹಿಂದೆ ಈ ಮನೆಯವರು ಅಲ್ಲಿ ರಾಯಸ ವೃತ್ತಿ ಮಾಡಿಕೊಂಡು ಇದ್ದವರು. ೮೦ ಎಕರೆ ಜಮೀನು ಹೊಂದಿದ ಮುನಿದಾಸಪ್ಪ ಎಂದು ತಿಳಿದುಬರುತ್ತದೆ. ಇವರಲ್ಲಿ ಎರಡು ಭಾಗವಾಗಿ ಒಂದು ಕುಟುಂಬ ತುಮಕೂರು ಜಿಲ್ಲೆ ಅರಕಲಗೂಡಿನಲ್ಲಿ ಬಂದು ನೆಲೆಸಿದರು. ಅರಸರುಗಳಿಂದ ಭಟಮಾನ್ಯ ಪಡೆದವರಾಗಿದ್ದರು. ಅರಕಲಗೂಡಿನಿಂದ ಮುಂದುವರಿದ ಇವರು ಅರಸೀಕೆರೆ ಸಮೀಪದ ಯಳವಾರೆ ಅಗ್ರಹಾರಕ್ಕೆ ಬಂದು ಇಲ್ಲಿಯ ಶ್ಯಾನುಭೋಗಿಕೆ ಮತ್ತು ಸುಂಕ ವಸೂಲಿ ಕೆಲಸದಲ್ಲಿ ನಿರತರಾದರು. ಇವರಲ್ಲಿನ ಒಂದು ಮನೆಯವರು ಪಕ್ಕದ ತಳಲೂರು ಮುಖಾಂತರ ಕೆಲ್ಲಂಗೆರೆಗೆ ಬಂದು ನೆಲೆಸಿದರು. ಇದಕ್ಕೆ ಕಾರಣ ಕೆಲ್ಲಂಗೆರೆಯ ಚಿನಿವಾರ್ ರಾಮಗೋವಿಂದಯ್ಯನವರು ಇವರಿಗೆ ಆಶ್ರಯ ಕೊಟ್ಟು ಜಮೀನು ಮುಂಗಟ್ಟು ಕೊಡಿಸಿದರು ಎಂದು ತಿಳಿದು ಬರುತ್ತದೆ. ಇಲ್ಲಿಯ ದಾಸಪ್ಪನವರ ಮಗನೇ ಕೆಲ್ಲಂಗೆರೆ ತಿಮ್ಮಪ್ಪದಾಸರು, ಈ ಕುಟುಂಬದವರು ಚೆನ್ನಾಗಿ ವೇದಾಧ್ಯಯನ, ಸಂಸ್ಕೃತ ಬಲ್ಲವರಾಗಿದ್ದರು ಎಂದು ತಿಳಿದುಬರುತ್ತದೆ. ತಿರುಪತಿ ವೆಂಕಟರಮಣ ಸ್ವಾಮಿ ಒಕ್ಕಲಿನವರು. ಆದುದರಿಂದಲೇ ಇವರ ಮನೆಯಲ್ಲಿ ವೆಂಕಟದಾಸು, ತಿಮ್ಮಪ್ಪ, ದಾಸಪ್ಪ, ಶ್ರೀನಿವಾಸ ಮುಂತಾದ ಹೆಸರುಗಳೇ ಕಂಡುಬರುತ್ತವೆ. ಇದಕ್ಕೆ ಇವರ ವಂಶಸ್ಥರಲ್ಲಿ ಹಿರಿಯರಿಗೆ, ಮಕ್ಕಳಿಗೆ ಇಟ್ಟಿರುವ ಹೆಸರುಗಳೇ ನಿದರ್ಶನವಾಗಿದೆ.

ಬಾಲ್ಯಜೀವನ

೧೮೩೪ರಿಂದ ೧೯೨೬ರವರೆಗೆ ಜೀವಿಸಿದ್ದ ಕೆಲ್ಲಂಗೆರೆ ತಿಮ್ಮಪ್ಪದಾಸರು ೯೨ ವರ್ಷಗಳ ತುಂಬು ಜೀವನ ನಡೆಸಿದವರು. ಅತ್ರೇಯಸ ಗೋತ್ರದ ಬ್ರಾಹ್ಮಣರಲ್ಲಿ ಹೊಯ್ಸಳ ಕರ್ನಾಟಕ ಪಂಗಡದವರು. ಇವರ ಆರಾಧ್ಯ ದೇವರು ಅರಸೀಕೆರೆ ಸಮೀಪದಲ್ಲಿ ಮಾಲೇಕಲ್ಲು ತಿರುಪತಿಯ ಶ್ರೀ ವೆಂಕಟರಮಣ ಸ್ವಾಮಿ. ಅನನ್ಯ ಭಕ್ತರು.

ಇದಕ್ಕೆ ಮುಂಚೆ ದೊಡ್ಡ ತಿರುಪತಿಯ ಒಕ್ಕಲು ಸಹ. ಇವರ ಹೆಚ್ಚಿನ ಕೃತಿಗಳೆಲ್ಲಾ ಇವರ ಆರಾಧ್ಯ ದೇವರಾದ ಅಮರಗಿರಿ ದೇವರ ಅಂಕಿತವನ್ನೇ ಹೊಂದಿರುತ್ತದೆ. ಸ್ವಾಮಿಯ ಮೇಲೆ ರಚಿಸಿದವು. ಇವರ ಅಂಕಿತ 'ಸುರ ಗಿರೀಶ', 'ಸುರ ಶೈಲವಾಸ', 'ಸಹ್ಯಾದ್ರಿ ವಿಹಾರ' ಎಂಬುದನ್ನು ಕಾಣಬಹುದು. ತಿಮ್ಮಪ್ಪದಾಸರದು ತುಂಬು ಕುಟುಂಬ. ೬ ಜನ ಗಂಡು ಮಕ್ಕಳು, ೫ ಜನ ಹೆಣ್ಣುಮಕ್ಕಳು. ಇವರ ಪತ್ನಿ ಅರಸೀಕೆರೆ ಸಮೀಪದ ಹಲ್ಕೂರ್ (ಜೆ.ಸಿ.ಪುರ)ದ ಶ್ಯಾ॥ ಶ್ಯಾಮಣ್ಣವನರ ಮಗಳು ಸುಬ್ಬಲಕ್ಷ್ಮಮ್ಮ, ಮಹಾಸಾಧ್ವಿ. ಬಿಳೇಕಲ್ಲು ರಂಗನಾಥ ಸ್ವಾಮಿಯ ಪರಮ ಭಕ್ತೆ. ಈಕೆ ಸಹ ಸುಸಂಸ್ಕೃತ ಕುಟುಂಬದಿಂದ ಬಂದ ಸಚ್ಚರಿತೆ.

ದಾಸರು ತಮ್ಮ ಸಂಸಾರ ಜೀವನವನ್ನು ಕೆಲ್ಲಂಗೆರೆಯಲ್ಲೇ ಪ್ರಾರಂಭಿಸಿದರು. ತಿಮ್ಮಪ್ಪದಾಸರ ತಂದೆ ದಾಸಪ್ಪನವರ ಪಾರಮಾರ್ಥಿಕ ಪ್ರೀತಿ ಜ್ಞಾನಗಳು ಇವರಿಗೆ ಅನುವಂಶಿಕವಾಗಿ ಬೆಳೆದು ಬಂದಿತ್ತು. ಇವರ ಮನೆಯ ಪೂರ್ವಜರು ಪವಿತ್ರ ಗುರುಕುಲ ಮನೆತನದವರು. ಸಾತ್ವಿಕ ಪುರುಷರು, ವೇದೋಪನಿಷತ್ತುಗಳ ಅಧ್ಯಯನ ಅಧ್ಯಾಪನವನ್ನು ಚೆನ್ನಾಗಿ ಮಾಡಿದವರು. ರಾಮಾಯಣ, ಭಾರತ, ಭಾಗವತ, ಪುರಾಣಗಳನ್ನು ಆಳವಾದ ಅಭ್ಯಾಸ ಮಾಡಿದ ಸಂಸ್ಕೃತ ಬಲ್ಲ ಎಲ್ಲಾ ಶಾಸ್ತ್ರ ಪಾರಂಗತರು, ಅಪರೋಕ್ಷ ಜ್ಞಾನಿಗಳ ವಂಶದವರು ಆಗಿದ್ದರು. ತಿಮ್ಮಪ್ಪದಾಸರು ೧೭–೧೮ ವರ್ಷದವರಿದ್ದಾಗಲೇ ತಂದೆ ದಾಸಪ್ಪ ತೀರಿಕೊಂಡರು. ಈ ವಯಸ್ಸಿಗಾಗಲೇ ದಾಸರು ವ್ಯವಹಾರ, ಬರವಣಿಗೆ, ಸಾಹಿತ್ಯಾಭ್ಯಾಸ ವಿಚಾರಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದವರಾಗಿದ್ದರು.

ಆಗಿನ ಕಾಲದಲ್ಲಿ ಸಂಸಾರ ನಿರ್ವಹಣೆ ಬರೀ ಜಮೀನಿನ ಉತ್ಪತ್ತಿಯಿಂದ ನಡೆಯುವುದು ತುಂಬಾ ಕಷ್ಟದ ಕಾಲವಾಗಿತ್ತು. ದುಡ್ಡಿಗೇ ಬರ. ಆದುದರಿಂದ ತಿಮ್ಮಪ್ಪದಾಸರು ಬೇರೆಬೇರೆ ಮಾರ್ಗೋಪಾಯ ಕಂಡುಕೊಳ್ಳಬೇಕಾಯಿತು. ಕೆಲ್ಲಂಗೆರೆಗೆ ೩ ಮೈಲಿ ದೂರದಲ್ಲಿದ್ದ ಅರಸಿಕೆರೆಯ ತಮ್ಮ ಮಿತ್ರ ಶ್ಯಾನುಭೋಗ್ ದಾಸಪ್ಪನವರಲ್ಲಿ ಶ್ಯಾನುಭೋಗಿಕೆಯ ಲೆಕ್ಕ ಪತ್ರಗಳನ್ನು ಬರೆದುಕೊಡುತ್ತಿದ್ದರು. ಕೆಲ್ಲಂಗೆರೆಯಿಂದ ಅರಸೀಕೆರೆಗೆ ದಿನವೂ ಬಂದು ಹೋಗುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸನಂತರ ದಾಸರ ಹಿರಿಯ ಮಗ ಅರಸೀಕೆರೆಯಲ್ಲೆ ೧೨ ರೂ. ಸಂಬಳದ ಉಪಧ್ಯಾಯನಾಗಿ ಸೇರಿದನು. ಆಗ ಬೇರೆ ಮಕ್ಕಳ ವಿಧ್ಯಾಭ್ಯಾಸ ಸಹ ಆಗಬೇಕಿತ್ತು. ಇದಕ್ಕಾಗಿ ಹಿರಿಯ ಮಗ ಅರಸೀಕೆರೆ ಶ್ಯಾನುಭೋಗ್ ಬೀದಿಯಲ್ಲೆ ದೊಡ್ಡ ನಿವೇಶನವನ್ನು ಶ್ಯಾ॥ ದಾಸಪ್ಪನವರ ಸಹಾಯದಿಂದ ಖರೀದಿಸಿ ಇಲ್ಲೇ ಒಂದು ಕಂಬಸಾಲಿನ ಮನೆ ಕಟ್ಟಿದರು. ಸಂಸಾರದ ಬಹುಭಾಗ ಅರಸೀಕೆರೆಯಲ್ಲೇ ಇರುತ್ತಿತ್ತು. ನಂತರ ದೊಡ್ಡ ಕಂಟ್ರಾಕ್ಟರ್ ಒಬ್ಬರಲ್ಲಿ ಲೆಕ್ಕ ಪತ್ರ ನಿರ್ವಹಣೆ ಕೆಲಸ ಸಹ ಅಪ್ಪ ಮಗ ಶುರು ಮಾಡಿದರು.

ತಿಮ್ಮಪ್ಪದಾಸರು ಬಹಳ ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡದ್ದರಿಂದ ವಿದ್ಯಾರ್ಜನೆ ಸಂಸಾರ ನಿರ್ವಹಣೆಯಲ್ಲಿ ಬವಣೆ ಪಟ್ಟವರು. ಆದುದರಿಂದಲೇ ಕ್ಲೇಶ,

ಕಾರ್ಪಣ್ಯಗಳನ್ನು ಕಂಡಿದ್ದರು. ಜೀವನದರ್ಶನ ರೂಪಿಸಿಕೊಂಡಿದ್ದರು. ಇವರ ದೃಷ್ಟಿಯಲ್ಲಿ 'ನಿಜಸುಖ' ಅಂದರೆ ಇಂದ್ರಿಯ ಸುಖವನ್ನು ಮೀರಿದ ಆಧ್ಯಾತ್ಮಿಕ ಸುಖ, ಭಗವಂತನ ಇರವಿನ ಸುಖ ಮತ್ತು ಅರಿವಿನ ಸುಖ. ಇವರು ತಿಳಿದಂತೆ ಸ್ವಾಮಿಯ ಕಲ್ಯಾಣ ಗುಣಗಳ ಅನುಪಮ ಸೌಂದರ್ಯದ ಒಳಿತಾಗಲಿ, ದುಃಖವಾಗಲಿ, ಕೆಡುಕಾಗಲಿ, ಪರಮಾತ್ಮ ನೀಡಿದ್ದೆಲ್ಲವನ್ನೂ ಸಂಪೂರ್ಣ ಸಮರ್ಪಣಾ ಭಾವದಿಂದ ಅವನ ಪ್ರಸಾದ ಎಂದು ಸ್ವೀಕರಿಸುವಲ್ಲಿ ದ್ವಂದ್ವಾತೀತ ಭಾವದ ಸುಖವನ್ನು ಕಂಡ ಮಹಾನುಭಾವರಾಗಿದ್ದರು. ದೊಡ್ಡ ಕುಟುಂಬದ ನಿರ್ವಹಣೆಯಲ್ಲೂ ಮಹಾಸಾಧಕರು. ದಾಸರು ಸಂಸಾರ ನಶ್ವರವೆಂದು ಹೇಳಿದರೂ ಸಂಸಾರ ಬಿಟ್ಟು ಪಲಾಯನ ಮಾಡಬೇಕೆಂದು ಹೇಳಿದವರಲ್ಲ. ಸಂಸಾರದಲ್ಲೇ ಇದ್ದರೂ ಭಗವತ್ ಇಚ್ಛೆಯಂತೆ ಬಂದದ್ದೇ ಲಾಭವೆಂದು ತಿಳಿದು ಸಮಬುದ್ಧಿಯಿಂದ ಸ್ವೀಕರಿಸಲಿಕ್ಕೇಬೇಕು. ಇದೇ ವಿರಕ್ತಿ. ದೇವರನ್ನು ನೆನೆದು ದಿನ ಕಳೆಯುವುದೇ ವೈರಾಗ್ಯ ಎಂದು ತಿಳಿದು ಬಾಳುತ್ತಿದ್ದ ಸಮರಸಜೀವಿ ಆಗಿದ್ದರು.

ರಾಮಾಣ್ಣಾರ್ಯರಲ್ಲಿ ಶಿಷ್ಯ ವೃತ್ತಿ

ಜೀವನದ ಯಾವುದೇ ಕೆಲಸವಾದರೂ ಶ್ರದ್ಧಾ, ಭಕ್ತಿಯಿಂದ ಮಾಡಿ ಪರಿಶ್ರಮ ಪಡೆದುಕೊಳ್ಳಬೇಕು ಅನ್ನುವುದು ಅವರ ನೀತಿಯಾಗಿತ್ತು. ಜೀವನ ನಿರ್ವಹಣೆಗಾಗಿ ಅನೇಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕೆಲವು ಕಾಲದ ನಂತರ ಆಗಿನ ಕಾಲದ ಅರಸೀಕೆರೆ ಕಂಟ್ರಾಕ್ಟರ್ ಚೌಡಯ್ಯ ಅನ್ನುವರಲ್ಲಿ ತಮ್ಮ ಕೆಲಸ ಮುಂದುವರಿಸಿದರು. ಅವರ ಲೆಕ್ಕ ಪತ್ರದ ಕೆಲಸ ಮತ್ತು ರೋಡ್ ಪ್ಲಾನ್ ಸಹ ಮಾಡುತ್ತಿದ್ದರಂತೆ. ಬಾಣಾವರ ಮತ್ತು ಕಣಕಟ್ಟೆ ಹೊಸ ರೋಡ್ ಕೆಲಸವನ್ನು ಬಾಣಾವರದಿಂದ ಪ್ರಾರಂಭವಾಗಿ ಹುಳಿಯಾರು ರಸ್ತೆವರೆಗೆ ಕೆಲಸದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಕೆಲಸದ ನಂತರ ಸಾಯಂಕಾಲ ಮತ್ತು ರಾತ್ರಿ ಬಾಣಾವರದಲ್ಲೇ ಬಿಡಾರ. ಅಲ್ಲಿ ಬಾಣಾವರದ ರಾಮಣ್ಣಾರ್ಯ ಪರಿಚಯವಾಗಿ ಅವರ ಮನೆಯಲ್ಲೇ ಉಳಿಯುತ್ತಿದ್ದರು. ರಾಮಣ್ಣಾರ್ಯ ಪ್ರಸಿದ್ಧ ವೇದಾಂತಿ, ಮಹಾಯೋಗಿ ಆಗಿದ್ದ ಕೃಷ್ಣ ಯೋಗೀಶ್ವರರ ಮೊಮ್ಮಗ. ಅವರು ದೊಡ್ಡ ಸಂಗೀತಗಾರರು. ಸಂಗೀತ ಶಾಸ್ತ್ರಗಳ ವಿದ್ವಾಂಸರು ಸಹ ಆಗಿದ್ದರು, ಹಾಡುಗಾರಿಕೆ, ಶಾಸ್ತ್ರೀಯ ಸಂಗೀತದಲ್ಲಿ, ಭಕ್ತಿಗೀತೆ, ಭಜನೆ ಬಲ್ಲವರಾಗಿದ್ದರು. ಅವರು ತಿಮ್ಮಪ್ಪದಾಸರ ಬಹುಮುಖ ಪ್ರತಿಭೆ ಕಂಡು ಬೆರಗಾಗಿ ಬಹಳ ದಿನದಿಂದ ಅವರಿಗಾಗಿಯೇ ಕಾಯುತ್ತಿದ್ದಂತೆ ಇವರನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಕಾರಣ ತಿಮ್ಮಪ್ಪದಾಸರ ಮಧುರ ಕಂಠ, ಭಜನೆ, ಶ್ಲೋಕ ವಿವರಣೆ ಸಾಮರ್ಥ್ಯ ಎಲ್ಲವೂ ಇವರಿಗೆ ಇಷ್ಟವಾಯಿತು. ದಾಸರು ಸಂಗೀತಶಾಸ್ತ್ರದ ಎಲ್ಲಾ ಮುಖಗಳನ್ನೂ ಅರಿತರು. ಇವರ ಮನೆಯಲ್ಲೇ ಕಠಿಣ ಪರಿಶ್ರಮದಲ್ಲಿ ತೊಡಗಿದರು.

ಬೆಳಿಗ್ಗೆ ರೋಡು ಕೆಲಸ, ಸಾಯಂಕಾಲ ರಾತ್ರಿ ಗುರುಗಳಲ್ಲಿ ಸಂಗೀತಾಭ್ಯಾಸ. ಈ ಸಮಯದಲ್ಲಿ ದಾಸರು ಅರಸೀಕೆರೆಗೆ ವಾರಕ್ಕೆ ಒಂದು ದಿನ ಮಾತ್ರ ಹೋಗಿಬರುತ್ತಿದ್ದರು. ಇವರ ಹಿರಿಯ ಮಗ ದಾಸಪ್ಪ ಮನೆ ಕಡೆ ನೋಡಿಕೊಳ್ಳುತ್ತಿದ್ದರು. ರಾಮಣ್ಣಾರ್ಯರಿಗೆ ಬಹಳ ವಯಸ್ಸಾಗಿತ್ತು. ಇವರು ತಿಮ್ಮಪ್ಪದಾಸರ ಅಪೂರ್ವ ಸಾಧನೆ ಕಂಡು ಬೆರಗಾದರು. ಇದೇ ಸಮಯದಲ್ಲಿ ರಾಮಣ್ಣಾರ್ಯರ ವಯಸ್ಸು ಆರೋಗ್ಯ ಕೆಡುತ್ತಾ ಬಂದಿದ್ದರಿಂದ ತಮ್ಮಲ್ಲಿದ್ದ ವಿದ್ಯೆಯಲ್ಲದೇ ತಾವು ಸಂಗ್ರಹಿಸಿದ ಅಮೂಲ್ಯ ಸಂಗೀತಶಾಸ್ತ್ರದ ಪುಸ್ತಕಗಳಿಗೆ ತಮ್ಮ ಶಿಷ್ಯ ತಿಮ್ಮಪ್ಪನೆ ವಾರಸುದಾರ ಎಂದು ಅರ್ಪಿಸಿ ಕಣ್ಣು ಮುಚ್ಚಿದರು. ಇಲ್ಲಿಂದ ಮುಂದೆ ತಿಮ್ಮಪ್ಪದಾಸರಿಗೆ ಸಂಗೀತದ ಕಡೆ ಒಲವು ಹೆಚ್ಚಾಯಿತು. ಗುರುಗಳ ಎಲ್ಲಾ ಪುಸ್ತಕಗಳನ್ನೂ ತಮ್ಮ ಅರಸೀಕೆರೆ ಮನೆಗೆ ತಂದು ತಮ್ಮ ಸ್ವಂತ ಪ್ರತಿಭೆಯಿಂದ ಅಭ್ಯಾಸ ಮಾಡಿ ಮುಂದೆ ಕೀರ್ತನಕಾರರಾಗಿ ರೂಪುಗೊಂಡರು. ರಾಮಣ್ಣಾರ್ಯರಲ್ಲಿದ್ದ ತ್ಯಾಗರಾಜರ, ಅಣ್ಣಮ್ಮಾಚಾರ್ಯರ, ಪುರಂದರದಾಸರ ಮೂಲ ಕೃತಿಗಳ ಅಭ್ಯಾಸವನ್ನು ತಮ್ಮ ಮನೆಯ ಭಜನಾಮಂದಿರದಲ್ಲೆ ಕೂತು ಅಭ್ಯಾಸ ಮಾಡಿದರು. ಏಕಚಿತ್ತರಾಗಿ ದಿನದಲ್ಲಿ ೮–೧೦ ಗಂಟೆಗಳು ಕುಳಿತು ಅಭ್ಯಾಸ ಮಾಡುತ್ತಿದ್ದರು. ಇಲ್ಲಿಂದ ಮುಂದೆ ಅವರ ಮನಸ್ಸು, ಕಾರ್ಯ ಎಲ್ಲವೂ ಸಂಗೀತದ ಕಡೆಗೇ ತಿರುಗಿತು. ಇದೊಂದು ಅವರ ಜೀವನದಲ್ಲಿ ಆದ ಮಹಾ ತಿರುವು.

ದಾಸರ ಮನೆಯಲ್ಲಿ ಶ್ರಾವಣ ಮಾಸ ಇತರ ವಿಶೇಷ ದಿನಗಳಲ್ಲಿ ಊರಿನ ಭಕ್ತ ಸಮೂಹವೇ ಮನೆಯಲ್ಲಿ ಸೇರುತ್ತಿತ್ತು. ತಿಮ್ಮಪ್ಪದಾಸರು ಬರೀ ಕೀರ್ತನಕಾರರಾಗಿ ರೂಪುಗೊಳ್ಳಲಿಲ್ಲ. ಎಲ್ಲಾ ಕಲೆ ಶಾಸ್ತ್ರಗಳಲ್ಲೂ ದೊಡ್ಡ ವ್ಯಕ್ತಿತ್ವದವರಾಗಿ ರೂಪುಗೊಂಡರು. ನುಡಿದರೆ ಮುತ್ತಿನ ಹಾರದಂತೆ ಎನ್ನುವಂತೆ ಈ ಮಾತನ್ನು ಸಾರ್ಥಕಗೊಳಿಸಿದರು. ಬುದ್ಧಿ, ಹೃದಯ ತುಂಬುವ ವಿಚಾರ ಸಂಪತ್ತು ಇವರಲ್ಲಿ ಬೆಳೆಯತೊಡಗಿತು. ಈ ಪರಿವರ್ತನೆಯಿಂದ ಕೊಂಚ ದಿನಗಳಲ್ಲೇ ಇವರಲ್ಲಿದ್ದ ವಿದ್ವತ್ತು ಎಲ್ಲೆಡೆ ಪ್ರಚಾರವಾಯ್ತು. ಆಧ್ಯಾತ್ಮಿಕ ಸಂಪತ್ತು ತನಗೆ ತಾನೆ ಬೆಳೆಯಿತು. ಈ ಪರಿವರ್ತನೆಯಿಂದ ತಮ್ಮ ಮಗ ನಾರಾಯಣಪ್ಪ (ನಾಣಿ ಕಕ್ಕ)ನ ಜೊತೆ ಸಮರ್ಥ ಸದ್ಗುರು ಬ್ರಹ್ಮ ಚೈತನ್ಯ ಮಹಾರಾಜ ಗೋಂದಾವಳೇಕರರ ದಿವ್ಯ ದರ್ಶನ ಪಡೆದು ಶ್ರೀರಾಮತಾರಕ ಮಂತ್ರೋಪದೇಶ ಪಡೆದು ರಾಮನವಮಿಯ ಒಂಬತ್ತು ದಿನಗಳ ಕಾಲ ನಡೆದ ಅಖಂಡ ನಾಮಸ್ಮರಣೆ ಕೀರ್ತನೆ ಪುರಾಣ ಪ್ರವಚನದಲ್ಲಿ ಭಾಗವಹಿಸಿ ಗುರುಗಳ ಅನುಗ್ರಹ ಪಡೆದು ಬಂದರು. ಇದು ಒಂದು ಅವರ ಜೀವನದಲ್ಲಿ ಆದ ಮಹಾಪರಿವರ್ತನೆ. ಇಲ್ಲಿಂದ ಮುಂದೆ ಇದರ ಪ್ರಭಾವದಿಂದ ಮರಾಠಿ ಭಾಷೆ ಮತ್ತು ಅಲ್ಲಿನ ಅಭಂಗಗಳನ್ನು ಅಭ್ಯಾಸ ಮಾಡಿದರು. ಜೊತೆಗೆ ಇವರಿಗೆ ಮೊದಲೇ ಸಂಸ್ಕೃತ ವೇದಾಂತದ ಕ್ರಮ ಪಾಠವಾದುದ್ದರಿಂದ ಬಹಳ ಬೇಗ ಗ್ರಹಿಸುತ್ತಿದ್ದರು. ಮುಂದೆ ಇವರ ಹರಿಕಥಾ ಕೀರ್ತನೆಗಳಲ್ಲಿ ಮರಾಠಿ ಸೊಗಡನ್ನು ಅಭಂಗಗಳ ನಿರೂಪಣೆಗಳನ್ನೂ ಕಾಣಬಹುದು. ಆನಂದ ಸಮಾಧಾನದ ಮೂಲ ಸ್ವರೂಪವಾಗಿರುವುದೇ ಭಗವಂತನ ನಾಮಸ್ಮರಣೆ.

ನಾಮದ ಆಧಾರವನ್ನೇ ಗಟ್ಟಿಯಾಗಿ ಹಿಡಿದುಕೊಂಡು ಭಗವಂತನಿಗೆ ಅನನ್ಯ ಭಾವದಿಂದ ಶರಣು ಹೋದದ್ದಾದರೆ ಭಗವಂತನ ಹೊರತಾಗಿ ಬೇರೆ ಏನನ್ನೂ ಕಾಣಲಾಗುವುದಿಲ್ಲ ಅನ್ನುವ ವಿಚಾರ ಇವರ ಅನುಭವಕ್ಕೆ ಬಂದಿತು.

ಮನೆ ಭಾಗವತ ಕುಟೀರವಾಯಿತು

ತಿಮ್ಮಪ್ಪದಾಸರು ಮನೆಯಲ್ಲಿ ಮಕ್ಕಳು ದೊಡ್ಡವರಾದಂತೆ ಮನೆಯ ಸಂಸಾರದ ನಿರ್ವಹಣೆ, ಜವಾಬ್ದಾರಿ ಹಿರಿಯ ಮಗ ಕರ್ಮಯೋಗಿ ದಾಸಪ್ಪನಿಗೇ ವಹಿಸಿದರು. ಮನೆಯಲ್ಲಿ ಯಾವುದೇ ಮದುವೆ, ಮುಂಜಿ, ಮಂಗಳ ಕಾರ್ಯ ನಡೆಯಬೇಕಾದರೂ ದಾಸಪ್ಪನನ್ನು ಕೇಳದೆ ಯಾವುದೂ ನಡೆಯುತ್ತಿರಲಿಲ್ಲ. ಇವರೂ ಸಹ ಮನೆಯ ಹಿರಿಯ ಮಗನಾಗಿ ಅಷ್ಟೇ ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿದ್ದರು. ಎಲ್ಲರಿಗೂ ಮನೆಯ "ಅಣ್ಣಯ್ಯ"ನಾಗಿ ಬಹಳ ಅಪರೂಪದ ವ್ಯಕ್ತಿತ್ವ ಹೊಂದಿದ್ದರು. ಮನೆಯಲ್ಲಿ ಕಿರಿಯರು ಮತ್ತು ಹೆಣ್ಣುಮಕ್ಕಳು ಅಷ್ಟೇ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ದಾಸರ ಮನೆ ದೊಡ್ಡ ಅವಿಭಕ್ತ ಕುಟುಂಬವಾಗಿ ರೂಪುಗೊಂಡಿತ್ತು. ಹಿಂದು ಅವಿಭಕ್ತ ಕುಟುಂಬದಲ್ಲಿ ಹಿರಿಯ ಮಗನ ಪಾತ್ರ ಬಹಳ ಹೊಣೆಗಾರಿಕೆಯಿಂದ ಕೂಡಿರುತ್ತದೆ. ದಾಸಪ್ಪ ಅದಕ್ಕೆ ಹೊರತಾಗಿ ಇರಲಿಲ್ಲ. ಸಂಪೂರ್ಣ ಸಂಸಾರ ನಿರ್ವಹಣೆ ಇವರದಾಗಿತ್ತು.

ಎಲ್ಲ ಜವಾಬ್ದಾರಿಗಳನ್ನೂ ಮಕ್ಕಳು ನೋಡಿಕೊಳ್ಳುತ್ತಿದ್ದರಿಂದ ತಿಮ್ಮಪ್ಪದಾಸರು ಮನೆಯಲ್ಲಿ ಅಧ್ಯಯನ, ಭಜನೆ, ದೇವರ ನಾಮ, ಕಥೆ, ಪುರಾಣ ಪಠಣ ಇವುಗಳಲ್ಲಿ ತೊಡಗಿಸಿಕೊಂಡಿದ್ದರು. ರಾಮಾಯಣ ಪಾರಾಯಣ, ಹರಿಕಥೆಗಳು, ಭಜನೆ, ಸಂಗೀತ, ಸಾಹಿತ್ಯ, ಕೀರ್ತನಾ ಕಾಲಕ್ಷೇಪ ಮುಂದುವರಿಸಿದರು. ಕ್ರಮೇಣ ಇವರ ವಿದ್ವತ್ತು, ಹರಿಕಥೆ, ಸಂಗೀತಗಳು ಎಲ್ಲ ಊರಿನಲ್ಲೂ ಪ್ರಸಿದ್ಧವಾಯ್ತು. ಇವರ ಜೊತೆಗೆ ತಮ್ಮ ಮಕ್ಕಳನ್ನೇ ವಾದ್ಯಗೋಷ್ಠಿಗೆ ತಯಾರು ಮಾಡಿದರು. ಕಾರಣ ಇವರೇ ಸ್ವತಃ ಎಲ್ಲಾ ವಾದ್ಯಗಳನ್ನೂ ಬಲ್ಲವರಾಗಿದ್ದರು. ಮಕ್ಕಳಿಗೂ ಕಲಿಸಿದರು ಹಾಗೂ ತಯಾರು ಮಾಡಿದರು. ಇವರ ಮನೆಯದೇ ವಾದ್ಯ ಗೋಷ್ಠಿ, ಎಲ್ಲರೂ ಪಕ್ಕವಾದ್ಯ ಪರಿಣಿತರಾದರು. ಒಬ್ಬ ಹಾರ್ಮೋನಿಯಂ, ಒಬ್ಬ ಮೃದಂಗ, ಒಬ್ಬ ಪಿಟೀಲು ವಾದ್ಯ ನುಡಿಸುತ್ತಿದ್ದರು. ದಾಸರ ಹರಿಕಥೆಗೆ ಸ್ವಂತ ವಾದ್ಯಗೋಷ್ಠಿ. ಇವರ ಪ್ರೀತಿಯ ಮಗ ರಾಮಣ್ಣಗೆ ಮಾತ್ರ ಚಿಕ್ಕವಯಸ್ಸಿನಲ್ಲಿ ಮೈಸೂರು ಬಿಡಾರಂ ಕೃಷ್ಣಪ್ಪನವರಲ್ಲಿ ಪಿಟೀಲು ಚೌಡಯ್ಯನ ಜೊತೆ ಸಂಗೀತ ಪಾಠ ಶಿಕ್ಷಣ ಕೊಡಿಸುತ್ತಿದ್ದರು. ರಾಮಣ್ಣನದು ತುಂಬಾ ಮಧುರವಾದ ಕಂಠಸಿರಿ. ಇವರ ಹರಿಕಥೆಗಳಲ್ಲಿ ಮಧ್ಯ ಹಾಡುಗಾರಿಕೆಗೆ ಮಗನನ್ನು ಬಳಸಿಕೊಳ್ಳುತ್ತಿದ್ದರು. ಇದರಿಂದ ಕಥೆ, ಸಂಗೀತದೊಡನೆ ಮೇಳೈಸಿ ಬರುತ್ತಿತ್ತು. ಅದನ್ನು ಕೇಳಲು ಜನ ತುಂಬಿ ಸೇರುತ್ತಿತ್ತು.

ತಿಮ್ಮಪ್ಪದಾಸರ ಮನೆ–ಶ್ಯಾನುಭೋಗ ರಸ್ತೆ ಮನೆಗೆ ಮುಂದೆ ಭಾಗವತ ಕುಟೀರ ಎಂದು ನಾಮಕರಣವಾಯ್ತು. ಬೇರೆ ಎಲ್ಲೆಡೆಗಳಿಂದ ದಾಸರ ವಿದ್ವತ್ತಿಗೆ ಜನರು ಹಾಗೂ ವಿದ್ವಾಂಸರು ಬಂದು ಸೇರುತ್ತಿದ್ದುದೇ ಕಾರಣವಾಯ್ತು. ಇಲ್ಲೊಂದು ಸಾಂಸ್ಕೃತಿಕ ಕೇಂದ್ರ ನಿರ್ಮಾಣವಾಯ್ತು. ದಾಸರು ಕೀರ್ತನಕಾರರು ಆದುದಲ್ಲವೆ ತಾವೇ ಸ್ವತಃ ಹರಿಕಥಾ ರೂಪಕಗಳನ್ನೂ, ಕೀರ್ತನೆಗಳನ್ನೂ ರಚಿಸಿ ಜನ ಮನ್ನಣೆ ಗಳಿಸಿದರು. ಮುಂದೆ ದಾಸರ ಮನೆಯೇ ಒಂದು ಆಧ್ಯಾತ್ಮಿಕ ಕೇಂದ್ರವಾಯ್ತು. ನಾಡಿನ ಎಲ್ಲೆಡೆಗಳಿಂದ ವಿದ್ವನ್ಮಣಿಗಳು, ವೇದಾಂತಿಗಳು ಬಂದು ಸೇರುತ್ತಿದ್ದರು. ಇವರಲ್ಲಿ ಮುಖ್ಯರಾದವರು ಹೊಸಕೆರೆ ಚಿದಂಬರಯ್ಯನವರು, ಆಸ್ಥಾನ ವಿದ್ವಾನ್ ವಿಠಲ ಶಾಸ್ತ್ರಿಗಳು, ತುರುವೇಕೆರೆ ಬೇಟೆರಾಯ ದೀಕ್ಷಿತರು, ದೇವನೂರು ಪುರಾಣಿಕರು, ಯಳ್ಳಂಬಳಸೆ ವೈ. ಸುಬ್ಬರಾಯರು, ಕಣ್ಣಕಟ್ಟೆ ರಾಜಣ್ಣ, ನಂಜಪ್ಪ ಭಾಗವತರು. ಆಗಿನ ದಿನಗಳಲ್ಲಿ ಅರಸೀಕೆರೆಗೆ ಯಾರೇ ಹೊರಗಿನ ವಿದ್ವಾಂಸರು ಬಂದರೆ ದಾಸರ ಮನೆಯಲ್ಲೇ ಬಿಡಾರ. ಸಂಗೀತವಲ್ಲದೆ ಸಾಹಿತ್ಯ, ಆಧ್ಯಾತ್ಮಿಕ ವಿಚಾರ ವಿನಿಮಯ, ಚರ್ಚೆಗಳು, ವಿದ್ವತ್ ಗೋಷ್ಠಿಗಳು ನಡೆಯುತ್ತಿದ್ದವು.

ಶ್ರಾವಣಮಾಸದ ಸಂಭ್ರಮ

ಶ್ರಾವಣ ಮಾಸ ಬಂದಿತೆಂದರೆ ದಾಸರ ಮನೆಯಲ್ಲಿ ಎಲ್ಲಿಲ್ಲದ ಸಂಭ್ರಮ. ಕಾರಣ ತಿರುಪತಿ ತಿಮ್ಮಪ್ಪನ ಒಕ್ಕಲು ನಾಮಧಾರಿಗಳಾಗುತ್ತಿದ್ದರು. ಶನಿವಾರ ಮನೆ ಭಜನಾ ಮಂದಿರದಲ್ಲಿ ಭಜನೆ, ಮನೆಯಲ್ಲಿ ಪೂಜೆ, ಮಂಗಳಾರತಿ, ಪಾರಾಯಣ ಸಾಯಂಕಾಲ ಮಾಲೇಕಲ್ಲು ತಿರುಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಿಕೊಂಡು ಬರುತ್ತಿದ್ದರು. ಆಗ ಅರಸೀಕೆರೆ ಈಗಿನಂತೆ ಗಡಿಬಿಡಿ ಗದ್ದಲದ ಊರಾಗಿರಲಿಲ್ಲ. ಪ್ರಶಾಂತವಾಗಿತ್ತು. ಅರಸೀಕೆರೆ ಊರಿನಲ್ಲಿ ಶ್ರಾವಣ ಮಾಸದಲ್ಲಿ ಮಾಲೇಕಲ್ಲು ದೇವರ ಒಕ್ಕಲು ನಾಮಧಾರಿಗಳಾಗಿ ಮನೆ ಮನೆಗೂ ಹೋಗಿ ಭಿಕ್ಷೆ ಬೇಡುವ ಪದ್ಧತಿ ಜಾರಿಯಲ್ಲಿ ಇತ್ತು. ತಿಮ್ಮಪ್ಪದಾಸರು ತಾವೇ ನಾಮ ಧರಿಸಿ, ತಲೆಗೆ ಬಟ್ಟೆ, ಕಂಕುಳಲ್ಲಿ ಜೋಳಿಗೆ, ತಾಳ, ತಂಬೂರಿ, ಕಾಲಿಗೆ ಗೆಜ್ಜೆ ಕಟ್ಟಿ ಸಮೂಹ ಭಜನೆಯೊಡನೆ ಹೊರಡುತ್ತಿದ್ದರು. ಇತರ ಭಕ್ತಾದಿಗಳು ಸಹ ಭಜನೆಯಲ್ಲಿ ಪಾಲುಗೊಳ್ಳುತ್ತಿದ್ದರು. ಊರಿನ ಎಲ್ಲಾ ಮುಖ್ಯ ಬೀದಿಗಳಲ್ಲಿ ಅಲ್ಲದೆ ಮೊದಲು ಮಧ್ಯದಲ್ಲಿದ್ದ ಆಂಜನೇಯ ಗುಡಿಯಿಂದ ಪ್ರಾರಂಭ. ಪೇಟೆ ಬೀದಿ, ಆರ್ಯ ವೈಶ್ಯ ಮಂಡಲಿ, ಕನ್ನಿಕಾ ಪರಮೇಶ್ವರಿ ದೇವಾಲಯ, ಬ್ರಾಹ್ಮಣರ ಬೀದಿ ಕಡೆಯಿಂದ ಪ್ರಸಿದ್ಧ ಶಿವಾಲಯ ನಂತರ ಮಾಲೇಕಲ್ಲು ತಿರುಪತಿ ಕಡೆಗೆ ಪಯಣ. ಊರಿನಲ್ಲಿ ಎಲ್ಲೆಲ್ಲೂ ರಂಗವಲ್ಲಿ ಬೀದಿಗಳಲ್ಲಿ ನೀರು ಚಲ್ಲಿ ಕಾಲಿಗೂ ಸಹ ನೀರು ಹಾಕುತ್ತಿದ್ದರು. ದೇವಾಲಯಗಳ ಮುಂದೆ ದಾಸರ ಭಜನೆ ದೇವರ ನಾಮ ಕೇಳಲು ಭಯ ಭಕ್ತಿಯಿಂದ ಜನ ಗುಂಪುಗುಂಪಾಗಿ ಸೇರುತ್ತಿದ್ದರು. ಕಡೆಯಲ್ಲಿ

ತಿರುಪತಿಯಲ್ಲಿ ವಿಶೇಷ ಪೂಜೆ, ಭಜನೆ, ದೇವರ ನಾಮ ಕೇಳಲು ಊರಿನ ಹೆಂಗಸರು, ಮಕ್ಕಳು, ಹಿರಿಯರು ಎಲ್ಲರೂ ತನ್ಮಯರಾಗಿ ಭಜನೆಯಲ್ಲಿ ಪಾಲುಗೊಳ್ಳುತ್ತಿದ್ದರು. ಈ ಕೈಂಕರ್ಯವನ್ನು ಬಹಳ ದಿನಗಳವರೆಗೂ ತಿಮ್ಮಪ್ಪದಾಸರು ತಪ್ಪದೆ ನಡೆಸಿಕೊಂಡು ಬರುತ್ತಿದ್ದರು. ಕಡೇ ಶನಿವಾರ ದೇವಾಲಯದಲ್ಲಿ ಬೇಡಿ ಬಂದ ಅಕ್ಕಿ, ದವಸಗಳಿಂದ ಊಟ. ಶ್ಯಾ॥ ದಾಸಪ್ಪನವರ ನೇತೃತ್ವದಲ್ಲಿ ಊಟ, ಭಜನೆ, ವಿಶೇಷ ಪೂಜೆ, ಉತ್ಸವ ನಡೆಯುತ್ತಿತ್ತು. ಇದನ್ನು ನೋಡಲು ಸುತ್ತಲ ಹಳ್ಳಿ ಜನ, ಸ್ವಾಮಿಭಕ್ತರಾದ ದಾಸಪ್ಪಗಳು ಶಂಖ, ಜಾಗಟೆ, ಸಂಭ್ರಮ, ತಿರುನಾಮಮಂತ್ರ ನಡೆದು ಹೇಳಿಕೊಂಡು, ಸಂಭ್ರಮದಲ್ಲಿ ಪೂರ್ಣಗೊಳ್ಳುತ್ತಿತ್ತು. ಎಲ್ಲವೂ ಊರ ಮಧ್ಯಭಾಗದಲ್ಲಿರುವ ಭವಾನಿಶಂಕರ ದೇವಾಲಯದಲ್ಲಿ–ದಾಸರು ತಳಲೂರು ಗ್ರಾಮದಿಂದ ೧೦೮ ಶಿವಲಿಂಗಗಳಲ್ಲಿ ಒಂದು ಲಿಂಗ ಅರಸೀಕೆರೆಗೆ ತಂದು ಸ್ಥಾಪಿಸಿದ ಶಿವ ದೇವಾಲಯ– ನಡೆಯುತ್ತಿತ್ತು. ಇಲ್ಲಿ ಇವರ ಮಗಳು ಭವಾನಮ್ಮ ಬಹಳ ದಿನದಿಂದ ಪ್ರೀತಿಯಿಂದ ಸೇವೆ ಮಾಡುತ್ತಿದ್ದರು. ಕಾರಣ ತಮ್ಮ ತಂದೆ ಕಟ್ಟಿಸಿದ ದೇವಾಲಯವೆಂದು. ಮಹಸಾಧ್ವಿ, ದೈವಭಕ್ತೆ ಆದ ಇವರನ್ನು ಎಲ್ಲರೂ ಅಮ್ಮಣ್ಣಮ್ಮ ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ದೇವಸ್ಥಾನ ಕಟ್ಟಿಸಲು ದಾಸರಿಗೆ ಪಕ್ಕದ ಊರಿನ ಹಾರನಹಳ್ಳಿ ವೈಶ್ಯ ಜನಾಂಗದವರು ನೆರವಾದರಂತೆ. ದಾಸರ ಮಾತಿಗೆ ಎರಡು ಹೇಳದಂತೆ ಎಲ್ಲರೂ–ಹಾರನಹಳ್ಳಿಯವರು–ಈ ಕಾರ್ಯದಲ್ಲಿ ನೆರವಾದರು ಎಂದು ತಿಳಿದು ಬರುತ್ತದೆ. ಈ ಊರಿನ ಮಧ್ಯಭಾಗದಲ್ಲಿರುವ ಈ ದೇವಾಲಯು ಹಳೆಯ ಕಥೆಗಳನ್ನು ಹೇಳುತ್ತಾ ಈಗಲೂ ಪೂಜೆಗೊಳ್ಳುತ್ತಿದೆ.

ತಿಮ್ಮಪ್ಪದಾಸರು ಬರೆದ ಕೃತಿಗಳಲ್ಲಿ ಹರಿಕಥೆಗಳು ಮುಖ್ಯವಾಗಿ ಅದರಲ್ಲೂ ಆಧ್ಯಾತ್ಮ ರಾಮಾಯಣ ಎಂಬ ಕೃತಿ. ಇದನ್ನು ತಿಮ್ಮಪ್ಪದಾಸರು ಬರೆಯಲು ಕಾರಣ ಮತ್ತೂರಿನ ಹಿರಿಯ ವಿದ್ವಾಂಸರುಗಳು. ಅಲ್ಲಿನವರಿಗಾಗೇ ಬರೆದಿದ್ದರಿಂದ ತಮ್ಮ ಎಲ್ಲಾ ವಿದ್ವತ್ತಿನ ಚಿಂತನೆಯನ್ನೂ ಇಲ್ಲಿ ಕಾಣಬಹುದು. ಇವರು ಎಲ್ಲೂ ತಮ್ಮನ್ನು ಕವಿ ಎಂದು ಹೇಳಿಕೊಂಡಿಲ್ಲ. ಯಾವ ಅಹಂ ಕೂಡ ಅವರಲ್ಲಿ ಇರಲಿಲ್ಲ...! ಸಂಸ್ಕೃತ ಪದ ಪದ್ಯಗಳಿಗೆ ಸೊಗಸಾಗಿ ತಾಳ, ರಾಗಗಳನ್ನು ಹಾಕಿ ಬರೆದಿರುತ್ತಾರೆ ಅನ್ನುವುದೇ ಆಶ್ಚರ್ಯವಾಗಿರುತ್ತದೆ. ಇವರಲ್ಲಿ ಹೇಳಬೇಕೆಂದರೆ ದೈವೀಭಕ್ತಿ ಸಹಜವಾಗಿ ಆವಿರ್ಭವಿಸಿತ್ತು. ಉತ್ತಮ ಪರಿಮಳ ಸೂಸುವ ಹೂಗಳು ಹೇಗೆ ತಮ್ಮ ಹಿರಿಮೆಯನ್ನು ತಾವೇ ಹೇಳಿಕೊಳ್ಳುವುದಿಲ್ಲ, ಹೆಮ್ಮೆ ಪಟ್ಟುಕೊಳ್ಳುವುದಿಲ್ಲ ಅನ್ನುವಂತೆ ಕಾಣುವ ದಾಸರನ್ನು "ವನಸುಮ"ಕ್ಕೆ ಹೋಲಿಸಬಹುದು. ಸಂಸ್ಕೃತ ಗ್ರಾಮ ಮತ್ತೂರಿನ ಜನ ಇವರ ಈ ಸಂಸ್ಕೃತ ರಚನೆಗಳಿಗೆ ಸಂಸ್ಕೃತ ಕೀರ್ತನೆ ಗೀತ ಶ್ಲೋಕಗಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ದಾಸರೆಂದರೆ ತಿಮ್ಮಪ್ಪದಾಸರೇ ಎಂದು ಒಪ್ಪಿಕೊಂಡಿದ್ದರು. ಈ ಆಧ್ಯಾತ್ಮ ರಾಮಾಯಣವನ್ನು ಓದಿಸಿ ಕೇಳಿದ ಡಿ.ವಿ.ಜಿ. ಅವರು ಪ್ರಭಾವಿತರಾಗಿ, ತಮ್ಮ ಶ್ರೀರಾಮಪರೀಕ್ಷಣದಲ್ಲಿ ಹೊಸ ಕೀರ್ತನೆಯೊಂದು ಬರೆದು ಸೇರಿಸಿದ್ದಾರೆ.

ನಿತ್ಯ ಜೀವನದಲ್ಲಿ ತಿಮ್ಮಪ್ಪದಾಸರು

ಈ ಸಮಯಕ್ಕಾಗಲೇ ತಿಮ್ಮಪ್ಪದಾಸರ ಜೀವನ ಕ್ರಮ ಬಹಳ ಸರಳವಾಗಿ ಬದಲಾಗಿತ್ತು. ಸದಾ ದೈವ ಚಿಂತನೆ, ವೇದಾಂತ, ಪುರಾಣ, ಪುಣ್ಯ ಕಥೆ, ಭಾರತ, ಭಾಗವತ ಮುಂತಾದುದರಲ್ಲೇ ತಲ್ಲೀನರಾಗಿರುತ್ತಿದ್ದರು. ಮುಂದಿನ ಹೆಚ್ಚಿನ ದಿನಗಳಲ್ಲಿ ಹರಿಕಥಾ ಕಾಲಕ್ಷೇಪವನ್ನೇ ಮಾಡಿಕೊಂಡು ಬರುತ್ತಿದ್ದರು. ಅರಸೀಕೆರೆ ಊರಿನಲ್ಲಿ ವಿಶೇಷ ದಿನಗಳಲ್ಲಿ ಇವರ ವಿದ್ವತ್‌ಪೂರ್ಣ ಹರಿಕಥೆ ಕೇಳಲು ದೂರದ ಊರುಗಳಿಂದ ಬಂದು ಸೇರುತ್ತಿದ್ದರು. ಮುಂದೆ 'ದಾಸ ಕುಟೀರ' ದೈವೀ ಕುಟೀರವಾಗಿ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದುಬಂತು. ದೂರದ ಊರುಗಳಿಂದ ದಾಸರ ಹರಿಕಥೆಗೆ ಬೇಡಿಕೆಗಳು ಬಂದು ಬೇರೆ ಬೇರೆ ಊರುಗಳಿಗೆ ದಾಸರು ಹೋಗುತ್ತಿದ್ದರು. ಇವುಗಳಲ್ಲಿ ಹೆಚ್ಚಾಗಿ ಬೀರೂರಿನಲ್ಲಿ ಕಣಕಟ್ಟೆ ರಾಮಣ್ಣವನರು ನಡೆಸುತ್ತಿದ್ದ ರಾಮನವಮಿ ಕಾಲದಲ್ಲಿ ಒಂದು ತಿಂಗಳು ದಾಸರು ಅಲ್ಲೇ ಬಿಡಾರ ಮಾಡುತ್ತಿದ್ದರು. ಪ್ರತಿ ದಿನ ಹಂದನಕೆರೆ ಶಾಮಣ್ಣನವರ ರಾಮಾಯಣ ಪಾರಾಯಣ ನಡೆಯುತ್ತಿತ್ತು. ಅದೇ ವಿಚಾರ ತೆಗೆದುಕೊಂಡು ಸಾಯಂಕಾಲದಲ್ಲಿ ತಿಮ್ಮಪ್ಪದಾಸರಿಂದ ರಾಮಾಯಣದ ಹರಿಕಥೆ ನಡೆಯುತ್ತಿತ್ತು.

ಬೀರೂರಿನ ಸಾಮ್ರಾಜ್ಯ ಪಟ್ಟಾಭಿಷೇಕದ ವೈಭವ

ಬಹಳ ದಿನಗಳಿಗೊಮ್ಮೆ ಅಪರೂಪವಾಗಿ ನಡೆಯುವ ಸಾಮ್ರಾಜ್ಯ ಪಟ್ಟಾಭಿಷೇಕದ ವಿವರಣೆಯನ್ನು ವೈ. ಸುಬ್ಬರಾಯರು ತಮ್ಮ 'ಆತ್ಮಚರಿತೆ' ಪುಸ್ತಕದಲ್ಲಿ ಬಹಳ ಚೆನ್ನಾಗಿ ಬರೆದಿರುತ್ತಾರೆ. ಈ ವಿಚಾರ ವಾಚಕರು ಗಮನಿಸಬೇಕು. ಕಣಕಟ್ಟೆ ರಾಮಣ್ಣನವರು ಹನುಮಂತನ ಉಪಾಸನೆಯಿಂದ ಕೆಲವು ದಿವ್ಯ ಶಕ್ತಿ ಹೊಂದಿದ್ದವರು. ಅಸಾಧಾರಣ ಪ್ರತಿಭಾವಂತರು. ಅದಕ್ಕಿಂತಲೂ ಹೆಚ್ಚಾಗಿ ನಿತ್ಯವೂ ಸೂರ್ಯ ನಮಸ್ಕಾರ ಮಾಡುವುದು, ಅಖಂಡವಾಗಿ ರಾಮ ಮಂತ್ರ ಜಪಿಸುವುದು, ಯಾವ ಪುಸ್ತಕದ ಸಹಾಯವಿಲ್ಲದೆ ಸುಂದರಕಾಂಡ ರಾಮಯಣವನ್ನು ಪಾರಾಯಣ ಮಾಡುತ್ತಿದ್ದರು. ಅವರು ಕೆಲವು ಭವಿಷ್ಯದ್ ಘಟನೆಗಳ ಬಗ್ಗೆ ಹೇಳುತ್ತಿದ್ದ ಫಲಗಳು ನಿಜವಾಗುತ್ತಿದ್ದವು. ವಾಕ್ ಸಿದ್ಧಿ ಪಡೆದವರಾಗಿದ್ದರು. ಶ್ರೀ ರಾಮ ಉಪಾಸಕರು, ಇಂತಹವರು ನಡೆಸಿದ ಬೀರೂರಿನ "ಸಾಮ್ರಾಜ್ಯ ಪಟ್ಟಾಭಿಷೇಕ" ಅದರ ವಿಜೃಂಭಣೆ ಅದ್ಧೂರಿಯಾದುದು ಕೇಳಿ ಬೀರೂರಿನಲ್ಲಿ ಇವರೇ ಸ್ಥಾಪಿಸಿದ ರಾಮ ಮಂದಿರದಲ್ಲಿ ಬೀದಿಯ ನಾಲ್ಕೂ ಕಡೆ ಬೀದಿಗೆ ಬಹಳ ದೊಡ್ಡದಾದ ಬಿದರಿನ ಚಾಪೆ ಮಂಟಪ, ಭಜನಾ ಮಂದಿರ ನಿರ್ಮಾಣ, ನಾಲ್ಕು ಭಾಗಗಳಲ್ಲೂ ರಾಮಾಯಣ ಪಾರಾಯಣ, ಹವನ, ಶ್ರೀರಾಮ ತಾರಕ ಹೋಮ, ಸಹಸ್ರಾರು ಜನರು ಕೂಡಲು ಜಾಗ, ಬೆಳಿಗ್ಗೆ ಬಂದವರಿಗೆ ಫಲಾಹಾರದ ವ್ಯವಸ್ಥೆ, ಮಧ್ಯಾಹ್ನದ ವೇಳೆಗೆ ಮಂಗಳಾರತಿ ಆಗುತ್ತಲೇ ಊಟದ ವ್ಯವಸ್ಥೆ ಸಹಸ್ರಾರು ಜನರಿಗೆ

ಆಗುತ್ತಿತ್ತು. ಇಲ್ಲಿನ ಅಡುಗೆ ಪಾತ್ರೆಗಳೇ ಸಣ್ಣ ಸಣ್ಣ ಬಾವಿಗಳಂತೆ ಇರುತ್ತಿದ್ದವು. ಸಮಾರಂಭಕ್ಕೆ ಬೇಕಾದ ಸಾಮಾನುಗಳು ರೈಲು ಮೂಲಕ ಬಂದು ಬೀಳುತ್ತಿತ್ತು. ಅದನ್ನು ಸಾಗಿಸುವುದೇ ದೊಡ್ಡ ಕೆಲಸ. ದೊಡ್ಡ ದೊಡ್ಡ ಸಾಹುಕಾರರುಗಳು ತಾವು ಕೊಡುವ ಕಾಣಿಕೆಗಳನ್ನು ಬೆಳ್ಳಿ ತಟ್ಟೆಗಳಲ್ಲಿ ತುಂಬಿಕೊಂಡು ಓಲಗ ವಾದ್ಯಗಳ ಸಮೇತ ತಂದು ಒಪ್ಪಿಸುತ್ತಿದ್ದರಂತೆ. ರಾಮ ದೇವರ ಪಾದಗಳಲ್ಲಿ ಸುರಿದು ಹೋಗುತ್ತಿದ್ದರು. ರಾಮಣ್ಣನವರು ಬಹಳ ನಿಷ್ಠರಾಗಿ, ಮೌನರಾಗಿ ಮಿತಾಹಾರದಿಂದ ದೀಕ್ಷೆ ವಹಿಸಿ ದೇವಸ್ಥಾನದಲ್ಲಿ ಕೂರುತ್ತಿದ್ದರು. ಹಗಲೂ ರಾತ್ರಿ ಅಖಂಡ ಭಜನೆ, ಸಂಜೆ ದೀಪಾಲಂಕಾರ, ಮಂತ್ರ ಘೋಷಣೆ, ಪ್ರತಿ ದಿನ ಬೆಳಿಗ್ಗೆ ರಾಮಾಯಣ ಪಾರಯಣ ವೇ॥ ಮೂರ್ತಿ ಹಾಗೂ "ವಾಲ್ಮೀಕಿ ಹೃದಯ ಪ್ರಕಾಶ" ಹಂದನಕೆರೆ ಶ್ಯಾಮಣ್ಣನವರಿಂದ ಪ್ರಾರಂಭದಿಂದ ವಾಲ್ಮೀಕಿ ರಾಮಾಯಣ ಪಠಣ ವ್ಯಾಖ್ಯಾನ, ಸಂಜೆ ಹೊತ್ತು ಅದೇ ವಿಚಾರವನ್ನು ತೆಗೆದುಕೊಂಡು ನಮ್ಮ ತಿಮ್ಮಪ್ಪದಾಸರಿಂದ ರಾಮಾಯಣದ ಹರಿಕಥೆ ಮಾಡುತ್ತಿದ್ದರು. ಈ ವಿಶೇಷ ಸಂದರ್ಭಕ್ಕೆಂದೇ ಬಾಲಕಾಂಡದಿಂದ ಪ್ರಾರಂಭಿಸಿ ಸಾಮ್ರಾಜ್ಯ ಪಟ್ಟಾಭಿಷೇಕದವರೆಗೂ ನಿತ್ಯ ಹರಿಕಥೆ ನೂತನ ಮಾದರಿಯಲ್ಲಿ ಬರೆದು ಮಧ್ಯಭಾಗದಲ್ಲಿ ಮಗ ರಾಮಣ್ಣ ದಾಸರಿಂದ ಹಾಡುಗಾರಿಕೆ ಸಾಥಿ ಸಹ ಇರುತ್ತಿತ್ತು. ಈ ಕಥೆ ಕೇಳಲು ದೂರದ ಊರುಗಳಿಂದ ಜನ ಗಾಡಿ ಕಟ್ಟಿಕೊಂಡು ಬಂದು ಸೇರುತ್ತಿದ್ದರಂತೆ. ಆ ದಿನ ವೈ. ಸುಬ್ಬರಾಯರು ಬಂದು ಉಗ್ರಾಣದಲ್ಲಿ ಮಲಗಿದ್ದು ಸರಿಹೊತ್ತಿನಲ್ಲಿ ಎಚ್ಚರವಾಗಿ ನೋಡಿದರೆ ಎಲ್ಲೆಲ್ಲೂ ರಾಮ ಭಜನೆ ಕೇಳಿ ಬರುತ್ತಿತ್ತು. ಆಗಿನ ಕಾಲಕ್ಕೆ ಇದೊಂದು ಅಯೋಧ್ಯೆಯಂತೆ ಕಾಣುತ್ತಿತ್ತು ಎಂದು ಬರೆಯುತ್ತಾರೆ. ಕಡೆಯ ದಿನಕ್ಕೆ ಈ ಕಾರ್ಯಕ್ಕೆ ಪ್ರೋತ್ಸಾಹಿಸಲು "ಶೃಂಗೇರಿ ಮಠ"ದಿಂದ ಒಂದು ಆನೆಯನ್ನು ಕಳುಹಿಸಿದ್ದರಂತೆ. ಅದರ ಮೇಲೆ ರಾಮಾಯಣ ಪುಸ್ತಕ ಹೊತ್ತು ಊರಿನಲ್ಲೆಲ್ಲಾ ಭಜನೆಯ ಮೆರವಣಿಗೆ ನಡೆಯಿತು. ಗಂಡಸರು ಹೆಂಗಸರು ಮಕ್ಕಳು ಗುಂಪುಗುಂಪಾಗಿ ಭಾಗಿಯಾಗಿ ಸಂಭ್ರಮದ ವಾತಾವರಣ ನಿರ್ಮಾಣವಾಯಿತು. ಅಂದಿನ ಕಾಲದ ಹಿರಿಯರಿಂದ ಈ ವಿಚಾರ ತಿಳಿಯಲು ಬಲು ಚೆನ್ನ. ಅವರು ನೆನಪಿನ ಅಂಗಳದಿಂದ ತಿಳಿಸಿದಂತೆ ನಾವು ಈವರೆಗೂ ತಿಮ್ಮಪ್ಪದಾಸರು ಮಾಡಿದ ಹರಿಕಥೆಯಂಥಾ ಹರಿಕಥೇ ಕೇಳೇ ಇಲ್ಲ ಎನ್ನುತ್ತಾರೆ.

ಉಡುಪಿ ಕ್ಷೇತ್ರಕ್ಕೆ ಭೇಟಿ

ತಿಮ್ಮಪ್ಪದಾಸರು ಉಡುಪಿ ಪರ್ಯಾಯದಲ್ಲಿದ್ದ ಸ್ವಾಮಿಗಳ ಆಹ್ವಾನದ ಮೇಲೆ ಹೋಗಿ "ಶ್ರೀಕೃಷ್ಣ ಲೀಲಾಮೃತ" ಕಥಾಭಾಗವನ್ನು (ಶ್ರೀಮದ್ ಭಾಗವತದ ಆಯ್ದ ಭಾಗಗಳಿಂದ ಹೆಣೆದ ಕಥೆಯನ್ನು) ಒಂದು ವಾರದ ಕಾಲ ನಡೆಸಿಕೊಟ್ಟರು. ಇವರ ಶ್ರೀಕೃಷ್ಣ ಚರಿತಾಮೃತವೆಂಬ ಇನ್ನೊಂದು ಹರಿಕಥೆ ಬಹಳ ಅಪರೂಪದ ಕಥಾ ಭಾಗವಾಗಿತ್ತು. ಕೃಷ್ಣನ ಗೋಕುಲ ನಿರ್ಗಮನ ಕಥೆಯನ್ನು ಜಯದೇವ ಕವಿಯ

ಗೀತಗೋವಿಂದದಿಂದ ಆಯ್ದ ಭಾಗವನ್ನು ಸೇರಿಸಿ ಹೇಳಿದಾಗ ಇಲ್ಲಿನ ಸ್ವಾಮಿಗಳು ಕೇಳಿ ಆನಂದಿಸಿ ದಾಸರಿಗೆ ಮಠದಲ್ಲೇ ಉಳಿದುಕೊಳ್ಳುವ ವ್ಯವಸ್ಥೆ ಸಹ ಮಾಡಿದರಂತೆ. "ಭಕ್ತಿ ಮಾರ್ಗ" ಎಂಬ ಹರಿಕಥೆಯಲ್ಲಿ ವಿಶೇಷವಾಗಿ ದಾಸರ ಭಕ್ತಿಮಾರ್ಗ ಕುರಿತು ವಿವರಿಸಿದರು. ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳೆಂಬ ಪ್ರಸ್ಥಾನಗಳ ಮೇಲೆ ಅದ್ವೈತ, ದ್ವೈತ ವಿಶಿಷ್ಟಾದ್ವೈತ, ಮತ ಸ್ಥಾಪಕರಾದ ಆಚಾರ್ಯರುಗಳು ಕಡೆಯಲ್ಲಿ ಸಾಧನಾಮಾರ್ಗ ಭಕ್ತಿಯನ್ನೇ ಪ್ರಸ್ತಾಪಿಸಿದ್ದಾರೆ. ಎಲ್ಲರೂ ಮೋಕ್ಷಕ್ಕೆ ಕಾರಣವಾದ ಮಾರ್ಗಗಳಲ್ಲಿ ಭಕ್ತಿಯೇ ಶ್ರೇಷ್ಠವೆಂದಿದ್ದಾರೆ ಎಂದು ನಿರೂಪಣೆ ಮಾಡಿದ ವಿಚಾರ ಸ್ವಾಮಿಗಳಿಗೆ ತುಂಬಾ ಹಿಡಿಸಿತಂತೆ. ಕಡೆಯ ದಿನ ಪ್ರಭಾವಿತರಾದ ಸ್ವಾಮಿಗಳು ತಿಮ್ಮಪ್ಪದಾಸರಿಗೆ ಶಾಲು ಹೊದಿಸಿ ಸನ್ಮಾನ ಮಾಡಿ ದೇವರ ಸಮ್ಮುಖದಲ್ಲಿ ವಿಶೇಷ ಪೂಜೆ ಏರ್ಪಾಡು ಸಹ ಮಾಡಿದ್ದರಂತೆ. ಇದೇ ಸಮಯದಲ್ಲಿ ದಾಸರು ಶ್ರೀಕೃಷ್ಣನ ಸುಂದರ ಮೂರ್ತಿಯ ಮುಂದೆ ಭಾವುಕರಾಗಿ ಹಾಡಿದ ಹಾಡು 'ಬಾರೋ... ಬಾರೊ... ಬಾಲಕೃಷ್ಣನೇ ಭಕ್ತರೊಡೆಯ' ಎಂಬ ಕೃತಿ ಬಹಳ ಅಪರೂಪದ್ದು. ಇದರಲ್ಲಿ ಶ್ರೀಕೃಷ್ಣನಿಗೆ ಹಾಕಿದ ಎಲ್ಲಾ ಒಡವೆಗಳ ವರ್ಣನೆ ಬಂದಿರುತ್ತದೆ. ಯಾರಿಗೂ ಕಾಣದಂತೆ ಕೈಯಲ್ಲಿ ಕಡೆಗೋಲು ಹಿಡಿದು ನಿಂತಿರುವ ವರ್ಣನೆ ಬಹಳ ಮೋಹಕವಾಗಿ ಮೂಡಿ ಬಂದಿರುತ್ತದೆ. ಯಾರಿಗೂ ತಿಳಿಯದಂತೆ ಬಾಲ ಕೃಷ್ಣನಾಗಿ ಮೋಹಕ ರೂಪದಿಂದ ಸೊಂಟದಲ್ಲಿ ಉಡಿದಾರ, ಕೈಯಲ್ಲಿ ಕಡುಗೋಲು ಹಿಡಿದಿರುವ ನಿನ್ನನ್ನು ನಾವು ಗುರುತಿಸಲಿಲ್ಲ ಎಂದು ತಿಳಿದಿರುವೆಯಾ ಎಂದು ನೇರವಾಗಿ ಕೇಳಿಕೊಂಡಿದ್ದಾರೆ. ಕಡೆಯ ಚರಣದಲ್ಲಿ ಅಷ್ಟಮಠದ ಯತಿಗಳಿಂದ ಸಂತೃಪ್ತನಾಗಿ ಪೂಜೆಗೊಳ್ಳುತ್ತಾ ಎಂದು ಎಲ್ಲಾ ಸ್ವಾಮಿಗಳ ಬಗ್ಗೆ ಇಲ್ಲಿನ ಪೂಜಾ ವಿಧಿಯ ಬಗ್ಗೆ ತಿಳಿಸಿರುತ್ತಾರೆ. ಇದೊಂದು ಕೃತಿ ನಿವೇದನಾ ರೂಪದಲ್ಲಿ ಕೂಡಾ ಕಂಡುಬರುತ್ತದೆ. ಉಡುಪಿಯಲ್ಲಿನ ಕಡೇ ದಿನದ ಕಥೆಯಲ್ಲಿ ಅದಮಾರು ಮಠದ ಗುರುಗಳ ಸಮ್ಮುಖದಲ್ಲಿ ನಡೆದಿತ್ತು. ಅದ್ವೈತಮತದ ವಿಚಾರದಲ್ಲಿ ನಿಜವಾಗಿ ಮುಖ್ಯವಾಗಿರುವುದೇ ಭಕ್ತಿ ವಿಚಾರ ಎಂದು ವ್ಯಾಖ್ಯಾನ ಮಾಡುತ್ತಾ ಉಡುಪಿಯ ಕೃಷ್ಣನ ಕೈಲಿರುವ ಕಡಗೋಲನ್ನು ಅಮೃತ ಮಂಥನಕ್ಕೆ ಹೋಲಿಸುತ್ತಾ, ಬಂದ ಬೆಣ್ಣೆಯನ್ನು ನವನೀತಕ್ಕೆ ಹೋಲಿಸಿದ್ದು, ಭಕ್ತಿಯ ಪ್ರಭೇಗಳನ್ನು ವಿವರಿಸುತ್ತಾ ನವನೀತ ಎಂದರೆ, ಕೇಳುವುದು, ನೆನೆವುದು, ಪೂಜೆ, ವಂದನೆ, ದಾಸ್ಯ, ನಿವೇದನೆ, ಸಮರ್ಪಣಾ ಭಾವ ಮುಂತಾದ ನವಭಕ್ತಿಯ ನಾನಾ ರೂಪಗಳನ್ನು ವಿವರಿಸಿದ ರೀತಿ ದಾಸರಲ್ಲಿದ್ದ ಆಧ್ಯಾತ್ಮಿಕ ಜ್ಞಾನಕ್ಕೆ ಸ್ವಾಮಿಗಳು ತುಂಬ ಮೆಚ್ಚಿಕೊಂಡರು. ನೈಜ ಸುಖಾನುಭವವೇ ಮುಕ್ತಿ. ಇದಕ್ಕೆ ಸಾಧನವಾದುದೇ ಭಕ್ತಿ ಎಂದು, ಇದೇ ಅದ್ವೈತ ಮತದ ಮುಖ್ಯ ವಿಚಾರ ಎಂದು ತಿಳಿಸಿದ ವಿಚಾರ ಎಲ್ಲರನ್ನೂ ಚಕಿತಗೊಳಿಸಿದ ವಿಚಾರಗಳಲ್ಲಿ ಒಂದು. ತಿಮ್ಮಪ್ಪ ದಾಸರ ಶಿಷ್ಯರಾದ ಟಿ.ಸಿ. ನಂಜಪ್ಪ ಭಾಗವತರು ಹಳೇ ಆಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಇದನ್ನು ನೆನೆದುಕೊಂಡಿದ್ದಾರೆ. ದಾಸರ ಜೊತೆಯಲ್ಲಿ ಇವರೂ ಸಹ ಉಡುಪಿಗೆ ಹೋಗಿದ್ದರು.

ಶೃಂಗೇರಿ ಕ್ಷೇತ್ರದ ಪ್ರಯಾಣ

ನವರಾತ್ರಿ ಸಮಯದಲ್ಲಿ ತಿಮ್ಮಪ್ಪದಾಸರು ಪವಿತ್ರವಾದ ಶೃಂಗೇರಿ ಕ್ಷೇತ್ರಕ್ಕೆ ಹೋಗಿದ್ದರು. ಇದಕ್ಕೆ ಕಾರಣ ಆಗಿನ ಸ್ವಾಮಿಗಳಾದ ಶ್ರೀ ಶ್ರೀ ಸಚ್ಚಿದಾನಂದ ಶಿವಾನುಭವ ನರಸಿಂಹ ಭಾರತೀ ಸ್ವಾಮಿಗಳು ಕೆಲ್ಲಂಗೆರೆ ಸಮೀಪದ ಬಂಡೀಹಳ್ಳಿಗೆ ದಯಮಾಡಿಸಿದ್ದಾಗ ತಿಮ್ಮಪ್ಪದಾಸರಿಗೆ ಶೃಂಗೇರಿಗೆ ಬರುವಂತೆ ಆಹ್ವಾನ ಕೊಟ್ಟಿದ್ದರಂತೆ, ಇದರಂತೆ ದಾಸರು ಶೃಂಗೇರಿಯಲ್ಲಿ ಐದು ದಿನಗಳ ಕಾಲ ದೇವಿ ಭಾಗವತದಲ್ಲಿನ ಕಥಾ ಭಾಗದ ಹರಿಕಥೆ ಅಲ್ಲದೆ ಕಡೇ ದಿನ ತಾವೇ ರಚಿಸಿದ "ಶಂಕರ ವಿಜಯ", ಹರಿಕಥೆಯಲ್ಲಿ ಶಂಕರರ ಅದ್ವೈತ ಸಿದ್ಧಾಂತ ಮಂಡನೆಯನ್ನು ಹರಿಕಥಾ ರೂಪದೊಡನೆ ವಿವರಿಸಿದ್ದರು. ಈ ಕಥಾಭಾಗವನ್ನು ಸ್ವಾಮಿಗಳೂ ಬಂದು ಆಲಿಸಿದ್ದರು ಎಂದು ತಿಳಿದುಬರುತ್ತದೆ. ದಾಸರ ಪಾಂಡಿತ್ಯ ಮತ್ತು ವಿದ್ವತ್ತುಗಳನ್ನು ಸ್ವಾಮಿಗಳು ಬಹಳವಾಗಿ ಮೆಚ್ಚಿಕೊಂಡರು. ಅಲ್ಲದೆ ಕಡೆಯ ದಿನ ದಾಸರಿಗೆ ಮಠ ಮರ್ಯಾದೆಯೊಂದಿಗೆ ಶಾಲು ಹೊದಿಸಿ ಆಶೀರ್ವದಿಸಿದರು ಎಂದು ತಿಳಿದುಬರುತ್ತದೆ. ಇದೇ ಸಮಯದಲ್ಲಿ ಸ್ವಾಮಿಗಳು ನಮ್ಮ ತಿಮ್ಮಪ್ಪದಾಸರನ್ನು ಏಕಾಂತದಲ್ಲಿ ತಮ್ಮ ನರಸಿಂಹವನದಲ್ಲಿ ಬರಮಾಡಿಕೊಂಡು ಅನೇಕ ಗಹನ ವಿಚಾರಗಳನ್ನು ಚರ್ಚಿಸಿದರು ಎಂಬ ವಿಚಾರ ನೋಡಿದರೆ ದಾಸರ ವಿದ್ವತ್ತು ಯಾವ ಮಟ್ಟದಲ್ಲಿತ್ತು ಎಂದು ತಿಳಿಯಬಹುದು. ಇಲ್ಲಿನ ನವರಾತ್ರಿ ಸಮಯದ ನಿತ್ಯ ಪೂಜಾ ಸಮಯದಲ್ಲಿ ತಿಮ್ಮಪ್ಪದಾಸರು ಮಾತೆ ಶಾರದೆಯ ಮುಂದೆ ನಿಂತು ತನ್ಮಯತೆಯಿಂದ ಹಾಡಿದ ಕೀರ್ತನೆ, "ಪಾಲಿಸೊಲಿದು ಪರಾಕು ತಾಯಿ ಸದ್ಗುಣಶೀಲೆ ಶಾರದಾಂಬೆ". ಈ ಕೃತಿಯನ್ನು ದಾಸರಿಂದಲೇ ಹಾಡಿಸಿ ಸ್ವಾಮಿಗಳು ಕೇಳಿದ್ದರಂತೆ. ಈ ಕೃತಿಯಲ್ಲಿ ಶಾರದೆಯನ್ನು ಅಲಂಕರಿಸಿದ್ದ ಸರ್ವಭರಣಗಳನ್ನು ಆಕೆಯ ವಿವಿಧ ಮೋಹಕರೂಪಗಳನ್ನು ಅತ್ಯಂತ ಭಕ್ತಿಯಿಂದ ತನ್ಮಯಚಿತ್ತರಾಗಿ ವರ್ಣಿಸಿದ್ದಾರೆ.

ಸಂಸ್ಕೃತ ಗ್ರಾಮ ಮತ್ತೂರಿನಲ್ಲಿ

ತಿಮ್ಮಪ್ಪದಾಸರು ತಮ್ಮ ಎರಡನೇ ಮಗಳು ವೆಂಕಟಲಕ್ಷ್ಮಮ್ಮನನ್ನು ಮತ್ತೂರಿಗೆ ಕೊಟ್ಟಿದ್ದರು. ಆದುದರಿಂದ ಶಿವಮೊಗ್ಗಾ ಹತ್ತಿರದ ಮತ್ತೂರಿಗೆ ಮಗಳ ಮನೆಗೆ ಆಗಾಗ ಹೋಗಿ ಬರುತ್ತಿದ್ದರು. ಇಲ್ಲಿಯ ಶ್ರೀರಾಮ ದೇವಾಲಯದಲ್ಲಿ ದಾಸರ ಹರಿಕಥಾ ಸಪ್ತಾಹ ನಡೆದಿತ್ತು. ಮತ್ತೂರು, ಹೊಸಳ್ಳಿ ಗ್ರಾಮಗಳು ಸಂಕೇತಿ ಪಂಗಡದ ಸಂಸ್ಕೃತ ವಿದ್ವಾಂಸರ ಬೀಡು. ಇಲ್ಲಿ ಮಾತನಾಡುವಾಗಲೂ ಸಂಸ್ಕೃತ ಬಳಕೆಯಲ್ಲಿ ಇತ್ತು. ಇಲ್ಲಿ ಮಗಳ ಮನೆಯಲ್ಲಿ ಬಿಡಾರ ಮಾಡಿದಾಗ ಬರೆದಿದ್ದ "ಆಧ್ಯಾತ್ಮ ರಾಮಾಯಣ" ಇದೊಂದು ಸುಂದರ ಯಕ್ಷಗಾನ ಹರಿಕಥಾ ರೂಪ. ಇದನ್ನು ಇಲ್ಲಿಯ ಸಂಸ್ಕೃತ ವಿದ್ವಾಂಸರಿಗೆಂದೇ ಅನೇಕ ವಿದ್ವತ್ತಿನಿಂದ ಕೂಡಿದ ಶ್ಲೋಕ ಹಾಗೂ ಸಂಸ್ಕೃತ ಪದ ಪದ್ಯಗಳಲ್ಲೇ ಬರೆದಿರುತ್ತಾರೆ. ಈ ಕಥೆ ಇಲ್ಲಿನ ವಿದ್ವಾಂಸರನ್ನು ಬೆರಗುಗೊಳಿಸಿ ಎರಡೂ

ಊರಿನವರೂ ಸೇರಿ ಕಡೇ ದಿನ ಮಂಗಳ ಕಾರ್ಯಕ್ರಮದಲ್ಲಿ ದಾಸರಿಗೆ ದೊಡ್ಡ ಸನ್ಮಾನ ಗೌರವ ಸಲ್ಲಿಸಿದರು. ಮತ್ತೂರಿನಲ್ಲಿ ದಾಸರ ಮನೆಯವರೂ ಎಂದರೆ ಎಲ್ಲಿಲ್ಲದ ಗೌರವ. ನಾವು ಹುಡುಗರು ಅಜ್ಜಿಯನ್ನು ನೋಡಲು ಊರಿಗೆ ಹೋದರೆ ಓಹೋ ನೀವು ದಾಸರ ಮನೆಯವರೇ? ಎಂದು ಪ್ರಶ್ನೆ. ಅದರಲ್ಲೂ ಒಂದೆರಡು ದೇವರನಾಮ ಬಂದರೆ ಗೌರವ ಹೆಚ್ಚು. ದಾಸರು ಇಲ್ಲಿಯ ಸುಂದರವಾದ ಶ್ರೀರಾಮ ದೇಗುಲದ ರಾಮರ ಮುಂದೆ ಒಂದು ಸುಂದರ ದೇವರನಾಮ ರಚಿಸಿ ಹಾಡಿದ್ದರು. ಅದೇ ದೇವರನಾಮ "ನೀನು ವಿನಾ ಅನ್ಯರ ಕಾಣೆ" ಮತ್ತು "ಬಾರೋ ಮನಕೆ ರಾಮ". ಈ ಹಾಡುಗಳನ್ನು ಅಜ್ಜಿ, ಊರಿನ ಹೆಂಗಸರಿಗೆ ಹೇಳಿಕೊಟ್ಟಿದ್ದರು. ಇಲ್ಲಿನ ಸಂಕೇತಿ ವಿದ್ವಾಂಸರುಗಳ ಸಂಸ್ಕೃತ ತೌರೂರಿನಲ್ಲಿ ದಾಸರು ಹರಿಕಥೆಗಳಲ್ಲಿ ಸಂಸ್ಕೃತ ಗಂಗೆಯನ್ನು ಕನ್ನಡದ ನೆಲಕ್ಕೆ ತಂದರು ಎಂದು ಇಲ್ಲಿನ ಹಳೇ ತಲೆಗಳು ವರ್ಣಿಸುತ್ತಿದ್ದರು.

ದಾಸರು ಎಲ್ಲೇ ಹೊರ ಊರುಗಳಿಗೆ ಹೋದರೂ ತಮ್ಮ ಆರಾಧ್ಯ ದೇವವಾದ ಮಾಲೇಕಲ್ಲು ತಿರುಪತಿಗೆ ಬಂದು ಸ್ವಾಮಿಯ ಮುಂದೆ ನಿವೇದನೆ ಮಾಡುತ್ತಿದ್ದುದನ್ನು ಕಾಣಬಹುದು. ಆಗ ವಿಶೇಷ ಪೂಜೆ ನಡೆಯುತ್ತಿತ್ತು. ಇಲ್ಲಿ ತಮ್ಮ ಆತ್ಮಾವಲೋಕನ ಮಾಡಿಕೊಂಡು ಭಕ್ತಿಭಾವದಿಂದ ನಿಂತಲ್ಲೇ ಕೂತಲ್ಲೇ ದೇವರ ಮೇಲೆ ಸುಂದರ ದೇವರನಾಮಗಳನ್ನು ರಚಿಸಿ ಹಾಡುತ್ತಿದ್ದರು. ದೇಹ ಪರಿಪಕ್ವವಾಗುತ್ತಾ ಬಂದಂತೆ ನಿವೇದನಾ ರೂಪದಲ್ಲಿ ಬಂದಿರುವ ಸುರಗಿರೀಶನ ದೇವರ ನಾಮ "ದರುಶನವಾಯ್ತು ಈ ದಿನ ಸುದಿನಾ ಸುರಗಿರಿ ಅರಸನಪದ" ಎಂಬ ಕೀರ್ತನೆ ಇಷ್ಟದೈವಕ್ಕೆ ಅರ್ಪಿಸಿದ ಸುಂದರ ರಚನೆಗಳಲ್ಲಿ ಒಂದು. ಈ ಕೀರ್ತನೆಯಲ್ಲಿ ದರುಶನವಾಯ್ತು ಅನ್ನುವ ಈ ಜಗತ್ತೆ ಒಂದು ಅನುಭವ ಕ್ಷೇತ್ರ, ಕರ್ಮಫಲ ಭೋಗಿಸುವ ಸತ್ರ. ಅದರ ವಿಕಾಸದಲ್ಲೇ ಈ ಜಗತ್ತು ಅಗಾಧ ಗಾತ್ರದಲ್ಲಿ ಬೆಳೆದಿಹುದು. ಇದರಲ್ಲಿ ನಮ್ಮ ಕರ್ಮಫಲವನ್ನು ಹುಡುಕುತ್ತಾ ಫಲವನ್ನು ಹುಡುಕುವುದೇ ಈ ವಿಚಿತ್ರ ಸಂಸಾರ ಎಂದು ತಮ್ಮ ಮಾಗಿದ ಜೀವನಾನುಭವವನ್ನು ಸ್ವಾಮಿಯ ಮುಂದೆ ನಿಂತು ನಿವೇದಿಸಿಕೊಂಡಿದ್ದಾರೆ.

ಸುಬ್ಬಲಕ್ಷ್ಮಮ್ಮ

ತಿಮ್ಮಪ್ಪದಾಸರ ತುಂಬು ಕುಟುಂಬದಲ್ಲಿ ಮನೆಯ ಗೌರವವನ್ನು ಕಾಪಾಡಿ ಶಾಂತಿ, ನೆಮ್ಮದಿ ತರಲು ಆಜೀವ ದುಡಿದು ಎಲೆ ಮರೆಯ ಕಾಯಿಯಂತೆ ಬದುಕು ಸಾಗಿಸುತ್ತಿದ್ದ ದಾಸರ ಪತ್ನಿ ಸುಬ್ಬಲಕ್ಷ್ಮಮ್ಮನವರ ಪಾತ್ರ ದೊಡ್ಡದು. ಹನ್ನೊಂದು ಮಕ್ಕಳ ಮಹಾ ತಾಯಿ, ದೈವ ಭಕ್ತೆ. ಹಲ್ಕೂರು ಸಮೀಪದಲ್ಲಿರುವ ಬಿಳಿಗಿರಿ ರಂಗನಾಥಸ್ವಾಮಿಯ ಭಕ್ತೆ. ಒಬ್ಬ ಸಾಧಕನ ಹಿಂದೆ ಸಾಧ್ವಿಯೊಬ್ಬಳ ಸಹಚರ್ಯವಿರುತ್ತದೆ. ಇದು ಜನರ ಅನುಭವದ ಮಾತು. ಪುರುಷನ ಹಿಂದೆ ಒಂದು "ಸ್ತ್ರೀ ಶಕ್ತಿ" ಇರುತ್ತದೆ. ಹೆಣ್ಣಿನ ಸಮಯ ಪ್ರಜ್ಞೆ, ಸಾತ್ವಿಕ ಸ್ವರೂಪದ ಭಕ್ತಿ, ಬದುಕನ್ನು ಹಂಚಿಕೊಂಡು ಬಾಳುವುದೇ

ಮುಖ್ಯ. ಈ ಹಾದಿಯಲ್ಲಿ ಬಂದವರು ಸುಬ್ಬಲಕ್ಷ್ಮಮ್ಮ. ಹೆಣ್ಣು ಸಂಸಾರದ ಕಣ್ಣು ಹೌದು, ಮನೆಯ ಬೆಳಕೂ ಹೌದು.

ಪತಿಪ್ರಿಯಾ ಹಿತೇ ಯುಕ್ತಾ ।
ಸ್ವಾಚಾರಸಂಯತೇಂದ್ರಿಯಾ ।
ಇಹಕೀರ್ತಿಮವಾಪ್ನೋತಿ ।
ಪ್ರೇತ್ಯಚಾನುಪಮಂಸುಖಂ । (ವ್ಯಾಸ ಸಂಹಿತೆ)

ಗಂಡನಿಗೆ ಯಾವುದು ಒಳ್ಳೆಯದೋ ಅದನ್ನೇ ಮಾಡುತ್ತಿರುವವಳು, ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುವವಳು ಆದ ಪತ್ನಿಯು ಇಹಲೋಕದಲ್ಲಿ ಕೀರ್ತಿ ಪಡೆಯುತ್ತಾಳೆ ಎಂಬುದನ್ನು ಉದಾಹರಣೆಯಾಗಿ ಆದರ್ಶವಾಗಿ ಕಾಣುವಂತಹ ಮಹಿಳೆ. ಈಕೆ ಪೂಜೆ, ಪುರಸ್ಕಾರ, ಹಬ್ಬ ಹರಿದಿನ, ಅತಿಥಿ ಅಭಾಗ್ಯತರ ಸೇವೆ. ದಾಸರ ಮನೆಯಲ್ಲಿ ಒಂದು ದಿನವೂ ಪೂಜೆ ತಪ್ಪದೇ ನೋಡಿಕೊಂಡು ಎಲ್ಲಾ ಕೆಲಸವನ್ನೂ ದೇವರ ಕೆಲಸವೆಂದು ತಿಳಿದು ಮಾಡುತ್ತಿದ್ದ ಸುಬ್ಬಲಕ್ಷ್ಮಮ್ಮ ಆದರ್ಶಪ್ರಾಯವಾಗಿದ್ದರು. ಐದು ಜನ ಹೆಣ್ಣು ಮಕ್ಕಳಿಗೂ ಮನೆಯಲ್ಲಿ ಇದೇ ಶಿಕ್ಷಣ. ಮನೆ ಕೆಲಸ, ಹಾಡು, ಹಸೆ, ಹಿರಿಯರಲ್ಲಿ ಗೌರವ, ದೇವರಲ್ಲಿ ಪ್ರೇಮ, ಭಕ್ತಿ. ಎಲ್ಲ ಮಕ್ಕಳಿಗೂ ದೇವರ ನಾಮ ಹಾಡಲು ಕಲಿಸಿದ್ದರು, ಬಹಳ ಇಂಪಾಗಿ ಹಾಡುತ್ತಿದ್ದರು. ಊರಿನಲ್ಲಿ ಯಾರ ಮನೆಯಲ್ಲಿ ಮದುವೆ, ಮುಂಜಿ, ಮಂಗಳ ಕಾರ್ಯಗಳಾದರೂ ದಾಸರಮನೆ ಹೆಣ್ಣು ಮಕ್ಕಳದ್ದೇ ಹಾಡುಗಳು.

ದಾಸರ 'ಸತ್ಯ ಕಥೆಗಳು'

ಇನ್ನು ತಿಮ್ಮಪ್ಪದಾಸರು ತಮ್ಮ ನಿತ್ಯ ಜೀವನದಲ್ಲಿ ಕ್ರಮಬದ್ಧ ಜೀವನವನ್ನು ರೂಪಿಸಿಕೊಂಡಿದ್ದರು ಮತ್ತು ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಿದ್ದರು. ತಮ್ಮ ಆಧ್ಯಾತ್ಮಿಕ ಜೀವನದ ಗೆಲುವುಗಳ ರಹಸ್ಯ ಈ ಗುಣಗಳೇ ಆಗಿದ್ದವು ಎಂದರೆ ತಪ್ಪಲ್ಲ. ನಿತ್ಯ ಜೀವನದಲ್ಲಿ ಭಕ್ತಿಯ, ಶ್ರದ್ಧೆಯ, ನಿಷ್ಠೆಯ, ದೈವೀ ಸದ್ಗುಣಗಳು ಇಂಥವರಲ್ಲಿ ಅಂತರ್ಗತವಾಗಿದ್ದ ಬದುಕಿನ ರೀತಿಯನ್ನು ಕಾಣಬಹುದು. ಇಂಥವರ ಬಾಳ ಹಾದಿಯಲ್ಲಿ ಕೃತಾರ್ಥ ಜೀವನದ ತತ್ವಜ್ಞಾನಕ್ಕೆ ಬೆಳಕು ನೀಡಿದಂತಹ ಪ್ರಸಂಗಗಳು ಬಂದು ಹೋಗುತ್ತದೆ. ಇಂಥ ಕೆಲವು ಪ್ರಸಂಗಗಳು ಇಲ್ಲಿವೆ.

ಕೆರೆಯ ನೀರನು ಕೆರೆಗೆ ಚೆಲ್ಲಿ

ತಿಮ್ಮಪ್ಪದಾಸರು ತಮ್ಮ ಮಾನಸಿಕ ದೃಷ್ಟಿಯಲ್ಲಿ ಉನ್ನತ ಆದರ್ಶಗಳನ್ನು ಇಟ್ಟುಕೊಂಡವರು. ತಾವು ಆಯ್ದುಕೊಂಡ ದಾರಿಯಲ್ಲಿ ದೃಢ ವಿಶ್ವಾಸ, ಆದರ್ಶಗಳನ್ನು

ಇಟ್ಟುಕೊಂಡು ಜೀವನ ನಡೆಸಿದವರು. ಇದಕ್ಕೆಲ್ಲಾ ಕಾರಣ ಅವರ ಆಧ್ಯಾತ್ಮಿಕ ಚಿಂತನೆ. ಆಡಿದ ಮಾತಿನಂತೆ ಮಾಡಿ ತೋರಿಸಿದ ಆದರ್ಶ ಜೀವಿ. ಬೇರೆ ಆಸೆ ಆಮಿಷಗಳಿಗೆ ಬೀಳದೆ ಸಮರ್ಪಣಾ ಭಾವದಿಂದ ಬಾಳಿ "ಕೆರೆಯ ನೀರನು ಕೆರೆಗೆ ಚೆಲ್ಲಿ" ಅನ್ನುವಂತೆ ಬಾಳಿ ತೋರಿಸಿದವರು. ಆಗಿನ ಕಾಲದ ನಮ್ಮ ಅರಸೀಕೆರೆ ಊರ ಮಧ್ಯಭಾಗದಲ್ಲಿ ಶರತ್ ನವರಾತ್ರಿ ಸಮಯದಲ್ಲಿ ೧೫ ವರ್ಷಗಳ ಕಾಲ ಒಂದೇ ಜಾಗದಲ್ಲಿ ಹರಿಕಥೆ ಮಾಡುತ್ತಿದ್ದರು. ಆ ಸಮಯದಲ್ಲಿ ನಮ್ಮ ಊರಿನ ಒಬ್ಬ ಆರ್ಯವೈಶ್ಯ ಕುಟುಂಬಕ್ಕೆ ಸೇರಿದ ನರಸಿಂಹ ಶ್ರೇಷ್ಠಿಯವರು ತನಗೆ ಮಕ್ಕಳಿಲ್ಲದ್ದರಿಂದ ತನಗೆ ಸೇರಿದ ಆ ದೊಡ್ಡ ಜಾಗವನ್ನು ದಾಸರ ಹೆಸರಿಗೆ ದಾನವಾಗಿ ಬರೆದುಕೊಟ್ಟರು. ಆಗ ದಾಸರು ಏನು ಮಾಡಿದರು ಗೊತ್ತೆ? ಕೊಂಚವೂ ತಡ ಮಾಡದೆ ಮರುದಿನವೇ ಊರಿನ ಎಲ್ಲಾ ವೈಶ್ಯ ಭಾಂಧವರನ್ನೂ ಸೇರಿಸಿ ಕರೆದು ಆ ದೊಡ್ಡ ಜಾಗವನ್ನು ನಿಮ್ಮ ಜನಾಂಗಕ್ಕೆ, ಊರಿನಲ್ಲಿ ನಿಮ್ಮವರದೇ ಆದ ಒಂದು ದೇವಾಲಯವಿಲ್ಲ. ಈ ಜಾಗ ನಿಮಗೇ ಸೇರಬೇಕು ಎಂದು ಹೇಳಿ ಆ ಜಾಗವನ್ನು ಆರ್ಯವೈಶ್ಯ ಮಂಡಲಿಗೆ ಬರೆದುಕೊಟ್ಟರು. ಆ ಜಾಗದಲ್ಲೇ ಈಗ ಕನ್ನಿಕಾ ಪರಮೇಶ್ವರಿ ದೇವಾಲಯ ನಿರ್ಮಾಣವಾಗಿರುತ್ತದೆ. ಈ ಪ್ರಸಂಗಗಳಲ್ಲಿ ಪುರಂದರದಾಸರ ನುಡಿಯಂತೆ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಮಾತಿನ ಸಾರ್ಥಕತೆಯನ್ನು ಕಾಣುತ್ತೇವೆ. ದಾಸರಿಗೆ ತಾವು ದುಡಿದು ಹಣ ಆಸ್ತಿ ಮಾಡಿಕೊಳ್ಳಬೇಕು ಅನ್ನುವ ಯಾವ ಆಸೆಗಳೂ ಇರಲಿಲ್ಲ. ಮಕ್ಕಳಿಗಾಗಿ ದುಡಿಯಬೇಕು ಎಂದು ತಿಳಿದವರಲ್ಲ. ಎಲ್ಲರಿಗೂ ಸನ್ಮಾರ್ಗದಲ್ಲಿ ಹೋಗಿ ಎಂದು ಮಾತ್ರ ತಿಳಿಸುತ್ತಿದ್ದರು.

ಮಾನವೀಯ ಅನುಕಂಪ

ಇನ್ನೊಂದು ಜೀವಿತದ ಘಟನೆ ಎಂದರೆ ಇವರ ಮಾನವೀಯ ಅನುಕಂಪ ಪ್ರಸಂಗ. ನಮ್ಮ ಸುತ್ತಲಿನ ಸಮಾಜವನ್ನು ತಿದ್ದುವ ಅವರ ಭಾವನೆ ಹೇಗಿತ್ತು ಅನ್ನುವುದನ್ನು ತಿಳಿಸುತ್ತದೆ. ದಾಸರ ಮಕ್ಕಳಲ್ಲಿ ದಾಸರ ನಾಲ್ಕನೇ ಮಗ ಬಹಳ ಮುದ್ದಾದ ಹುಡುಗ. ಅವನಿಗೆ ಇವರ ದೇವರ ಹೆಸರನ್ನೇ ಪ್ರೀತಿಯಿಂದ ಇಟ್ಟಿದ್ದರು. 'ಮಾಲೇ ಕಲ್ಲಯ್ಯ' ಎಂದು ಕರೆಯುತ್ತಿದ್ದರು. ಮಗುವಿಗೆ ಐದನೇ ವರ್ಷದಲ್ಲಿ ಚೂಡಾಕರ್ಮಶಾಸ್ತ್ರ ಮಾಡುತ್ತಿರುವ ಕಾಲದಲ್ಲಿ ಆಗಿನ ಕಾಲದಲ್ಲಿ ಅದರ ಹಿಂದಿನ ದಿನ ಗಂಡು ಮಗುವಿಗೆ ಹೆಣ್ಣು ಅಲಂಕಾರ ಹಾಕಿ ಶೃಂಗಾರ ಮಾಡಿ ಆರತಿ ಮಾಡಿ ನಲಿಯುತ್ತಿದ್ದರು. ಬಹಳ ಸುಂದರವಾಗಿದ್ದ ಈ ಹುಡುಗನಿಗೆ ಪಕ್ಕದ ಮನೆ ಶೆಟ್ಟರ ಮನೆಯವರು ತಮ್ಮಲ್ಲಿದ್ದ ಬಂಗಾರದ ಒಡವೆಗಳನ್ನು ಹಾಕಿದ್ದರು. ಹುಡುಗ ಎಲ್ಲರಿಗೂ ತೋರಿಸಿ ಆಟವಾಡಿಕೊಳ್ಳುತ್ತಿದ್ದಾಗ ಅದೇ ಊರಿನವನೇ ಆದ ಹತ್ತಿರದಲ್ಲಿದ್ದ ಆಚಾರಿ ಒಬ್ಬ ಒಡವೆಗಳ ಆಸೆಗೆ ಹುಡುಗನನ್ನು ಹೊತ್ತುಕೊಂಡು ಹೋಗಿ ದೂರದಲ್ಲಿ ಹುಡುಗನನ್ನು ಕೊಲೆ ಮಾಡಿ ಒಡವೆಗಳ ಸಮೇತ ಪರಾರಿಯಾದ. ಈ ವಿಚಾರ ತಕ್ಷಣ ಊರಿನಲ್ಲೆಲ್ಲಾ

ಸುದ್ದಿ ಹರಡಿತು. ಮಾರನೇ ದಿನವೇ ಪೋಲಿಸರಿಗೆ ಆಚಾರಿ ಒಡವೆಗಳ ಸಮೇತ ಸಿಕ್ಕಿಬಿದ್ದ. ಜೈಲು ಸೇರಿದ. ಇವನು ಹುಡುಗನ ಕೊಲೆ ಮಾಡಿದ್ದರಿಂದ ಇವನಿಗೆ ಮರಣ ದಂಡನೆ ಖಾಯಂ ಎಂದು ಎಲ್ಲರೂ ಅನ್ನುತ್ತಿರುವಾಗ, ದಾಸರೇ ಮುಂದೆ ನಿಂತು ಈ ಆಚಾರಿಯನ್ನು ಬಿಡಿಸಿ ತಂದರು. ಆಚಾರಿ ಜೀವ ಉಳಿಸಲು ಆರು ತಿಂಗಳು ಕಾಲ ಹಾಸನದ ನ್ಯಾಯಾಲಯಕ್ಕೆ ದಾಸರೇ ತಿರುಗಿದ್ದರು. ಇವನಿಗೆ ಗಲ್ಲು ಶಿಕ್ಷೆಯಾದರೆ ನಮ್ಮ ಮಗ ಬರುತ್ತಾನೆಯೇ? ಎಂಬುದು ದಾಸರ ಪ್ರಶ್ನೆ. ಮುಂದೆ ಅದೇ ಆಚಾರಿ ದಾಸರ ಶಿಷ್ಯನಾದನಂತೆ. ಇದು ಮಾನವೀಯ ಅನುಕಂಪ ಅಲ್ಲವೆ? ಜೀವನದ ಪರೀಕ್ಷೆಯಲ್ಲಿ ಇತರರ ವರ್ತನೆ ಗುಣಮಟ್ಟ ನೋಡಿ ನಮ್ಮ ಮೌಲ್ಯ ನಿಷ್ಠೆಯನ್ನು ರೂಪಿಸಿಕೊಳ್ಳಬೇಕಾಗಿಲ್ಲ. ಪಾರಮಾರ್ಥಿಕ ಬದುಕಿಗೆ ನಮ್ಮ ಪ್ರಜ್ಞೆ ಮಾತ್ರ ಸಾಕು. ಇದರಲ್ಲೇ ಲೌಕಿಕ ಬದುಕಿಗೆ ಸಾರ್ಥಕತೆ ಇರುತ್ತದೆ. ಇದನ್ನೇ ಉನ್ನತ ಮಟ್ಟದ ಚಿಂತನೆ ಅನ್ನುತ್ತಾರೆ. ಇದು ಯಾವ ಕಾನೂನಿಗಿಂತಲೂ ಎತ್ತರ. ದೈವೀ ಚಿಂತನೆಯಿಂದ ನೋಡಿದರೆ ಜ್ಞಾನಿಗಳಿಗೆ ತನ್ನಂತೆ ಇತರರನ್ನು ತಿಳಿಯಬೇಕು ಅನ್ನುವ ಸಮಭಾವ ಆಗುತ್ತದೆ. ಇದನ್ನು ದಾಸರ ಚಿಂತನೆಯಲ್ಲಿ ಕಾಣಬಹುದು.

ಸ್ಥಿತಪ್ರಜ್ಞನ ಲಕ್ಷಣ

ಸ್ಥಿತಪ್ರಜ್ಞನ ಲಕ್ಷಣಗಳ ಬಗ್ಗೆ ಜೀವನದಲ್ಲಿ ಆಚರಣೆಗೆ ತರದೆ ಬೇಕಾದಷ್ಟು ಬರವಣಿಗೆಗಳು ಸಿದ್ಧಾಂತಗಳು "ಗೀತೆ"ಯಿಂದ ಹಿಡಿದು ಎಲ್ಲ ಗ್ರಂಥ ಪುರಾಣಗಳ ಬಗ್ಗೆ ಅನೇಕರು ಬರೆದದ್ದೂ ಬರೆದದ್ದೇ. ಆದರೆ ಆಚರಣೆಯಲ್ಲಿ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡವರು, ಹಾಗೆ ಬಾಳಿದವರು ಕಮ್ಮಿ. ಈ ವಿಚಾರದಲ್ಲಿ "ಸ್ವಾನುಷ್ಠಾನ ಸಮಯೇ ಮುನಿಯೋಽಪಿ ನ ಪಂಡಿತಃ" ಆಗುತ್ತದೆ. ಈ ವಿಚಾರದಲ್ಲಿ ದಾಸರು ತಮ್ಮ ದೀರ್ಘ ಜೀವನ ಸಮಯದಲ್ಲಿ ಎಂದೂ ಸಮಚಿತ್ತ ಕಳೆದುಕೊಂಡವರಲ್ಲ. ಎಂತಹ ಸಂದರ್ಭದಲ್ಲೂ ಪ್ರಸನ್ನಚಿತ್ತರಾಗಿ ಬಾಳಿದವರು. ಒಂದು ದಿನ ತಿಮ್ಮಪ್ಪದಾಸರು ಅರಸೀಕೆರೆಗೆ ಆರು ಮೈಲಿ ದೂರದಲ್ಲಿರುವ ಬೆಳಗುಂಬದಲ್ಲಿ ರಾತ್ರಿ ಹತ್ತು ಗಂಟೆವರೆಗೂ ರಾಮಾಯಣದ "ಸೀತಾ ಪರಿತ್ಯಾಗ" ಹರಿಕಥೆ ಮಾಡುತ್ತಿದ್ದರು. ಇತ್ತ ಮನೆಯಲ್ಲಿ ಅವರ ಪತ್ನಿ ಸುಬ್ಬಲಕ್ಷ್ಮಮ್ಮ ಹನ್ನೊಂದನೇ ಮಗುವಿಗೆ ಅಂದರೆ ಅನಂತರಾಮಯ್ಯನಿಗೆ ಜನ್ಮ ನೀಡಿ ಕಣ್ಣು ಮುಚ್ಚಿದ್ದರು. ಈ ವಿಚಾರದಲ್ಲಿ ಸುದ್ದಿ ಮುಟ್ಟಿಸಲು ತಳವಾರ ತಿಮ್ಮ ರಾತ್ರಿ ಸಮಯದಲ್ಲಿ ಹರಿಕಥೆ ಮಧ್ಯಭಾಗದಲ್ಲಿ ದಾಸರ ಕಿವಿಯಲ್ಲಿ ಪಿಸುಗುಟ್ಟಿದ. ವಿಚಾರ ತಿಳಿದ ದಾಸರು ಹರಿಕಥೆ ಮಧ್ಯದಲ್ಲಿ ನಿಲ್ಲಿಸಬಾರದು ಎಂದು ಮುಂದುವರಿಸಿ ಕಡೆಗೆ ಮಂಗಳ ಹೇಳಿ ನಂತರ ಪಕ್ಕದಲ್ಲೆ ಇದ್ದ ಪಕ್ಕ ವಾದ್ಯ ನುಡಿಸುತ್ತಿದ್ದ ಮಕ್ಕಳಿಗೂ ತಿಳಿಸಿ ಲಾಟೀನು ಹಿಡಿದು ರಾತ್ರಿ ಅರಸೀಕೆರೆ ಸೇರಿದರು. ಆ ಸಮಯಕ್ಕೆ ಊರಿನ ಎಲ್ಲಾ ಜನರೂ ಬಂಧುಗಳ ದೊಡ್ಡ ಸಮೂಹವೇ ಸೇರಿತ್ತು. ಮುತ್ತೈದೆ ಸಾವಿನ ಬಗ್ಗೆ

ದೊಡ್ಡ ರೋದನವೇ ನಡೆಯುತ್ತಿತ್ತು. ಇಂತಹ ಸಮಯದಲ್ಲೂ ದಾಸರು ಸ್ವಲ್ಪವೂ ವಿಚಲಿತರಾಗಿರಲಿಲ್ಲ. ಎಲ್ಲವೂ ದೈವೇಚ್ಛೆ ಎಂದು ಸಮಾಧಾನಚಿತ್ತರಾಗಿ ಮಕ್ಕಳಿಗೆ ಮುಂದಿನ ಕಾರ್ಯ ಮಾಡಲು ಹೇಳಿದರು. ಇಲ್ಲಿ ತತ್ವಗಳು ಜೀವನದಲ್ಲಿ ಕೃತಿಯಲ್ಲಿ ಪ್ರತ್ಯಕ್ಷ ಕಾಣುತ್ತದೆ. ಇಲ್ಲಿ 'ಸ್ಥಿತಪ್ರಜ್ಞತ್ವ' ಶಾಬ್ದಿಕ ವ್ಯಾಖ್ಯೆಯಾಗಿ ಉಳಿಯುವುದಿಲ್ಲ ಕೃತಿಯಲ್ಲೇ ಕಾಣಬಹುದು. ದಾಸರದ್ದು 'ಸಮರಸ' ಜೀವನ ಕ್ರಮವಾಗಿತ್ತು. ಸುಖ–ದುಃಖಗಳನ್ನು ಸಮವಾಗಿ ಹಂಚಿಕೊಂಡು ಬಾಳಬೇಕು ಅನ್ನುವುದೇ ಅವರ ನೀತಿಯಾಗಿತ್ತು.

ಬಹುಮುಖ ಪ್ರತಿಭೆ

ತಿಮ್ಮಪ್ಪದಾಸರ ಸಾಧನೆ ಕಲಾವಂತಿಕೆಯಲ್ಲಿನ ವ್ಯಕ್ತಿತ್ವದ ಅವರ ಬಹುಮುಖ ಪ್ರತಿಭೆಯನ್ನು ಗುರುತಿಸಬೇಕಾದರೆ, ಅವರನ್ನು ಹತ್ತಿರದಿಂದ ಬಲ್ಲವರಿಗೇ ಗೊತ್ತು. ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು. ಅದು ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ ಇವರ ವ್ಯಕ್ತಿತ್ವ ಬಹಳ ಎತ್ತರದ್ದು. ದಾಸರು ಹತ್ತು ಜನರ ಮಧ್ಯೆ ನೂರು ಜನರ ಮಧ್ಯೆ ಅಥವಾ ಸಾವಿರ ಜನರ ಮಧ್ಯೆ ಇರಲಿ ಇವರದು ಮಾತ್ರ ಗಮನ ಸೆಳೆಯುವ ಆಕೃತಿ. ಅತ್ಯಂತ ಭಕ್ತಿಭಾವದ ನಿರಾಡಂಬರ ವ್ಯಕ್ತಿತ್ವದ ಮುಖ. ದಾಸರ ಮುಖ ದರ್ಶನ ಮಾಡುತ್ತಿದ್ದರೆ ಇವರು ದೈವೀಭಕ್ತಿಯ ಸಾಕಾರ ಮೂರ್ತಿಯಂತೆ ಕಾಣುತ್ತಿದ್ದರು. ಬೀದಿಯಲ್ಲಿ ಜನರು ಹೇಳದೇ ಕೇಳದೆ ತಾವೇ ಕೈ ಜೋಡಿಸಿ ನಮಸ್ಕರಿಸುತ್ತಿದ್ದರು. ಕಾರಣ ಆ ದೈವೀಭಾವದ ಮುಖ. ಇವರು ಭಜನಾ ಮಂದಿರದಲ್ಲಿ ಹಾಡುತ್ತಾ ಕುಳಿತರೆ ತಮ್ಮ ಜೊತೆ ಶ್ರೋತೃಗಳನ್ನು ಬೇರೆ ಲೋಕಕ್ಕೆ ಕರೆದೊಯ್ಯುತ್ತಿದ್ದರು. ಇವರಿಗೆ ಭಗವಂತನ ಲೀಲಾ ವಿನೋದವನ್ನು ಕಾಣುವ ಉತ್ಕಟ ಹಂಬಲವಾಗಿರುತ್ತಿತ್ತು. ಭಜನೆ, ಸಂಕೀರ್ತನೆ, ಸತ್ಸಂಗ ಇವುಗಳಲ್ಲಿ ನಿಶ್ಚಲ ಮನಸ್ಸಿನಲ್ಲಿ ಮಾಡುವ ಭಕ್ತಿ ಭಾವ ಸರಳ ದೇವರನಾಮಗಳ ಮೂಲಕ ಕೀರ್ತನೆ ವಚನಗಳ ಮೂಲಕ ತುಂಬಿ ಹರಿಯುತ್ತಿದ್ದವು. ಇವರಲ್ಲಿದ್ದ ಅಧ್ಯಯನಶೀಲತೆ ಅನುಕರಣೀಯವಾಗಿತ್ತು. ವೇದಾಂತ ತತ್ವ ವಿಚಾರಗಳಲ್ಲಿ ಹೆಸರಾಂತ ವೇದಾಂತಿ, ಹೊಸಕೆರೆ ಚಿದಂಬರಯ್ಯನವರೊಡನೆ ಚರ್ಚಿಸುತ್ತಿದ್ದರು. ಈ ಬಗ್ಗೆ ಹೊಸಕೆರೆ ಚಿದಂಬರಯ್ಯನವರು ಅವರ 'ಕೀರ್ತನ ಕಂಠಾಭರಣ' ಪುಸ್ತಕದಲ್ಲಿ ತಿಮ್ಮಪ್ಪದಾಸರ ಮಗ ರಾಮಣ್ಣದಾಸರನ್ನು ಕುರಿತ ಮಾತುಗಳನ್ನು ಗಮನಿಸಬಹುದು.

"ಗಾನಶಾಸ್ತ್ರದ ಪರಿಚಯವಿಲ್ಲದ ನನಗೆ ಶ್ರೀಯುತ ಅರಸಿಕೆರೆ ರಾಮಣ್ಣದಾಸರು ಕೀರ್ತನ ಕಾಲಕ್ಷೇಪವನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಅದನ್ನು ಸಮರ್ಪಕವಾಗಿ ನಡೆಸಿ ಅದರಲ್ಲಿಯೇ ಮುಂದುವರಿದಂಥ ತಮ್ಮ ತಂದೆಯವರಾದ ಕೈಲಾಸವಾಸಿ ತಿಮ್ಮಪ್ಪದಾಸರ ಸಂಗ್ರಹದಲ್ಲಿದ್ದ ಕಾಲೋಚಿತವಾದ ಮಟ್ಟುಗಳನ್ನು ಕೊಟ್ಟುದ್ದಲ್ಲದೆ

ನಾನು ಅನೇಕ ಕಡೆ ಆ ಮಟ್ಟುಗಳಲ್ಲಿ ಪದಗಳನ್ನು ಮಾಡಿದ ಮೇಲೆ ಅವುಗಳ ಹೊದಿಕೆಯನ್ನು ಮತ್ತೊಮ್ಮೆ ನೋಡಿ ರಾಗ ತಾಳಗಳನ್ನು ಗೊತ್ತು ಮಾಡಿಕೊಟ್ಟು ಉಪಕಾರ ಮಾಡಿದ್ದಾರೆ. ಕೆಲವು ಕಡೆ ಮಾತ್ರ ಅವರು ಉಪಯೋಗಿಸುತ್ತಿದ್ದ ಪದಗಳನ್ನೇ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಯೂ ಇದ್ದೇನೆ."

ಕೀರ್ತನ ಕಂಠಾಭರಣ (ರಾಮಾಯಣ) ೧೯೨೮

ಹೊಸಕೆರೆ ಚಿದಂಬರಯ್ಯನವರ ಮುನ್ನಡಿ

೧೯೧೨–೧೯೧ಳ ಅವಧಿಯಲ್ಲಿ ಅರಸೀಕೆರೆಯಲ್ಲಿದ್ದಾಗ ತಿಮ್ಮಪ್ಪದಾಸರ ಪಕ್ಕದ ಮನೆಯಲ್ಲೇ ದೇಹಾರೋಗ್ಯದ ಪ್ರಯುಕ್ತ ವಿಶ್ರಾಂತಿ ತೆಗೆದುಕೊಳ್ಳಲು ವಾಸವಾಗಿದ್ದ ಸಂದರ್ಭದಲ್ಲಿ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿಸ್ವಾಮಿಗಳು ತಿಮ್ಮಪ್ಪದಾಸರ ಬಗ್ಗೆ ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿದ್ದಾರೆ. (ಪು. ೨೭೧. ಶ್ರೀಶ್ರೀಗಳವರ ಸ್ವಹಸ್ತ ಆತ್ಮಚರಿತ್ರೆ–೨೦೦೬ರ ಮುದ್ರಣ)

"ಅರಸೀಕೆರೆಯಲ್ಲಿ ನಾನಿದ್ದ ಮನೆಯ ಪಕ್ಕದಲ್ಲೇ ಇದ್ದ ತಿಮ್ಮಪ್ಪದಾಸರಲ್ಲಿ ನಾನು ಆಗಾಗ್ಗೆ ವೇದಾಂತ ವಿಚಾರವನ್ನು ಮಾಡುವುದು ಪದ್ಧತಿ. ದಾಸರು ನಮ್ಮ ಮಾವನವರ ಸ್ನೇಹಿತರೂ ಆಗಿದ್ದರು. ಈಗ್ಗೆ ನಮ್ಮ ಮಾವನವರು ಇರಲಿಲ್ಲವಾದರೂ ಅವರೊಡನೆ ವೇದಾಂತವೆಂಬ ಹೆಸರಿನಿಂದ ತಪ್ಪು ತಿಳಿವಳಿಕೆಯಿಂದ ಇರುತ್ತಿದ್ದ ಕೆಲವರು ವೇದಾಂತಿಗಳ ವಿಚಾರಗಳನ್ನು ಹೇಳುತ್ತಿದ್ದರು; ಅದನ್ನೆಲ್ಲ ನಾನು ಶಾಸ್ತ್ರಾಧಾರದಿಂದ ಖಂಡಿಸುತ್ತಿದ್ದೆ. ಭಕ್ತಿಗೂ ವೇದಾಂತಕ್ಕೂ ಸಾಮರಸ್ಯವನ್ನು ಮಾಡದೆ ಅವರು ಮಾತನಾಡುತ್ತಿದ್ದುದನ್ನು ನಾನು ತಿದ್ದಿ ಭಕ್ತಿಯ ಆಧಾರದ ಮೇಲೆಯೇ ವೇದಾಂತ ನಿಲ್ಲಬೇಕು ಎಂದು ಪ್ರತಿಪಾದಿಸುತ್ತಿದ್ದೆ. ಅದರ ಪರಿಣಾಮವು ಒಂದಿಷ್ಟು ಅವರ ಮೇಲೆ ಆದಂತೆ ಕಂಡಿತು. ಜ್ಞಾನಸಿಂಧು, ಕನ್ನಡ ಭಗವದ್ಗೀತೆ– ಮುಂತಾದವುಗಳಲ್ಲಿದ್ದ ಕೆಲವು ಅಭಿಪ್ರಾಯಗಳನ್ನು ನಾನು ಒಪ್ಪದೆ ಇದ್ದದ್ದು ಅವರಿಗೆ ಮೊದಲಮೊದಲು ಆಶ್ಚರ್ಯವನ್ನುಂಟು ಮಾಡಿದರೂ ಕುರ್ತುಕೋಟಿ ಮಹಾಭಾಗವತರ ಮತ್ತು ಗೋಂದಾವಳಿಯ ಮಹಾರಾಜರ ವಿಷಯವಾಗಿ ಅವರಿಗೆ ಹೇಳಿದ್ದು ಪರಿಣಾಮಕಾರಿಯಾಯಿತು. ಅವರ ಮಗ ನಾರಣಪ್ಪನೆಂಬುವರು ಗೋಂದಾವಳಿಗೆ ಹೋಗಿಬಂದಿದ್ದರು. ಅವರು ಯಾವಾಗಲೂ ಜಪವನ್ನು ಮಾಡುತ್ತಾ ಮೌನವಾಗಿ ಒಂದು ಕಡೆಯಲ್ಲಿ ಕುಳಿತುಕೊಂಡಿರುತ್ತಾರೆಂದು ತಿಳಿದು ಬಂತು. ನಾನೂ ಗೋಂದಾವಳಿಯವನು ಕಾರಣದಿಂದ ನಾರಣಪ್ಪನವರಿಗೆ ನನ್ನಲ್ಲಿ ಸ್ವಲ್ಪ ಶ್ರದ್ಧೆಯುಂಟಾಗಿತ್ತು. ನಂಜಪ್ಪ ಭಾಗವತರ ಜೊತೆಯಲ್ಲಿ ಒಂದೆರಡು ಸಲ ಬಂದು ನನ್ನನ್ನು ಅವರು ನೋಡಿದ್ದರು. ಅರಸೀಕೆರೆಯಲ್ಲಿಯೂ ನನ್ನನ್ನು ಬಂದು ಅವರಿಬ್ಬರೂ ಕಾಣುತ್ತಿದ್ದರು." (ಪು. ೨೭೨)

ನಾಟಕ ಕಂಪೆನಿ ಸ್ಥಾಪನೆ

ಸಾಧಕನೋರ್ವನ ನಾನಾ ಮುಖಗಳನ್ನು ಗಮನಿಸುತ್ತಾ ಹೋದರೆ ಜೀವನದ ನಾನಾ ರಂಗಗಳಲ್ಲಿ ಹೇಗೆ ಪ್ರತಿಭೆ ಹೊಂದಿದ್ದರು ಅಥವಾ ಹೊಂದಬಹುದು ಅನ್ನುವುದನ್ನು ನೋಡಿದರೆ ನಮಗೇ ಆಶ್ಚರ್ಯವಾಗುತ್ತಿದೆ.

ಹಿಂದೊಮ್ಮೆ ಕನ್ನಡ ರಂಗಭೂಮಿಯ ನಾಟಕ ಪಿತಾಮಹ ವರದಾಚಾರ್ಯರ ನಾಟಕ ಕಂಪೆನಿ ಅರಸೀಕೆರೆಯಲ್ಲಿ ಬೀಡುಬಿಟ್ಟು ನಾಟಕ ಪ್ರದರ್ಶನ ಮಾಡುತ್ತಿದ್ದರು. ಒಂದು ತಿಂಗಳವರೆಗೂ ಕ್ಯಾಂಪ್ ಹಾಕಿದರು. ಈ ಸಮಯದಲ್ಲಿ ತಮ್ಮ ನಾಟಕದ ಪ್ರಾಕ್ಟೀಸನ್ನು ದಾಸರ ಮನೆ ಪಕ್ಕದ ಅಹೋಬಲರಾಯರ ಛತ್ರದಲ್ಲಿ ಮಾಡುತ್ತಿದ್ದರು. ಈ ಸಮಯದಲ್ಲಿ ತಿಮ್ಮಪ್ಪದಾಸರು ಅವರ ನಾಟಕ "ಭಕ್ತ ಪ್ರಹ್ಲಾದ" ನಾಟಕವನ್ನು ವೀಕ್ಷಿಸಿ ಅದರಲ್ಲಿ ಅನೇಕ ದೋಷಗಳನ್ನು ಸರಿಪಡಿಸಿ ಎಂದು ವರದಾಚಾರ್ಯರಿಗೆ ತಿಳಿಸಿದರು. ಅಲ್ಲದೇ ಒಂದೇ ವಾರದಲ್ಲಿ ಬೇರೆ ಹೊಸದಾಗಿ "ಭಕ್ತ ಪ್ರಹ್ಲಾದ" ನಾಟಕವನ್ನು ಹೊಸ ಪದ–ಪದ್ಯ–ರಾಗಗಳೊಡನೆ ಬರೆದುಕೊಟ್ಟರು. ಇದನ್ನು ಬಹಳವಾಗಿ ಮೆಚ್ಚಿಕೊಂಡ ವರದಾಚಾರ್ಯರು ಹೊಸ ನಾಟಕ ಪ್ರಾಕ್ಟೀಸ್ ಶುರು ಮಾಡಿದರು. ಆಗ ಪ್ರಹ್ಲಾದ ಪಾತ್ರಧಾರಿ ವಿಪರೀತ ಜ್ವರ ಬಾಧೆಯಿಂದ ನರಳುತ್ತಿದ್ದನು. ಆಗ ದಾಸರು ಈ ಪಾತ್ರವನ್ನು ಬಹಳ ಮಧುರ ಕಂಠ ಹೊಂದಿದ್ದ ತಮ್ಮ ಮಗನ ಕೈಲೇ ಮಾಡಿಸಿದರು. ನಾಟಕ ತುಂಬ ಯಶಸ್ವಿಯಾಗಿ ನಡೆದು ಅದರಲ್ಲೂ ಊರಿನ ಹುಡುಗ ರಾಮಣ್ಣನ ಪಾತ್ರ ಎಂದು ಸುತ್ತಲಿನ ಊರಿನವರು ಭಾರಿ ಸಮೂಹವೇ ಸೇರಿತು. ಇದರಿಂದ ಸಂತೋಷಗೊಂಡ ವರದಾಚಾರ್ಯರು ದಾಸನ ಮಗನನ್ನು ತಮ್ಮ ಕಂಪನಿಗೆ ಕಳಿಸುವಂತೆ ಬೇಡಿದರು. ಆದರೆ ತಿಮ್ಮಪ್ಪದಾಸರು ಇದಕ್ಕೆ ಒಪ್ಪದೇ ಹುಡುಗ ಇನ್ನೂ ಚಿಕ್ಕವನು. ವಿದ್ಯಾಭ್ಯಾಸ ಹಾಳಾಗುತ್ತದೆ ಎಂದು ತಿಳಿಸಿದರಂತೆ. ವರದಾಚಾರ್ಯರು ಮಾತ್ರ ತಿಮ್ಮಪ್ಪದಾಸರ ಬಗ್ಗೆ ಅವರ ಸಂಗೀತ ಪಾಂಡಿತ್ಯದ ಬಗ್ಗೆ ಬಹಳ ಮೆಚ್ಚಿಕೊಂಡರು. ಹೊಸ, ಹೊಸ ರಂಗಗೀತೆಗಳನ್ನು ಇವರಿಂದ ಬರೆಸಿಕೊಂಡು ಪ್ರಯೋಗ ಮಾಡಿದರು ಅನ್ನುವ ವಿಚಾರ ಅವರ ಮಕ್ಕಳಿಂದ ತಿಳಿದು ಬಂದಿದೆ. ಇದೂ ಅಲ್ಲದೆ ಆಗಿನ ಕಾಲದ ರಾತ್ರಿ ಹಳ್ಳಿ ಮೇಳ ನಾಟಕಗಳಿಗಾಗಿ ಬೆಳಗುಂಬದ ಗಿರಿಯಣ್ಣನವರಿಗೆ ಹೊಸ ಮಟ್ಟಿನ ಹಾಡುಗಳನ್ನು ಬರೆದುಕೊಟ್ಟಿದ್ದರಂತೆ. ಆದರೆ ಈಗ ಯಾವುದೂ ಲಭ್ಯವಿಲ್ಲ. ಅನಂತರ ದಾಸರು ಇದೇ ನಾಟಕದ ಗುಂಗಿನಲ್ಲಿ ತಮ್ಮ ಊರಿನಲ್ಲೆ ಒಂದು ಪುಟ್ಟ ನಾಟಕ ಕಂಪನಿಯನ್ನು ಊರಿನವರ ನೆರವಿನಿಂದ ಶುರು ಮಾಡಿದರು. ಈ ಕಂಪನಿಯಿಂದ ಹೊಸಕೆರೆ ಚಿದಂಬರಯ್ಯನವರ ಸಾಮಾಜಿಕ ನಾಟಕ "ದೇಶಭಕ್ತಿ" ಎಂಬ ನೂತನ ನಾಟಕ ಪ್ರಯೋಗ ಮಾಡಿದರಂತೆ. ಆದರೆ ಈ ನಾಟಕದಲ್ಲಿ ಸರ್ಕಾರದವರು ದೇಶ ಭಕ್ತಿಯ ಸ್ವತಂತ್ರ ವಿಚಾರಧಾರೆ ಇದ್ದದ್ದರಿಂದ ಆಗಿನವರಿಂದ ನಾಟಕವಾಡಲು ಬಿಡಲಿಲ್ಲ. ಆದುದರಿಂದ ಎಲ್ಲರೂ ಬೇಸತ್ತು ಕೊಂಚ ದಿನಗಳಲ್ಲೇ

ನಾಟಕ ಕಂಪನಿ ನಿಂತು ಹೋಯಿತು. ಅದಕ್ಕೆ ಬರೆಸಿದ ಸೀನರಿಗಳು, ಇತರೆ ನಾಟಕದ ಸಾಮಾನುಗಳನ್ನು ದಾಸರು ಮಾರಾಟ ಮಾಡಿ ಬಂದ ಹಣದಿಂದ ಮಾಲೇಕಲ್ಲು ತಿರುಪತಿ ಸ್ವಾಮಿಗೆ ಒಂದು ದೊಡ್ಡ ಹಿತ್ತಾಳೆ ಉತ್ಸವ ಮಂಟಪ ಮಾಡಿಸಿಕೊಟ್ಟರು. ಇದನ್ನು ದೇವಾಲಯದಲ್ಲಿ ಈಗಲೂ ನೋಡಬಹುದು.

ಚಿತ್ರಕಲಾ ಪ್ರತಿಭೆ

ಬಹುಮುಖ ಪ್ರತಿಭೆಯ ದಾಸರಲ್ಲಿ ಚಿತ್ರಕಲಾ ನೈಪುಣ್ಯವನ್ನೂ ಕಾಣಬಹುದಿತ್ತು. ತಮ್ಮದೇ ಭಜನೆ ಮನೆಯಲ್ಲಿ ದಾಸರಿಂದ ಚಿತ್ರಿಸಲ್ಪಟ್ಟ ಶ್ರೀ ರಾಮಚಂದ್ರ ಪಟ್ಟಾಭಿಷೇಕದ ಚಿತ್ರ, ಮಾರುತಿ ಚಿತ್ರಗಳ ಸುಂದರ ಪಟಗಳನ್ನು ಕಾಣಬಹುದಿತ್ತು. ಇದಕ್ಕೆಲ್ಲಾ ಕಾಗೇ ಬಂಗಾರವನ್ನು ಬಳಸಿ ಚಿತ್ರಗಳನ್ನು ಬಿಡಿಸಲಾಗಿತ್ತು. ದಾಸರ ಹಳೇ ಮನೆಯಲ್ಲಿ ಮಳೆನೀರಿಗೆ ಸಿಕ್ಕಿ ಎಲ್ಲವೂ ಹಾಳಾಗಿ ಹೋದವು. ಈ ಚಿತ್ರಗಳನ್ನು ಬಹಳ ಸುಂದರವಾಗಿದ್ದ ಕುಸುರೀ ಕೆಲಸದಿಂದ ದಾಸರೇ ತಯಾರು ಮಾಡಿದ್ದರು. ಕೆಲ್ಲಂಗೆರೆ ದಾಸರ ಮನೆಯಲ್ಲಿ ಬೆಳೆದ ದೊಡ್ಡ ಬಿಳೀ ಎಕ್ಕದ ಮರದ ಬೇರಿನಿಂದ ಒಂದು ಸುಂದರವಾದ ಗಣೇಶ ಮೂರ್ತಿ ಬಿಡಿಸಿದ್ದರು. ಈ ಸುಂದರ ಮೂರ್ತಿಗೆ ತಾವೇ ಆಗಿನ ಕಾಲದ ತೈಲವರ್ಣವನ್ನು ಹಾಕಿದ್ದರು. ಇದು ಈಗಲೂ ಹಿರಿಯ ಮೊಮ್ಮಗ ಅನಂತಯ್ಯನವರ ಮನೆಯಲ್ಲಿ ಇಟ್ಟು ಪೂಜೆ ಮಾಡುತ್ತಿದ್ದಾರೆ. ಬಹಳ ಕಲಾತ್ಮಕವಾಗಿದೆ, ಇಷ್ಟೇ ಅಲ್ಲದೆ ನಮ್ಮ ದಾಸರಿಗೆ ಒಬ್ಬ ಕೀಲು ಗೊಂಬೆ ಆಟಗಾರ ಗಂಟುಬಿದ್ದ. ಆ ಗೊಂಬೆಗಳಿಗೆ ಕಿರೀಟ, ಭುಜಕೀರ್ತಿಗಳನ್ನು ಹೊಳೆಯುವ ಕಾಗೇ ಬಂಗಾರ ಬಳಸಿ ಮಾಡಿಕೊಟ್ಟಿದ್ದರು. ಈ ಹಳೇ ಬೊಂಬೆಗಳು ಬಹುಕಾಲ ದಾಸರ ಮನೆ ಅಟ್ಟ ಸೇರಿದ್ದವು. ಇದೂ ಅಲ್ಲದೇ ದಾಸರು ಸ್ವಲ್ಪ ಕಲ್ಲಿನ ಶಿಲ್ಪಕಲೆಯಲ್ಲೂ ಕೈಯಾಡಿಸಿದ್ದರು. ಅವರ ಮನೆ ಮುಂದೆ ಹೊಸದಾಗಿ ನಿರ್ಮಿತವಾದ ವೀರಶೈವ ಆರು ಸ್ವಾಮಿಗಳ ಕಳಸದ ಮಠದಲ್ಲಿ ಉಬ್ಬುಚಿತ್ರ, ಬಸವ, ಈಶ್ವರ, ಮುಂತಾದುವನ್ನು ಅವರು ಬಿಡಿಸಿರುವುದನ್ನು ಈಗಲೂ ಕಾಣಬಹುದು. ತಿಮ್ಮಪ್ಪದಾಸರು ನಾಟಕ ಕಲೆ ಅಲ್ಲದೆ ಚಿತ್ರಕಲೆ, ರೇಖಾ ಚಿತ್ರಗಳಲ್ಲೂ ಪರಿಣಿತರಾಗಿದ್ದರು ಎಂದು ತಿಳಿದುಬರುತ್ತದೆ.

ಜೀವನ ದರ್ಶನ

ಮನುಷ್ಯನೊಬ್ಬನಿಗೆ ತನ್ನ ಕ್ಷೇತ್ರಕಾರ್ಯದಲ್ಲಿ ಬೇಕಾದ ದೈಹಿಕ ಶಕ್ತಿ, ಶ್ರಮ, ಸಮಯ, ಸಂಯಮ ಇವು ಮುಖ್ಯ. ಮಹಾದೈವಭಕ್ತರಾದ ತಿಮ್ಮಪ್ಪದಾಸರು ಕಾವ್ಯ, ಸಾಹಿತ್ಯ, ಕಲೆಗಳನ್ನು ಒಂದು ತಪಸ್ಸಿನಂತೆ ಆಚರಿಸಿ ಮಹಾಚೇತನವಾಗಿದ್ದರೂ ಅವರು ಈ ನೆಲದ ಸಂಗವನ್ನು ವರ್ಜಿಸಿದವರಲ್ಲ. ಅಲೌಕಿಕಕ್ಕೆ ಚಾಚಿಕೊಳ್ಳುತ್ತಲೇ ಲೋಕವನ್ನು ತಿರಸ್ಕರಿಸಿದವರಲ್ಲ. ಜೀವನದ ಎಲ್ಲಾ ನಡೆ, ನುಡಿಗಳನ್ನು ಚೆನ್ನಾಗಿ ಅರಿತವರಾಗಿದ್ದರು.

ಛಲವಿದ್ದರೆ ಗೆಲುವಿದೆ, ಮನಸ್ಸಿದ್ದಲ್ಲಿ ಮಾರ್ಗವಿದೆ – ಯಾರೇ ಆದರೂ ಯಶಸ್ಸಿನ ಏಣಿ ಏರಬೇಕಾದರೆ ಇವು ಇರಲೇಬೇಕಾಗುತ್ತದೆ. ಸಾಧನೆಯ ಮೆಟ್ಟಿಲುಗಳನ್ನು ಸ್ವಯಂ ಆಗಿ ಸಾಧಿಸಿದವರು ಇವರು. ಜೀವನದ ಅಗಣಿತ ಕ್ಷೇತ್ರಗಳಲ್ಲಿನ ಗಣ್ಯ ಸಾಧಕರು, ಕರ್ಮಯೋಗಿ. ತಾವು ಬೆಳೆದು ಬಂದ ಈ ಸಮಾಜಕ್ಕೆ ಏನಾದರು ಕಾಣಿಕೆಯ ಋಣ ತೀರಿಸಲು ಬಯಸಿದವರು.

ದಾಸರದು ದಿವ್ಯ-ಶಾರೀರ, ದೈವದತ್ತವಾದ ಅಪೂರ್ವ ಪ್ರತಿಭೆ. ಇವರು ಮುಂದೆ ತಮ್ಮ ಬದುಕನ್ನು ಸಂಗೀತ ಹಾಗೂ ಹರಿಕಥೆಗಾಗಿ ರೂಪಿಸಿಕೊಂಡದ್ದು ಕಾಣಬರುತ್ತದೆ. ಇವರ ಜೀವಿತದ ಉದ್ದಕ್ಕೂ ದೇವರು ಕರುಣಾವಾರಿಧಿ, ಅವನನ್ನು ಪ್ರೀತಿಸುವುದರಲ್ಲೇ ನಮ್ಮ ಶ್ರೇಯಸ್ಸು ಅನ್ನುವುದೇ ಇವರ ಭಾವನೆ ಆಗಿತ್ತು. ಇವರು ತಮ್ಮ ಭಜನಾ ಮನೆಯಲ್ಲಿ ಹಾಡುತ್ತಾ ಕುಳಿತರೆ ಜೊತೆಗೆ ಕೇಳುಗರನ್ನು ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು. ಹೀಗೆ ಮನಸ್ಸು ದೇವರಲ್ಲಿ ಪೂರ್ತಿ ರೀತಿಯಲ್ಲಿ ಶರಣಾಗಬೇಕು, ಆಗಲೇ ನಮ್ಮ ಹೃದಯ ನಿವಾಸಿಯಾದ ಪರಮಾತ್ಮನ ಅವಿರ್ಭಾವ ಕಾಣಲು ಸಾಧ್ಯ ಎಂದು ತಿಳಿದವರು.

ಇವರು ಮುಗಿದ ಕೈಗಳಿಂದ, ಬಾಗಿದ ತಲೆಯಿಂದ, ರೋಮಾಂಚನಗೊಂಡ ಭಾವದಿಂದ, ಗದ್ಗದ ಕಂಠದಿಂದ, ಆನಂದ ಬಾಷ್ಪಗಳಿಂದ ತುಂಬಿದ ಕಣ್ಣುಗಳಿಂದ ಇವರು ನಿತ್ಯವೂ ಭಜನೆ ಮಾಡುತ್ತಿದ್ದರು. ದೇವರಲ್ಲಿ ನಿನ್ನ ಪಾದಪದ್ಮಗಳ ಧ್ಯಾನಾಮೃತವನ್ನು ಆಸ್ವಾದಿಸುವ ಸೌಭಾಗ್ಯ ಸಂಪತ್ತನ್ನು ಕರುಣಿಸು ಎಂದು ಬೇಡುತ್ತಿದ್ದರು. ನಾನು ಎಂಬ ಭಾವನೆ ಹೋಗಿ ಆತ್ಮನಲ್ಲಿ ನಾನು ಅನ್ನುವ ಭಾವನೆ ಸ್ಥಿರವಾಗಬೇಕು. ಇದು ಭಕ್ತಿಯ ನಿಜವಾದ ಅರ್ಥ ಎಂದು ತಿಳಿದಿದ್ದರು. ಇವರ ಪೂಜೆ ಪುನಸ್ಕಾರಗಳೆಲ್ಲಾ ಅರ್ಪಣಾ ಭಾವದಿಂದ ಮಾಡುತ್ತಿದ್ದುದು ಕಾಣುತ್ತಿತ್ತು. ಇವರು ಆಗಾಗ ಹಾಡುತ್ತಿದ್ದ,

ಭಾಗ್ಯವನೆಂದಿಗೆ ಕೊಡುವೆ? ಯೋಗ್ಯನೆಂದಿಗೆ ಗೈವೆ.
ಭಾಗ್ಯದೊಳು ವೈರಾಗ್ಯವ ಭಾಗ್ಯವನೆಂದಿಗೆ ಕೊಡುವೆ?

"ಮರೆ ಹೊಕ್ಕೆ ಸದ್ಗುರುರಾಯ ।
ದೂರ ಮಾಡೋ ಮೋಹ ಮಾಯ"

ಈ ಹಾಡುಗಳು ಕಿವಿಯಲ್ಲಿ ಹೊಂಗುಡುತ್ತಿರುತ್ತವೆ ಎಂದು ಜನರು ಆಗಾಗ ನೆನೆಯುತ್ತಿರುತ್ತಾರೆ. ನಾಮಸ್ಮರಣೆ ಎಂಬ ದೋಣಿ ಹತ್ತಿ ಕುಳಿತುಕೊ. ಅದು ಖಂಡಿತವಾಗಿ ಜೀವನ ಜಂಜಾಟದಿಂದ ದೂರ ಸಾಗಿ ಬರುತ್ತದೆ ಎಂದು ತಿಮ್ಮಪ್ಪದಾಸರು ತಿಳಿದಿದ್ದವರು ಹಾಗೂ ಅನುಭವಿಸಿದ್ದವರು.

ಜೀವನ ಕ್ರಮ

ತಿಮ್ಮಪ್ಪದಾಸರ ಮನೆಯಲ್ಲಿ ಆಡಂಬರವಿಲ್ಲದ ತುಂಬಾ ಸರಳ ಜೀವನ ಕ್ರಮ. ಮನೆಯಲ್ಲಿ ಅತಿಥಿ ಅಭ್ಯಾಗತರಿಗೆ ಒಂದೇ ಸಮನಾದ ಉಪಚಾರ. ದಾಸರು ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಹುಟ್ಟಿದವರು. ವಾತಾವರಣ, ಮನೋಧರ್ಮ ಎರಡೂ ಕಾರಣದಿಂದ ತಮ್ಮ ಪರಂಪರೆ ಸಂಪ್ರದಾಯಗಳಲ್ಲಿ ಬೇರು ಬಿಟ್ಟಿದ್ದನ್ನು ಇವರ ಮನೆಯಲ್ಲಿ ನೋಡಬಹುದಿತ್ತು. ದಾಸರ ಮನೆಯಲ್ಲಿ ಅವರ ಮಾತಿನ ಹಿಂದಿರುವ ಶ್ರದ್ಧೆ, ನಿಷ್ಕಪಟತೆಗಳು ಯಾರನ್ನಾದರೂ ಆಕರ್ಷಿಸದೆ ಇರುತ್ತಿರಲಿಲ್ಲ. ಮನೆಗೆ ಒಮ್ಮೆ ಬಂದವರಿಗೆ ಮತ್ತೆ ಬರಬೇಕು ಅನ್ನುವಂತೆ ಇದ್ದ ದಾಸರ ಮನೆ ಒಂದು ದೇಗುಲದಂತೆ ಇತ್ತು. ಮನೆಯಲ್ಲಿ ಯಾವ ಕಠಿಣ ಉಪಾಸನಾ ಮಾರ್ಗಗಳೂ ಇರಲಿಲ್ಲ. ನಡೆ ನುಡಿ ತುಂಬಾ ಸರಳ. ಇದಕ್ಕೆ ಕಾರಣ ಅವರ ಪತ್ನಿ ಅನ್ನಪೂರ್ಣೇಶ್ವರಿ ಸುಬ್ಬಲಕ್ಷ್ಮಮ್ಮ ಕಾರಣ. ದಾಸರಲ್ಲಿದ್ದ ದೈವಶ್ರದ್ಧೆ ನಿತ್ಯ ಜೀವನ ಕ್ರಮದಲ್ಲಿ ಹೆಣ್ಣು ಹೊನ್ನು ಮಣ್ಣು ಈ ಮೂರರ ಬಂಧನದಿಂದ ಮುಕ್ತರಾಗುವುದು ದುಸ್ತರವಾದ ಕೆಲಸವೇ, ಆದರೆ ಇದನ್ನು ಸಂಪೂರ್ಣ ತ್ಯಜಿಸಲೇಬೇಕೆಂದು ಹೇಳಿದವರಲ್ಲ. ಇದ್ದೂ ಇಲ್ಲದಂತೆ ಭಾಗ್ಯ ಹೊಂದಿಯೂ ಹೊಂದದಂತೆ ನಿರ್ಲಿಪ್ತರಾಗಿ ದೈವದತ್ತ ಮನಸ್ಸನ್ನು ನೆಲೆಗೊಳಿಸುವುದೇ ಮುಖ್ಯ ಎಂದು ದಾಸರ ಬೋಧನೆ ಆಗಿತ್ತು. ಈ ಆಚರಣೆ ಮನೆಯಲ್ಲಿ ಕಾಣಬಹುದಿತ್ತು. ಹಿರಿಯ ಹಿಂದಿನ ದಾಸರುಗಳ ನುಡಿಯಂತೆ, "ಈಸಬೇಕು ಇದ್ದು ಜೈಸಬೇಕು" ಎಂಬ ತತ್ವಕ್ಕೆ ಅಂಟಿಕೊಂಡಿದ್ದರು. ಎಲ್ಲಾ ಕಷ್ಟ ಪರಂಪರೆಗಳ ನಿವಾರಣೆಗೆ, ನಿಜವಾದ ದೈವಭಕ್ತಿಯೊಂದೇ ಪರಿಹಾರ ಮಾರ್ಗವೆಂಬುದೇ ದಾಸರ ನಿರ್ಣಯವಾಗಿತ್ತು. ಆದುದರಿಂದಲೇ ತನ್ನದೆನ್ನುವ ಎಲ್ಲಾ ವಸ್ತುಗಳೂ ದೈವಾಧೀನವೆಂಬ ನೀತಿ ಇವರದು. ಎಂತಹ ಉದಾತ್ತ ಭಾವನೆ. ಇದನ್ನು ನಾನೇನು ಉತ್ಪ್ರೇಕ್ಷೆ ಮಾಡಿ ಬರೆಯುತ್ತಿಲ್ಲ. ಅವರಲ್ಲಿ ಅವರ ಮನೆಯಲ್ಲಿ ನಿತ್ಯ ಜೀವನ ಕ್ರಮವೇ ಹಾಗಿತ್ತು. ಸರಳ ಸಂತೃಪ್ತ ಜೀವನವೇ ಮುಖ್ಯವಾಗಿ ಎದ್ದು ಕಾಣುತ್ತಿತ್ತು. ಜ್ಞಾನ, ಭಕ್ತಿ, ವೈರಾಗ್ಯ ಇವುಗಳನ್ನು ಅರಿತು ಅಡಗಿಸಿಕೊಂಡ ಜೀವನವೇ ಒಂದು ನಿದರ್ಶನವಾಗಿ ಕಾಣುತ್ತಿತ್ತು.

ದಿವ್ಯವಾದ ಶಾರೀರ, ದೈವದತ್ತವಾದ ಅಪೂರ್ವ ಪ್ರತಿಭೆಯಲ್ಲಿ ಬರುಬರುತ್ತಾ ಅನುಭವಗಳ ಮೂಸೆಯಿಂದ ರೂಪಿಸಿಕೊಂಡು ಬಂದದ್ದು ಇವರ ಪ್ರತಿಭೆಗೆ ಕನ್ನಡಿ ಹಿಡಿದಂತೆ. ಕೆಲವೇ ದಿನದಲ್ಲಿ ಇವರ ಕೀರ್ತಿ ಬಹುಬೇಗ ಎಲ್ಲೆಡೆ ಹರಡಿ ಇವರ 'ಹರಿ ಕಥಾ' ನಿರೂಪಣೆಗೆ ಮತ್ತು ಕಾವ್ಯಸಂಪತ್ತಿಗೆ ಜನ ಮುಗಿಬೀಳುತ್ತಿದ್ದರು.

ಶ್ರೀರಾಮ ಸೇವಾಸಂಘ ಸ್ಥಾಪನೆ

ತಿಮ್ಮಪ್ಪದಾಸರ ಬದುಕು ಸಾಧನೆ ಬಗ್ಗೆ ತಿಳಿಯುತ್ತಾ ಹೋದರೆ, "ದಾಸರು ಮೊದಲು ವ್ಯಕ್ತಿಯಾಗಿ ಬೆಳೆದು, ನಂತರ ಕುಟುಂಬ ನಿರ್ವಹಣೆ, ನಂತರ ಜೊತೆಗೆ

ಬೆಳೆದ ಸಮಾಜದ ಕೆಲಸದಲ್ಲಿ ತೊಡಗಿಸಿಕೊಂಡರು. ಇವರು ತಮ್ಮ ಕುಟುಂಬದ ಆಸೆ ಆಕಾಂಕ್ಷೆಗಳ ಜೊತೆಗೆ ಸುತ್ತಲಿನ ಸಮಾಜದ ಜೊತೆಗೆ ಅದರ ಪ್ರಗತಿಗೆ ಹೇಗೆ ಶ್ರಮಿಸಿದರು" ಎಂಬ ಸಂಗತಿ ಅರಿವಾಗುತ್ತದೆ.

ಮನುಷ್ಯ ಜೀವನದಲ್ಲಿ ಕಷ್ಟ–ನಷ್ಟ ಪ್ರಯೋಜನಗಳು ಒಂದಾದ ನಂತರ ಒಂದು ಬರುತ್ತಲೇ ಇರುತ್ತವೆ. ಇವುಗಳನ್ನು ನಿವಾರಿಸಿ, ನಿಭಾಯಿಸಿ ಅಥವಾ ಎದುರಿಸಿ ಗೆಲುವು ಸಾಧಿಸಿ ನಿಲ್ಲುವವನೆ-ಧೀರ. ದಾಸರು ಭಗವತ್ ಭಕ್ತಿಯ ಜೊತೆಗೆ ತಮ್ಮ ಜೊತೆಗಿದ್ದ ಸಮಾಜದ ಕೆಲಸವನ್ನು ಮಾಡಿದರು ಎಂದು ತಿಳಿದುಬರುತ್ತದೆ. ಸಾಧಕರು ಬುದ್ಧಿ, ವಿವೇಕ, ಶ್ರದ್ಧೆಗಳಿಂದ ಕುಟುಂಬದ ಹಂತದಿಂದ ಮೇಲೇರಿ ಸಮಾಜದ ಹಂತ ತಲುಪುತ್ತಾರೆ. ಶ್ರೇಷ್ಠವಾದ, ಶಾಶ್ವತವಾದ ಫಲವನ್ನು ಕೊಡುವ ಕೆಲಸಗಳನ್ನು ಮಾಡುತ್ತಾರೆ. ಈ ನಿಟ್ಟಿನಲ್ಲಿ ಅರಸೀಕೆರೆಯಲ್ಲಿ "ಶ್ರೀರಾಮ ಭಜನ ಬಾಲ ಸೇವಾ ಸಂಘ" ಇವರೇ ಸ್ಥಾಪಿಸಿದರು. ಇದರಲ್ಲಿ ಊರಿನ ಹಿರಿಯರು, ಬಂಧುಗಳು, ಎಲ್ಲರನ್ನೂ ಸೇರಿಸಿ ಸಂಘಟಿಸಿದರು. ಈ ಸಂಘದ ಮೂಲಕ ಸಮಾಜದ ಒಳಿತಿಗಾಗಿ ಹೇಗೆ ಕೆಲಸ ಮಾಡಿದರು ಎನ್ನುವುದನ್ನು ಕಾಣಬಹುದು. ಪರಮಾತ್ಮದಲ್ಲಿ ಆತ್ಮದ ಐಕ್ಯತೆಯೇ ನಿಜವಾದ ಸತ್ಸಂಗ ಎನ್ನುವುದು ಅವರ ನಿಲುವಾಗಿತ್ತು. ಈ ಮಹತ್ ಕಾರ್ಯಕ್ಕೆ ಊರಿನ ಹಿರಿಯರದಲ್ಲದೆ ಆಗಿನ ಅವರ ವಿದ್ವತ್ ಗೋಷ್ಠಿಯ ಜನರ ಸಹಕಾರ ಸಹ ಚೆನ್ನಾಗಿತ್ತು. ಎಲ್ಲ ವರ್ಗದವರೂ ಕೈ ಜೋಡಿಸಿ ಹಿಂದಿನ ಅಹೋಬಲರಾಯರ ಛತ್ರದಲ್ಲಿ ಸಂಘ ಪ್ರಾರಂಭವಾಯ್ತು. ಅಂದು ಅವರು ಸ್ಥಾಪಿಸಿದ ಸಂಸ್ಥೆ "ಶ್ರೀರಾಮ ಭಜನ ಬಾಲಸೇವಾ ಸಂಘ"ಕ್ಕೆ ಮೊದಲು ತರುಣರು ನಂತರ ಹಿರಿಯರು ನೆರವಿಗೆ ಬಂದರು. ಇದೇ ಜಾಡಿನಲ್ಲಿ ಈ ಸಂಸ್ಥೆ ಈಗ ಮುಂದುವರಿದು ಶ್ರೀರಾಮ ಭಜನ ಬಾಲ ಸೇವಾ ಸಂಘ ತಮ್ಮದೇ ಆದ ಸ್ವಂತ ಕಟ್ಟಡ, ಶ್ರೀರಾಮ ದೇವಸ್ಥಾನ, ಕಲ್ಯಾಣ ಮಂಟಪದೊಡನೆ ದೊಡ್ಡ ಸಂಸ್ಥೆ ಆಗಿ ಬೆಳೆದು ಶ್ರೀರಾಮ ಸೇವಾ ಸಂಘವಾಗಿ ಬೆಳೆದು ಹೆಮ್ಮೆಯ ಸಂಸ್ಥೆಯಾಗಿದೆ. ಇಲ್ಲಿನ ಬ್ರಾಹ್ಮಣ ಸಂಘದೊಡಗೂಡಿ ಬೃಹತ್ತಾಗಿ ಬೆಳೆದಿದೆ.

ಹಿಂದೆ ದಾಸರ ಕಾಲದಲ್ಲಿ ಶ್ರೀರಾಮೋತ್ಸವವಲ್ಲದೆ ಇತರೆ ಆಧ್ಯಾತ್ಮಿಕ ಕಾರ್ಯಕ್ರಮಗಳಾದ ಶಂಕರ ಜಯಂತಿ, ಗೀತಾ ಜಯಂತಿ, ಶರನ್ನವರಾತ್ರಿ ಉತ್ಸವಗಳು, ಭಾಗವತ ಸಪ್ತಾಹ, ಬ್ರಹ್ಮ ಚೈತನ್ಯ ಜಯಂತಿ ಜೊತೆಗೆ ಗೋಂದಾವಳೀ ಮಹಾರಾಜರ ಭಜನಾ ಕಾರ್ಯಕ್ರಮ ನಡೆಯುತ್ತಿತ್ತು. ವೈ. ಸುಬ್ಬರಾಯರು, ಹೊಸಕೆರೆ ಚಿದಂಬರಯ್ಯನವರು, ನಂಜಪ್ಪ ಭಾಗವತರು, ವೇದ ಬ್ರಹ್ಮಶ್ರೀ ವಿಠಲ ಶಾಸ್ತ್ರಿಗಳು ಮುಂದಾಳತ್ವ ವಹಿಸುತ್ತಿದ್ದರು. ಈ ವಿಚಾರಗಳನ್ನು ಸುಬ್ಬರಾಯರು ತಮ್ಮ ಆತ್ಮಚರಿತ್ರೆಯ ಪುಸ್ತಕದಲ್ಲಿ ವಿವರವಾಗಿ ತಿಳಿಸಿರುತ್ತಾರೆ. ಇದರಲ್ಲಿ ಶಂಕರ ಜಯಂತಿ ಸಮಯದಲ್ಲಿ ನಡೆಯುತ್ತಿದ್ದ ಆಧ್ಯಾತ್ಮ ವಿಚಾರ ಗೋಷ್ಠಿಯಲ್ಲಿ ನಾಡಿನ ಅನೇಕ ವಿದ್ವಾಂಸರುಗಳು ಭಾಗವಹಿಸುತ್ತಿದ್ದರು. ಮುಂದೆ ಸಾರೋದ್ಧಾರವಾಗಿ ಈ ಗೋಷ್ಠಿಗಳು ನಡೆದುಕೊಂಡು

ಹೋಗುವಂತೆ ಎಲ್ಲಾ ಏರ್ಪಾಡುಗಳನ್ನು ಮಾಡಿದ್ದರು. ಇದೊಂದು ತಿಮ್ಮಪ್ಪದಾಸರು ಮಾಡಿದ ಸಮಾಜ ಸೇವೆ ಎಂದು ಹೇಳಬಹುದು.

ಆದರ್ಶ ಸ್ನೇಹ

ತಿಮ್ಮಪ್ಪದಾಸರ ಸ್ನೇಹಪರತೆಯನ್ನು ತಿಳಿಸುವ ಸಂಗತಿಗಳು ಅನೇಕವಿವೆ. ವೈ. ಸುಬ್ಬರಾಯರ ಆತ್ಮಚರಿತ್ರೆಯಲ್ಲಿ ಒಂದು ವಿಚಾರ ಬರುತ್ತದೆ. ಪೂರ್ವಾಶ್ರಮದಲ್ಲಿ ಸುಬ್ಬರಾಯರು ಉಪಾಧ್ಯಾಯ ವೃತ್ತಿಯಲ್ಲಿದ್ದವರು. ಅವರು ಊರು ಯಳ್ಳಂಬಳಸೆ. ಇವರಿಗೆ ದಾಸರ ಮನೆ ಪಕ್ಕದಲ್ಲೇ ಇದ್ದ ಮೈಲಾರ ಜೋಯಿಸರ ಮಗಳು ವೆಂಕಟಲಕ್ಷ್ಮಮ್ಮನನ್ನು ಕೊಟ್ಟು ವಿವಾಹವಾಗಿತ್ತು. ಶ್ರೀಮತಿ ವೆಂಕಟಲಕ್ಷ್ಮಮ್ಮ ನಾಲ್ಕನೇ ಹೆರಿಗೆ ಸಮಯದಲ್ಲಿ ತೌರುಮನೆಗೆ ಬಂದಾಗ ಅರಸೀಕೆರೆ ಊರಿನಲ್ಲಿ ಇನ್‌ಫ್ಲೂಯೆಂಜಾ ಖಾಯಿಲೆ ಕಾಡುತ್ತಿತ್ತು. ಈ ಸಂದರ್ಭದಲ್ಲಿ ನಡೆದ ಸಂಗತಿಯನ್ನು ಸುಬ್ಬರಾಯರೇ ಹೀಗೆ ವರ್ಣಿಸಿದ್ದಾರೆ (ಪು. ೩೧೪. ಶ್ರೀಶ್ರೀಗಳವರ (ಸ್ವಹಸ್ತ) ಆತ್ಮಚರಿತ್ರೆ).

"ಈ ಕಾಯಿಲೆಯಿಂದ ಸುಬ್ಬರಾಯರ ಹೆಂಡತಿ ವೆಂಕಟಲಕ್ಷ್ಮಮ್ಮ ಒಂದು ಹೆಣ್ಣುಮಗುವನ್ನು ಹಡೆದು ಸ್ನಾನವನ್ನು ಮಾಡಿದ ದಿನವೇ ಇಹಲೋಕವನ್ನು ಬಿಟ್ಟಳು. ಮಗು ಮೊದಲೇ ಪ್ರಾಣ ಬಿಟ್ಟಿತ್ತು. ಈಗ ಮಕ್ಕಳಲ್ಲಿ ಹಿರಿಯವನು ನರಸಪ್ಪ. ಅವನಿಗೆ ಒಂಬತ್ತು ತುಂಬಿ ಹತ್ತು ವರ್ಷವಾಗಿರಬಹುದು. ಇನ್ನು ಮೂರು ಮಕ್ಕಳು ಕ್ರಮವಾಗಿ ಎಂಟು, ಐದು, ಎರಡು ವರ್ಷ ತುಂಬಿದ್ದವು. ಈ ಕಾಲಕ್ಕೆ ನಮಗೆ ನೆರೆಮನೆಯ ತಿಮ್ಮಪ್ಪದಾಸರು ಬಹಳ ಸಹಾಯ ಮಾಡಿದರು. ನಮಗೆ ಧೈರ್ಯವನ್ನು ಹೇಳಿ, ಶವಸಂಸ್ಕಾರಕ್ಕಾಗಿ ಬೇಕಾದ ಸಾಮಾನು, ಪುರೋಹಿತರು ಮುಂತಾದವುಗಳನ್ನು ಒದಗಿಸಿಕೊಟ್ಟು ಉಪಕಾರವನ್ನು ಮಾಡಿದರು. ಅವರೂ ನಾನೂ ರಾತ್ರೆಯೆಲ್ಲ ಶವವನ್ನು ಕಾಯಬೇಕಾಗಿ ಬಂದಿತ್ತು. ಅವರಿಗೆ ತೂಕಡಿಕೆ ಬಾರದಂತೆ ಅವಸ್ಥಾತ್ರಯ ವಿಚಾರವನ್ನು ನಡುನಡುವೆ ನಾನು ತೆಗೆದು ಮನಸ್ಸನ್ನು ಇತ್ತ ಎಳೆಯುತ್ತಿದ್ದೆನು. ಇಂಥ ದುಃಖ ಕಾಲದಲ್ಲಿಯೂ ವೇದಾಂತ ವಿಚಾರವನ್ನು ಮಾಡುವವರು ಬಹು ವಿರಳ–ಎಂದು ಅವರು (ತಿಮ್ಮಪ್ಪದಾಸರು) ನನ್ನನ್ನು ಬಹುವಾಗಿ ಕೊಂಡಾಡಿದರಂತೆ. ಪ್ರಧಾನ ಸಂಸ್ಕಾರವು ಮುಗಿದ ಮೇಲೆ ನಾನು ಹರಿಹರಕ್ಕೆ ಹೋಗಿ ಉಳಿದ ಕರ್ಮಗಳನ್ನೆಲ್ಲ ಹುಡುಗನಿಂದ ಮಾಡಿಸಿದೆನು."

ದಾಸರು ಆತ್ಮೀಯರ ಕಷ್ಟಕಾಲದಲ್ಲಿ ಹೇಗೆ ತಾವಾಗಿ ನೆರವಾಗುತ್ತಿದ್ದರು ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಮಾನವೀಯ ಅನುಕಂಪೆಯ ಸಾಕಾರಮೂರ್ತಿ ಅವರಾಗಿದ್ದರು.

ಅರಸೀಕೆರೆ ರಾಮೋತ್ಸವ ವೈಭವ

ತಿಮ್ಮಪ್ಪದಾಸರ ಮುಂದಾಳತ್ವದಲ್ಲಿ ಶ್ರೀರಾಮನವಮಿ ದಿನದಿಂದ ೧೫ ದಿನಗಳ ಕಾಲ ಬಹಳ ಅದ್ಧೂರಿಯ ರಾಮೋತ್ಸವ ನಡೆಯುತ್ತಿತ್ತು. ರಾಮಾಯಣ ಪಾರಾಯಣ, ಗಮಕ ವಾಚನ, ಭಜನೆ, ಹವನ ಹೋಮ ಮುಂತಾದ ಮುಖ್ಯ ಕಾರ್ಯಕ್ರಮ, ಬೇರೆ ಊರುಗಳಿಂದ ವಿದ್ವಾಂಸರು ಆಗಮಿಸುತ್ತಿದ್ದರು. ರಾತ್ರಿ ಸಮಯದಲ್ಲಿ ದಾಸರ "ಹರಿಕಥೆ" ರಾಮನ ಜನನದಿಂದ ಪ್ರಾರಂಭವಾಗಿ ಪಟ್ಟಾಭಿಷೇಕದವರೆಗೂ ನಡೆಸಿಕೊಡುತ್ತಿದ್ದರು. ಇದೇ ಸಮಯಕ್ಕೆಂದೇ ದಾಸರು ಶ್ರೀರಾಮಚಂದ್ರನ ಮೇಲಿನ ಸ್ವಂತ ಕೃತಿರಚನೆ ಮಾಡಿ ಹಾಡುತ್ತಿದ್ದರು. ಇದರಲ್ಲಿ "ನಿನುವಿನಾ ಅನ್ಯರ ಕಾಣೆ", "ಬಾರೋ ಮನಕೆ ರಾಮ", "ನೆರೆ ನಂಬಿದೆನು ತಾಯೇ" ಮುಂತಾದುವನ್ನು ಭಾವಪೂರ್ವಕವಾಗಿ ಹಾಡುತ್ತಿದ್ದರು. ಪ್ರತಿದಿನ ನಡೆಯುತ್ತಿದ್ದ ರಾಮಭಜನೆ ಕೇಳಲು ದೂರದ ಊರುಗಳಿಂದ ಜನ ಬಂದು ಸೇರುತ್ತಿದ್ದರು. ಜನರು ಮೈಮರೆತು ಆಲಿಸುತ್ತಿದ್ದುದನ್ನು ನೋಡುವುದೇ ಒಂದು ಆನಂದದ ದೃಶ್ಯವಾಗಿತ್ತು. ಇವುಗಳಲ್ಲಿ ದಾಸರ ಬಾಯಿಂದ ತ್ಯಾಗರಾಜರ, ಪುರಂದರದಾಸರ ಹಾಡುಗಳನ್ನು ಕೇಳುವುದೇ ಒಂದು ಭಾಗ್ಯ. ಇವುಗಳಲ್ಲಿ ತ್ಯಾಗರಾಜ ಸುಜನ ಪರಿಪಾಲ, ರಾರಾ ರಾಜೀವ ಲೋಚನ, ರಾಜೀವ ನೇತ್ರ, ಜಲದಿ ಗಂಭೀರ, ಶ್ರೀರಾಮನಾಮವೆಂಥರುಚಿರಾ...! ಜೊತೆಗೆ ಅಣ್ಣಮಾಚಾರ್ಯರ ಅಮೋಘ ಕೃತಿಗಳು ಸೇರುತ್ತಿದ್ದವು. ಮಂಗಳದವರೆಗೂ ಜನ ಸಭೆಯನ್ನು ಬಿಟ್ಟು ಕದಲುತ್ತಿರಲಿಲ್ಲ.

ಶಂಕರ ಜಯಂತಿ

ಇದೇ ಅಹೋಬಲ ಛತ್ರದಲ್ಲಿ ತಿಮ್ಮಪ್ಪದಾಸರು ನಡೆಸುತ್ತಿದ್ದ ಶಂಕರ ಸಪ್ತಾಹ ಬಹಳ ಅದ್ಧೂರಿಯಿಂದ ನಡೆಯುತ್ತಿತ್ತು. ಊರಿನ ಹಿರಿಯರೆಲ್ಲರೂ ಉತ್ತಮ ಸಹಕಾರ ಕೊಡುತ್ತಿದ್ದರು. ದೂರದ ಊರುಗಳಿಂದ ವಿದ್ವಾಂಸರು ಬಂದು ಸೇರುತ್ತಿದ್ದರು. ಮತ್ತೂರಿನ ಸಂಸ್ಕೃತ ಪಂಡಿತರಾದ ಅವಧಾನಿಗಳು ಬಂದು ಸೇರುತ್ತಿದ್ದರಂತೆ. ಅದ್ವೈತ ವಿಚಾರ ಚರ್ಚೆ, ವಿಚಾರ ಮಂಡನೆ, ಶಂಕರ ಸಿದ್ಧಾಂತಗಳ ವಿನಿಮಯ ಬಹಳ ಉನ್ನತ ಮಟ್ಟದಲ್ಲಿ ನಡೆಯುತ್ತಿತ್ತು. ಹೊಸಕೆರೆ ಚಿದಂಬರಯ್ಯನವರು, ಸುಬ್ಬರಾಯರು, ಆಸ್ಥಾನ ವಿದ್ವಾನ್ ವಿಠಲ ಶಾಸ್ತ್ರಿಗಳು, ತುರುವೇಕೆರೆ ಬೇಟರಾಯ ದೀಕ್ಷಿತರು ಇವರುಗಳೇ ನೇತೃತ್ವ ವಹಿಸುತ್ತಿದ್ದರು. ಇಲ್ಲೂ ಸಹ ತಿಮ್ಮಪ್ಪದಾಸರು ತಾವೇ ರಚಿಸಿದ "ಶಂಕರ ವಿಜಯ" ಕಥಾ ರೂಪವನ್ನು ಬಹಳ ವಿದ್ವತ್‌ಪೂರ್ಣವಾಗಿ ನಡೆಸಿಕೊಡುತ್ತಿದ್ದರಂತೆ. ಶಂಕರ ಸಿದ್ಧಾಂತ, ಅದ್ವೈತ ವಿಚಾರ ಮಂಡನೆ, ಶಂಕರ ಮೂಲ ಕೃತಿಗಳಿಂದ ಆಯ್ದ ಭಾಗಗಳು, ಭಜಗೋವಿಂದಂ, ನರಸಿಂಹಸ್ತೋತ್ರ, ಶಿವಾನಂದ ಲಹರಿ, ಸೌಂದರ್ಯ ಲಹರಿ ಹಾಗೂ ಇತರ ಶಿವಸ್ತೋತ್ರಗಳಿಂದ ಕೂಡಿದ ಇವರ ಕಥೆ ಕೇಳಿ ಮಹಾ ಮಹಾ ವಿದ್ವಾಂಸರು ಮೆಚ್ಚಿಕೊಳ್ಳುತ್ತಿದ್ದರು ಇವರ ಒಂದು ಸುಂದರವಾದ ರಚನೆ

"ಮುಕ್ತಿಯೇ ಸುಖವಲ್ಲದಿನ್ನಿಲ್ಲ" ಎಂಬ ಆಧ್ಯಾತ್ಮಿಕ ಗೀತೆಯಲ್ಲಿ ಬಹಳ ಸುಂದರವಾಗಿ "ಹರಿವ ನೀರದು ಜನ್ಮಭೂಮಿಯನ್ನು ಮತ್ತರಿವದಂದದಿ ನರರು ಕಾಣರು ನಿತ್ಯವಸ್ತುವನು" ಎಂದಿದ್ದಾರೆ. ಇಲ್ಲಿ ಮೂಲವಸ್ತು ಅಂದರೆ ಬ್ರಹ್ಮನನ್ನು ತಿಳಿಯಬೇಕಾದರೆ ಭಕ್ತಿ ಮಾರ್ಗವೇ ಶ್ರೇಷ್ಠ ಮಾರ್ಗ ಎಂದು ತಿಳಿಸಿದ್ದಾರೆ. ಇದೊಂದು ವೈರಾಗ್ಯ ಭಕ್ತಿಯನ್ನು ಕುರಿತ ರಚನೆ. ಈ ರಚನೆ ಅನೇಕ ಜಿಜ್ಞಾಸುಗಳಿಗೆ ಒಂದು ಮಾರ್ಗಸೂಚಿಯಂತೆ ಕಾಣುತ್ತದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿತ್ತು. ಇಲ್ಲಿ ನಡೆಯುತ್ತಿದ್ದ ಶಂಕರಜಯಂತಿ ಬರೀ ಉತ್ಸವವಾಗಿರದೆ ಅನೇಕ ವಿದ್ವಾಂಸರುಗಳಿಗೆ ಜಿಜ್ಞಾಸುಗಳಿಗೆ ಶಂಕರ ವೇದಾಂತದ ಬಗ್ಗೆ ಉತ್ತಮ ಗ್ರಂಥ ರಚನೆಗಳಿಗೆ ಪ್ರೇರಣೆ ನೀಡುತ್ತಿತ್ತು. ಇಲ್ಲಿ ನಡೆದ ಕಾರ್ಯಕ್ರಮಗಳ ಪ್ರಭಾವವನ್ನು ಜ್ಞಾನ ತಪಸ್ಸಿದ್ಧಿ ಪಡೆದಿದ್ದ ಹೊಸಕೆರೆ ಚಿದಂಬರಯ್ಯನವರ "ಕೀರ್ತನ ಕಂಠಾಭರಣ"ದಲ್ಲಿ ಕಾಣಬಹುದು. ಇಲ್ಲಿ ನಡೆಯುತ್ತಿದ್ದ ಪ್ರವಚನಗಳು ಬಹಳ ಶ್ರೇಷ್ಠಮಟ್ಟದ್ದಾಗಿದ್ದು ಆತ್ಮತತ್ವವನ್ನು ಕುರಿತ ಪ್ರವಚನಗಳಾಗಿದ್ದವು. ಇದರಿಂದ ಅರಸೀಕೆರೆಯಲ್ಲಿನ ಶಂಕರ ಜಯಂತಿಯ ಮಟ್ಟ ಹೇಗಿತ್ತು ಎಂದು ತಿಳಿದು ಬರುತ್ತದೆ. ಇಲ್ಲಿನ ಕಾರ್ಯಕ್ರಮಗಳು ವೇದಾಂತಿಗಳಿಗೆ ಒಳ್ಳೆಯ ಜ್ಞಾನ ಪ್ರಚೋದನಾ ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಈ ಶಂಕರ ಜಯಂತಿ ಕಾರ್ಯಕ್ರಮಗಳು ಒಂದೇ ಊರಿನಲ್ಲಿ ನಡೆಯದೆ ಸುತ್ತಲಿನ ಬೇರೆ ಬೇರೆ ಊರುಗಳಲ್ಲಿ ಸಹ ನಡೆಯುತ್ತಿತ್ತು. ಎಲ್ಲಾ ಊರುಗಳಿಗೂ ಹೋಗಿ ತಿಮ್ಮಪ್ಪ ದಾಸರು "ಶಂಕರ ವಿಜಯ" ಕಥಾ ರೂಪಕವನ್ನು ಮಾಡುತ್ತಿದ್ದರು. ತಿಪಟೂರು, ಹೊನ್ನವಳ್ಳಿ, ಹೊಳಲ್ಕೆರೆಗಳಲ್ಲಿ ಸಹ ನಡೆಯುತ್ತಿತ್ತು. ಆದರೆ ತಿಮ್ಮಪ್ಪದಾಸರೇ ಬರೆದು ನಿರೂಪಿಸುತ್ತಿದ್ದ ಕಥಾರೂಪಕ "ಶಂಕರ ವಿಜಯ" ಈಗ ದೊರೆಯುತ್ತಿಲ್ಲ.

ತಿಮ್ಮಪ್ಪದಾಸರ ರಚನೆಗಳು

ತಿಮ್ಮಪ್ಪದಾಸರ ಸಾಹಿತ್ಯ ಅಭ್ಯಾಸ, ಸಾಧನೆ, ಅದ್ಭುತ ಅನುಭವಗಳ ದಾಸರ ಜೀವನವೇ ಒಂದು ಕಾವ್ಯ. ಇವರ ಸಾಹಿತ್ಯ ಪೂರ್ತಿ ನಮಗೆ ಲಭ್ಯವಾಗಲಿಲ್ಲ. ಪೂರ್ಣ ಪ್ರಮಾಣದಲ್ಲಿ ತಿಳಿಯಲಾಗಲಿಲ್ಲವೆಂಬುದೇ ಬಹಳ ಆಶ್ಚರ್ಯವಾಗುತ್ತದೆ. ಅವರ ಹತ್ತಿರದ ಬಂಧುಗಳು ಏಕೋ ತೀವ್ರ ಪ್ರಯತ್ನ ಪಡಲಿಲ್ಲ. ತಿಮ್ಮಪ್ಪದಾಸರು ದೊಡ್ಡ ಕೀರ್ತನಕಾರರಾಗಿ ರೂಪುಗೊಂಡವರು. ಇವರು ವರ್ಷವಿಡೀ ಅಂದರೆ ೩೬೫ ದಿನಗಳ ಕಾಲ ಮಾಡುವಂತಹ ೩೬೫ ಹರಿಕಥಾ ರೂಪಕಗಳನ್ನು ರಚಿಸಿದ್ದರು ಎಂದು ತಿಳಿದುಬರುತ್ತದೆ. ಅವರ ನಂತರ ಮಗ ರಾಮಣ್ಣದಾಸರು ಮತ್ತು ಮೊಮ್ಮಗ ವಿಶ್ವೇಶ್ವರ ಭಾಗವತರು ಇವರ ಪುಸ್ತಕಗಳನ್ನು ಹೊಂದಿದ್ದರಂತೆ. ಆದರೆ ವಿಶ್ವೇಶ್ವರ ಬೇಲೂರಿನಲ್ಲಿ ವಾಸವಾಗಿದ್ದು ಇನ್ನು ಕಥೆಗಳನ್ನು ಅಭ್ಯಾಸ ಮಾಡುವುದರಲ್ಲೇ ತೀರಿಕೊಂಡರು.

ಶ್ರೀ ಅರಸೀಕೆರೆ ತಿಮ್ಮಪ್ಪದಾಸರು ಶ್ರೀಗಳವರಿಗೆ (ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳಿಗೆ) ಚಿರಪರಿಚಿತರಾಗಿದ್ದವರು. ಅವರ ಮಗ ಶ್ರೀ ಕೆ. ನಾರಣಪ್ಪ ಸ್ಕೂಲ್

ಮಾಸ್ಟರ್ ಆಗಿದ್ದರು. ಶ್ರೀಶ್ರೀಗಳವರ ಆಪ್ತಶಿಷ್ಯರಲ್ಲಿ ಒಬ್ಬರು ಗೋಂದಾವಳಿಯ ಮಹಾರಾಜರ ಭಕ್ತರಾಗಿದ್ದು ರಾಮನಾಮ ಜಪನಿಷ್ಠರಾದ ಒಬ್ಬ ಸತ್ಪುರುಷರು. ಇವರ ಪುತ್ರರೇ ಶ್ರೀ ವಿಶ್ವೇಶ್ವರಯ್ಯನವರು. ಇವರು ಸಂಗೀತ ವಿದ್ವಾಂಸರಾಗಿದ್ದು, ಸರ್ಕಾರಿ ಉದ್ಯೋಗದಲ್ಲಿದ್ದರು. ತಮ್ಮ ಅಜ್ಜನಂತೆಯೇ ಹರಿಕಥೆಗಳನ್ನು ಮಾಡುತ್ತಿದ್ದರು. ಕೇವಲ ೧೨ ವರ್ಷದ ಬಾಲಕರಾಗಿದ್ದಾಗಲೇ ಇವರು ತಂದೆಯ ಜತೆಯಲ್ಲಿ ಶ್ರೀಗಳು ಏರ್ಪಡಿಸುತ್ತಿದ್ದ ಶಂಕರಸಪ್ತಾಹದಲ್ಲಿ ಭಾಗವಹಿಸಿ ಹರಿಕಥೆ ಮಾಡಿದ್ದರು. ಅನಂತರ ಒಂದು ವರ್ಷವೂ ತಪ್ಪದೆ ಸಪ್ತಾಹವು ಯಾವ ಊರಿನಲ್ಲಿಯೇ ನಡೆಯಲಿ ಅಲ್ಲಿಗೆ ತಂದೆಯವರೊಡನೆ ಬಂದು ಆಧ್ಯಾತ್ಮ ಗೀತಾವಳಿಯ ಹಾಡುಗಳನ್ನು ರಾಗತಾಳಬದ್ಧವಾಗಿ ಸುಶ್ರಾವ್ಯವಾಗಿ ಭಾವಪೂರ್ಣವಾಗಿ ಹಾಡುವುದರಲ್ಲಿ ಎತ್ತಿದ ಕೈ. ಇಂಥ ಮಹನೀಯ ಚಿಕ್ಕವಯಸ್ಸಿನಲ್ಲಿಯೇ ಮಾತಾಪಿತೃಗಳನ್ನು ಪುತ್ರೀಪುತ್ರರನ್ನೂ ಬಿಟ್ಟು ತಾ. ೧೬–೬–೧೯೫೨ರಲ್ಲಿ ದೈವಾಧೀನರಾದರು. ಇವರ ವಿಯೋಗದಿಂದ ಇನ್ನು ಮುಂದಿನ ಶಂಕರ ಸಪ್ತಾಹಗಳಲ್ಲಿ ಭಜನೆಯ ಕಳೆಯೇ ಕಳೆಗುಂದಿದಂತಾಯಿತು. ದೈವಗತಿ ವಿಚಿತ್ರ. (ಪು. ೩೨೭. ಶ್ರೀಶ್ರೀಗಳವರ ಆತ್ಮಚರಿತ್ರೆ ಮತ್ತು ಕಾರ್ಯಾಲಯ ಇತಿಹಾಸ, ಭಾಗ–೨, ಆಧ್ಯಾತ್ಮ ಪ್ರಕಾಶನಾಲಯ)

ತಿಮ್ಮಪ್ಪದಾಸರಲ್ಲಿ ಇದ್ದ ಪುಸ್ತಕಗಳು ಏನಾದವು ತಿಳಿದು ಬರುವುದಿಲ್ಲ. ದಾಸರು ಮಕ್ಕಳಿಗಾಗಿ ನೀತಿ ಪ್ರಧಾನವಾದ ಅನೇಕ ಚಿಕ್ಕ ಚಿಕ್ಕ ಹರಿಕಥೆಗಳನ್ನೂ ಬರೆದಿದ್ದರು. ಇವುಗಳಲ್ಲಿ “ಭಕ್ತ ಪ್ರಹ್ಲಾದ”, “ಚಂದ್ರಹಾಸ”, “ಹರಿಶ್ಚಂದ್ರ”, “ಶ್ರೀಕೃಷ್ಣ ಬಾಲಲೀಲೆ”, “ಗೋಕುಲ ನಿರ್ಗಮನ” ಮುಂತಾದ ಕಥಾ ಭಾಗಗಳನ್ನು ಬರೆದಿದ್ದಾರೆ ಎಂದು ತಿಳಿದು ಬರುತ್ತದೆ. ಅಂದರೆ ದಾಸರಿಗೆ ಹುಡುಗರಿಗೆ ಚಿಕ್ಕಂದಿನಿಂದಲೇ ಭಗವಂತನಲ್ಲಿ ಭಕ್ತಿ ಬೆಳೆಯಬೇಕು, ಅವರು ನೀತಿವಂತರಾಗಿ ಬೆಳೆಯಬೇಕು ಎಂಬುದು ಅವರ ಹಂಬಲವಾಗಿತ್ತು. ಹಿರಿಯರು ಈ ಕಥೆಗಳನ್ನು ಮಕ್ಕಳಿಗೆ ಹೇಳಬೇಕು ಎಂಬುದು ಅವರ ಆಸೆಯಾಗಿತ್ತು.

ತಿಮ್ಮಪ್ಪದಾಸರು ರಚಿಸಿದ ಹಾಡುಗಳಲ್ಲಿ ಸುಂದರ ದೇವರ ನಾಮಗಳಲ್ಲದೆ ಇತರೆ ಆರತಿ ಹಾಡುಗಳು, ಲಾಲೀ ಪದ, ಆಶೀರ್ವಾದ ಹಾಡು, ಬೀಗರ ಹಾಡುಗಳು, ಹಸೆಮಣೆಗೆ ಕರೆಯುವ ಸುಂದರ ಹಾಡುಗಳು ಇದ್ದವು. ಆಗ ಸಮಕಾಲೀನರು ಯಾರೂ ಸಂಗ್ರಹಿಸಿ ಇಟ್ಟುಕೊಳ್ಳಲಿಲ್ಲ. ಇಟ್ಟುಕೊಂಡವರು ರಕ್ಷಿಸಿಕೊಂಡು ಬರಲಿಲ್ಲ. ಆದರೆ ಅವರ ಮನೆತನದಲ್ಲಿ ಕೆಲವರು ಸಂಪ್ರದಾಯದ ಹಾಡುಗಳಾಗಿ ತಿಮ್ಮಪ್ಪದಾಸರ ಕೀರ್ತನೆಗಳಲ್ಲಿ ಕೆಲವನ್ನು ಪರಂಪರಾಗತವಾಗಿ ಹಾಡಿಕೊಂಡು ಬರುತ್ತಿರುವುದರಿಂದ ಸ್ವಲ್ಪಮಟ್ಟಿಗೆ ಕೀರ್ತನ ಸಾಹಿತ್ಯ ಉಳಿದುಕೊಂಡು ಬಂದಿತು. ಇನ್ನು ಅವರು ರಚಿಸಿದ ಗ್ರಂಥಗಳ ಪೈಕಿ ಆಧ್ಯಾತ್ಮ ರಾಮಾಯಣ ಮತ್ತು ಶಶಿರೇಖಾ ಪರಿಣಯ ಎಂಬ ಎರಡು ಹರಿಕಥಾ ರೂಪಕಗಳು ದೊರೆತಿವೆ. ಅವುಗಳಲ್ಲಿ ಆಧ್ಯಾತ್ಮ ರಾಮಾಯಣವನ್ನು ಸಂಗ್ರಹವಾಗಿ ಪರಿಚಯ ಮಾಡಿಕೊಡಲಾಗಿದೆ. ಶಶಿರೇಖಾ ಪರಿಣಯವನ್ನು ಪೂರ್ಣವಾಗಿ ಇಲ್ಲಿ ಪ್ರಕಟಿಸಿದೆ.

ದೊಡ್ಡ ಗುಣ

ತಿಮ್ಮಪ್ಪದಾಸರದ್ದು ತುಂಬಾ ಸರಳ ಜೀವನ. ೧೮೩೪ರಿಂದ ೧೯೨೬ರವರೆಗೆ ೯೨ ವರ್ಷದವರೆಗೂ ತುಂಬು ಜೀವನ ನಡೆಸಿದ ಧನ್ಯಜೀವಿಗಳು. ಎಲೆಯ ಮರೆಯ ಕಾಯಿಯಂತೆ ಇದ್ದವರು. ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿನವರೆಗೂ ಭಗವಂತನ ಚಿಂತನೆಯಲ್ಲೇ ಕಳೆದವರು. ಇಳಿವಯಸ್ಸಿನಲ್ಲೂ ವೇದಾಂತ ಗ್ರಂಥ ಪಠಣ, ಚಿಂತನೆ, ಪ್ರವಚನ, ಬರವಣಿಗೆಯಲ್ಲಿ ತಮ್ಮ ಬಾಳನ್ನು ರಸಮಯಗೊಳಿಸಿಕೊಂಡಿದ್ದರು. ನಿರಾಡಂಬರ, ಅಹಂಕಾರವಿಲ್ಲದ, ಯಾವುದೇ ಹೊಗಳಿಕೆ, ಪ್ರಶಸ್ತಿ, ಪ್ರಶಂಸೆಗಳಿಂದ ದೂರ ಇದ್ದವರು.

ಇವರ ಇಳಿ ವಯಸ್ಸಿನಲ್ಲಿ ಊರಿನ ಹಿರಿಯರೆಲ್ಲಾ ಸೇರಿ, ಒಂದು ಬಾರಿ ಇವರಿಗೆ ಒಂದು ಸನ್ಮಾನ ಇಟ್ಟುಕೊಂಡಿದ್ದರಂತೆ. ಸಮಯ ಅಂದು ಸಾಯಂಕಾಲ ೬ ಗಂಟೆಗೆ. ಆ ದಿನವೂ ಎಂದಿನಂತೆ ದಾಸರು ಸಂಜೆ, ನಾಳಿನ ದೇವರ ಪೂಜೆಗೆಂದು ಹೂ, ತುಳಸಿ ತರಲು ಕೆರೆ ಏರಿ ಮೇಲೆ ಹೋಗಿದ್ದರು. ಸಮಯ ೫.೩೦ ಗಂಟೆ. ಯಾರೊ ದಾಸರನ್ನು ಗಮನಿಸಿ ಏನು ದಾಸರೆ? ನಿಮಗೆ ಈ ದಿನ ಸನ್ಮಾನ ಸಮಾರಂಭ ಇರುತ್ತದೆ. ಆದರೆ ನೀವು ಇನ್ನೂ ಇಲ್ಲೇ ಇದ್ದೀರ ಎಂದು ಕೇಳಿದರೆ ದಾಸರು ಬಹಳ ವಿನಯದಿಂದ ನನಗೆ ಏಕಪ್ಪಾ ಸನ್ಮಾನ? ಇನ್ನೂ ನಮ್ಮ ಗುರುಗಳಾದ ಬಾಣಾವರ ರಾಮಣ್ಣನವರಿಗೆ ಮಾಡಬೇಕಾಗಿತ್ತು ಅಂದರಂತೆ. ಇದರಿಂದ ದಾಸರ ಮಾನವೀಯ ಮೌಲ್ಯ ಹೇಗಿತ್ತು ಎಂದು ತಿಳಿಯಬಹುದು. ಎಲ್ಲವೂ ಅವರ ಇಚ್ಛೆ ಎಂದುಕೊಂಡು ಬಾಳಿದ ಸರಳ ಜೀವಿ. ವನಸುಮದೊಳು...ಎನ್ನ ಜೀವನವು ಅನ್ನುವಂತೆ ಇದ್ದರು. ಅನ್ಯಾದೃಶರು ಇವರ ನಿಷ್ಠಾವಂತ ಕಾರ್ಯ, ದಣಿವರಿಯದ ದುಡಿಮೆ, ಅಕಳಂಕಿತ ಸಾತ್ವಿಕ ಜೀವನ ಆದರ್ಶಪ್ರಾಯವಾದುದು.

ಅಂತಿಮ ಘಟ್ಟದ ಹೆಜ್ಜೆ ಗುರುತುಗಳು

ದಾಸರು, ಸಂತರು, ಶರಣರು, ಈ ಸಮಸ್ತ ವಿಶ್ವವನ್ನೇ ಪ್ರಸಾದವೆಂಬ ನಿರ್ಮಲ ಭಾವದಿಂದ ನೋಡಿದವರು. ಪ್ರಪಂಚವೇ ದಿವ್ಯಕ್ಷೇತ್ರ. ಈ ಕ್ಷೇತ್ರದಲ್ಲಿ ನಾಲ್ಕು ದಿನವಿರಲು ಬಂದ ಯಾತ್ರಿಕರು ನಾವು. ಬಂದದ್ದು ನಾವೊಬ್ಬರೇ ನಾವು ಬೆಳೆದು ದೊಡ್ಡವರಾದಂತೆ ಸುತ್ತಲಿನ ಪ್ರಪಂಚವೂ ನಮ್ಮ ಜೊತೆಗೆ ಬೆಳೆಯುತ್ತದೆ. ಸಮಾಜ, ಹೆಂಡತಿ, ಮಕ್ಕಳು, ಬಂಧು, ಬಳಗ ಎಂಬ ಮಹಾಜಾಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಆದರೆ ಇಲ್ಲಿ ಯಾತ್ರಿಕರು ಅನ್ನುವುದನ್ನು ಮರೆಯಬಾರದು, ಇದೇ ನಾಲ್ಕು ದಿನದ ಪ್ರಪಂಚ ಎಂದು ಇದನ್ನು ತಿಳಿದು ಗೋಳಿಡದೆ ಮಗುವಿನಂತೆ ಸುಖವಾಗಿರಬೇಕು.

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ (೬೦೧)

ಎಂಬ ಡಿ.ವಿ.ಜಿ.ಯವರ ಈ ವಿಚಾರಧಾರೆ ದಾಸರ ಜೀವನಕ್ಕೆ ಹೇಳಿ ಮಾಡಿಸಿದಂತಿತ್ತು. ಅದೇ ರೀತಿ ದಾಸರು ತಮ್ಮ ಜೀವನಲ್ಲೂ ಸಾಧಿಸಿದವರು. ಅವರ ಆಧ್ಯಾತ್ಮ ಜೀವನವನ್ನು ನೋಡುತ್ತಾ ಹೋದರೆ, ಹಿಂದಿನ ಘಟನೆಗಳನ್ನು ಮನದಲ್ಲಿ ಸ್ಮರಣೆಗೆ ತರದೆ, ಮುಂದಿನ ದಿನಗಳನ್ನು ಯೋಚನೆ ಮಾಡದೆ, ಇವತ್ತು ಏನು ಇದೆಯೋ ಅದು ಭಗವಂತನ ಪ್ರಸಾದ ಎಂದು ತಿಳಿದು ಬಾಳುವುದೇ ನಿಜವಾದ ಆಧ್ಯಾತ್ಮಿಕ ಸಾಧನೆ. ಈ ಪ್ರಪಂಚದ ಅರಿವು, ಪರಮಾತ್ಮನ ಅರಿವು ಆಗಬೇಕಾದರೆ ಜ್ಞಾನ ಸಾಧನೆಯಾಗಬೇಕು. ಶಾಸ್ತ್ರಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಇಲ್ಲವೇ ಗುರುಗಳಲ್ಲಿ ಶರಣಾಗಬೇಕು. ಇದನ್ನೇ ದಾಸರು ತಮ್ಮ ನಿತ್ಯ ಜೀವನದಲ್ಲಿ ಚೆನ್ನಾಗಿ ತಿಳಿದು ಸಾಧನೆ ಮಾಡಿದವರು. ಅಹಂಕಾರವಿಲ್ಲದ ಅತ್ಯಂತ ಸರಳ ಜೀವನವನ್ನು ನಡೆಸಿಕೊಂಡು ಬಂದವರು.

ಇವರು ತಮ್ಮ ಸುದೀರ್ಘ ಜೀವನದಲ್ಲಿ ಎಂದೂ ಖಾಯಿಲೆ ಬಿದ್ದವರಲ್ಲ. ಆಸ್ಪತ್ರೆ ಕಂಡವರಲ್ಲ. ಆದರೆ ಅವರು ದೇವರಲ್ಲಿ ಬೇಡುತ್ತಿದ್ದುದು ನೋವಿರದ ಸಾವು ಅನಾಯಾಸೇನ ಮರಣಂ, ಧನ್ಯತೆಯುಳಿದ ಜೀವನವು. ಅಂದರೆ ವಿನಾ ದೈನ್ಯೇನಜೀವನಂ ದೈವಪದ ಸಾಯುಜ್ಯ ಇದೇ ಇವರ ತಾರಕ ಮಂತ್ರವಾಗಿತ್ತು. ದೇಹ ಬಿಡುವ ಕಾಲಕ್ಕೆ ಅಂದರೆ ಅಂತ್ಯ ಕಾಲದಲ್ಲಿ ನಿನ್ನನ್ನು ಚಿಂತಿಸಿ, ಭಜಿಸಿ, ಶರೀರ ಬಿಡುವ ಹಾಗೆ ಮಾಡು ಎಂದು ಆಗಾಗ್ಗೆ ಬೇಡುತ್ತಿದ್ದರು. ಅವರ ಸಾವಿನ ದಿನವೂ ನಿತ್ಯದ ಸ್ನಾನ, ಪೂಜೆ ಮುಗಿಸಿ ಕಿವಿಯಲ್ಲಿ ತುಳಸಿ, ಹಣೆಯಲ್ಲಿ ವಿಭೂತಿ ಧರಿಸಿ ಧ್ಯಾನಾಸಕ್ತರಾಗಿ ತಮ್ಮ ಪ್ರೀತಿಯ ಸುರಗಿರೀಶ ಹಾಡು "ದರುಶನವಾಯ್ತು ಈ ದಿನ ಸುರಗಿರಿ ಅರಸನ ಪದ ದರುಶನವಾಯ್ತು" ಎಂದು ಹಾಡುತ್ತಲೇ ಇದ್ದರು.

ಇವರ ಪಕ್ಕದಲ್ಲೇ ಇವರನ್ನು ನೋಡಿಕೊಳ್ಳುತ್ತಿದ್ದ ಮಗಳು ರಂಗಮ್ಮ, ತಂದೆಯವರು ಆಯಾಸಗೊಂಡಂತೆ ಕಾಣುತ್ತಿದ್ದುದು, ಕಣ್ಣಿನಲ್ಲಿ ನೀರು ತುಂಬಿರುವುದನ್ನು ಗಮನಿಸಿದ ಇವರು ಅಣ್ಣಯ್ಯ ಕುಡಿಯಲು ಏನಾದರೂ ಕೊಡಲೆ ಎಂದು ಕೇಳಲು, ಸ್ನಾನವಾಗಲಿ ಎಂದರು. ಸ್ನಾನದ ನಂತರ ತಿನ್ನಲು ಕೊಡಲು ತಮ್ಮ ಪ್ರೀತಿಯ ತಿಂಡಿ ಅಕ್ಕಿ ರೊಟ್ಟಿ, ತಾಲೀಪಿಟ್ಟು ಬಾಯಲ್ಲಿ ಹಾಕಿಕೊಂಡು ಬಹಳ ಪ್ರಯಾಸ ಪಡುತ್ತಿರುವುದನ್ನು ಗಮನಿಸಿ, ಓಡಿಹೋಗಿ ದೇವರ ಮನೆಯಲ್ಲಿನ ಪವಿತ್ರ ಗಂಗಾಜಲ ಬಾಯಲ್ಲಿ ಹಾಕಿದರು. ನಿಧಾನವಾಗಿ ನಾರಾಯಣ ಧ್ಯಾನ ಮಾಡುತ್ತಾ ಧ್ಯಾನಾಸಕ್ತರಾದವರಂತೆ ಕಣ್ಣು ಮುಚ್ಚಿದರು. ಎರಡೂ ಕೈಗಳು ಮಾಲೇಕಲ್ಲು ತಿರುಪತಿ ದೇವಸ್ಥಾನದ ಕಡೆಗೆ ಕೈಮುಗಿದು ನಿಂತಿದ್ದವು.

ಕಡೆಯ ಸಮಯದಲ್ಲೂ ಕಾಲುಗಳನ್ನು ಆಡಿಸುತ್ತಾ, ತಮ್ಮ ಆರಾಧ್ಯ ದೇವರ ನಾಮ ಹಾಡುತ್ತಲೇ ಇದ್ದರು. ಕ್ರಿ.ಶ. ೧೯೨೬ರಲ್ಲಿ ನಿಧನರಾದರು.

ಆತ್ಮ ತೃಪ್ತಿ


ಅಂತ್ಯಕಾಲ ಇಂದೋ ಎಂದೋ, ಯಾವಾಗಲೋ ಬರಬಹುದು. ಮೃತ್ಯು ಮುನ್ನೆಚ್ಚರಿಕೆ ಕೊಟ್ಟು ಕಾದಿದ್ದು ಆಮೇಲೆ ಬರುವುದಿಲ್ಲ. ಹೇಳದೇ ಕೇಳದೇ ಬರುತ್ತದೆ. ಆದುದರಿಂದಲೇ ವಿವೇಕಿಯಾದವನು ಅದಕ್ಕೆ ಸಿದ್ಧನಿರಬೇಕು. ಸಾವನ್ನು ಸ್ವಾಗತಿಸುವಂತಿರಬೇಕು. ದಾಸರು ಹೇಳುತ್ತಿದ್ದುದು ಅನಾಸಕ್ತರಾಗಿ ಸಂಸಾರದಲ್ಲಿರಿ ಅಂತ. ಕೈಗೆ ಎಣ್ಣೆ ಹಚ್ಚಿಕೊಂಡು ಹಲಸಿನಹಣ್ಣು ಬಿಡಿಸಿದರೆ ಅದರ ಅಂಟು ಕೈಗೆ ಅಂಟಿಕೊಳ್ಳದು. ಹಾಗೆ ಸಂಸಾರ ಮಾಡಿ ಭಗವಂತನಲ್ಲೂ ಮನಸ್ಸಿಡಿ, ಯಾವಾಗಲೂ ಭಗವನ್ ನಾಮಸ್ಮರಣೆ ಬಿಡಬೇಡಿ. ದೇವರಿಗೆಂದು ದುಡಿ. ಈ ಲೋಕ ಒಂದು ಬಡಗಿಯ ಕಾರ್ಖಾನೆ. ನೀನು ಅದರಲ್ಲಿನ ಬಡಗಿ. ನಿನ್ನ ಕೆಲಸದ ಮೇಲೆ ಮನಸ್ಸಿಟ್ಟು ಮಾಲೀಕನನ್ನು ಅಂದರೆ ದೇವರನ್ನು ಮೆಚ್ಚಿಸಲು ದುಡಿ. ಆಗ ದುಡಿಮೆ ಶುದ್ಧವಾಗಿರುತ್ತದೆ. ಈ ದೇವರು ಕೊಟ್ಟ ಶರೀರವನ್ನು ದೇವರಿಗೆ ಸವೆಸಿದನು ಅನ್ನುವ ಆತ್ಮ ತೃಪ್ತಿ ಉಳಿಯುತ್ತದೆ. ಹೀಗೆ ತಮ್ಮ ಜೀವನದಲ್ಲಿ ಇದೇ ತೃಪ್ತಿಯಿಂದ ಬದುಕಿದ ಹಿರಿಯ ಜೀವಿ ಕೆಲ್ಲಂಗೆರೆ ತಿಮ್ಮಪ್ಪದಾಸರು.

ಬಾಳು ಅಂದರೆ? ಜೀವಿಸುವ ಬಗೆ ಅನ್ನಬಹುದು. ಈ ಹುಟ್ಟಿನಿಂದ ಬಂದ ಎಲ್ಲರಿಗೂ ಬಾಳು ಇರುತ್ತದೆ. ಆದರೆ ಹೇಗೆ ಬಾಳಬೇಕೆಂಬ ಆಲೋಚನೆ ಮತ್ತು ಅದರಂತೆ ನಡೆಯುವ ಪ್ರಯತ್ನ ಸಹ ಅನೇಕರಿಗೆ ಇರುವುದಿಲ್ಲ. ಮೊದಲು ಹೊಟ್ಟೆ, ಬಟ್ಟೆ, ನಂತರ ಸೂರಿನ ಅವಕಾಶ ದಕ್ಕಿಸಿಕೊಳ್ಳುವ ಶತ ಪ್ರಯತ್ನ. ಇದು ಎಲ್ಲರ ಬಾಳ ನಿರೂಪಣೆಯಲ್ಲೂ ಬರುವುದು ಸಾಮಾನ್ಯ. ಆದರೆ ಜ್ಞಾನಿಗಳಲ್ಲಿ ಬಾಳ ಅರ್ಥವನ್ನು ಸರಿಯಾಗಿ ತಿಳಿದು, ತಾವು ಹುಟ್ಟಿ ಬೆಳೆದ ಸಮಾಜದ ಋಣ ತೀರಿಸಲು ಪ್ರಯತ್ನ ಪಡುತ್ತಾರೆ. ತಾವೇ ಇಲ್ಲಿ ಗಳಿಸಿಕೊಂಡ ಭಾಗ್ಯ, ಸ್ನೇಹ, ಪ್ರೀತಿ, ಔದಾರ್ಯ ಇವುಗಳನ್ನು ತಾನು ಅನುಭವಿಸಿ, ಅವೆಲ್ಲವನ್ನೂ ತಿರುಗಿ ಸಮಾಜಕ್ಕೆ ಕೊಡಬೇಕು, ಹಿಂತಿರುಗಿಸಬೇಕು ಅನ್ನುವಂಥಾ ಉದಾತ್ತ ಭಾವನೆ ಹಂಚಿಕೊಂಡು ಬಾಳುವವನೇ ನಿಜವಾದ ಬಾಳ ಅರ್ಥ ತಿಳಿದವನು.

ತಿಮ್ಮಪ್ಪದಾಸರ ಇಡೀ ಜೀವನ ಚಿತ್ರಣವನ್ನು ನೋಡುತ್ತಾ ಹೋದರೆ ಇದನ್ನು ಅವರು ಎಳೆ ಎಳೆಯಾಗಿ ಜೀವನದಲ್ಲಿ ಅರ್ಥಮಾಡಿಕೊಂಡು ಬಾಳಿದರು, ಉಳಿದವರ ಬಾಳಿಗೂ ಬೆಳಕಾಗಿ ಬಾಳಿದರು. ಹರಿದಾಸರು ಹೇಗೆ ಬಾಳಿ ಬದುಕುತ್ತಾರೆ. ಆ ಮೂಲಕ ಸಮಾಜಕ್ಕೆ ಹೇಗೆ ದಾರಿತೋರುತ್ತಾರೆ ಎಂಬುದಕ್ಕೆ ಕೆಲ್ಲಂಗೆರೆ ತಿಮ್ಮಪ್ಪದಾಸರ ಬದುಕು ಬರಹ ಒಂದು ಶ್ರೇಷ್ಠ ಮಾದರಿ ಆಗಿದೆ.

ಭಾಗ - ೨

ಕೆಲ್ಲಂಗೆರೆ ತಿಮ್ಮಪ್ಪದಾಸರು ರಚಿಸಿದ ಕೀರ್ತನೆಗಳು ಮತ್ತು ಕೃತಿಗಳು



ಕೆಲ್ಲಂಗೆರೆ ತಿಮ್ಮಪ್ಪದಾಸರ ಕೈಬರಹ

೧. ಕರಿವರಾಸ್ಯನೆ ಕರುಣಿಸೈ

ಶಂಕರಾಭರಣ **ರೂಪಕ ತಾಳ**

ಕರಿವರಾಸ್ಯನೆ ಕರುಣಿಸೈ ಸದಾ
ಕರುಣಾಲವಾಲ ॥ಪಲ್ಲವಿ॥

ಹಲವು ಕಡೆಗೆ ಹರಿವ ಮನವ
ನಿಲ್ಲಿಸಿ ವಿಘ್ನಕೋಟಿಗಳನು
ಗೆಲಿಸಿ ನಿತ್ಯ ಸೌಖ್ಯಪದವ
ಸುಲಭವಾಗಿ ಸೇರುವಂತೆ ॥೧॥

ಪರಮಪುರಷ ನಿನ್ನ ಭಜಿಪ
ಶರಣರಿಗೆ ಮತ್ತೆ ಜನನ
ಮರಣವುಂಟೆ ಸತ್ಯ ಪರಾ
ಪರವನರಿವ ಚಿತ್ತವನ್ನು ॥೨॥

ಮೂರು ಗುಣಕೆ ಮೂಲವಾದ
ಕಾರಣವನು ತಿಳಿದು ಭಜಿಸಿ
ಧೀರ ಸುರಗಿರೀಶನಲ್ಲಿ
ಸೇರುವಂತೆ ಸುಮತಿಯನ್ನು ॥೩॥

[**ಟಿಪ್ಪಣಿ:** ಇದೊಂದು ತಿಮ್ಮಪ್ಪದಾಸರು ರಚಿಸಿರುವ 'ಶಶಿಕಲಾ ಪರಿಣಯ'ವೆಂಬ ಹರಿಕಥಾ ರೂಪಕದಲ್ಲಿ ಮೊದಲು ಗಣಪನನ್ನು ಸ್ತೋತ್ರರೂಪದಲ್ಲಿ ಬೇಡಿರುವ ಸುಂದರ ಕೃತಿ ಇದು. ಸಕಲ ವಿಘ್ನಗಳನ್ನು ಹೋಗಲಾಡಿಸಿ ಕೃತಿರಚನೆ ಕೆಲಸವನ್ನು ಸುಗಮಗೊಳಿಸು ಎಂದು ಬೇಡಿರುತ್ತಾರೆ. ಹಲವು ಕಡೆ ಹರಿವ ಮನಸ್ಸನ್ನು, ಬುದ್ಧಿ, ಸಿದ್ಧಿಯನ್ನು ಕರುಣಿಸಿ ನಿನ್ನ ಶರಣು ಬಂದವರ ಅಂದರೆ ಮನುಷ್ಯನಲ್ಲಿನ ಮೂರು ಗುಣಕೆ ಮೂಲವಾದ ಕಾರಣವನ್ನು ತಿಳಿದು ಭಜಿಪ ಎನಗೆ ಸುಮತಿಯನ್ನು ಇತ್ತು ಸಲಹು ಎಂದು ಪ್ರಾರ್ಥಿಸಿದ್ದಾರೆ.]

೨. ಪಾಲಿಸೊಲಿದು ಪರಾಕುಸದ್ಗುಣ

ರಾಗ: ದ್ವಿಜಾವಂಶಿ (ಅರಭಿ)

ಪಾಲಿಸೊಲಿದು ಪರಾಕು ಸದ್ಗುಣ । ಶೀಲೆ ಶಾರದಾಂಬ
ಮೂಲಮಂತ್ರ ಕಲಾಪ ಶಾಂಭವಿ ॥ ಮೂರು ಲೋಕಾರ್ಚಿತೆ
ಮುನಿಜನ ಸನ್ನುತೆ । ಸಾಲಂಕೃತ ಸುಮ । ಮಾಲೆಯ ಕರುಣದಿ ॥ ॥ಪ॥

ಕೋಟಿ ರವಿ ಶಶಿ ಕಾಂತಿಗಳ ಕಳೆ । ಮೀರಿದಾ ದಿವ್ಯ ಕಿರೀಟದಿಂದ
ಮಾಣಿಕ ಅಳವಡಿಸಿದ ಬಂಗಾರದಾ ನೋಟಕರ ಕಣ್‌ಕೋರೈಸುವ
ಕಳೆ ಪೂರದಾ ಶುಭ್ರ ಲಲಾಟದಿ । ಮುತ್ತಿನ ಬಟ್ಟೆಸೆಯುವ ಅತಿ ಶೃಂಗಾರದ
ಸಾಟಿಯಿಲ್ಲದ ಮೂಗುತಿ ಪ್ರಜ್ವಲಿಸುತ । ತಾಟಂಕದಿ ಬಾವುಲಿಗಳ ಮಿಣುಕುತ
ಪೇಟಿ ಅಂಚಿನ ಜರತಾರದ ಭಲ್ ಭಲ್ । ತಾಟಕ ಕಂಚುಕ ಕೆಣೆಯಿಲ್ಲಾಂಬ ॥೧॥

ಹತ್ತುಗಟ್ಟಿನ ಮುತ್ತು ಮೋಹನ । ಮಾಲೆಯಾ ಸರಗಳಾ ಸುತ್ತಮುತ್ತಲು ।
ರತ್ನಗಳ ಹೀರಾಳಿಯ ರತ್ನ । ಕುಚಗಳ ಮೇಲೊಲಿದಾಡುವ
ಹೀರಾವಳೀ ವಜ್ರವ ಕೆತ್ತಿಸಿದ । ಒಂಭತ್ತು ಪದರದ ತಾಳಿಯ
ಮತ್ತೆ ಗಜಾರಿಯ ನಡುವಡ್ಯಾಣ್ಯವು । ಸುತ್ತಲು ಲಾವಣ್ಣ ಗೆಜ್ಜೆ ಸರಗಳು
ವಿಸ್ತಾರದ ಚಂಗಾಮಿಯ ಚಿತ್ರ । ವಿಚಿತ್ರದನೆರಿ ಅಂಬರ ಪುಟ್ಟಾಂಬಾ॥ ॥೨॥

ರುಲ್ಲು ರಳೆ ಗೆಜ್ಜೆ, ಕಾಲಕಡಗ । ಪಂಡಗದಾ । ಮೆಂಟಿಕೆ ।
ಪಿಲ್ಲಗಳ ಕಾಲುಂಗುರ ಬಲು । ಚೆಂದದಾ ಘಲ್ಲು, ಘಲು ಘಿಲು
ಝಣ, ಝಣತ್ಕಾರದಾ ಹೆಜ್ಜೆ । ಮೇಲೊಲೆಯುವ ಝುರಿ ನೆರಿ
ಯಂದದಿ ಸೂಸುತ ಬಗೆ ಬಗೆ । ಅಲ್ಲಿ ಶೃಂಗಾರ ಪುರದಲಿ
ನೆಲಸಿದ ಸುರಗಿರಿ ಅರಸನ । ಸೋದರೆ ಅಂಬಾ ॥೩॥

[**ಟಿಪ್ಪಣಿ:** ಇದು ತಿಮ್ಮಪ್ಪದಾಸರು ಹಿಂದೆ ಶೃಂಗೇರಿಯಲ್ಲಿ ೫ ದಿನಗಳ ಕಾಲ ಹರಿಕಥಾ ಕಾಲಕ್ಷೇಪ ನಡೆಸಿಕೊಟ್ಟ ಸಮಯದಲ್ಲಿ ಕಡೆಯ ದಿನ ನವರಾತ್ರಿ ಸಮಯವಾದುದರಿಂದ ಶಾರದಾದೇವಿಗೆ ಪೂರ್ಣ ವಜ್ರಕಿರೀಟ, ಪಟ್ಟೆ ಪೀತಾಂಬರ,

ಪ್ರಜ್ವಲಿಸುವ ಒಡವೆಗಳನ್ನು ಹಾಕಿ ಅಲಂಕರಿಸಿರುತ್ತಾರೆ. ಭಾವುಕ ಕೃತಿರಚನಾಕಾರರಾದ ದಾಸರು 'ಜಗನ್ಮಾತೆ ಶಾರದೆ'ಯನ್ನು ಆ ದಿವ್ಯರೂಪವನ್ನು ಕಂಡು ಕೊಂಡಾಡಿರುವ ಒಂದು ಸುಂದರ ಕೃತಿ.

ಆಗಿನ ಕಾಲದಲ್ಲಿ ಮಾತೆ ಶಾರದೆಗೆ ಹಾಕಿದ ಎಲ್ಲಾ ಒಡವೆಗಳ ವರ್ಣನೆ ಮುತ್ತಿನ ಹಾರ, ವಜ್ರದ ಬಾವಲಿ, ಮೂಗಿಗೆ ಶೃಂಗಾರಕ್ಕೆ ಸಾಟಿ ಇಲ್ಲದ ವಜ್ರದ ಮೂಗುತಿ, ಸೊಂಟದಲ್ಲಿ ಹಾಕಿದ ನಡುವಡ್ಯಾಣ, ಕಾಲುಂಗುರ, ನೆರಿಗೆಗಳಿಂದ ಕೂಡಿದ ಪಟ್ಟೆ ಪೀತಾಂಬರ, ಕಣ್ಣು ಕೋರೈಸುವ ವಜ್ರದ ಕಿರೀಟ ಹೀಗೆ ಸಾಲಂಕೃತಳಾದ ಸದ್ಗುಣ ಶೀಲೆ ಶಾರದಾಂಬಾ ಎಂದು ಮೋಹಕವಾಗಿ ಕೊಂಡಾಡಿದ್ದಾರೆ.

ಈ ಕೃತಿಯನ್ನು ಆಗಿನ ಸ್ವಾಮಿಗಳಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಶಿವಾನಂದ ನೃಸಿಂಹ ಭಾರತೀ ಮಹಾಸ್ವಾಮಿಗಳು ನವರಾತ್ರಿ ಸಮಯದಲ್ಲಿ ಮಾತೆ ಶಾರದೆಗೆ ವಿಶೇಷ ಪೂಜಾ ಸಮಯದಲ್ಲಿ ನಮ್ಮ ತಿಮ್ಮಪ್ಪದಾಸರು ತಾವೇ ಹಾಡಿದರು. ಇದನ್ನು ಸ್ವಾಮಿಗಳು ಬಹಳವಾಗಿ ಮೆಚ್ಚಿಕೊಂಡು ಆನಂದಿಸಿದರು. ನಂತರ ಕಡೆಯ ದಿನ ದಾಸರನ್ನು ಕರೆಸಿ ಸಂಪ್ರದಾಯದಂತೆ ಮಠಮರ್ಯಾದೆಯೊಡನೆ ದಾಸರಿಗೆ ಶಾಲು ಹೊದಿಸಿ ಸನ್ಮಾನಿಸಿದ್ದರು ಎಂದು ತಿಳಿದುಬರುತ್ತದೆ.

ಈ ಕೃತಿಯ ಕಡೆಯ ಚರಣದಲ್ಲಿ ಶೃಂಗಾರಪುರದಲ್ಲಿ ನೆಲಸಿರುವ ಮಾತೆ ಶಾರದೆಯನ್ನು ತಮ್ಮ ಸುರಗಿರಿ ಸೋದರಿ ಅಂಬಾ ಎಂದು ಕರೆದು, ತನ್ನನ್ನ ಪಾಲಿಸೊಲಿದು ಸದ್ಗುಣ ಶೀಲೆ ಎಂದು ಪ್ರಾರ್ಥಿಸಿಕೊಂಡಿದ್ದಾರೆ. ಇದೊಂದು ಭಾವಪೂರ್ಣ ಭಕ್ತಿರಸದಿಂದ ಕೂಡಿದ ಕೃತಿ.]

೩. ನಂಬಿದೆ ರಂಗಯ್ಯ ನಿನ್ನ ನಂಬಿದೆ

ನಂಬಿದೆ ರಂಗಯ್ಯ ನಿನ್ನ ನಂಬಿದೆ ॥ಪಲ್ಲವಿ॥

ವಾಸುದೇವನುದರದಿ ಜನಿಸಿ ಬಂದ
ಶಿಶುವಾಗಿ ಗೋಪಿಯೊಳ್ ನೆಲಸಿ ಬಂದೆ
ಅಸುರೆ ಪೂತಣಿಯ ಸಂಹರಿಸಿ
ಅಸುರ ಶಕಟನಾ ಅಸುವ ಸೆಳೆದು ಮತ್ತೆ
ಶಿಶುತನದ ಲೀಲೆಗಳನ್ನೆಲ್ಲವ ಕುಶಲದಿಂದ ತೋರಿಸಿದ ದೇವನ ॥೧॥

ದುರುಳ ಬುದ್ಧಿಗಳನ್ನು ಮಾಡೇ ಗೋಪಿ
ವರಳಿಗೆ ಬಂಧಿಸಿ ನೋಡೋ ದರ
ದರ ನೆಳೆಯುತಲೇ ನೀ ಓಡೆ ಮತ್ತಿ
ಮರಕ್ಕೆ ಸಿಲುಕಲು ಧರೆ ಗುರುಳಿದಿಕ್ಷಣದಿ ಗಂಧರ್ವರಾಗಿ
ಚರಣಕೆರಗಲು ಕರುಣದಿಂ ಪಾಲಿಸಿದ ದೇವನ ॥೨॥

ಜಲಜಾಕ್ಷಿಯರಿಗತಿ ಮುದ್ದು ತೋರಿ
ಒಳಗಿದ್ದ ಬೆಣ್ಣೆಯ ಕದ್ದು ಗೋವು
ಗಳ ಕಾಯುವರೊಳಗೆ ಕೂಡಿದ್ದು ಚೆಲ್ವ
ಕೊಳಲೂದಿ ವಜ್ರದ ಹೆಂಗಳ ಮೋಹಿಸುತೆ ಬಂದು
ನೆಲಸಿರುವ ಹಲುಕೂರ ಪುರದಲಿ ಸುಲಭವಾಗಿ ಸುರಗಿರೀಶನೇ ॥೩॥

[**ಟಿಪ್ಪಣಿ:** ಈ ಕೃತಿ ತಿಮ್ಮಪ್ಪದಾಸರು ತಮ್ಮ ಉಡುಪಿ ಕ್ಷೇತ್ರದ ಪ್ರವಾಸದ ನಂತರ ತಮ್ಮ ಪತ್ನಿ ಸುಬ್ಬಲಕ್ಷ್ಮಮ್ಮನವರ ತವರುಮನೆ ಊರಾದ ಹಲುಕೂರಪುರ ಅಂದರೆ ಈಗಿನ ಜೆಸೀಪುರದಲ್ಲಿನ ಬಹಳ ಪ್ರಸಿದ್ಧಿ ಹೊಂದಿದ ರಂಗನಾಥಸ್ವಾಮಿಯ ದರ್ಶನಕ್ಕೆ ಹೋಗಿರುತ್ತಾರೆ. ಚೆಲುವ ರಂಗನಾಥಸ್ವಾಮಿಯನ್ನು ಕಂಡು ಅವನಲ್ಲೂ ಕೃಷ್ಣಪರಮಾತ್ಮನ ದಿವ್ಯ ಬಾಲಲೀಲೆಯನ್ನೇ ಕಂಡಂತೆ ಹಾಡಿರುವ ಒಂದು ಉತ್ತಮ ಕೃತಿ. ಈ ಸುಂದರ ದೇವರನಾಮವನ್ನು ದಾಸರ ಧರ್ಮಪತ್ನಿ ಸುಬ್ಬಲಕ್ಷ್ಮಮ್ಮ ತಮ್ಮ ಎಲ್ಲ ಹೆಣ್ಣು ಮಕ್ಕಳಿಗೆ ಹೇಳಿಕೊಟ್ಟಿದ್ದರು. ಎಲ್ಲರಿಗೂ ಬರುತ್ತಿತ್ತು. ಕಡೆಯ ಚರಣದಲ್ಲಿ ಮೋಹದ ಕೊಳಲನೂದುತ ತನ್ನ ಜಲಜಾಕ್ಷಿಯರಿಗೆ ಮುದ್ದು ತೋರಿ ವಜ್ರದ ಹೆಂಗಳ ಮೋಹಿಸುತ ಬಂದು ಚೆಲ್ವ ಕೊಳಲನೂದಿ ಎಂದು ಸ್ವಾಮಿಯನ್ನು ಕೊಂಡಾಡಿದ್ದಾರೆ. ಇಲ್ಲಿನ ಸುಂದರವಾದ ರಂಗನಾಥಸ್ವಾಮಿ ಮೂರ್ತಿ ಸಹ ಕೊಳಲನೂದುವ ಶೈಲಿ ಬಹಳ ಮೋಹಕವಾಗಿದೆ. ಈ ಸುಂದರ ಮೂರ್ತಿಯನ್ನು ದಾಸರು ನೋಡುತ್ತಾ ಕೃಷ್ಣಾವತಾರದ ಸ್ವಾಮಿಯ ಬಾಲಲೀಲೆಗಳನ್ನೇ ವರ್ಣಿಸಿದ ಇದೊಂದು ಬಹಳ ಮೋಹಕ ಕೃತಿ.]

೪. ದರುಶನವಾಯ್ತು ಈ ದಿನ

ದರುಶನವಾಯ್ತು ಈ ದಿನ ಸುದಿನಾ
ಸುರಗಿರಿ ಅರಸನ ಪರಮಪಾದ ॥ ॥ಪ॥

ಸರಸಿಜಾಕ್ಷಿ ಭೂದೇವಿ ಇಂದಿರಾ ।
ತರುಣಿಯರೆಡಬಲದಲಿ ಶೋಭಿಪ
ಪಾದ ದರುಶನವಾಯ್ತು ಈ ದಿನಾ ಸುದಿನಾ ॥೧॥

ಅಂಕುಶ ಧ್ವಜ ವಜ್ರಾಂಕಿತವಾಗಿಹ ।
ಪಂಕಜಗಳ ನಿಂದಿಸಿ ರಾರಾಜಿಸುವ ॥
ಪಾದ ದರುಶನವಾಯ್ತು ಈ ದಿನಾ ಸುದಿನಾ ॥೨॥

ದುರ್ಯೋರ್ಧನನೋಲಗದಲಿ ಕೆಡಹಿದ
ವರ ಕಾಳಿಂಗನ ಪಡೆಯ ತುಳಿದ
ಪಾದ ದರುಶನವಾಯ್ತು ಈ ದಿನಾ ಸುದಿನಾ ॥ ॥೩॥

ಏಸು ಜನ್ಮಗಳ ಸುಕೃತಗಳೊದಗಿ–
ಪಾಶವ ಗೆಲಿದುಲ್ಲಾಸವ ಕೊಡುವ–
ಪಾದ ದರುಶನವಾಯ್ತು ಈ ದಿನಾ ಸುದಿನಾ ॥ ॥೪॥

ಬಲಿಯಬೇಡಿ ಪಾತಾಳಕೆ ಮೆಟ್ಟಿಹ
ಒಲಿದು ನರನರಥ ಇಳೆಗೊತ್ತಿಹ
ಪಾದ ದರುಶನವಾಯ್ತು ಈ ದಿನಾ ಸುದಿನಾ ॥ ॥೫॥

[**ಟಿಪ್ಪಣಿ:** ಈ ಕೃತಿ ತಿಮ್ಮಪ್ಪದಾಸರಿಗೆ ಅವರ ಆರಾಧ್ಯದೈವ 'ಸುರಗಿರಿಯರಸನ' ಪದ ಕೊಂಡಾಡಿದ ಅಲ್ಲದೇ ದಾಸರ ಮನೆತನದ ಎಲ್ಲಾ ಬಂಧುಗಳ ಬಾಯಲ್ಲಿ ನಲಿದಾಡುವ ಸುಂದರ ದೇವರನಾಮ. ಅದರಲ್ಲೂ ಶ್ರಾವಣ ಮಾಸದ ಪೂಜಾ ಸಮಯದಲ್ಲಿ ದಾಸರು ಮೊದಲು ಹಾಡುತ್ತಿದ್ದ ಅವರ ಪ್ರಿಯವಾದ ಕೃತಿ. ಇದರ ಕಡೇ ಚರಣದಲ್ಲಿ ದಾಸರು ತಮ್ಮ ಮನದ ಕಣ್ಣುಗಳಲ್ಲಿ ತುಂಬಿಕೊಂಡು, ಏಸು ಜನ್ಮ ಸುಕೃತಗಳೊದಗಿ, ಶೋಭವ ಪಾಶವ ಗೆಲಿದು ಸಲ್ಲಿಸಿ ಕೊಡುವ ಎಂದು ಆತ್ಮ ಸಮರ್ಪಣೆ ಎಂಬುದು ಭಕ್ತಿಯ ಪರಿಪೂರ್ಣ ದಿಶೆ. ಅದು ಹೊರಗಣ ಸಾಕ್ಷ್ಯಗಳನ್ನು ಖುಜುವಾತುಗಳನ್ನು ಅಪೇಕ್ಷಿಸುವುದಿಲ್ಲ. ಮಗುವು ಯಾರ ಮಾತಿಗೂ ಕಾಯದೆ ತಾನೆ ತಾನಾಗಿ ತನ್ನ ತಾಯಿಯನ್ನು ನಂಬಿಕೊಂಡು ಆಕೆಯ ಮಡಿಲಲ್ಲಿ ತನ್ನನ್ನೇ ಮರೆತುಕೊಂಡು ಸುಖಿಸುವಂತೆ. ಭಕ್ತನು ಭಗವಂತನನ್ನು ನಂಬಿ "ಸ್ವಾಮೀ ನೀನೇ ನನ್ನ ಸರ್ವಸ್ವ ನಿನ್ನಿಚ್ಛೆಯೇ ನನ್ನಿಚ್ಛೆ" ಎಂದು ಆನಂದಿಸುವವನು. ಇದೇ ಭಾವ ಈ ಸುಂದರ ಕೃತಿಯಲ್ಲಿ ಮೂಡಿಬಂದಿದೆ.]

೫. ಮುಕ್ತಿಯೇ ಸುಖವಲ್ಲದಿನ್ನಿಲ್ಲ

ಬೇಗಡೆ **ತ್ರಿಪುಟೆ**

ಮುಕ್ತಿಯೇ ಸುಖವಲ್ಲದಿನ್ನಿಲ್ಲ ಸುಜನರಿಗೆ ಶ್ರೀ ಹರಿ
ಭಕ್ತಿಯೆಂಬುದು ಬಹುದು ಸೆಟೆಯಲ್ಲ । ॥ಪಲ್ಲವಿ॥

ಅತ್ಯಧಿಕ ಕಾಮ್ಯದಲೆ ಬಹುಲೋಕೋತ್ತರಂಗಳ ಪಡೆದು ಕಡೆಯಲಿ ।
ಮೃತ್ಯುವಶರಾಗುವರು ಪುನರಾವೃತ್ತಿರಹಿತದಿ ಸತ್ಯವಾಗಿಹ ॥ ॥ಅ.ಪ.॥

ಜಗದಿ ರಾತ್ರಿಯಾಳಾರಿತ ಬಾವಿಯನು । ಎಡವುತ್ತಾ ಹಾಡು
ಹಗಲು ಬೀಳುವುವರುಂಟೆ ಜನರಿನ್ನು । ಬಗೆ ಬಗೆಯ ಜೀವಿಗಳ ಮರಣವ
ಹಗಲಿರುಳು ನೋಡುತ್ತ ನಮಗೀ । ಜಗದಿ ಶಾಶ್ವತವೆಂದು ವಂಚಿಸಿ ।
ಜಗಳವಾಡುವರೋರ್ವರೋರ್ವರು ॥೧॥

ಹರಿವ ನೀರದು ಜನ್ಮ ಭೂಮಿಯನು ಮತ್ತರಿಯದಂದದಿ
ನರರು ಕಾಣರು ನಿತ್ಯವಸ್ತುವನು । ಮರುಳು ಜನಕೃತ್ಯರ್ಥವೆಲ್ಲವ ।
ನರಿತೆನೆನ್ನುತ ಕಾಮ್ಯಕರ್ಮವ । ವಿರಚಿಸುತ ಜನನಾದಿದುಃಖದಿ
ನರಳಿ ಕೊರಗುತಾ ಇರುತಲಿರ್ಪರು ॥ ॥೨॥

ಎಲ್ಲವಿದು ಪರಮಾತ್ಮಾ ಲೀಲೆಗಳು ಲೋಕದಲಿ ಕಾಣವು
ದೆಲ್ಲ ಸುರಗಿರಿ ವಾಸನಾಂಶಗಳು ಎಲ್ಲಿ ನೋಡಿದರಲ್ಲಿ ಲಕ್ಷ್ಮೀ॥
ವಲ್ಲಭನದಿಟವೆಂದು ಸಂಶಯವೆಲ್ಲವನು ಸುಟ್ಟುರುಗಿ ನಿಜಮನ ।
ದಲ್ಲಿ ಭಕ್ತಿ ವಿರಕ್ತಿಯೊಂದಿಹ ॥ ॥೩॥

[**ಟಿಪ್ಪಣಿ:** ಇದೊಂದು ದಾಸರು ರಚಿಸಿದ ಉನ್ನತ ಮಟ್ಟದ ವೇದಾಂತಸಾರ ಕೃತಿ. ಇದರಲ್ಲಿ ದಾಸರು ಜನರು ಮುಕ್ತಿಮಾರ್ಗದಲ್ಲಿ ಹೋಗುವಲ್ಲಿ ಭಕ್ತಿಮಾರ್ಗವೇ ಅತ್ಯಂತ ಸನಿಹದ ದಾರಿ ಎಂದು ತಿಳಿಸಿದ್ದಾರೆ. ಈ ಜಗತ್ತೇ ಶಾಶ್ವತವೆಂದು ನಂಬಿ ಜನರು ಮತ್ತೆ ಮತ್ತೆ ರಾತ್ರಿ ಕಂಡ ಬಾವಿಗೆ ಹಗಲೇ ಬೀಳುತ್ತಾ ಇರುತ್ತಾರೆ ಎಂದು ಎಚ್ಚರಿಸಿರುತ್ತಾರೆ. ಹರಿವ ನೀರು ತನ್ನ ಉಗಮಸ್ಥಾನವನ್ನೇ ತಿಳಿಯದೆ, ಜನರು ಸಹ ನಿತ್ಯ ವಸ್ತುವನ್ನು ಸರಿಯಾಗಿ ತಿಳಿಯದೆ ಮತ್ತೆ ಮತ್ತೆ ಜನನಾದಿ ದುಃಖ ದಿನಗಳನ್ನು ಹಿಡಿದು ನರಳುತಿರ್ಪರು ಎಂದು ತಿಳಿಸುತ್ತಾ, ಮನಸ್ಸಿನಲ್ಲಿರುವ ಎಲ್ಲ ಸಂಶಯವನ್ನು ಸುಟ್ಟು ನಿಜ ಮನಸ್ಸಿನಲ್ಲಿ ಪರಮಾತ್ಮನನ್ನು ತಿಳಿ. ಎಲ್ಲಿ ನೋಡಿದರಲ್ಲಿ ಪರಮಾತ್ಮನ ಲೀಲೆ ಲೋಕದಲ್ಲಿ ಕಾಣುವುದೆಲ್ಲ ಅವನ ಅಂಶಗಳು ಎಂದು ತಿಳಿಸುವ ಉತ್ತಮ ವೇದಾಂತಸಾರದ ಕೃತಿ.]

೬. ಭಜನೆ ಮಾಡಿರೊ

ಖಮಾಚ **ಆದಿತಾಳ**

ಭಜನೆ ಮಾಡಿರೋ । ನರಹರಿ ।
ಭಜನೆ ಮಾಡಿರೋ ॥ಪ॥

ಅರಿಷಡುವರ್ಗಗಳೆರಗುವಂತೆ ಮನ ।
ವೆರಕಮಾಡಿ ನಿರ್ಭರಮಂದಿ ॥ಹರಿ॥ ॥ಅ.ಪ.॥

ಅಂಗನೇಯರ ಅಂಗಸಂಗಸುಖಕೆ ಮನ ।
ಸ್ಯಾಂಗೆರಗುವವದರ್‍ಯಾಂಗೆ ಬಿಡದೆ ॥ಹರಿ॥ ॥೧॥

ನಿಟ್ಟಿನೊಳೋರ್ವನೊಳಿಟ್ಟು ಮನವ ಹಗೆ ।
ನೆಟ್ಟಹುದ್ಯಾಂಗಾಮಟ್ಟಿಗಾದರು ॥ಹರಿ॥ ॥೨॥

ಧನವನು ಗಳಿಸುವ ಘನಲೋಭದಿ ತಾ ।
ಅನುದಿನವದನೇ ನೆನಸು ಮಾಡಿ ॥ಹರಿ॥ ॥೩॥

ತರಳನ ಕಂಡರೆ ಹರುಷದಿ ಮೋಹಿಪ ।
ತೆರದೊಳಾದರು ಅನವರತ ಬಿಡದೆ ॥ಹರಿ॥ ॥೪॥

ಮತ್ಸರವನು ಶ್ರೀವತ್ಸಲನೊಳಗಿಡು
ನಿತ್ಯನಿತ್ಯವು ಸರ್ವೋತ್ತಮನೆಂದು ॥ಹರಿ॥ ॥೫॥

ನಿರ್ಭರದಿಂದಮರಾದ್ರಿಯೊಳಿರುವ
ಜನಾರ್ದನ ಗತಿಯೆನಲುದ್ಧರಿಸುವ ॥ಹರಿ॥ ॥೬॥

[**ಟಿಪ್ಪಣಿ:** ಇಲ್ಲಿ ಅಂಕಿತ ಜನಾರ್ದನ ಎಂದು ಬಂದಿದೆ. ಅಂದರೆ ಬೆಟ್ಟದ ಮೇಲಿರುವ ಸ್ವಾಮಿಗೆ ಜನಾರ್ದನ ಎಂದು ಹೆಸರಿರುವುದರಿಂದ ಅಮರಾದ್ರಿ ಮಲೇಕಲ್ಲು ಬೆಟ್ಟದ ಮೇಲಿನ ಸ್ವಾಮಿಗೆ ಹಿಂದಿನಿಂದಲೂ ಜನಾರ್ದನ ಎಂಬ ಹೆಸರೇ ಇರುತ್ತದೆ. ಆದುದರಿಂದ ಅಂಕಿತದಲ್ಲಿ ಜನಾರ್ದನ ಎಂದು ಬಂದಿರುತ್ತದೆ.]

೭. ಸೇರಿಸೋ ನಿನ್ನ ಪದವ

ಬೇಹಾಗ್ **ಆದಿತಾಳ**

ಸೇರಿಸೋ ನಿನ್ನ ಪದವ ।
ಬಂದು ತೋರಿಸೋ ಮುದವ ॥ ॥ಪ॥

ಆರುಮಂದಿಯ ಕೂಡೆ । ಹೋರಾಡಿ ಬಳಲಿದೆ ।
ಯಾರೀಗ ಬಿಡಿಸವರಿಲ್ಲ । ನಿನ್ನೊರತೊಬ್ಬರಿಲ್ಲ ॥೧॥

ಎಂಟು ಆನೆಗಳು ಬೆ । ನ್ನಂಟಿ ಬಾಧಿಸುತಿವೆ ।
ನೆಂಟರಿಷ್ಟರು ಬಿಡಪರಿಲ್ಲ । ನಿನ್ನೊರತೊಬ್ಬರಿಲ್ಲಾ ॥೨॥

ಸುರುಗಿರಿಯೊಳು ಸುಮ್ಮ । ನಿರುತಿರೆ ನಮ್ಮಂಥ ।
ಪರದೇಶಿಗಳಿಗಾರು ಗತಿಯೋ । ಮುಂದೇನು ಗತಿಯೋ ॥೩॥

[**ಟಿಪ್ಪಣಿ:** ತಿಮ್ಮಪ್ಪದಾಸರ ಈ ಪುಟ್ಟ ಕೃತಿ ಅನುಭವಪೂರ್ಣವಾಗಿದೆ. ತಮ್ಮ ಮಾಗಿದ ಶರೀರ, ಇಳಿವಯಸ್ಸಿನಲ್ಲಿ ಸ್ವಾಮಿಯ ಮುಂದೆ ನಿಂತು ತಮ್ಮ ಹೋರಾಟವನ್ನು ಹೇಳಿಕೊಳ್ಳುತ್ತಿದ್ದಾರೆ. ಈ ದೇಹ ಹೋರಾಡಿ ಬಳಲಿದೆ. ಯಾರೀಗ ಬಿಡಿಪರಿಲ್ಲ ಎಂದು ದೈನ್ಯದಿಂದ ತಮ್ಮ ಆರಾಧ್ಯ ದೇವರಲ್ಲಿ ಬೇಡಿಕೊಂಡಿರುವ ಈ ಸುಂದರ ಕೃತಿ ಬಹಳ ಭಾವಪೂರ್ಣವಾಗಿದೆ.]

೮. ನೆರೆನಂಬಿದೆನು ತಾಯೆ

ಆನಂದ ಭೈರವಿ ತ್ರಿಪುಟ

ನೆರೆನಂಬಿದೆನು ತಾಯೆ ನಿಮ್ಮಯ
ಪಾದಾಂಬುರುಹವ । ಜಗನ್ಮಾಯೆ ॥ ॥ಪ॥

ಕರುಣದಿಂದಲಿ ಪೊರೆವಳೆಂಬುವ
ಬಿರುದು ನಿನ್ನಲಿ ನೆರೆದು ಇತರರ ।
ಉರುತರ ಪ್ರೇಮದಲಿ ಭಜಿಸುವೆನೆ ।
ಶರಣವತ್ಸಲೆ ಕರುಣ ಸಾಗರೆ ॥ಅ.ಪ॥

ಜಗವೆಲ್ಲ ನನದೆಂದು ಗರ್ವದೊಳಿಂದು ।
ಎನಗೆ ಸರಿಯಾರು ಎಂದು ।
ವಿಗಡತನದಲಿ ನಗುತಲಿರುವೆನೀನೆ ।
ನ್ನಘವು ಪೋಗುವ ಬಗೆಯಾವುದೋ ।
ನಗೆಯ ಮಾಡದಿರು ಹಗಲಿರುಳು ನೀ ।
ನ್ನಗಲದೇ ಧ್ಯಾನಿಸುವೆ ಶಂಕರಿ ॥೧॥

ಅಹಿವೇಣೀ ನಿನ್ನ ನೋಡಿದಾವನನಿಂತು ।
ಅಹಿತದ ತರದಿ ಕಾಂಬೇ ।
ವಿಹಿತವಲ್ಲಿದು ವಿಮಲಚರಿತಳೆ
ವಹಿಸಿಕೊ ಎನ್ನಖಿಲ ಭಾರವ
ಅಹಹ ನಿನ್ನಯ ಕಠಿಣಮೈತ್ರಿಯು
ಸಹಜವೆಲ್ಲಿದು ಸರಸಿಜಾಮುಖಿ ॥೨॥

ಹರಿಹರ ಬ್ರಹ್ಮಾದ್ಯರು ನಿನ್ನ
ಬಹುತರದಿಂದೋಲೈಸುವರು
ನರನು ನಾನೀಪರಿ ಭಜಿಸಲು
ಕರುಣವಿಂದಿಗೆ ದೊರೆಯಬಾರದೆ
ಸುರಗಿರೀಶ ನಿರುತ ಸೋದರಿ ನಿನ್ನನು
ಮೊರೆ ಹೋಗುವೆ ನುದ್ಧರಿಸಬಾರದೆ ॥೩॥

[**ಟಿಪ್ಪಣಿ:** ಇಲ್ಲಿ ಲೋಕಮಾತೆಯನ್ನು ಜಗನ್ಮಾಯೆ ಎಂದು ಸ್ತುತಿಸಿದ್ದಾರೆ. ಈ ಜಗತ್ತಿನಲ್ಲಿ ನಾನು ನನ್ನದು ಎಂದು ಗರ್ವದೊಳು ನನಗೆ ಸರಿಯಾರು ಎಂದು ಬೀಗುತ್ತಾ ಅನೇಕ ಕಷ್ಟಗಳನ್ನು ಅನುಭವಿಸಿದೆ. ಈ ಕಷ್ಟಗಳನ್ನು ಮನ್ನಿಸು ತಾಯೆ ಎಂದು ಏಕಚಿತ್ತದಿಂದ ಮಾತೆಯನ್ನು ಬೇಡಿದ್ದಾರೆ. ಭಕ್ತಿಯಿಂದ ಮೊರೆಹೊಕ್ಕಿದ್ದಾರೆ. ಮಗುವು ತನ್ನ ತಾಯಿಯನ್ನು ಬೇಡುವ ರೀತಿಯಲ್ಲಿದೆ. ಅಹಿವೇಣಿ, ಸರಸಿಜಾಮುಖಿ, ವಿಮಲಚರಿತೆ ಎಂದು ನಾನಾ ವಿಧದಲ್ಲಿ ಬೇಡಿಕೊಂಡಿದ್ದಾರೆ. ಕಡೆಯ ಚರಣದಲ್ಲಿ ಶರಣಾಗತಿಭಾವದಿಂದ ನಿನ್ನನ್ನು ಹರಿಹರ ಬ್ರಹ್ಮಾದ್ಯರೇ ನಿನ್ನ ಓಲೈಸಿ ಭಜಿಸುತ್ತಿರಲು ಈ ನರನಾದ ನಾನು ಯಾವ ತರಹದಲಿ ಭಜಿಸಲಿ ನಿನ್ನ ಎಂದು ಭಕ್ತಿಭಾವದಿಂದ ತಾಯಿಯನ್ನು ಮೊರೆಹೊಕ್ಕಿದ್ದಾರೆ. ಆನಂದಭೈರವಿ ರಾಗದಲ್ಲಿನ ದಾಸರ ಮೋಹಕ ಕೃತಿರಚನೆ ಭಕ್ತಿಪೂರ್ಣ ಕವಿತೆ ಆಗಿದೆ.]

೯. ಬನದಶಂಕರಿಯೆ ಪಾಲಿಸು ತಾಯೆ

ಭೈರವಿ ಮಿಶ್ರಬಾನ

ಬನದ ಶಂಕರಿಯೇ ಪಾಲಿಸು ತಾಯೇ
ಬನದ ಶಂಕರಿ ಭಾವ ಹನನೆದಯಾಪೊರೆ
ವನರುಹನೇತ್ರೆ ಪಾವನಗಾತ್ರೆ ಸುಪವಿತ್ರೆ ||ಪ||

ಮನದಲ್ಲಿ ನಿಮ್ಮ ಪಾದಾಂಬುಜ
ವನನುದಿನ ಮುನ್ನಾ ನೆನೆಯುವಂಥಾ ಘನಮತಿ
ಎನಗಿತ್ತು ಸಲಹೆ ಪಾವನಗಾತ್ರೆ ಸುಚರಿತ್ರೆ
ವನಜ ಬ್ರಹ್ಮಾಂಡವೆ ಜನನಿಯಾಗಿರುವಂಥಾ ||೧||

ದುರುಳ ರಕ್ಕಸನ ಬಾಧೆಯ ಪರಿಹರಿಸಲು ಶೂರ
ಯಾರಿಲ್ಲದೆ ಇರಲತಿಗೆ ಘೋರ
ತರವಾದರೂಪನು ಧರಿಸಿ ಶುಂಭಾದಿಗಳ್
ತರಿದೆ ಕೃಪಾಳ್ವೆ ಪೊರೆಶಿವೆ ಪಾರ್ವತಿ ||೨||

ಧರೆಯೊಳಧಿಕವು ಆಗಿರುವಂತಾ ಮತಿಘಟ್ಟ
ಪುರವದ ತನ್ಮಧ್ಯದಿ, ಸತತ ನಿನ್ನಿರವು
ಅತಿಶಯವಾಗಿ ತೋರುತಲಿದೆ ಸುರಗಿರಿ
ಪತಿಯಾದ ವೆಂಕಟನತಿಶಯ ಸಹೋದರಿ ||೩||

[**ಟಿಪ್ಪಣಿ:** ಇದೊಂದು ದಾಸರು ಕೊಂಚ ಕಾಲ ಬಾಣಾವರದಲ್ಲಿದ್ದಾಗ ಸಮೀಪದ ಮತಿಘಟ್ಟದಲ್ಲಿರುವ ಬನಶಂಕರಿ ದೇವಾಲಯದಲ್ಲಿ ಹಾಡಿದ ಸುಂದರ ರಚನೆ. ಕಾರಣ ದಾಸರು ರೋಡು ಕಂಟ್ರಾಕ್ಟರ್‌ರೊಬ್ಬರಲ್ಲಿ ಕೆಲಸ ಮಾಡಿಸುತ್ತಿದ್ದರು. ವಿಶ್ರಾಂತಿ ಸಮಯದಲ್ಲಿ ದೇವಸ್ಥಾನದಲ್ಲಿ ತಂಗಿದ್ದಾಗ ಅಲ್ಲೇ ರಚಿಸಿ ಹಾಡಿದ ಸುಂದರ ಕೃತಿ ಇದು. ತಿಮ್ಮಪ್ಪದಾಸರು ಎಲ್ಲಿ ಏನೇ ಕೆಲಸ ಮಾಡುತ್ತಿದ್ದರೂ ಅವರ ದೈವ ಚಿಂತನೆ ಹೇಗಿತ್ತು ಎಂಬುದು ತಿಳಿಯುತ್ತದೆ.]

೧೦. ಪೊರೆಯೆನ್ನನು ಕರುಣಾಲವಾಲ

ಜಯಂತಶ್ರೀ ಆದಿತಾಳ

ಪೊರೆಯೆನ್ನನು ಕರುಣಾಲವಾಲ । ॥ಪ॥

ಶರಣಾಗತರ ಪೊರೆವ ಬಿರುದು
ಇರಲೆನ್ನನೀಗ । ಮರೆಯದೆ ಬೇಗ ॥ಅ.ಪ.॥

ಮಾಡಬಾರದಾ ಖೋಡಿಕರ್ಮವ
ಮಾಡಿನಿಂದು ತಾನಾದೆನ್ನೈಯೆನೆ
ನೋಡಿದಿರು ಎನ್ನ ಗಾಢರೋಷವನ್ನ
ಮೂಢನಾಗಿ ನಿನ್ನ ಬೇಡಿಕೊಂಬೆನ್ನೈಯ್ಯಾ ॥೧॥

ಇಂದ್ರಿಯಂಗಳಾನಂದಕೋಸುಗಾ
ಹಿಂದುಮುಂದಾ ನಾನೊಂದನೋಡದೆ
ದಂದುಗಕ್ಕೆ ಸಿಕ್ಕಿ ನೊಂದೆನೀಗ ನಿನ್ನ
ಹೊಂದಿದೆನನಾಥ ಬಂಧುವೇ ದಯದಿ ॥೨॥

ಮರೆಹೊಕ್ಕೆನಾ ಮರೆಯದಿರೈ
ಭಾರನಿನ್ನದು ಪಾರುಗಾಣಿಸೈ
ಧೀರ ನಿನ್ನ ಪರಿವಾರದೊಳಗೆನಾ
ನೋರ್ವನೆಂದಿನಿಸೊ ಸುರಶೈಲವಾಸ ॥೩॥

[**ಟಿಪ್ಪಣಿ:** ದಾಸರು ತಮ್ಮ ಇಳಿಯ ವಯಸ್ಸಿನಲ್ಲಿ ಶರಣಾಗತ ಭಾವದಿಂದ ಸ್ವಾಮಿಯಲ್ಲಿ ಬಿನ್ನವಿಸಿಕೊಂಡ ಕೀರ್ತನೆಯಿದು, ನಾ ಮಾಡಿದ ಅನೇಕ ತಪ್ಪು ಒಪ್ಪುಗಳನ್ನು ಮನ್ನಿಸಿ ನಿನ್ನ ಬೇಡಿಕೊಂಡೆನಯ್ಯ ಇಂದ್ರಿಯ ಸುಖಗಳನ್ನೇ ನಂಬಿ ನಿನ್ನ ದೂರ ಮಾಡಿದೆ. ದಂದುಗಕ್ಕೆ ಸಿಕ್ಕಿ ಬಹಳ ನೊಂದಿದ್ದೇನೆ, ನಿನ್ನನ್ನೇ ಮೊರೆ ಹೊಕ್ಕಿದ್ದೇನೆ ಎನ್ನ ಪಾರುಗಾಣಿಸೈ. ನಿನ್ನ ಭಕ್ತ ಪರಿವಾರದಲ್ಲಿ ನನ್ನನ್ನೂ ಸೇರಿಸಿಕೊಳ್ಳಯ್ಯ ಎಂದು ಸುರಶೈಲನನ್ನು ಬೇಡಿದ್ದಾರೆ.]

೧೧. ನಿನ್ನವಿನಾ ಅನ್ಯರ ಕಾಣೆ

ರಾಗ: ತೋಡಿ **ತಾಳ: ರೂಪಕ**

ನಿನ್ನವಿನಾ ಅನ್ಯರ ಕಾಣೆ
ನಾ ನೀರಜಾ ನಯನ ॥
ಇನಕುಲ ಪತಿ ಸಕಲಲೋಕ
ಜನಕ ದಯಾವನದಿ ರಾಮ॥ ॥ಪ॥

ಕೊಡುವರೊಳಗೆ ನೀನೆಯಂದು
ಬಡವನಾದ ನಾನು ಬಂದು
ಉಡಿಯನೊಡ್ಡಿ ಬೇಡುವೆನೀಗ
ದೃಢದಿ ವರವ ಪಾಲಿಸುಬೇಗ ॥೧॥

ತನುಮನ ಧನ ವನಿತೆಯಾಸೆ
ಯಮಗೆದೇಕೆ ನಿನ್ನ ಪಾದ
ವನಜ ಸೇವೆಯೊಂದೇ ಸಾಕು
ಚಿನುಮಯಾತ್ಮ ಪರಮಪುರುಷ ॥೨॥

ನಿನ್ನ ನಾಮಗಳನೆ ಪಾಡಿ
ನಿನ್ನ ದಾಸರುಗಳ ಕೂಡಿ
ನಿನ್ನ ಸೇವೆ ಮಾಡಿ ಮಾಡಿ
ಧನ್ಯನಾದೆ ಸುರಗಿರೀಶ ॥೩॥

[**ಟಿಪ್ಪಣಿ:** ಇದೊಂದು ತೋಡೀರಾಗದಲ್ಲಿನ ಶ್ರೀರಾಮಚಂದ್ರನನ್ನು ಕುರಿತು ಹಾಡಿರುವ ಸುಂದರ ದೇವರನಾಮ. ಅರಸೀಕೆರೆಯಲ್ಲಿ ದಾಸರು ಬಹಳ ವರ್ಷಗಳ ಕಾಲ ರಾಮೋತ್ಸವ ನಡೆಸಿದರು. ರಾಮನವಮಿ ಕಾಲದಲ್ಲಿ ತಾವೇ ಸ್ಥಾಪಿಸಿದ "ಬಾಲರಾಮ ಸೇವಾಸಂಘ" ಬಹಳ ಅದ್ಧೂರಿಯಾಗಿ ನಡೆಸಿಕೊಂಡು ಬರುತ್ತಿದ್ದರು. ೯ ದಿನಗಳೂ ಹರಿಕಥಾ ಕಾಲಕ್ಷೇಪ, ಹವನ ಹೋಮ, ಪಟ್ಟಾಭಿಷೇಕ ನಡೆಯುತ್ತಿತ್ತು. ಆ ಸಮಯದಲ್ಲಿ ದಾಸರೂ ಈ

ದೇವರನಾಮ ತಾವೇ ರಚಿಸಿ ಹಾಡಿದ್ದು ಈ ಹಾಡು. ಎಲ್ಲಾ ಹೆಣ್ಣುಮಕ್ಕಳೂ ಈ ಹಾಡನ್ನು ಮರೆಯದೆ ರಾಮನವಮಿಯಲ್ಲಿ ಹಾಡುತ್ತಿದ್ದರು. ಇಲ್ಲಿ ಐದನೇ ಚರಣದಲ್ಲಿ ಶ್ರೀರಾಮನನ್ನ ಭಕ್ತಿಭಾವದಿಂದ ಬೇಡುವ ರೀತಿ ನಿಜವಾದ ಭಕ್ತಿಗೆ ಜೀವದಾಯಕ ಶಕ್ತಿಯುಂಟು, ಯಾರಿಗೆ ಜಗದೀಶ್ವರನಲ್ಲಿ ಸ್ವಾಭಾವಿಕವಾಗಿಯೇ ಭಕ್ತಿ ಇದೆಯೋ ಅವರೇ ಶಾಶ್ವತ ಸುಖವನ್ನು ಅನುಭವಿಸತಕ್ಕವರು ಎಂಬ ಭಾವವನ್ನು ಈ ದೇವರನಾಮದಲ್ಲಿ ಕಾಣಬಹುದು. ತನು, ಮನ, ಧನ ವನಿತೆಯಾಸೆ ಎಲ್ಲವನ್ನು ಬಿಟ್ಟು ನಿನ್ನ ಪಾದಸೇವೆಗೆ ಬಂದೆ ಚಿನುಮಯಾತ್ಮಕ ಪರಮಪುರುಷ ಹೇ ಶ್ರೀರಾಮಪ್ರಭು ಎಂದು ಬೇಡಿಕೊಂಡಿದ್ದಾರೆ. ಕಡೆಯ ಸಾಲುಗಳಲ್ಲಿ ಈ ನಿನ್ನ ಸೇವೆ ಮಾಡಿ ಮಾಡಿ ಧನ್ಯನಾಗುವ ಭಾಗ್ಯವನ್ನು ಕೊಡು ಎಂದು ಬೇಡಿರುವ ರೀತಿ ದಾಸಪರಂಪರೆಯನ್ನು ಎತ್ತಿ ತೋರಿಸುತ್ತದೆ ಈ ರಚನೆ.]

೧೨. ಏಕೆ ನಿರ್ದಯನಾದೆ ಹರಿಯೇ

ಆನಂದಭೈರವಿ **ಚಾಪು**

ಏಕೆ ನಿರ್ದಯನಾದೆ ಹರಿಯೆ ಎನ್ನ ಪೊರೆಯೆ
ಸರ್ವ ಲೋಕನಾಯಕನೆಂದು ನಂಬಿದೆ ಹರಿಯೆ ||ಪ||

ನಾನಾ ಜನ್ಮಗಳಲಿ ತೊಳಲಿ ನಾ ಬಳಲೀ
ಬುದ್ಧಿಹೀನಳಾಗಿ ದುಷ್ಟ ವಿಷಯಂಗಳಲೀ
ಏನೊಂದು ಸುಖವಿಲ್ಲದಳಲಿ ದುಃಖಗಳಲಿ
ಇಂದು ದೀನನಾಗಿ ಸೇರ್ದೆ ನಿನ್ನಂಘ್ರಿಗಳಲಿ ||೧||

ಎತ್ತ ಹೋದರು ಕಾವರಿಲ್ಲ ನೋಳ್ಪದಿಲ್ಲ ಸ
ರ್ವೋತ್ತಮ ನಿನ್ನೊರತಿನ್ನೊಬ್ಬರಿಲ್ಲ
ಮೃತ್ಯು ಬಾಯ್ದೆರದಿಹುದಲ್ಲ ಈಗಾರಿಲ್ಲ ನಿನ್ನ
ಹಸ್ತದಿಂದಭಯವ ನೀಡೋ ಸಿರಿನಲ್ಲ ||೨||

ದೀನರಕ್ಷಕನೆಂಬ ಬಿರುದು ನಿನಗಿಹುದು
ನಿನ್ನಧೀನ ಜಗತ್ರಯವೆಂಬುದನರಿದು
ನಾನು ತಾನೆಂಬುದ ಮರೆದು ಹಮ್ಮನುಳಿದು
ನಿನ್ನ ಧ್ಯಾನಿಪೆ ಸುರಗಿರಿ ವೇಂಕಟನೊಲಿದು ||೩||

[**ಟಿಪ್ಪಣಿ:** ದಾಸರು ಇಲ್ಲಿ ಧ್ಯಾನಾಸಕ್ತರಾಗಿ ತುಂಬಿದ ಕಣ್ಣುಗಳಿಂದ ಸ್ವಾಮಿಯಲ್ಲಿ ಪೊರೆ ಎಂದು ಬೇಡಿರುವ ರೀತಿ ಮನೋಜ್ಞವಾಗಿದೆ. ಹೇ ಪ್ರಭೂ ಏಕೆ ನಿರ್ದಯನಾದೆ? ನೀನೇ ಸರ್ವಲೋಕ ನಾಯಕ ಎಂದು ನಿನ್ನ ನಂಬಿ ಬಂದಿರುವ ಈ ದಾಸನನ್ನ ಮರೆತಿರುವೆಯಾ ಎಂದು ಮುಖಾಮುಖಿಯಲ್ಲಿ ದೇವರಲ್ಲಿ ಪ್ರಶ್ನಿಸುವಂತಿದೆ ಇಲ್ಲಿಯ ಭಾವ.

ನಾನಾದರೂ ಅನೇಕ ಜನ್ಮಗಳಲ್ಲಿ ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡಿ ಬುದ್ಧಿಹೀನನಾಗಿ ದುಷ್ಟ ವಿಷಯಗಳಲ್ಲಿ ಕಾಲ ಕಳೆದೆ; ಈಗ ನಿನ್ನ ಅಡಿದಾವರೆಯಲ್ಲಿ ಬಂದು ನಿಂತಿಹೆ; ಎತ್ತ ಹೋದರೂ ನನ್ನನ್ನು ಕಾಯುವುವರಿಲ್ಲ, ನೀನೊಬ್ಬನೆ ನನ್ನ ರಕ್ಷಕ ಎಂದು ಬೇಡಿರುವ ರೀತಿ ಒಬ್ಬ ಪರಿಪೂರ್ಣ ಭಕ್ತನ ಮೊರೆಯಂತಿದೆ.]

೧೩. ಮಂಗಳಂ ದೇವಿಗೆ ಮಂಗಳ

ಆರಭಿ ಆದಿತಾಳ

ಮಂಗಳಂ ದೇವಿಗೆ ಮಂಗಳಾ
ಸರ್ವಮಂಗಳಗೌರಿಗೆ ಮಂಗಳಾ ||ಪ||

ಸುಂದರಿ ಮೇನಕಿ ನಂದವನ ಸುರನರ
ವಂದಿತೆ ಶಶಿಧರನಂದಿನಿಗೆ
ಬಂಧವಿದೂರೆ ಸುಗಂಧಿನಿ ಸದ್ಗುಣ
ವಂದೆ ಸುದೀರ್ಘ ಸಬಂಧುರೆಗೆ ||೧||

ಶಕ್ತಿಸ್ವರೂಪೆಗೆ ಮುಕ್ತಿ ವಿದಾತೆಗೆ
ರಕ್ತಬೀಜಮದಹಾರಳಿಗೇ
ಭಕ್ತರಭೀಷ್ಟವ ಯುಕ್ತಿಯೊಳೀಯುವ
ಭಕ್ತಿಯ ತೋರುವ ಶಕ್ತಳಿಗೆ ||೨||

ಕುಮತದದೂರೆಗೆ ವಿಮಲಶರೀರೆಗೆ
ಕಮಲದಳಾಯತನೇತ್ರಳಿಗೇ
ಅಮರಗಿರೀಶನಮಣಿಯ ಶ್ರಮ ಪರಿ
ಹರಿಸುವ ಭ್ರಮರಾಂಬಿಕೆಗೆ ||೩||

[**ಟಿಪ್ಪಣಿ:** ಈ ಹಾಡು ಶಕ್ತಿ ಸ್ವರೂಪಳು ಹಾಗು ಮುಕ್ತಿದಾಯಕರಾದ ದೇವಿಯನ್ನು ಕುರಿತು ಹಾಡಿರುವ "ಆರಭಿ" ರಾಗದಲ್ಲಿ ಮೂಡಿಬಂದಿರುವ ಹಾಡು. ಮಂಗಳಗೌರಿಗೆ ಮಂಗಳಾ ಎಂದು ಪ್ರಾರಂಭವಾಗುತ್ತದೆ. ಜಗನ್ಮಾತೆಯನ್ನು ಶಕ್ತಿ ಸ್ವರೂಪೆ, ಮುಕ್ತಿ ವಿದಾತೆ, ಭಕ್ತರ ಅಭೀಷ್ಟಗಳನ್ನು ದಯಪಾಲಿಸುವ ಮಾತೆ ಎಂದು ಕಡೆಯ ಚರಣದಲ್ಲಿ ತಮ್ಮ ಊರಿನ ಭ್ರಮರಾಂಬಿಕೆಯನ್ನು ನೆನೆದಿದ್ದಾರೆ. ಈ ಭ್ರಮರಾಂಬಿಕೆ ದಾಸರ ಹುಟ್ಟೂರಿನ ಗ್ರಾಮದೇವತೆ ಕೂಡ ಎನ್ನುವುದನ್ನು ಗಮನಿಸಬೇಕು. ಇದರ ದೇಗುಲ ಕೆಲ್ಲಂಗೆರೆಯಲ್ಲಿದೆ.]

೧೪. ಪೊರೆ ಸಂತತ ಪರಮೇಷ್ಠಿರಾಣಿ

ಪೊರೆ ಸಂತತ ಪರಮೇಷ್ಠಿರಾಣೀ
ಕರುಣಾಕರೀ ಪಾಹಿಶಂಕರೀ ॥ಪ॥

ಸುರಸಿದ್ಧಿವರಾದಿ ವರಸೇವಿತಾಂಘ್ರಿ
ವರದಾಯಕೀ ವಾಸುದೇವ ಜಾಯೇ ॥೧॥

ಶಂಖಚಕ್ರಧಾರೀ ಕಿಂಕರಾರ್ತಿಹಾರೀ
ಪಂಕಜಾಲಯೇ ಪರದೇವಿ ಗೌರಿ ॥೨॥

ವಾರಿಜಾಕ್ಷಿ ವೀಣಾಧರಿ ಸೇರ್ವೆ ನಿನ್ನ
ಸುರಶೈಲನವಾಸನ ತೋರಿಸಮ್ಮ ॥೩॥

[ಟಿಪ್ಪಣಿ: ಈ ಕೃತಿಯನ್ನು ಸ್ತೋತ್ರ ರೂಪದಲ್ಲಿ ಹರಿಕಥಾ ಪ್ರಾರಂಭದಲ್ಲಿ ಆಗಾಗ ದಾಸರು ಹಾಡುತ್ತಿದ್ದರು. ಕೃತಿ ಚಿಕ್ಕದಾದರೂ ಬಹಳ ಚೆನ್ನಾಗಿ ಮೂಡಿಬಂದಿದೆ. ಮಾತೆಯನ್ನು ಕುರಿತು ಎಳೆಯ ಮಗುವಿನಂತೆ ಪ್ರಾರ್ಥಿಸಿದ್ದಾರೆ. ಹೇ ಮಾತೆ ನಿನ್ನ ಚರಣ ಕಮಲದಲ್ಲಿ ನನಗೆ ನಿಜವಾದ ಭಕ್ತಿಯುಂಟಾಗುವಂತೆ ಅನುಗ್ರಹಿಸು ಎಂದು ನಾನು ಬೇರೇನೂ ಬಯಸೆನು ಎಂದು ದೇವಿಯಲ್ಲಿ ಬೇಡಿಕೊಂಡಿದ್ದಾರೆ.]

೧೫. ಬಾರೋ ಮನಕೆ ರಾಮ ಬೇಗ

ಜಂಝೋಟಿ ಚಾಪು

ಬಾರೋ ಮನಕೆ ರಾಮ ಬೇಗ
ಬರದಿರುವವರೆ ಈಗ ॥ಪ॥

ಬಾರಿ ಬಾರಿಗು ನಿನ್ನ ಭಜನೆಯ ಮಾಡುತ
ಸೇರಿಹೆ ಪದವ ಬಂದು ತೋರಿಸೋ ಮುದವ ॥೧॥

ಆರುಮಂದಿಯ ಕೂಡೆ ಹೋರಾಡಿ ಬಳಲಿದೆ
ಯಾರೀಗ ಬಿಡಿಸುವರಿಲ್ಲ ನಿನ್ಹೊರತೊಬ್ಬರಿಲ್ಲ ॥೨॥

ಎಂಟು ಆನೆಗಳು ಬೆನ್ನಟ್ಟಿಬಾಧಿಸುತಿವೆ
ನೆಂಟರಿಷ್ಟರು ಬಿಡಿಪರಿಲ್ಲ ನಿನ್ಹೊರತೊಬ್ಬರಿಲ್ಲ ॥೩॥

ಸುರಗಿರಿಯೊಳು ಸುಮ್ಮನಿರುತಿರೆ ನಮ್ಮಂಥ
ಪರದೇಶಿಗಳಿಗಾರು ಗತಿಯೋ ಮುಂದೆಮಗೇನು ಗತಿಯೋ ॥೪॥

....
.... ॥೫॥

[**ಟಿಪ್ಪಣಿ:** ಈ ಹಾಡು ಶ್ರೀರಾಮ ನವಮಿ ಕಾಲದಲ್ಲಿ ಭಜನಾ ರೂಪದಲ್ಲಿ ಹಾಡುತ್ತಿದ್ದ ಹಾಡು. ಮನುಷ್ಯ ತನ್ನ ಜೀವಿತ ಸಮಯದಲ್ಲಿ ಅರಿಷಡ್ವರ್ಗದ ಬಲೆಯಲ್ಲಿ ಬಿದ್ದು ತನ್ನನ್ನು ತಾನೆ ಮರೆತು ಹೋಗಿರುತ್ತಾನೆ. "ಎಂಟು ಆನೆಗಳು ನನ್ನನ್ನು ಬೆನ್ನಟ್ಟಿ ಬರುತ್ತಿದೆ. ಇದರಿಂದ ಎಂದು ಮುಕ್ತಿ? ನನ್ನ ಆರೂ ಬಿಡಿಪರಿಲ್ಲ" ಎಂದು ಸ್ವಾಮಿಯನ್ನು ಬೇಡಿರುತ್ತಾರೆ. ಇದರಿಂದ ಪಾರಾಗಲು ಮನಸ್ಸನ್ನು ಶುಚಿಮಾಡು ಅನ್ನುತ್ತಾರೆ.

ಎಲ್ಲವನ್ನೂ ಮರೆತು ಸುರಗಿರಿಯಲ್ಲಿ ನಿನ್ನ ಧ್ಯಾನಿಪದೊಂದೇ ದಾರಿ. ನಮ್ಮಂಥ ಪರದೇಶಿಗಳಿಗೆ ನೀನೇ ರಕ್ಷಕ ಎಂದು ಬೇಡಿರುವ ರೀತಿ ದೃಢವಾಗಿದೆ. ಅರಿಷಡ್ವರ್ಗಗಳೆಂಬ ಕ್ರೂರ ಮೃಗಗಳ ಕಾನನ. ಅಲ್ಲೆ ಅಡಗಿಹುದು ಅಹಂಕಾರ, ದರ್ಪಗಳ ಸಿಂಹಾಸನ, ಅಜ್ಞಾನದಂಗಳವಾಗಿ ರಾಗದ್ವೇಷಗಳ ರಂಗವಾಗಿ, ಕಾಮ ಕರ್ಮಗಳ ಕೂಪವಾಗಿ ಆಸೆಗಳ ಆಲಯವಾಗಿ, ಹುಚ್ಚಾಟಗಳ ಆಡುಂಬೊಲವಾಗಿ, ಮನವು ನಮ್ಮನ್ನೆ ಮಣಿಸುವುದು. ಮನವು ಶುದ್ಧಿಯಾಗದೆ ಸಿದ್ಧಿಸದು. ಆದುದರಿಂದಲೇ ಮೊದಲು ಮನವ ಶುಚಿ ಮಾಡಿದರೆ ಆಗ ಆಗುವುದು ಮನವು ದೇವರ ಗುಡಿ ಎಂದಿದ್ದಾರೆ.]

೧೬. ಮರೆಯದೆ ನೀ ಮನದಿ ಭಜಿಸು

ತೋಡಿ **ರೂಪಕ**

ಮರೆಯದೆ ನೀ ಮನದಿ ಭಜಿಸು
ಹರಿಯ ಚರಣವ ಪ್ರಾಣಿ ||ಪ||

ದುರಿತ ಶರಧಿಯನ್ನು ದಾಟಿ
ಹರುಷ ಪಡುವೆಯೋ ಪ್ರಾಣಿ ||ಅ.ಪ||

ಕಷ್ಟಪಡುತ ಹಗಲು ಇರುಳು ಎಷ್ಟು ಗಳಿಸಲು
ತಟ್ಟನೇ ನೀ ಸಕಲವನ್ನು ಬಿಟ್ಟು ಪೋಗುವೆ ಪ್ರಾಣಿ ||೧||

ನಾನು ನಾನು ಎಂದು ನಿನ್ನಧೀನವಾಗೆನೋ
ನಾನರಿಯೆ ನಿನ್ನ ನಿಜವ ಏನಿದೇನಿದೋ ಪ್ರಾಣಿ ||೨||

ಅರುಹಬಹುದು ಸಕಲಶಾಸ್ತ್ರ ಚರಿಸೆ ಕಷ್ಟವು
ಸುರಗಿರಿ ವೆಂಕಟನ ಭಜಿಸೆ ಪರಮ ಸುಲಭವ ||೩||

[**ಟಿಪ್ಪಣಿ:** ಇದೊಂದು ವೇದಾಂತ ಸಾರದ ಕೃತಿ. ಜಗತ್ತಿನಲ್ಲಿ ಹರಿಚರಣವ ನಂಬಿ ಭಜಿಪುದೇ ಶ್ರೇಷ್ಠ ಮಾರ್ಗ. ಸಂಸಾರದಲ್ಲಿನ ಸುಖ ಕ್ಷಣಿಕವಾದದ್ದು. ಇಲ್ಲಿ ನೀನು ಹಗಲು ಇರುಳುಗಳನ್ನೂ ಗಮನಿಸದೆ ಎಷ್ಟು ಗಳಿಸಿದರೂ ಸಕಲವನ್ನು ಬಿಟ್ಟು ಹೋಗುವೆ. ನಾನತ್ವವನ್ನು ಬಿಟ್ಟು ಮೊದಲು ನೀನು ಯಾರು? ಎಂಬ ಸತ್ಯವನ್ನು ಮೊದಲು ತಿಳಿ. ಸಕಲ ಶಾಸ್ತ್ರಗಳನ್ನು ತಿಳಿದು ಆಚರಿಸುವಲ್ಲಿ ನಿನ್ನ ಜೀವಿತವೇ ಮುಗಿದುಹೋಗುತ್ತದೆ. ಇದು ಕಷ್ಟದ ಕೆಲಸ. ಸುರಗಿರೀಶನ ಮನದಿ ಭಜಿಪುದೇ ಸುಲಭ ಮಾರ್ಗವೆಂದು ದಾಸರು ತಮ್ಮ ನುಡಿಯಲ್ಲಿ ತಿಳಿಸಿ ಹೇಳಿದ್ದಾರೆ. ಇಲ್ಲಿ ನಾನು ನಾನು ಎಂದು ನಿನ್ನಧೀನವಾಗೆನೋ? ನಾನರಿಯೆ ನಿನ್ನ ನಿಜವ ಇಲ್ಲಿ ಆತ್ಮಜ್ಞಾನದ ಬಗ್ಗೆ ತಿಳಿಸಿರುತ್ತಾರೆ. ಆತ್ಮಜ್ಞಾನ ಪಡೆಯುವುದು ಹೇಗೆ? ಇದಕ್ಕೆ ನಿನ್ನ ಧ್ಯಾನ ಒಂದೇ ಮಾರ್ಗವೆಂದು ತಿಳಿಸುತ್ತಾ ನಿನ್ನನ್ನು ನೀನು ಮೊದಲು ತಿಳಿ ಎಂದು ತಿಳಿಸಿರುತ್ತಾರೆ.]

೧೭. ಸದಾಶಿವನ ಕೊಂಡಾಡೊ ಎಲೆ ಮನ

ಯಮುನ್ ಕಲ್ಯಾಣಿ **ಆದಿತಾಳ**

ಸದಾಶಿವನ ಕೊಂಡಾಡೊ ಎಲೆ ಮನ ॥ಪ॥

ಸದಾಶಿವನ ಬೇಡಿ ಸಾಧುಗಳೊಡನಾಡಿ
ಸದಾನಂದವನು ಕೂಡೋ ಎಲೆ ಮನ ॥೧॥

ಹಿಮಾಂಶು ಧರಹರ ಹಿಮಾದ್ರಿ ಜಾವರ
ಕಾಮಾರಿ ಕಾಲಹರನೆಂದು ಎಲೆ ಮನ ॥೨॥

ಮಂದಾಕಿನೀಧರ ಸಿಂಧೂರಸುಹರ
ನಂದೀವಾಹನ ಪರನೆಂದು ಎಲೆ ಮನ ॥೩॥

ಕಾಲಕಂಧರ ತ್ರಿಶೂಲ ಡಮರುಗ
ಜ್ವಾಲಾಧಿಧರಪರನೆಂದು ಎಲೆ ಮನ ॥೪॥

ಶಂಕರದುರಿತ ಭಯಂಕರ ನಿರತ ಶ್ರೀ
ವೆಂಕಟೇಶ್ವರ ಸುಖನೆಂದು ಎಲೆ ಮನ ॥೫॥

[**ಟಿಪ್ಪಣಿ:** ಇದೊಂದು ಈಶ್ವರನ ಮೇಲಿನ ದೇವರ ನಾಮ. ಅರಸೀಕೆರೆಯ ಮಧ್ಯಭಾಗದಲ್ಲಿರುವ ಶ್ರೀ ಭವಾನಿ ಶಂಕರ ದೇವಾಲಯದಲ್ಲಿ ದಾಸರು ಶಿವರಾತ್ರಿ ಸಮಯದಲ್ಲಿ ಹಾಡುತ್ತಿದ್ದ ಶಿವನ ಸ್ತೋತ್ರಗಳಲ್ಲಿ 'ಯಮನ್ ಕಲ್ಯಾಣಿ' ರಾಗದಲ್ಲಿನ ಸುಂದರ ಕೃತಿ ಇದೊಂದು. ಕಾಲಹರ, ಸದಾಶಿವ, ಸದಾನಂದ ಎಂದು ಶಿವನನ್ನು ಕೊಂಡಾಡಿದ್ದಾರೆ. ಇದರಲ್ಲಿ ಕಡೆಯ ಚರಣದಲ್ಲಿ ಅಂಕಿತ ಸುರಗಿರಿ ಇಲ್ಲವಾಗಿದೆ ಬದಲಾಗಿ ವೆಂಕಟೇಶ್ವರನ ಸಖ ಎಂದು ಬಂದಿರುತ್ತದೆ. ಈ ಹಾಡನ್ನು ತಿಮ್ಮಪ್ಪದಾಸರ ಕಡೆಯ ಮಗಳು ಮಹಾದೈವಭಕ್ತೆ ಭವಾನಮ್ಮ (ಅಮ್ಮಣ್ಣಮ್ಮ) ಈ ದೇವಾಲಯದಲ್ಲಿ ಇದು ನಮ್ಮ ತಂದೆ ರಚಿಸಿದ ಹಾಡು ಎಂದು ಹೇಳುತ್ತಿದ್ದರು.]

೧೮. ಇಂದಿರೆರಮಣ ಗೋವಿಂದ

ರಾಗ: ವಸಂತ

ಇಂದಿರೆರಮಣ ಗೋವಿಂದ ಮೂರುತಿಯ ।
ಹೊಂದಿದ ಭಜಕರಾನಂದ ಕೀರುತಿಯ ॥ಪ॥

ವಂದಿತಾಖಿಲ ಜಗಬೃಂದಚರಣ ಭವ
ಬಂಧಹರಣ ಹರ ಅರವಿದದಳಾಕ್ಷ ॥ಅ.ಪ॥

ಮಧುರೇಲಿ ಪುಟ್ಟ ಪಳ್ಳಿಗೆ ನಡೆತಂದೆ
ಒದೆಯೆ ಪೂತಣಿಯ ಅಸುವನು ಹೀರಿನಿಂದೆ
ಮುದದಿಂದ ಶಕಟನ ಮದವನು ಮುರಿದೆ
ಸದನದಿ ಗೋವಕ್ಕಳ ಒಡನಾಡಿ ನಲಿದೆ
ಅದನರಿ ತಂಗಿಯ ಹೊದಳದೆ
ಹೃದಯದಿ ನೆಲೆಸಿದ ಬುಧ ಜನಪ್ರಿಯ ॥೧॥

ರತಿಯಿಂದ ಗೋಪ ಸ್ತ್ರೀಯರೊಡನೊಡಗೂಡಿ
ಅತಿಶಯದಿಂದ ಅಕ್ರೂರಗೆ ದಯಮಾಡಿ
ಖತಿಯಿಂದ ಕಂಸನ ಶಿರ ಚಂಡಾಡಿ
ಹಿತದಿಂದಲುಗ್ರಸೇನಗೆ ದಯಮಾಡಿ
ಕ್ಷಿತಿಗಳನಳೆದಪ್ರತಿಮಹಮನೆ ಸ
ದ್ಗತಿಯ ಪಾಲಿಸುತ ಲಕ್ಷ್ಮೀಪತಿ ಕೇಶವನೆ ॥೨॥

ಧರೆಯೊಳಧಿಕ ವೇಲಾಪುರಿಯೊಳು ನೆಲೆಸಿ
ನಿರುತ ಸ್ತುತಿಸುವರಿಗೆ ಅಭಯವ ಸಲಿಸಿ
ಬರಿದು ಮಹಿಮೆಯನ್ನು ಶರಣರ್ಗೆ ತೋರಿ
ಸುರಗಿರಿ ಅರಸನ ಮಹಿಮೆಯ ಬೀರಿ
ಪರಮಪುರಷ ಕರಿವರದ ಭಕುತ
ಶರಣ ರಕ್ಷಕ ರಮೆಯ ಅರಸ ಚನ್ನಿಗನೆ ॥೩॥

[**ಟಿಪ್ಪಣಿ:** ಇದೊಂದು ದಾಸರು ಚಲುವ ಚನ್ನಿಗ ಕೇಶವನ ಸುಂದರ ಮೂರ್ತಿಯ ಮುಂದೆ ನಿಂತು ಹಾಡಿರುವ ವಸಂತರಾಗದಲ್ಲಿನ ದೇವರನಾಮ. ದರೆಯಲಧಿಕ ವೇದಾಪುರಿಯಲಿ ನೆಲೆಸಿರುವ ಸುಂದರ ಕೇಶವಮೂರ್ತಿಯನ್ನು ನೋಡುತ್ತಾ, ನೋಡುತ್ತಾ ಶ್ರೀಕೃಷ್ಣಾವತಾರದ ಕೃಷ್ಣ ಬಾಲಲೀಲೆಗಳು, ಗೋವುಗಳೊಡನಾಟ, ಪೂತಣಿಯ ಸಂಹಾರ, ಶಕಟನ ಮದವನು ಮುರಿದದ್ದು. ಎಲ್ಲವನ್ನು ಕೇಶವನಲ್ಲೇ ಕಾಣುತ್ತಾರೆ. ಮುಂದೆ ಗೋಪಿಕಾ ಸ್ತ್ರೀಯರಲ್ಲಿ ಆಟವಾಡಿ ದುರುಳ ಕಂಸನ ವಧೆ, ಉಗ್ರಸೇನಗೆ ಬಂದದ್ದು ಎಲ್ಲವನ್ನೂ ನೆನೆಯುತ್ತಾರೆ. ಭಕ್ತನ ಕಣ್ಣುಗಳಲ್ಲಿ ಕೇಶವ, ಮಾಧವ, ಎಲ್ಲರೂ ಒಂದೇ. ಸದ್ಗತಿಯ ಕರುಣಿಸು ಲಕ್ಷ್ಮೀಪತಿ ಕೇಶವ ಎಂದು ಬೇಡುತ್ತಾರೆ.

ಹೇ ಪ್ರಭೂ ಪರಮಪುರುಷ, ಕರಿವರದ, ಕರುಣಾನಿಧಿ, ಶರಣರಕ್ಷಕ ಎಂದು ಅರಸ ಚನ್ನಿಗನಲ್ಲಿ ಬೇಡಿಕೊಳ್ಳುತ್ತಾರೆ.]

೧೯. ಪೋಗಿ ಬರುವೆ ಗೋಪಾ

ಪೋಗಿ ಬರುವೆ ಗೋಪಾ ನಾಗವೇಣಿಯರ
ಚೆನ್ನಾಗಿ ಮಮತೆ ಪೂರ್ಣವಾಗಿರಲಿ ॥ಪ॥

ಜಾಗು ಮಾಡದೆ ಮುಂದೆ ವೇಗದಿಂದಲಿ ಎಮ್ಮ
ಸಾಗಿಸಿ ಪತಿಗಳ ಕೂಡೇ ಭೋಗಿಸೀ ತತ್ ಸೇವೆ ಮಾಡಲು
ಪೋಗುವುವು ಪಾಪವು ಗೆಲಲೆಲ್ಲವು ನೀಗುವುದು ಹೃದ್ರೋಗ
ಮಂಗಳವಾಗುವುದು ಲೇಸಾಗಿ ಹರುಷಿತರಾಗಿ ಕಳುಹಿರಿ ಈಗ ಮಧುರೆಗೆ ॥ಅ.ಪ॥

ಬಾಲಕ ತನದೀ ನಿಮ್ ಆಲಯವನೆ ಪೊಕ್ಕು
ಪಾಲು ಮೊಸಲು ಬೆಣ್ಣೆ ಕದ್ದು ಮೆದ್ದು
ಜಾಲದಿಂದಲಿ ನಿಮ್ಮ ಬಾಲರು ತಿಂದರೆಂದ ಹೇಳಿದೆ
ಅನೃತವಾಡಿನಾ ಬಾಳಿದೇ ಮೇಲಿಟ್ಟ ಭಾಂಡವ ಸೀಳಿದೇ ಮತಿಸು
ವಸು ಪಾತ್ರೆಯ ಕಾಲಲೊದ್ದು ಬೀಳ ಕೆಡರಿಂದೆನೆ ನವನೀತನು
ಮಾರ್ಜಾಲ, ಮಾರ್ಕಪಾಲು ಮಾಡಿದೆನೆ
ನೀವಿಟ್ಟ ಮೀಸಲ ಸೀಲದಂದಿ ಕೆನೆಪಾಲು ಕೆಡಿಸಿದೆನೆ
ಹೀಗುಚಿತವಲ್ಲೆಂದ ಹೇಳಿದರು ಕೇಳದೆಲೆ
ನಾನತಿ ಹೇಳೆನ್ನಯ ಬಲುಧಾಳಿ ಮಾಡಲು ತಾಳಿಯೆನ್ನನು
ಪಾಲಿಸಿದಿರಿ ಕೃಪಾಳುಗಳ ಗುಣ ಪೇಳಲೊಶವೇ ॥೧॥

ಹಿಂದಕ್ಕೆ ಒಂದಿನ ನಿಂದುಕೊಳಲದೇ ಸ್ತ್ರೀ ವೃಂದಾ
ಕೇಳುತಾ ಆನಂದದಿಂದಾ ಅಂದು ಬರುತಿರೆ ನಿಮ್ಮ
ಬಂಧುಗಳಲ್ಲೇ ನಿರ್ಬಂಧಿಸಿ ಬೇಡೆನಲಿವರು ನಿಂದಿಸಿ ಎನ್ನಲ್ಲಿ
ಮನಸಾ ಪೊಂದಿಸಿ ಬೆಳದಿಂಗಳೊಳ್ ತ್ವರದಿಂದ ಎನ್ನನು ಬಂದು ಕೂಡಿದರೇ
ರಾಸೋತ್ಸವಾದಿ ಧೀಂ ಧಿಮಿ ಧಿಮಿಕ್ಕೆಂದು ಆಡಿದಿರೆ ಕೀರ್ತಿ ಪರಗತಿಯಿಂದ
ಸುಖಕರದಿಂದ ಪಾಡಿದಿರೇ ಬಲ್ಪರಿಯಲಿ
ಎಮ್ಮಿಂದ ಬಂದಾ ಕಂದು ಸಂದಣಿ
ಒಂದನೆಣಿಸದೆ ಹೋದಿದಿರೇ ಇಂತೆಂದು ಶ್ರೀ ರಮಾಸುಂದರ
ವಿಠಲನು ಇಂದುಮುಖಿಯರಿಗಂದ ಮುದದೇ ॥೨॥

ಫುಲ್ಲಲೋಚನೆಯರಾ ನಿಮ್ಮೆಲ್ಲರ ಮನಸು ಎನ್ನಲ್ಲಿ
ಇಟ್ಟಿರುವುದಾ ಬಲ್ಲೆ ಕೇಳೀ ಇಲ್ಲಿ ನಿಮ್ಮನು ಬಿಟ್ಟು
ಎಲ್ಲು ಪೋಗುವ ಮನಸಿಲ್ಲದೇ ಕಾರ್ಯವೇ ಮುಖ್ಯವಲ್ಲದೇ
ಬರುವೆನು ಅಲ್ಲಿ ನಿಲ್ಲದೇ ಬ್ರಹ್ಮಾಂಡದೊಳಗಾವಲ್ಲಿ
ನೆನದರಲ್ಲಿ ನಾನಿರುವೇ ನಾನಿಲ್ಲದಾ ಸ್ಥಳವಿಲ್ಲ ಜಗದೊಳಗೆಲ್ಲ
ತುಂಬಿರುವೇ ಆದರಿಸಿ ಕರೆದವರಲ್ಲಿ ಅತಿ ತ್ವರದಲ್ಲಿ ಬರುತಿರುವೇ
ಈ ವಿಧದಿ ಪೇಳ್ವುದು ಸುಳ್ಳು ಮಾತುಗಳಲ್ಲಿ ಆಗಮದಲ್ಲಿ
ಪೇಳಿದ ಸೊಲ್ಲು ಎಂಬುದರಲ್ಲಿ ಸಂಶಯವಿಲ್ಲದಿರೆ
ನಾವೆಲ್ಲಿ ಸ್ಮರಿಸಿದರಲ್ಲಿಗೊದಗುವೆ ॥೩॥

೨೦. ಯಾಕೆ ಮೌನವ ತಾಳಿದೆ

ಯಾಕೆ ಮೌನವ ತಾಳಿದೆ ವೆಂಕಟರಾಯ
ಲೋಕವೆಲ್ಲವು ನಗದೇ ॥ಪ॥

ಸಾಕು ಬಿಡು ನಿನ್ನಖಿಲ ವಸ್ತುವ । ನೀ ಕಳೆದು
ಕೊಂಬುವರೆ ಬಹಳ ವಿವೇಕವಾಯಿತು ಜಗದೊಳಿರುತಿಹ
ಪ್ರಾಕೃತಗೀ ಪರಿಯಾಯಿತೀ ತರಹ ॥ಅ.ಪ.॥

ಲಲಿತ ರತ್ನಗಳಿಂದಲೇ ಮಸ್ತಕದಿಂ
ಪ್ರಜ್ವಲಿಪ ಕಿರೀಟವೆಲ್ಲ
ಲಲಿತ ಫಾಲದ ತಿಲಕ ಬಹು ಮಂಗಳದ
ಮುತ್ತಿನ ಬಾಸಿಂಗವು ಥಳಥಳಿಸಿ ಒಲಿದಾಡುತಿಹ
ಕುಂಡಲಗಳೆಲ್ಲ ಕಲುಶದೂರನೆ ॥೧॥

ಮೃದುತರ ದೇಹದೊಳು ರಾಜಿಪೊ
ಸುವರ್ಣದ ಕಂಚುಕವದೆಲ್ಲಿ
ಥಳ ಥಳಿಪ ಪದಕಗಳು ಏಕಾವಳಿಗಳೆಲ್ಲ
ಖರಚತುಷ್ಟೆಯುರದಿ ದಿವ್ಯಭೂಷಣ
ನವರತ್ನ ಭೂಷಣವಾ ॥೨॥

ಕಾಂಚನ ಮುಕ್ತ ಫಲದಿಂ ಮೆರೆಯುತಲೆ
ಮುದದಿ ಭೂಷಣ ಕಾಂಚನಾಂಬರ
ಅದರ ಮೇಲೆ ವಡ್ಯಾಣ ರಾಜಿಪ
ಪದಯುಗದ ಕಿರುಗೆಜ್ಜೆ ಪಾಡುಗ ಇದನು
ಯಾರಿಗೆ ಮುದದಿ ನೀಡಿದೆ ॥೩॥

೨೧. ಏನು ಚೋದ್ಯವೋ ಆಹಾ

ಏನು ಚೋದ್ಯವೋ ಆಹಾ...
ಏನು ವಿಚಿತ್ರವೋ ಇಲ್ಲಿ
ನೀನು ಇರಲು ನಿನ್ನ ಎಲ್ಲ ॥ಪ॥

ವಡವೆ ವಸ್ತುಗಳನು ಕಳ್ಳರೊಯ್ವರುಂಟೆ
ಬಿಡು ಎಲ್ಲ ಮಾತು ಇಲ್ಲ ನೀನು ॥ಅ.ಪ.॥

ಕೆಲವು ರಾಜರೊಯ್ದಿದರಿನ್ನು
ಕೆಲವು ಚೋರರೊಯ್ದಿದರಿನ್ನು
ಕೆಲವು ತಿಳಿಯದೆ ಹೋಯಿತಿನ್ನು
ಉಳಿದುದಯ್ಯಾ ನಿನ್ನ ಪ್ರತಿಮೆ ॥೧॥

ಪಾತಕಿಗಳು ಬಹಳವಾಗಿ
ರೀತಿ ನೀತಿಗಳನು ನೀಗಿ
ನೀತಿ ತಪ್ಪಿದ ಸಮಯದಿ
ನಾಥ ನೀನೆ ತೆರಳಬಹುದು ॥೨॥

ಹರವಿರಂಚಿ ಸಹಿತವಾಗಿ
ಗಿರಿಯು ರಮ್ಯವೆನುತ ನೆಲಸಿ
ಶೇಷಶೈಲ ಸುರಗಿರೀಶ
ವಾಸ ವೆಂಕಟೇಶ ಸಲಹೋ ॥೩॥

[**ಟಿಪ್ಪಣಿ:** ಯಾಕೆ ಮೌನವ ತಾಳಿದೆ ಮತ್ತು ಏನು ಚೋದ್ಯವೋ ಆಹಾ ಎಂಬ ಈ ಎರಡು ಕೀರ್ತನೆಗಳು ಹಿಂದೊಮ್ಮೆ ಅರಸೀಕೆರೆ ಮಾಲೇಕಲ್ಲು ತಿರುಪತಿ ದೇವಾಲಯದಲ್ಲಿ ಕಳ್ಳರು ದೇವರ ಒಡವೆಗಳನ್ನು ಕದ್ದ ಸಂಗತಿ ದಾಸರಿಗೆ ತಿಳಿದಾಗ ತಕ್ಷಣ ದಾಸರು, ತಮ್ಮ ಆರಾಧ್ಯ ದೇವರಾದ ತಿಮ್ಮಪ್ಪನ ಮುಂದೆ ನಿಂತು ರಚಿಸಿದ ಕೀರ್ತನೆಗಳು.]

೨೨. ಕೆಂಚರಾಯ ರಕ್ಷಿಸೋ

ಕೆಂಚರಾಯ ರಕ್ಷಿಸೋ ಕಾರುಣ್ಯದೀ
ಸಂಚಿತ ಫಲದಾಯಕಾ ॥ಪ॥

ಎಡದಡಿ ಹಿಂದಕ್ಕೆ ಬಿಡದಿಗೆ ಆ ಕ್ಷಣ
ಅಡಿಯ ಹಿಂದಕೆ ಇಡಲು ಕಡಲುಗಳ
ದಡ ದಡ ಹಿರಿದುಕ್ಕಲು ಹುಬ್ಬುಗಳ ಹಾರಿ
ಕುಡಿ ಮೀಸೆ ಕುಣಿದಾಡಲು ಕಡೆಗೆ ದಾನವರು ॥೧॥

ಗಡಗಡನೆ ನಡುಗುತ್ತ ಓಡಲು
ಕಡುಗದಲಿ ಶೋಣಿತವು ಸೋರಲು
ಕಡಿಕಡಿದು ರಿಪುಬಲವ ದುಡು
ದುಡು ಧೋಂ ಧುಡುಕೆನುತ ಬರುತಿರೆ ॥೨॥

ಅಂಗವಂಗ ಕಳಿಂದ ದೇಶಗಳಿಂದ
ಹಿಂಗದೆ ಪರುಸೆ ಬಂದು ನಿನ್ನಯ ಪಾ
ದಂಗಳಿಗೊಂದಿಸೆಂದು ಶೃಂಗರವೆಂದು
ಸಂಗರ ಧೀರನೆಂದ ರಂಗನುತ್ಸವದಿ ॥೩॥

ತುಂಗ ಬಾಳೇಹಣ್ಣು ತುಪ್ಪವ
ರಂಗ ಬೀದಿಗಳಲ್ಲಿ ಮಣಿಯದೆ
ಹಿಂಗದೇ ಗುಡಿಗುಡಿಸಿ ಭಕ್ಷಿಸುತಾ
(ಭಂಗವಿಲ್ಲದೆ) ನಗುನಗುತ ಬರುತಿಹ ॥೪॥

ತಿರುಪತಿ ಪುರವಾಸ ವರ ವೆಂಕಟೇಶನ
ಚರಣ ಕಮಲದಾಸ ಸುರಗಿರಿವಾಸ
ಗುರುವರ ರಾಮದಾಸಾ ಬರಲು ಆವೇಶ
ನಿರುತ ನಿನ್ನಯ ಚರಣ ಕಮಲದೊಳಿರಲು ॥೫॥

[**ಟಿಪ್ಪಣಿ:** ಮಾಲೇಕಲ್ಲು ತಿರುಪತಿ ದೇವಸ್ಥಾನದ ಮಹಾದ್ವಾರದ ಬಾಗಿಲಲ್ಲೇ ಇರುವ ಕೆಂಚರಾಯಸ್ವಾಮಿ ಮೂರ್ತಿ ಮುಂದೆ ನಿಂತು ಹಾಡಿರುವುದು ಈ ಸುಂದರ ದೇವರನಾಮ. ದಾಸರು ಶ್ರಾವಣಮಾಸ ಸಮಯದಲ್ಲಿ ಮೊದಲು ಕೆಂಚರಾಯನಿಗೆ ಪೂಜೆ ಸಲ್ಲಿಸಿ ನಂತರ ದೇವಸ್ಥಾನಕ್ಕೆ ಹೋಗುತ್ತಿದ್ದ ರೂಢಿ ಇತ್ತು. ಕೆಂಚರಾಯ ಈ ಕ್ಷೇತ್ರ ರಕ್ಷಕ ಶಕ್ತಿದೇವತೆ ಕೂಡಾ. ಇದನ್ನು ನೋಡುಗರಿಗೆ ಭಯವಾಗುವಂತಹ ರೂಪ ಎತ್ತರದ ಹುಬ್ಬುಗಳು ಕುಡಿಮೀಸೆ ಕೆಂಪು ಕಣ್ಣುಗಳು ಎಲ್ಲಾ ನಾಮಧಾರಿ ದಾಸಯ್ಯ ದೀಕ್ಷೆ ತೆಗೆದ ಭಕ್ತರುಗಳ ವಕ್ಕಲು ಇದು ಬಹಳ ಮಂದಿ ಇರುತ್ತಾರೆ. ಈ ದೇವರ ಆರ್ಭಟ ಬಹಳ ದೊಡ್ಡದು. ಒಮ್ಮೆ ಮೈಮೇಲೆ ಬಂದಿತೆಂದರೆ ಒಂದು ಗುಡಾಮ ಬಾಳೆಹಣ್ಣು ಆಹಾರ ಸಾಲದು. ಭಯಂಕರ ಆರ್ಭಟ ಬಾಳೆಹಣ್ಣು ತುಪ್ಪ, ಜೇನುತುಪ್ಪ ಗುಡಿ ಗುಡಿಸಿ ತಿನ್ನುವ ರೂಪ ನೋಡಬೇಕು. ಈ ಹಾಡಿನ ವರ್ಣನೆಯಲ್ಲಿ ಈ ವಿವರಗಳೆಲ್ಲ ಬಂದಿರುತ್ತದೆ.

ಕಡೆಯ ಚರಣದಲ್ಲಿ ತಿರುಪತಿ ಪುರವಾಸ ವರವೆಂಕಟೇಶನ ಭಕ್ತರಿಗೆ ಕೇಳಿದ ವರವ ನೀಡುವವ ಎಂದು ಕೆಂಚರಾಯಸ್ವಾಮಿಯನ್ನು ರಕ್ಷಿಸೋ ಎಂದು ಬೇಡಿಕೊಂಡಿದ್ದಾರೆ.]

೨೩. ಬಾರೋ ಬಾರೋ ಬಾಲಕೃಷ್ಣನೆ

ಶಂಕರಾಭರಣ **ತಾಳ: ರೂಪಕ**

ಬಾರೋ ಬಾರೋ ಬಾಲಕೃಷ್ಣನೆ ಹೇ ಭಕುತರೊಡೆಯ ॥ಪ॥

ಬಾರೋ ಬಾರೋ ನಿನ್ನ ಮುಖವ ತೋರೋ ತೋರೋ ಅಮೃತ ರಸವ
ಬೀರೊ ಬೀರೋ ಎನ್ನಮನದಿ ಸೇರೊ ಸೇರೊ ಧೀರನಾದ ಜಾರಚೋರ ॥ಅ.ಪ॥

ಬಟ್ಟ ಮುತ್ತಿನಹಾರ ಪದಕವು । ಬಾಹು ಪುರಿಯು ॥ ತೊಟ್ಟರತ್ನ
ಖಚಿತ ಕವಚವು ಪುಟ್ಟ ಪುಟ್ಟ ಪಾದಗಳಲಿ ಇಟ್ಟ ಪಾಡುಗ
ಗೆಜ್ಜೆ ಘಲ್ಗೆನೆ ದಟ್ಟಡಿಯನಿಡುತ ದಿವ್ಯ ನಾಟ್ಯವಾದುದೀಗ ಬೇಗ ॥೧॥

ಮಡದಿಯರಿಗೆ ತೋರದಂದದಿ ಚೋರತನದಿ ಉಡುಪಿಯಲ್ಲಿ
ನಿಂದು ನೆಲಸಿದೆ ಕಡವೆ ಕೋಲ ಕೈಲಿ ಪಿಡಿದು ತುಡುಗನಂತೆ
ನಿಲನು ನಿನ್ನ ಬಿಡುವಿನಲ್ಲಿ ಬುವಿಯೊಳೆಲ್ಲ ಹುಡುಕಿಕೊಂಡು ಬಂದೆ ತಂದೆ ॥೨॥

ಅಷ್ಟಮಠದ ಯತಿಗಳಿಂದಲಿ ಸತತವು ಸಂತುಷ್ಟಿಯಿಂದ
ಪೂಜೆಗೊಳುತಲಿ ಇಷ್ಟಭೋಜನದಲಿ ದ್ವಿಜರ ಸಂತುಷ್ಟಿಗೊಳಿಸಿ
ಭಕತರಿಂ ಗಭೀಷ್ಟವೀವ ಸುರಗಿರೀಶ ಪುಟ್ಟಬಾಲನಾದ ಶ್ರೀದ ॥೩॥

೨೪. ಮಾಯಕಾರ ಶ್ರೀಹರಿ

ಆದಿತಾಳ ಕಾನಡಾ ರಾಗ

ಮಾಯಕಾರ ಶ್ರೀಹರಿ । ಮಾನ ರಕ್ಷಿಸೈ ನಾರಿ ॥ ॥ಪ॥

ತೋಯಜಾಕ್ಷ ನಿನ್ನ ಸೇವಿ ಈ ಅವಸ್ಥೆಯೇ ಶೌರಿ ॥ ॥ಅ.ಪ॥

ಕರೆದರೆ ನಾನಿಲ್ಲಿ ಅರಿತೆ ನೀನೆಂತಲ್ಲಿ?
ಅರಹುಲೇಕೆನ್ನ ಮನದಿರವನು ನಿನ್ನಲ್ಲಿ ॥೧॥

ಬೀತಿಹ ತರುಶುಕ । ಜಾತಕೆ ಪೆಣ್ಗಳ
ನೋಡು ನೀಡುವುದುಂಟೆ । ಯೀ ತೆರವೆಮ್ಮಬಾಳು ॥೨॥

ಪೊಡವಿಯ ದೇವಗೀಗ । ನುಡಿಯಂತೆ ಅನ್ನವ
ಕೊಡದಿರೆ ಶಾಪದಿ ಸುಡುದಿಹರೇನಯ್ಯಾ? ॥೩॥

ಹರನಂತೆ ಶಿಷ್ಯರವೆರಸಿ ದೂರ್ವಾಸನ
ಬರುವನಕ್ಷಪಾತ್ರೆ । ಬರಿದಾಯಿತೀದಿನ ॥೪॥

ಸುರಗಿರಿವಾಸ ಭೂ ಸುರವನ್ನು ಸಂತೈಸೋ
ಶರಣಾಗತರನಾ । ದರಿಸಿದ ದೇವನೇ ॥೫॥

೨೫. ಏನಿದು! ಏನಿದು! ಈ ಆಶ್ಚರ್ಯ

ಶಂಕರಾಭರಣ **ತಾಳ: ರೂಪಕ**

ಏನಿದು! ಏನಿದು! ಈ ಆಶ್ಚರ್ಯ ॥ಪ॥

ಊಟಕಿಕ್ಕಿದರಾರೋ? ಉಂಡ ಜ್ಞಾಪಕವಿಲ್ಲ ।
ಸಾಟಿಯಿಲ್ಲವು ಇಂದಿನೂಟಕೆ ಹರಿಬಲ್ಲ ॥೧॥

ಒಡಲೊಳಗೆ ತುಂಬಿದೆ । ಹೆಡಿಗೆ ಹೆಡಿಗೆ ಭಕ್ಷ್ಯ
ಕಡಬು ಹೋಳಿಗೆ ಆರಿ । ವೊಡೆಗಳ ವಾಸನೆ ॥೨॥

ಭಕ್ಷ್ಯಭೋಜ್ಯ ಲೇಹ್ಯ । ಚೋಹ್ಯ ಪಾನೀಯಗಳ್ ।
ಕುಕ್ಷಿಯೊಳ್ತುಂಬುತಪೇಕ್ಷೆಯಿಂದಿಗೆ ಇಲ್ಲ ॥೩॥

ತಡೆಯಲಾರೆವು ಈ । ಒಡಲಿನುಬ್ಬಸವನು
ಇಡಿದೀಗ ಶುಂಠಿಯ ಪುಡಿಯ ನೀಡುವರಿಲ್ಲ ॥೪॥

ಏಳಬೇಕೆಂದರೆ । ಕೋಲ ಕೊಡುವರಿಲ್ಲ
ಪಾಲಿಸು ಸುರಗಿರಿ । ಲೋಲ ನೀ ಕೈಕೊಟ್ಟು ॥೫॥

(ಹೊಸಕೆರೆ ಚಿದಂಬರಯ್ಯನವರ
"ಭಾಗವತದ ಕೆಲವು ಕಥೆಗಳು" ಗ್ರಂಥದಿಂದ ಆರಿಸಿದೆ.)

೨೬. ನಿನ್ನ ನೋಡಿ ನಾ ಧನ್ಯನಾದೆ

ಶಂಕರಾಭರಣ **ತಾಳ: ರೂಪಕ**

ನಿನ್ನ ನೋಡಿ ನಾ ಧನ್ಯನಾದೆ । ಪನ್ನಗೇಂದ್ರ ಶಯನಾ ॥ಪ॥

ಸನ್ನುತಾಂಗ ಪಾ । ವನ್ನಚರಿತ ಗುಣ ।
ರನ್ನ ಪರಾತ್ಪರ । ಚಿನ್ಮಯ ಮೂರುತಿ ॥ಅ.ಪ॥

ಮಂದರಗಿರಿಧರ ಮಧುಮುರದೈತ್ಯವಿದಾರ । ಶೂರ ।
ಇಂದಿರೇಶ ಯೋಂಗೀಂದ್ರ ಹೃದಯ ಸಂಚಾರ । ಧೀರ ।
ತಂದೆತಾಯಿಗುರು ಬಂಧು ಬಳಗ ನೀ
ನೆಂದು ನಂಬಿದೆನೊ ಸಿಂಧುಶಯನ । ಹರಿ । ॥೧॥

ದೇವದೇವ । ಯದುಕುಲ ಕಲಾಶಾಂಬುಧಿ ಸೋಮಾ । ರಾಮಾ
ಪಾವನಾಂಗ ಫಣಿರಾದಶಯನ ಜಿತಕಾಮಾ । ಭೀಮಾ।
ಮೂವರ ನಿನ್ನಡಿದಾವರೆಗಳ ಬಿಡ
ದಾವಾಗಲು ಭಭೆಸುವದಕಿದೇ ಫಲ ॥೨॥

ರಂಗನಾಯಕ, ರಥಾಂಗಹಸ್ತ ಜಗದೀಶಾ । ಶ್ರೀಶ ।
ಪುಂಗವ, ಕೀರ್ತಿತರಂಗ ಸುರಾಚತಲವಾಸಾ ಈಶಾ
ಅಂಗಜಪಿತ ಭವಭಂಗ ಸತ್ಕೃಪಾ
ಪಾಂಗದೊಳೀಕ್ಷಿಸಿ ಮಂಗವವೀವನೆ ॥೩॥

(ಹೊಸಕೆರೆ ಚಿದಂಬರಯ್ಯನವರ
"ಭಾಗವತದ ಕೆಲವು ಕಥೆಗಳು" ಗ್ರಂಥದಿಂದ ಆರಿಸಿದೆ.)

೨೭. ದೀನಬಂಧು । ದೀನಬಂಧು ।

ದೀನಬಂಧು । ದೀನಬಂಧು । ॥ಪ॥
ದೀನಬಂಧು ನೀನೇ ಗತಿ । ಎಂದು ನಂಬಿದೆನೊ ।
ಎಂದು ಸಲಹೋ ಗೋವಿಂದ ಮುನಿವಂದ್ಯ । ॥ಅ.ಪ.॥

ಕೃಷ್ಣಕೇಶವಾ ಕಾಳಿಂಗಮರ್ದನ
ದುಷ್ಟಕುಲಾಂತಕ ಧರಣೀಪಾಲಕ
ಕಷ್ಟ ಕಲುಷಹರ ಕಮಲಾಮನೋಹರ
ಸೃಷ್ಟಿಗೊಡೆಯ ಪರಮೇಷ್ಠಿವಂದ್ಯ । ಹರಿ ॥೧॥

ಯಾದವರಾಯಾ ರಾಧಾಪ್ರಿಯ
ಬಾಧೆಯ ಪರಿಹಾರವ ಮಾಡಿಜನಯ್ಯಾ
ನೀದಯ ಮಾಡ್ಯೆ ನಿರ್ದಯವೇಕೈ
ವೇದವೇದ್ಯನೆ ವರದನಾಯಕನೆ ॥೨॥

ಅಂಗಜಜನಕಾ ಯದುಕುಲತಿಲಕ
ಭಂಗವೇಕೆನಗೆ ಭಕ್ತಾಧೀನ
ಸಂಗರಶೂರ ಶುಭಶೃಂಗಾರ
ದೀನೋದ್ಧಾರ ಬಲು ಹಮ್ಮೀರ ॥೩॥

ಕರಿರಾಜನ ಕರುಣದಿ ರಕ್ಷಿಸಿದೆ
ದುರುಳ ಕಂಸನ ನೀ ಶಿಕ್ಷಿಸಿದೆ
ಕರೆಯ ಬಂದು ಪ್ರಹ್ಲಾದನ ಪೊರೆದೆ
ತರಳಗೊಳಿದು ಸುಸ್ಥಿರಪದವಿತ್ತೆ ॥೪॥

ನಾರಾಯಣ ನಮೋ ನರಹರಿ ನಮೋ ನಮೋ
ಶ್ರೀರಾಮನೆ ನಮೋ ಸಿರಿಯರಸನೆ ನಮೋ
ನಾರದನುತನಗಧಾರಿಯೆ ನಮೋ ನಮೋ
ಮಾರಮಣನೆ ಮೈದೋರಿ ರಕ್ಷಿಸೈ ॥೫॥

ಭೂರಿ ಹಸಿವೆಯಿಂ ಸಾರುವರನ್ನವ
ತಾರೆನಲಿಕ್ಕದೆ ದಾರಿದ್ರದಿ ಬಲು
ಘೋರನರಕವನು ಸೇರುವ ಯೆಮ್ಮನು
ಪಾರುಗಾಣಿಸೈ ಮಾರಯಣನೆ ಯದು ॥೬॥

ವೀರ, ಭಕ್ತಮಂದಾರ ಸಿಂಧು ಗಂ
ಭೀರ ದಯಾಪರ ಯಾರಿಲ್ಲವೊ ಗತಿ
ಶೌರಿಯೆ ತವಕದಿ ತೋರು ನಿನ್ನ ಪದ
ಸಾರಸವನು ದಯೆದೋರಿ ದುರಿತಾರಿ
ಧೀರನೆ ಸುರಗಿರಿಯೇರಿದ ಮಹಿಮನೆ
ಬಾರೌ ದಯೆದೋರೈ ॥೭॥

(ಹೊಸಕೆರೆ ಚಿದಂಬರಯ್ಯನವರ
"ಭಾಗವತದ ಕೆಲವು ಕಥೆಗಳು" ಗ್ರಂಥದಿಂದ ಆರಿಸಿದೆ.)

೨೮. ಕೆಡಿಸದಿರೀ ಮನುಜ ಶರೀರವ

ಕೆಡಿಸದಿರೀ ಮನುಷ ಶರೀರವ
ಮೃಡನದಿಪಿಡಿಯುತ ಸಡಗರ ಪಡುತಲಿ ॥ಪ॥

ಇಂದು ಶೇಖರನನಿಂದು ಧ್ಯಾನಿಸಿರಿ
ಮಂದಾಕಿನಿಧರ ಬಂದು ಸಲಹುವ
ಅಂಧಕದನುಜನ ಕೊಂದ ತೆರದಿ ನಿ
ಮ್ಮಂಧಕಾರವನು ಹರಿದೋಡಿಸುವನು ॥೧॥

ಅತಿದುರ್ಲಭವಿದು ಮತಿಯೊಳು ತಿಳಿಯಿರಿ
ಸತತ ಮುನ್ನ ಮೇಲ್ ಸುದತಿಯ ಪಡುತಲಿ
ಜೊತೆ ಜೋಡಿನ ಹಂಬನ ನೀವೆಣಿಸಿದೆ
ಗತಿದಾಯಕ ಹರಿಪದವ ಭಜಿಸುತಲಿ ॥೨॥

ಗಳಿಸಿರಿ ಧರ್ಮವ ನಾಳೆಯಲಿ ಮನ ಮಾಡದೆ
ಗಳಿಗೆ ಪೋದಮೇಲೆ ಅದು ತಾ ಬಾರದು
ಜಯರಕ್ಷಕ ಶ್ರೀ ಸುರಗಿರೀಶನ
ಒಳಹೊರಗೆ ನೀ ಕಾಯೋ ಹರನಿರಲು ॥೩॥

(ಹೊಸಕೆರೆ ಚಿದಂಬರಯ್ಯನವರ
"ಭಾಗವತದ ಕೆಲವು ಕಥೆಗಳು" ಗ್ರಂಥದಿಂದ ಆರಿಸಿದೆ.)

೨೯. ಗೌರೀಪತೇ ಶಂಭೋ

ರಾಗ: ಸುರಟಿ

ಗೌರೀಪತೇ ಶಂಭೋ ॥ಪ॥

ಕಾಲಕಾಲ ವ್ಯಾಳಕೃತ್ತಿ
ಚೇಲ ಸುಜನಪಾಲ ಕೃಪಾ
ಪಾಲ ಕೈಲಾಸನಾಥ
ಪಾಲಯಮಾಂ ವಿಮಲಶೀಲ ॥೧॥

ಅಕ್ಷಿವಿಜಿತ ಮದನ ಸಂ
ರಕ್ಷಿತಾಮರೇಶಧನಾ
ಧ್ಯಕ್ಷ ಸಖಮಹೋಕ್ಷ ತುರಗ
ಪಕ್ಷಿವಾಹನವರ ಮಹೇಶ ॥೨॥

ವೀರವರ ಮನೋಜ್ಞರೂಪ
ವಾರಿಜಾಸನಾದಿವಂದ್ಯ
ಧೀರ ರಜತ ಶೈಲವಾಸ
ಸೂರಿಜಾತ ಪಾರಿಜಾತ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೦. ಸುಂದರಕರ ಕರುಣಾಕರ

ರಾಗ: ಕಮಾಚ್ (ಪಂತುವರಾಳಿ) ತಾಳ: ರೂಪಕ

ಸುಂದರಕರ ಕರುಣಾಕರ । ಮಂದರಗಿರಿಧರಣ ಸದಾ
ನಂದ ಸಕಲ ಸುಜನಾವನ । ಕುಂದರದನ ಕಮಲನಯನ ।

ವಾಸವನುತ ಪರಮೇಶ್ವರ । ದೋಷರಹಿತ ಪೊರೆ ಸಂತತ
ಶೇಷಶಯನ ಪುರುಷೋತ್ತಮ । ವಾಸುದೇವ ವರಗುಣಯುತ

ತೋರಿಸು ನಿನ್ನಯ ಪದವನು । ಸೇರಿಸು ನಮಗತಿಮುದವನು
ಭಾರವನಿಳಿಸೀ ಧರಣಿಯ । ಧೀರನೆ ಸುರಶೈಲೇಶ್ವರ

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೧. ಶ್ರೀರಾಮಂ ಭಜೆ

ರಾಗ: ಜಂಜೂಟಿ ತಾಳ: ಆದಿ

ಶ್ರೀರಾಮಂ ಭಜೆ । ರಘುರಾಮಂ ಭಜೇ । ಭಜರೇ ಮಾನಸ ರಾಮಂ ॥ಪ॥

ಸುಂದರ ರೂಪಂ । ಸುಗುಣ ಕಲಾಪಂ । ಬೃಂದಾರಕ ಪರಿಪಾಲಂ ।
ಚಂದನ ಚರ್ಚಿತ । ಚಾರುಶರೀರಂ । ಬಂಧುರ ದುರಿತ ವಿದಾರಂ ॥೧॥

ಕರಧೃತ ಚಾಪಂ । ಕಮನೀಯ ರೂಪಂ । ಖರಮುಖ ದೈತ್ಯ ವಿದಾರಂ ।
ನರ ವರಂ ವೇಷಂ । ನತಜನಪೋಷಂ । ಪರಮಾನಂದ ವಿಲಾಸಂ ॥೨॥

ಧರಣೀ ಲೋಲಂ । ಧರಣೀ ಪಾಲಂ । ನಿರುಪಮ ನಿತ್ಯ ನಿರಾಕಾರಂ ।
ಸುರಗಿರಿ ನಿಲಯಂ । ಸುಮನಸಗೇಯಂ । ಸಿರಿವರ ವೇಂಕಟ ರೂಪಂ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೨. ರಾಮ ಪಾಲಯ

ಛಾಯಾ ಆದಿತಾಳ

ರಾಮ ಪಾಲಯ । ಶ್ರೀರಾಮ ಸದಯಾ ॥ಪಲ್ಲವಿ॥

ದಶರಥ ಬಾಲ । ದಶಮುಖ ಕಾಲಾ
ಕುಶಿಕ ತನಯ ಮುಖ । ಪಾಲ ಸುಕಲಾ ॥೧॥

ಕರಧೃತ ಚಾಪ । ಕಮನೀಯ ರೂಪಾ ।
ಪರಿವೃತಪುರಹರ ಚಾಪ । ಸುಪಾ ॥೨॥

ಸುರಗಿರಿವಾಸಾ । ಸುರಗಣ ಪೋಷಾ ।
ಪರಮ ಪಾವನ ವೇಂಕಟೇಶ । ಸರಸಾ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೩. ಕಾಲ ಕಾಲ ವ್ಯಾಳ ಕೃತ್ತಿ

ಕಾಲ ಕಾಲ ವ್ಯಾಳ ಕೃತ್ತಿ । ಚೇಲ ಸುಜನ ಪಾಲ ಕೃಪಾಪಾಲ ।
ಕೈಲಾಸನಾಥ । ಪಾಲಯಮ ವಿಮಶೀಲ ॥೧॥

ಅಕ್ಷಿ ವಿತತಮದನ ಸಂ । ರಕ್ಷಿತಾಮರೇಶಧನಾ । ಧ್ಯಕ್ಷ
ಸುಖ ಮಹೋಕ್ಷ ತುರಗ । ಪಕ್ಷಿವಾಹನವರ ಮಹೇಶ ॥೨॥

ವೀರವರ ಮನೋಜ್ಞ ರೂಪ । ವಾರಿಜಾಸನಾದಿ ವಂದ್ಯ ।
ಧೀರ ರಚನ ಶೈಲವಾಸ । ಸೂರಿಜಾತ ಪಾರಿಜಾತ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೪. ರಾಮ ರಾಕೇಂದು ಸುಂದರಾ

ರಾಗ: ಶಂಕರಾಭರಣ **ರೂಪಕ**

ರಾಮ ರಾಕೇಂದು ಸುಂದರಾ । ಶ್ರೀ ರಮಾರಮಣ ॥ಪ॥

ರಾಮ ರಾಕೇಂದು ಸುಂದರಾ । ರಾಜಶೇಖರ ನಳಿನ ನಯನ ।
ರಾಜಸೇವ್ಯ ಚರಣಯುಗಳ । ರಾಜಮನುಜ ರಾಜತೇಜ ॥ಅ.ಪ॥

ನಿನ್ನ ದರ್ಶನವನ್ನು ಬಯಸುತಾ । ಪಗಲಿರುಳು ನಾನು ।
ನಿನ್ನ ನಾಮಗಳನು ಪಾಡುತಾ । ಮುನ್ನಗೈದ ಸುಕೃತ ಫಲಗ ।
ಳಿನ್ನು ಸಫಲವಾಯಿತೆಂದು । ಧನ್ಯನಾದೆ ತವಪದಾಬ್ಜ ।
ವನ್ನು ನೋಡಿಂ ಪರಮ ಪುರುಷ ॥೧॥

ಧರೆಯ ಭಾರವನಿಳುಹಲೋಸುಗ ।
ನೀ ಮನುಜನಾಗಿ । ಬರುವನೆಂದು ಕಾಯ್ದುಂದೆನಾ ।
ದೊರಕಿತೆಂದು ಪರಮಭಾಗ್ಯ । ವರದೆ ಶೃತಿ ಸಮೂಹವನಿಶ ।
ವರಿಸಿ ಕಾಣಲರಿಯದಮಳ । ಚರಿತ ನಿನ್ನ ಕಂಡೆನೀಗ ॥೨॥

ನಿತ್ಯ ತೃಪ್ತ ನಿಗಮಗೋಚರ । ನಿರ್ವಿಕಾರ । ಪ್ರತ್ಯ
ಗಾತ್ಮನೀ ಚರಾಚರ । ವಸ್ತುಗಳಲಿ ಬೆರೆದು ಚೇತನವಿತ್ತು ।
ತೋರಿ–ತೋರದಂತೆ ನಿತ್ಯ ಸಾಕ್ಷಿಯೆನಿಸಿ ।
ಜಗಕೆ ಕರ್ತೃವಾದ ಸುರಗಿರೀಶ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೫. ರಘು ವಂದನಂ ಪ್ರಪದ್ಯೇ

ರಾಗ: ಬೇಹಾಗ್ ಆದಿತಾಳ

ರಾಮ ಹರೇ ರಘುರಾಮಹರೇ ತವ ।
ನಾಮ ವದಾಮಿ ಸದಾ ನೃಹರೇ ॥ಪ॥

ಅಗಣಿತಗುಣಮಪ್ರಮೇಯ ಮಾದ್ಯಂ
ಸಕಲ ಜಗಸ್ಥಿತಿ ಸಂಯಮಾದಿಹೇತುಂ
ಉಪರಮಮಪರಂ ಪರಾತ್ಮಭೂತಂ
ಸತತಮಹಂ ರಘುನಂದನಂ ಪ್ರಪದ್ಯೆ ॥೧॥

ನಿರವಧೀಸುಖಮಿಂದಿರಾಕಟಾಕ್ಷ
ಕ್ಷಪಿತ ಸುರೇಂದ್ರ ಚತುರ ವಾದಿದುಃಖಂ
ನರವರಮನಿಶಾ ನತೋಽಸ್ಮಿ ರಾಮಂ
ವರದಮಹಂ ಶಿರಚಾಪ ಬಾಣಪಾಣಿಂ ॥೨॥

ತ್ರಿಭುವನ ಕಮನೀಯ ರೂಪಮಾಧ್ಯಂ ।
ರವಿಶತಭಾಸುರಮೀಪ್ಸಿತ ಪ್ರದಾನಂ ।
ಸುಶರಣಮನಿಶಂ ಸುರಾಗ್ರಮೂಲೇ
ಕೃತನಿಲಯಂ ರಘುನಂದನಂ ಪ್ರಪದ್ಯೇ ॥೩॥

(ಶ್ರೀಮದ್ರಾಮಾಯಣಕಥಾಸಂಗ್ರಹ
ಕೀರ್ತನ ಗ್ರಂಥದಿಂದ)

೩೬. ಕೃಷ್ಣನಿಗೆ ಆರತಿ

ಆರತಿ ಬೆಳಗಿರೇ ವಾರಿಜನಾಭಗೆ
ನಾರೀ ಮಣಿಯರೆಲ್ಲರು ॥ಪ॥

ಪರಮಪುರುಷನಿಗೆ ಕರುಣಾಸಾಗರನಿಗೆ
ಪರಿಪರಿಯಲಿ ನಿಂದಗೇ
ದುರುಳರಕ್ಕಸರನ್ನು ಮಡಹಿದ ಧೀರಗೆ
ಕಡಲಶಯನನಿಗೇ ಕಡಲಕಡೆದಾತಗೇ
ಮಂದರಪರ್ವತವನು ವಾಸುಕೀಲಿ ಸೆಳೆದಗೆ
ಶೇಷಶಯನನಾದ ಶ್ರೀವಾಸುದೇವ ವೆಂಕಟೇಶಗೇ ॥೧॥

ಇಂದಿರೆರಮಣಗೆ ಮಂಗಳಮಹಿಮೆಗೆ
ಮಂದರೋದ್ಧಾರನಿಗೇ
ವೇಣುಗೋಪಾಲಗೆ ಜಾನಕಿರಮಣಗೆ
ಪತಿತ ಪಾವನನಿಗೇ ಪದ್ಮನಾಭನಿಗೇ
ಮಧುರೆಯಲ್ಲಿ ಪುಟ್ಟಿ ಚತುರ ನಾಟ್ಯವಾಡಿದವಗೆ
ನಾರಿಯರ ಸೀರೆ ಸೆಳೆದು ಚೋರತನದಲಿ ಒಯ್ದ ಹರಿಗೇ ॥೨॥

ಕಸ್ತೂರಿ ತಿಲಕವ ಶಿಸ್ತಿನಿಂದಿಟ್ಟವಗೇ
ಶಂಖು ಚಕ್ರವ ಪಿಡಿದಿಹಗೇ
ಪೀತಾಂಬರಧಾರಿಯಾಗಿ ಕಂಠದೋಳ್ ತುಳಸಿಯ
ಹಾರವ ಹಾಕಿರುವೋ ಶ್ರೀಕೃಷ್ಣಗೇ
ಮೂರು ಲೋಕವನಾಳಿದ ಶ್ರೀಲಕ್ಷ್ಮೀವಲ್ಲಭಗೆ
ಪಕ್ಷಿವಾಹನ ಪಾಪನಾಶನ ಲಕ್ಷ್ಮೀ ನಾರಾಯಣಗೇ ॥೩॥

೩೭. ಕೃಷ್ಣ–ರುಕ್ಮಿಣಿಗೆ ಆರತಿ

ಮದನ ಗೋಪಾಲಗೇ ಮದಗಜಗಮನೆಗೇ
ಮಧುಕೈಟಭಾರೀ ದೇವೀ ವಿಧುಮುಖಿಗೇ
ಸದಯಾಂತರಂಗಗೇ ಸರಸಿಜನಾಭಗೇ
ಮದುಸೂದನಗೇ ಶ್ರೀಪದುಮದಳಾಕ್ಷಿಗೆ
ಪದಮಾದರುತೀಯಾ ಬೆಳಗೀರೇ ॥೧॥

ಕರಿರಾಜವರದಗೇ ಹರಿರಾಜಪೀಠಗೆ
ಪರಿಪೂರ್ಣಗಾತ್ರೆಗೇ ಪರದೇವೀಗೆ
ಸಿರಿಕೃಷ್ಣ ಮೂರುತೀಗೆ ತರಳಾಕ್ಷಿ ರುಕುಮಿಣಿಗೆ
ಕರುಣಾಕರಗೆ ಶ್ರೀ ವರಮಹಲಕ್ಷ್ಮೀದೇವೀಗೆ
ಸರಸಿಜದಾರತಿಯಾ ಬೆಳಗೀರೇ ॥೨॥

ಸುರಗಿರಿನಿಲಯಾಗೇ ಸುರವರ ವಂದ್ಯಗೇ
ನರಮೃಗ ರೂಪಗೆ ಹರಿ ಬೌದ್ಧಗೇ
ಹರಿಪುತ್ರ ಸಖಗೇ ಹರಿಶ್ಯಾಮವೇಣಿಗೆ
ಕರಿರಾಜ ಪೋಷ ಶ್ರೀ ಹರಿಣಾಂಕ ವದನಾಗೇ
ಸರಸಿಜದಾರತೀಯ ಬೆಳಗೀರೇ ॥೩॥

೩೮. ಕೆಲ್ಲಂಗೆರೆ ತಿಮ್ಮಪ್ಪದಾಸರು ರಚಿಸಿದ ಶಶಿರೇಖಾ ಪರಿಣಯ ಹರಿಕಥೆ

॥ ಆರ್ಯಾವೃತ್ತ ॥

ವಂದೇ ವಾರಣವದನಂ । ಸದನಂ ಸಂಪೂರ್ಣ ಸತ್ಕೃಪಾರಾಸೇ ॥
ಸುಂದರ ರಾಜಿತ ಮದನಂ ಪದನಮ್ರೀಭೂತ ಸುರಸಂಘಂ ॥

ಗಣಪತಿ ಸ್ತೋತ್ರ ॥ಶಂಕರಾಭರಣ॥ ॥ರೂಪಕತಾಳ॥
(ದನ್ಯನಾದೆ ನಾ ಉಡುಪಿ ಎಂಬಂತೆ)

ಕರಿವರಾಸ್ಯ॥ ಕರುಣಿಸೈ ಸದಾ। ಕರುಣಾಲವಾಲ ॥ಪ॥

ಹಲವು ಕಡೆಗೆ ಹರಿವ ಮನವ । ನಿಲಿಸಿ ವಿಘ್ನಕೋಟಿಗಳನು ॥
ಗೆಲಿದು ನಿತ್ಯೆ ಸೌಖ್ಯಪದವ । ಸುಲಭವಾಗಿ ಸೇರುವಂತೆ ॥೧॥

ಪರಮ ಪುರುಷ ನಿನ್ನ ಭಜಿಪ । ಶರಣರಿಂಗೆ ಮತ್ತೆ ಜನನ ।
ಮರಣವುಂಟೆ ಸತ್ಯ ಪರಾ । ಪರವ ನರಿವ ಚಿತ್ತವನ್ನು ॥೨॥

ಮೂರು ಗುಣಕೆ ಮೂಲವಾದ । ಕಾರಣವನು ತಿಳಿದು ಭಜಿಸಿ ॥
ಧೀರ ಸುರಗಿರೀಶನಲ್ಲಿ । ಸೇರುವಂತೆ ಸುಮತಿಯನ್ನು ॥ ॥೩॥

॥ಶಾರದಾ ಸ್ತುತಿ॥ ॥ಕಾನಡ॥ ॥ಆದಿತಾಳ॥
(ಕಮಲಾಂಬನಾ ಎಂಬಂತೆ)

ಪೊರೆಸಂತತ । ಪರಮೇಷ್ಠಿ ರಾಣಿ । ಕರುಣಾಕರಿ । ಪಾಹಿಶಂಕರಿ ॥ಪ॥

ಸುರಸಿದ್ಧಿ ಮೌನಿ। ವರಸೇವಿತಾಂಘ್ರಿ। ವಾರದಾಯಕಿ। ವಾಸುದೇವಜಾಯೆ ॥೧॥

ಶಂಖ ಚಕ್ರಧಾರಿ। ಕಿಂಕರಾರ್ತಿಹಾರಿ। ಪಂಕಜಾಲಯೇ। ವರದೇವಿಗೌರಿ ॥೨॥

ವಾರಿಜಾಕ್ಷಿ ವೀಣಾ। ಧರಿ ಸೇರ್ವೆನಿನ್ನ। ಸುರಶೈಲವಾ। ಸನ ತೋರಿಸಮ್ಮ ॥೩॥

॥ದೇವಿಸ್ತೋತ್ರ॥

ಬಿಭ್ರಾಣಾ ಶೂಲಬಾಣಾ ಸ್ವಭಯವರಗದಾ ಚಾಪಪಾನ್‌ಕರಾಗ್ರೈಃ ।
ಮೇಘ ಶ್ಯಾಮ ಕಿರೀಟೋಲ್ಲಸಿತ ಶಶಿಕಲಾಭೂಷಣಾಭೂಷಣಾಡ್ಯಾಃ
ಸಿಂಹಸ್ಕಂಧಾಧಿರೂಡಾ ಚತುಸೃಭಿರಸಿಭಿಃ ಖೇಟಕಾದ್ಯೈ ಶ್ಶುಭ್ರಾಡ್ಯಾಃ

॥ಶ್ಯಾಮಕಲ್ಯಾಣಿ॥ ಭವಾನಿ ಹಾಡು ॥ಆದಿತಾಳ॥

ಭಜಿಸಿ ಭಜಿಸಿ ಸುಖಿಯಾಗು । ಎಲೆ ಮನ॥
ತ್ರಿಜಗಜ್ಜದನಿ ಭವಾನಿಯ ॥ಪಲ್ಲವಿ॥

ಓಂಕಾರರೂಪಿಣಿ । ಕ್ಲೀಂಕಾರಿಣೀವರ ।
ಹ್ರೀಂಕಾರಿಯೆ । ಶುಭಕಾರಿಯೆ ॥೧॥

ತಾಪತ್ರಯದಲಿ। ತಾಪವನೊಂದದೆ ।
ಶ್ರೀ ಪರಮಾತ್ಮನ। ರೂಪವಾಗಿರುವಳ ॥೨॥

ಮೂರು ಗುಣದಿ ಜಗ । ಮೂರೆನಿಸುವ ಕಾರ್ಯ ।
ಮೂರನೆಸಗಿ ಮೂರ್ತಿ । ಮೂರಾಗಿರುವಳ ॥೩॥

ಅರಿದು ಮರದುತನ್ನ । ಸ್ಮರಿಸುವ ಭಕ್ತರ ।
ಪೊರೆದುದ್ಧರಿಸುವ । ಕರುಣಾಪೂರ್ಣೆಯ ॥೪॥

ಪರಮ ಪರಾತ್ಪರ । ಸುರಗಿರಿವಾಸನ ॥
ಬೆರದಾನಂದಿಪ । ಪರದೇವಿಯೆ ನೀ ॥೫॥

ಅರಿದು ಮರೆದಾಗೊಮ್ಮೆ ತನ್ನನು ।
ಸ್ಮರಿಸುತಿಹ ಮಾನವರ ಬಿಡದು
ದ್ಧರಿಪ ತ್ರಿಜಗನ್ಮಾತೆಯನು ಬಿಟ್ಟನ್ಯದೈವಗಳ ॥
ಮರೆಯಹೊಗಲುದ್ಧರಿಪರೇ ತಾ।

ಯ್ಗಿರುವ ಮಮತೆಯು ಸುತರಲಿನೊ
ಬ್ಬರಿಗೆ ನಿಜವಾಗಿಲ್ಲ ನಿಶ್ಚಯ ಲೋಕ ಸಮ್ಮತವು ॥ (ಭಾಮಿನಿ ಷಟ್ಪದಿ)

॥ಕಂದ॥ ಜೀವೇಶ್ವರ ಜಗದಾಕೃತಿ ।
ಯಾವಳ ದೆಸೆಯಿಂದಲಾದುದಾಕೆಯ ಪದವಂ॥
ಭಾವಿಸಲರಿಯದೆ ಸಾಕ್ಷಿಯ
ನಾವಾತನು ಕಾಂಬವಾಙ್ಮನಾತೀತನನು ॥

ಇಂತು ಶ್ರೀ ಜಗನ್ಮಾತೆಯಂ ಭಜಿಸುವರೇ ಕೃತಾರ್ಥರು

॥ಭಾಮಿನಿ॥ ಸುಮತಿ ಜನಮೇಜಯಗೆ ದೇವಿಯ ।
ವಿಮಲ ಚಾರಿತ್ರವನು ವ್ಯಾಸರು।
ಮಮತೆಯಲಿ ಪೇಳುತ್ತಲಿರಲಾನಂತ ಮಹಿಮೆಗಳ ।
ದ್ಯುಮಣಿಕುಲ ಸಂಭವ ಸುದರ್ಶನ ।
ಕಮಲವಾಸಿಯ ಮೂಲ ಮಂತ್ರವ
ಭ್ರಮಿಯಿಂದಲೆ ಜಪಿಸಿ ತತ್ವದ ಪಡೆದನೆಂದನಲೂ ॥

॥ಆರ್ಯವೃತ್ತ॥ ಅರುಹುದನಾರೆಂತವನಿಗೆ ।
ಸಿರಿದೇವಿಯು ಒಲಿದಳೆಂತಡೆಲ್ಲವ ನನಗೇ॥
ಧರೆಯೊಳು ಧೈರ್ಯದಿ ಕೇಳುವ ।
ಶರಣರ ಪಾಲಿಪುದೆ ಕಾರ್ಯ ಸಂತತ ನಿನಗೆ॥

ಕಥೆಯ ಪ್ರಾರಂಭ

॥ಆರ್ಯ॥ ಧರೆಯೊಳಯೋಧ್ಯಾಧಿಪ ಧೃಪಸಂಧಿಗೆ ತರುಣಿಯರಿಬ್ಬರು ಇರುತಿಹರಾ
ಹಿರಿಯಾಕೆ ಮನೋರಮೆ ಕಿರಿಯವಳೇ ವರಲೀಲಾವತಿಯೆಂಬುವಳು ॥

ಸತ್ಯದಿ ರಾಜ್ಯ ಪಾಲಿಸುತಿರಲಾ । ಪುತ್ರರಾದರವರೀರ್ವರಿಗೆ ॥
ಸತ್ಯಸುದರ್ಶನ ಹಿರಿಯಾಕೆ ಮಗ । ಶತ್ರುಜಿತುವು ಕಿರಿಯವಳಿಂಗೆ ॥೧॥

ಸುತರಗೈದು ವತ್ಸರವಾಗಿರೆ ಭೂ । ಪತಿಯೊಂದಿನ ಮೃಗಬೇಟೆಯಲಿ
ಹತನಾಗಿರೆ ಕೇಸರಿಯಿಂದದನಾ । ಸತಿಯರು ಕೇಳ್ದತಿ ದುಃಖದಲಿ ॥೨॥

ಗತಿಯಾವರೆಂದವರೀರ್ವರು ತಮ್ಮಯ । ಪಿತರನು ಕರೆಸಿದರಾಪುರಿಗೆ
ಕ್ಷಿತಿಯೊಳು ಕೇಕಯರಾಜ ಯುಧಾಜಿತು । ಅತಿ ಕ್ರೂರನು ಪಿತ ಕಿರಿಯಳಿಗೆ ॥೩॥

ಚಾರು ಕಳಿಂಗ ಸುದೇಶದೊಳುಬ್ಜನಿ । ವೀರಸೇನ ಹಿರಿಯಳ ಜನಕಾ ॥
ಮಾರುತವೇಗದೊಳೀರ್ವರು ಬರಲಾ । ನಾರಿಯರಿಗೆ ಪೆರ್ಚಿಕೆ ಶೋಕ ॥೪॥

ಸಂತೈಸಂತಲವರೀರ್ವರರು ಕರುಣದಿ । ತಂತಮ್ಮಯ ಬಾಲಕಿಯರನು
ಅಂತ್ಯೇಷ್ಟಿಯ ಸಾಂಗದಿ ನಡೆಸುತಲತಿ । ಸಂತುಷ್ಟಿ ಪಡಿಸಿ ವಿಪ್ರರನು ॥೫॥

ತ್ವರದಿಂದೀರ್ವರು ರಾಜಾಸ್ಥಾನದಿ । ತರಳರೊಡನೆ ಕುಳಿತಾವಾಗ ॥
ಕರೆಸಿದರಾ ಪುರಜನ ಪರಿ ಜನರನು । ವರಮಂತ್ರಿ ಪಸಾಯ್ತನಾಗ ॥೬॥

ಇಂತು ನಿಬಿಡೀಕೃತವಾಗಿರುವ ಸಭಾಮಧ್ಯದಲ್ಲಿ ಪಟ್ಟ ಮಹಿಷಿಯಾದ ಮನೋರಮಾ ದೇವಿಯ ಜನಕ ವೀರಸೇನನು ಸಭಾ ಜನರೋಳ್ ಪೇಳುತ್ತಾನೆ॥

॥ಕಂದ॥ ಹಿರಿಯಾಕೆಯ ಸುತನಾಗಿಯೆ ।
ಮೆರೆವ ಸುದರ್ಶನಗೆ ರಾಜ್ಯ ಪಟ್ಟವ ಮಾಳ್ಪುದು ॥
ಧರಣಿ ಕುಲೋಚಿತ ಧರ್ಮವು ।
ಹರುಷವೆ ನಿಮಗೆನೆ ತಥಾಸ್ತುವೆಂದರು ಸರ್ವರು ॥

ಇಂತೆನಲು ಅತ್ಯಂತ ಹೃತ್ತಾಪದಿಂ ಯುಧಾಜಿತು ಎದ್ದು ನಿಂತು ಪೇಳುತ್ತಾನೆ.

॥ಕಂದ॥ ವರ ಸುಗುಣ ಶೌರ್ಯಧೈರ್ಯೋ ।
ತ್ಕರುಷದಿ ಸುಕಲಾವಿಶೇಷ ಸಲ್ಲಕ್ಷಣದೋಳ್ ॥
ಪಿರಿದೆನ್ನಯ ದೌಹಿತ್ರನೆ ।
ಧರಣೀಶ್ವರನಿವನು ಮಂದಮತಿಯಾಗಿಹನು ॥

ಲೋಕದಲ್ಲಿ ವಯೋವೃದ್ಧನಿಗಿಂತಲೂ ಜ್ಞಾನವೃದ್ಧನೇ ಜ್ಯೇಷ್ಠನಾಗಿ ಇರುವುದರಿಂ ರಾಜ ಜ್ಯೇಷ್ಠ ಪತ್ನೀಪುತ್ರನಾದ ಮಾತ್ರಕ್ಕೇ ಈ ಮಂದಬುದ್ಧಿಯೂ ರಾಜ್ಯಾರ್ಹನೆಂದಿ

ಗಾದಾನು! ನನ್ನ ದೌಹಿತ್ರನಿಗೇ ರಾಜ್ಯಾಧಿಪತ್ಯವಾಗಬೇಕೆನಲು ಸಭಾಜನರು ಇಬ್ಬರಿಗೂ ಹೇಳಲಾರದೆ ಸುಮ್ಮನಿದ್ದರು. ಆಗ ದುಷ್ಟನಾದ ಯುಧಾಜಿತು ಕೋಪದಿಂದೆದ್ದು ಪೇಳುತ್ತಾನೆ.

॥ಲಾವಣಿ॥ ಯುದ್ಧದಲೀರ್ವರು ಕಾದಿನೋಡುವಾ। ಗೆದ್ದರೆ ಕಡಿಗೇಧಾರೆ।
ಸದ್ಯಃ ಫಲವಿದೆಯೆಂದು ಅರಿಯಬೇಕು । ಎದ್ದನಾಗ ಕರೆಕರೇ ॥೧॥

ಎಂದು ಪುರದ ಬಾಹ್ಯದಿ ಸೇನೆಯು ಸಹ। ದ್ವಂದ್ವ ಯುದ್ಧಗೈದರು।
ಅಂದು ಕೇಕೆಯ ಕಳಿಂಗಾಧೀಶರು। ನಿಂದು ಸತ್ವಕೋರ್ದರು ॥೨॥

ಕ್ರೂರ ಯುಧಾಜಿತು ಕೊಂದನು ರಣದಲಿ। ವೀರಸೇನ ನೃಪನನು।
ಭೇರಿಯ ಪೊಯಿಸುತ ನಿಜಸೇನೆಯು ಸಹ। ಊರೊಳಗೈತಂದನು ॥೩॥

ಕೇಳೀವಾರ್ತೆ ಮನೋರಮ ಚಿತ್ತದಿ । ಕಾಳಿದಳರೆ ಭೀತಿಯಾ ।
ಬಾಲಕನಿಗೆ ಮುಂದೇನರೆಯೆಂ । ದಾಲೋಚಿಸಿ ಮಂತ್ರಿಯ ॥೪॥

ಪಿತನಳಿದಲ್ಲಿಗೆ ಪೋಗುವೆನೆಂದಾ। ಪತಿಪೊರಟಳು ಮನೆಯನು
ಸುತನೊಡನೋರ್ವಳು ದಾಸಿಯು ಸಹಿತಾ । ಅತಿ ದುಃಖದಿರದವನು ॥೫॥

ಏರಿ ಬಂದು ಪಿತನುಕ್ತರ ಕಾರ್ಯವ । ರೇರಿಸುತಿತ್ವರ್ಯದಿ ।
ವಾರಣಾಸಿಯೊಳು ಸೋದರಮಾವನ । ಸೇರ್ವೆನೆಂದು ತ್ವರಿತದಿ । ॥೬॥

ಇಂತು ರಾಜ ಮಹಿಷಿಯಾದ ಮನೋರಮಾ ತನ್ನ ಪುತ್ರನಂ ಒಬ್ಬ ದಾಸಿಯಂ ಕೂಡಿ ಮೂವರು ಉಟ್ಟ ಬಟ್ಟೆಗಳಿಲ್ಲದೆ ಕಾರ್ಪಣ್ಯವನ್ನು ಹೊಂದಿ ಅತ್ಯಂತ ದುಃಖದಿಂದ ಬರುಬರುತ್ತಾ ಗಂಗಾ ನದಿಯಂ ದಾಟಿ। ಭರದ್ವಾಜರನ್ನು ಕಂಡು। ಧೈರ್ಯವನ್ನು ಬಿಡದೆ। ಆ ಋಷಿ ಶ್ರೇಷ್ಠರಿಗೆ ನಮಸ್ಕರಿಸಿ । ತಮ್ಮ ಪೂರ್ವವೃತ್ತಾಂತವನ್ನು ಹೇಳಲು। ಆ ಋಷಿವರ್ಯನತ್ಯಂತ ಕರುಣದಿಂ । ಮೂವರಂ ಮನ್ನಿಸಿ ನಿರ್ಭೀತರಾಗಿ ನಮ್ಮಾಶ್ರಮದಲ್ಲಿ ವಾಸ ಮಾಡಿರೆಂದು । ಅಭಯ ಪ್ರದಾನವಂ ಮಾಡಿ ಪೇಳುತ್ತಾರೆ॥

॥ಶ್ಲೋಕ॥ ಪಿತರಂ ಮಾತರಂ ಭ್ರಾತೃನ್
ಗುರೂನ್ ಸ್ವಜನ ಬಾಂಧವಾನ್
ಹಂತಿ ಲೋಭ ಸಮಾವಿಷ್ಟೋ ।
ಜನಾನಾತ್ರ ವಿಚಾರಣ ॥

ನಿರ್ಭಯಾ ವಸ ಕಲ್ಯಾಣೀ ಪುತ್ರಂ ಪಾಲಯ ಸುವ್ರತೇ ।
ನತೇ ಭಯಾ ವಿಶಾಲಾಕ್ಷೀ । ಕರ್ತವ್ಯಂ ಶತ್ರು ಸಂಭವಂ ॥೧॥

ವೃಥಾ ತೀರ್ಥಂ ವೃಥಾದಾನಂ ವೃಥಾಧ್ಯಯನಮೇವಚ ॥
ಲೋಭ ಮೋಹಾವೃತಾನಾಂತು । ಕೃತಂ ತನುಕೃತಂ ಭವೇತ್॥
ತಸ್ಮಾದೇವಂ ಮಹಾಭಾಗ ವಿಸರ್ಜಯ ಗೃಹಂ ಪ್ರತಿ।
ಸುಪುತ್ರಾಹಂ ವಸಿಷ್ಯಾಮಿ ಜಾನಕೀ ಸದ್ವಿಜೋತ್ತಮ ॥೨॥

ಲೋಭಮೋಹದಿಂದ ಕೂಡಿದವನು ತಂದೆ, ತಾಯಿ, ಅಣ್ಣ ತಮ್ಮಂದಿರು, ಗುರುಗಳು, ಸ್ವಜನರು ಬಂಧುಗಳನ್ನು, ಬಾಂಧವರನ್ನು ಪಾಪಕ್ಕೆ ಹೆದರದೆ ಕೊಲ್ಲುತ್ತಾರೆ, ಅಂತಹವರಿಗೆ ಯಾತ್ರೆ, ತೀರ್ಥ ಇವುಗಳೆಲ್ಲಾ ವ್ಯರ್ಥ. ನಮ್ಮಾಶ್ರಮದಲ್ಲಿ ನಿರ್ಭಯದಿಂದ ವಾಸ ಮಾಡಿರೆಂದು ಭರದ್ವಾಜ ಋಷಿಗಳು ರಾಣಿಯಾದ ಮನೋರಮೆಗೆ ಹೇಳಿದರು.

ಇನ್ನು ನನಗೆ ಸ್ವಲ್ಪವೂ ಭಯವಿಲ್ಲ, ಸೀತಾದೇವಿಯು ಮಹರ್ಷಿಗಳ ಆಶ್ರಮದಲ್ಲಿದ್ದಂತೆ ಇರುತ್ತೇನೆಂದು ರಾಜಪತ್ನಿಯಾದ ಮನೋರಮೆ ಭರದ್ವಾಜರ ಆಶ್ರಮದಲ್ಲಿ ನಿರ್ಭೀತಿಯಿಂದ ವಾಸ ಮಾಡುತ್ತಿದ್ದಳು.

ಇತ್ತ ಯುಧಾಜಿತುವು ತನ್ನ ಮೊಮ್ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜಕಾರ್ಯಗಳನ್ನು ನಡೆಸಲು ಮಂತ್ರಿಗಳಿಗಾಜ್ಞಾಪಿಸಿ । ತನ್ನ ಪಟ್ಟಣಕ್ಕೆ ಬಂದು । ಶತ್ರುವಾದ ಸುದರ್ಶನ ಮನೋರಮೆ ಎಲ್ಲಿರುವರೆಂದು ವಿಚಾರಿಸುತ್ತಿರುವಲ್ಲಿ । ಭರದ್ವಾಜರಾಶ್ರಮದಲ್ಲಿರುವರೆಂದು ತಿಳಿದು । ತನ್ನ ಸೇನಾ ಸಮೇತನಾಗಿ ಬಂದು ಋಷಿಗೆ ವಂದಿಸಿ ನಿಮ್ಮಲ್ಲಿರುವ ಮನೋರಮಾ, ಸುದರ್ಶನರನ್ನು ಕಳುಹಿಸಿ ಕೊಡಬೇಕೆನ್ನಲು–

ಕಂದ॥ ಶರಣಾಗತರಾಗಿ ಭಯದಿಂ ।
ಮರೆಹೊಕ್ಕಿಹರೆನ್ನನಿವರ ಬಿಡುವವನಲ್ಲಾ ॥
ತೆರಳೈ ಸುಮ್ಮನೆ ನಿನ್ನಯ ।
ಪುರಗೆನಲಾದುಷ್ಟನೆಂದ ನೆರೆಕೋಪದೊಳು ॥

॥ಅಸಾವೇರಿ॥ ॥ಆದಿತಾಳ॥

ಮುನಿವರ ಏನೆನುತಿದ್ದೀ । ನಿನಗೇತಕೀ ಶಠಬುದ್ಧೀ ॥
ಘನಸತ್ವವ ನೋಡೀಗಾ । ಇವರನು ನಾನೊಯ್ವೆನು ಬೇಗ ॥ಪ॥

ಎಂದೆನಲಾ ಋಷಿವರ್ಯಾ । ನಗು ತಂದು ಪೇಳ್ದನೆಲೆ ರಾಯಾ ॥
ಹಿಂದಿನ ಶುದ್ಧಿಯನರಿಯಂ । ನಾನಿಂದು ನೋಳ್ಪೆನ್ ನಿನ್ನ ಶೌರ್ಯಂ ॥೧॥

॥ಶ್ಲೋಕ॥ ನಯಸ್ವ ಯದಿ ಶಕ್ತಿಸೇಽ । ಬಲೇವಾದ್ಯ ಮಮಾಶ್ರಮಾತ್।
ವಿಶ್ವಾಮಿತ್ರೋಽಯಥಾಧೇನೂ । ವಶಿಷ್ಠಸ್ಯ ಮುನೇಃ ಪುರಾ॥

ಎಲೈ ರಾಜನೇ! ನಿನಗೆ ಶಕ್ತಿಯಿದ್ದರೆ ಇವರನ್ನು ಎಳೆದುಕೊಂಡು ಹೋಗು ನೋಡೋಣ ಎಂದಾಗ ವಶಿಷ್ಠರ ಆಶ್ರಮದ ಧೇನುವನ್ನು ವಿಶ್ವಾಮಿತ್ರನು ತೆಗೆದುಕೊಂಡು ಹೋದ ಹಾಗೆ ಆಗುವುದು ಎಚ್ಚರಿಕೆ! ಈ ಋಷಿಯ ವಾಕ್ಯವಂ ಕೇಳಿ ರಾಜನು ಮಂತ್ರಿಗಳೋಳ್ ಆಲೋಚಿಸಲು, ಮಹಾತ್ಮರ ಕೋಪಕ್ಕೆ ಪಾತ್ರನಾಗಬೇಡೆಂದು ಹೇಳಲು ಒಪ್ಪಿ ಋಷಿವರಂಗೆ ವಂದಿಸಿ ತನ್ನ ಪುರವಂ ಸೇರಿದನು. ಇತ್ತಲಾ ಸುದರ್ಶನನ ವೃತ್ತಾಂತವೇನೆಂದರೆ,

॥ಕಲ್ಯಾಣಿ॥ ॥ಛಾಪು ತಾಳ॥

ಆಲೀಸುನೃಪವರ್ಯಾ । ಜನಮೇಜಯ । ಪೇಳುವೆ ಸತ್ಕಥೆಯಂ ।
ಕಾಲಗತಿಯೊಳಿಂತು। ಕೀಳನೊಂದಿರುತಿಹ। ಬಾಲಕನ ಸಿರೀದೇವಿ
ಕರುಣದಿ । ಪಾಲಿಸಿದ ಪರಿಯನ್ನು ಪೇಳುವೆ॥ ॥ಪ॥

ತರಳನೈದನೆ ವರ್ಷದಿ। ಬಾಲಕರನ್ನು। ವರೆಸಿ ಆಡುವ...
ಬರಲೋರ್ವನನು ಕಾಣುತ । ಕ್ಲೀಬಾ ಎಂದು। ತರಳನು...
ಇರಲದ ಕೇಳುತ। ಚ್ಚರಿಯಿಂದ ಸಂತತ। ಮರಳಿ ಮರಳಿ ಕ್ಲೀಬ
ಕ್ಲೀಬ ಎಂದೆನ್ನುತ ॥ ಥರ ಥರದಿ ನರ್ತನವ ಮಾಡುತಲೇ॥
ಹಗಲಿರುಳು ಬಿಡದೆ। ಸ್ಮರಿಸಿ ಕ್ಲೀಬಕ್ಲೀಬ ಎನುತಲೆ। ಲಕ್ಷಣ
ವಿಹೀನದಿ । ತರಳನ ಜ್ಞಾನದಲಿ ದೇವಿಯ । ಪರಮ ಬೀಜಾಕ್ಷರವ
ಪಠಿಸಲು।ಹರುಷದಲಿ ವಾಕ್ಪ್ರದೆಮೇಧೆಯ।ಕರುಣಿಸಿ ಕಳೆದಳತ್ಯಧಿಕಜ್ಞಾನವ ॥೧॥

ದಿನದಿನ ಶುಕ್ಲ ಪಕ್ಷದಾ। ಚಂದ್ರಮನಂತೆ। ತನಯವೃದ್ಧಿಯಪೊಂದಿ
ದಾ। ಜನನಿಗಾನಂದವನು। ತೋರುತ ಮುನಿ। ಯನು ಸೇವಿಸುತಲಿ...
ಹನ್ನೆರ। ಡನೆಯ ವತ್ಸರದಿ ಬಾ । ಲಕನಿಗುಪನಯನವ।
ಮುನಿಗೈದು ಕರುಣದಿ॥ ಮನವಲಿದು ವರ ವೇದಶಾಸ್ತ್ರಗಳ ।
ಸದ್ಧರ್ಮ ತತ್ತ್ವ। ಧನುಶರಂಗಳ ಪಿಡಿವ ಮರ್ಮಗಳ । ದೇವೀ।
ಪ್ರಸ್ತಾವವ। ನನುಪಮಿತ ತನ್ಮಂತ್ರ ತಂತ್ರಗಳನಿತುವನು ಸಾಂಗದಲಿ
ಪೇಳುತ । ಅನಘನಾ ಚೌಷಷ್ಟಿವಿದ್ಯಗ ।ಳನು ಸರಾಗದಿ ಬೋಧೆಗೈದನು ॥೨॥

ಅಖಿಲವಿದ್ಯಗಳನ್ನು। ಸಂಗ್ರಹಿಸಿ ಬಾ। ಲಕ ಜಗನ್ಮಾತೆಯನು॥
ಭಕ್ತಿಯೊಳರ್ಚಿಪನು । ನಿರಂತರಾ। ಸಕಲೆಯ ಧ್ಯಾನಿಪನು ॥
ಅಕುಟುಂಬನಾಗಿ ನಿಸ್ಸಂಶಯದಲಿ ಪರಾ। ಶಕುತಿಯ ನಂಬಿ ಸದಾ
ನಂದನಾಗಿರೆ॥ ಸಕಲ ಜನ ಕೊಂಡಾಡುತಿಹರಿವನಾ। ಸದ್ಗುಣಗಳೆ
ಲ್ಲವು। ಪ್ರಕಟವಾಯಿತು ಪೇಳಲೇನದನ । ಇರಲಿರಲು ಒಂದಿನ ॥
ಲಕುಮಿತನ್ನಯ ಭಕ್ತ ವರದಾ। ಯಕಿ ಎನಿಸಿ ಪ್ರತ್ಯಕ್ಷವಾದಳು।
ನಿಖಿಲ ಮುನಿಗಣ ಪೊಗಳೆ ಸರ್ವಾ । ತ್ಮಕೆ ಸುರಾಚಲವಾಸನರಸಿಯು॥ ॥೩॥

॥ಭಾಮಿನಿ॥ ಪಸರಿಸಿದ ಮುಖ ಕಮಲ ಕಾಂತಿಗ।
ಳೆಸೆವ ಕಲ್ಲೋಲಿತ ಕಟಾಕ್ಷಗ
ಳೆಸಳುಗಂಗಳ ಕೋರಕಬರಿಯ ಲಲಿತ ಕಂಧರದ॥
ಹೊಸ ಹೊಗರಿನ ಮಿಗೆ ಜವ್ವನದ
ರಸುಮೆಗಳ ಜರೆವಂಗಲತೆ ರಾ॥
ಜಿಸುವ ಶೋಭಾಕರದ ರೂಪನು ಕೋರ್ದನೊಲವಿನಲೀ॥

॥ಕಂದ॥ ಸುರುಚಿರತರ ಭೂಷಣಗಳ್।
ಮೆರೆವ ಚತುರ್ಭುಜದಿ ಶಂಖಚಕ್ರಾಂಬುಜಗಳ್॥
ವರಗದೆಯಂ ಧರಿಸಿರುವಾ॥
ಶಿರಿದೇವಿಯ ಕಂಡನಾ ಸುದರ್ಶನನಾಗಳ್॥

ಇಂತು ದೇವಿಯಂ ಕಂಡು ಆನಂದದಿಂ ಸಾಷ್ಟಾಂಗ ವಂದನಾದಿಗಳಂಗೈದು, ಭಯಭಕ್ತಿಯುಕ್ತನಾಗಿ, ಗದ್ಗದಭಾವದಿಂದ ಸ್ತೋತ್ರವಂಗೈವನು ।

॥ಸಾವೇರಿ ರಾಗ॥ ॥ಆದಿತಾಳ॥

ಪಾಹಿಪಾಹಿಜಗದೀಶ್ವರಿ ಜಯ ಜಯ।
ಪಾಹಿಪಾಹಿ ನಾರಾಯಣಿ॥ ॥ಪ॥

ರಾಜರಾಜರಾಜೇಶ್ವರಿ ಜಯಜಯ ।
ರಾಜಘನೆ ಜಯದೇವತೆ ಜಯ ಜಯ॥

ಲೋಕಮಾತೆ ಲೋಕೇಶ್ವರಿ ಜಯ ಜಯ।
ಲೋಕರೂಪ ಲೋಕಾತ್ಮಿಕಿ ಜಯ ಜಯ॥

ಸೃಷ್ಟಿಸ್ಥಿತಿಲಯ ಕಾರಣಿ ಜಯ ಜಯ।
ಕಪಟ ಕಲುಷ ಭಯಹಾರಿಣಿ ಜಯ ಜಯ॥

(ಭಕ್ತಿ ಮುಕ್ತಿ ಸುಖದಾಯಕಿ) ತ್ರಿವಿಧ ಜಯ ಜಯ।
ಪರತರ ಪಾವನ ಚರಿತೆಯೆ ಜಯ ಜಯ॥

॥ಭಾಮಿನಿ॥ ಅಮಿತ ಶೋಭಾಕರೆ ನಿರಂಜನೆ ।
ಅಮಿತರೂಪಾನ್ವಿತೆ ನಿರಂಜನೆ ।
ಅಮಿತ ಮಹಿಮಾಪಟಲ ವಿಲಸತ್‌ರುಚಿರ ಸತ್ಯನುತೆ ॥
ದ್ಯುಮಣಿ ಕೋಟಿ ನಖದ್ರುತೇಶಮೆ ।
ದಮೆಯನುಷ್ಠಾನಾಧೀಕ್ಷಿತೆಯೆ ।
ನಮೋ ನಮೋ ನಾರಾಯಣೀಯೆನುತಿರ್ದ ಸುಕುಮಾರ ॥

ಇಂತು ತನ್ನಂ ಕೊಂಡಾಡುವ ಭಕ್ತಾಗ್ರಗಣ್ಯನಾದ ಪುಣ್ಯನಾದ ರಾಜಪುತ್ರನಿಗೆ ಶ್ರೀದೇವಿಯು ನವರತ್ನ ಖಚಿತ ಕವಚ ಕುಂಡಲಾದಿಗಳಂ ಧನುರ್ಬಾಣ ತೂಣೀರಗಳಂನಿತ್ತು ಅದೃಶ್ಯಳಾಗಲುಂ ಆ ಬಾಲಕನಾನಂದದಿಂ ತನ್ನ ಜನನಿಗು । ಭರದ್ವಾಜ ಮಹಾಋಷಿಗಳಿಗು ವಂದಿಸಿ, ದೇವಿಯ ಕಟಾಕ್ಷದಿಂ ಕರುಣಿಸಿದ ವಸ್ತುಗಳಂ ತೋರಿಸಲತ್ಯಂತ ಸಂತೋಷ ಭರಿತರಾದರು. ಹೀಗೆ ದಿನದಿನಕ್ಕೆ ವೃದ್ಧಿ ಪೊಂದುತ್ತಿರುವ ಸುದರ್ಶನ ಮಹಾರಾಜನ ವಾರ್ತೆಯಂ ಕೇಳಿ ಶೃಂಗಿಬೇರಪುರಾಧೀಶನಾದ ತ್ಯಾಗರಾಜನು

॥ಕಂದ॥ ವರರಥ ಸಾರಥಿ ತುರಗಗ।
ಉರುತರ ವಸನಗಳ ರತ್ನ ಭೂಷಣಗಳನು
ಪರಿಚರ್ಯವ ಮಾಳ್ಪವರನು ।
ಹರುಷದಿ ತಂದಿತ್ತು ಸಖ್ಯ ಭಾವದೊಳಿರ್ಪನು।

ಆರ್ಯ: ಇನಿತಿರಲತ್ತಲು ಕಾಶೀರಾಜನ । ತನುಜೆ ಶಶಿಕಲಾ ಎಂಬುವಳು ।
ಮನುಮಥನರಗಿಣಿಯೆನೆ ದಿನದಿನ ಯೌ। ವ್ವನವ ಪೊಂದಿ ರಾಜಿಸುತಿಹಳು ॥೧॥

ಇರಲೊಂದಿನ ಸುಕುಮಾರಿಯ ಸ್ವಪ್ನದಿ । ಶಿರಿದೇವಿಯು ಬಂದುಸಿರಿದಳು
ವರಿಸಿದ ವಂಶದ ತರಳ ಸುದರ್ಶನ । ನಿರುವ ಭರದ್ವಾಜನಲೆನಲೂ ॥೨॥

ಕಮಲಾಂಬಕಿಗೆ ಗೋಚರವಾಗಲು ಮತಿ। ಭ್ರಮಣೆಯಾಗಿ ಸಂತಾಪದೊಳು।
ಸುಮಬಾಣದಿ ತನುತಪ್ತವಾಗಲಾ। ರಮಣಿ ಪೇಳ್ದಳಾ ಚೇಟಿಯೊಳು ॥೩॥

॥ಯದುಕುಲ ಕಾಂಬೋಜಿ॥

ಸಖಿಯೇ। ಸೈರಿಸಲಾರನೆನೆ। ಸಾರಸಾಂಬಕಿಯೇ ॥ ॥ಪ॥

ಹರಯಾ ಮುಂಬರಿದಿದೆ। ವರಸುಮವರಳಿದೆ। ಮರೆದುಲಜ್ಜೆಯಮನ್
ಚರಿಸಿರೆದೆ। ಅರವಿಂದ ಶೋಕ ಸುಂ । ದರ ನೀಲೋತ್ಪಲ ಚೂತ
ಶರಗಳೆನ್ನಯ ಮೇಲೆ । ಸುರಿವುತ್ತಲಿದೆ ಈಗ ॥೧॥

ಉರಿಯ ಮಧ್ಯದೊಳೋರ್ವ ಹರನೇತ್ರಾಗ್ನಿಯೊಳೋರ್ವ ।
ಉರಗವದನದೊಳೋರ್ವ । ಕೆಡದು ಬದುಕಿಹರು॥
ಅರರೇ ಈ ವಾಯುವೀ। ಸ್ಮರನು ಚಂದಿರನೆಂಬ। ॥೨॥

ಉಡಿಗೆ ತೊಡಿಗೆಗಳ್ಯಾಕೆ । ಕಡುಚೆಲ್ವಸುಮವ್ಯಾಕೆ ।
ಕೊಡೆಯೆತ್ತಿದಿವ್ಯಲೇ । ಪನವ್ಯಾತಕೇ ॥
ಒಡಲೊಳು ವಿರಹಾಗ್ನಿ। ಅಡಿಗಡಿಗರಂಪೇರ್ಚಿ
ಸುಡುತಿರಲಿದನಿನ್ನಾ । ರೊಡನೆ ಪೇಳುವೆನಯ್ಯ ॥೩॥

॥ಭಾಮಿನಿ॥ ಸಿರಿಯನು ಗ್ರಹವಾಯುಸ್ವಪ್ನದಿ ।
ಪರಮ ಪುರುಷನ ಕಾಂಬೆನೆಂಬೀ।
ಪರಿಯ ಮಾತಾಪಿತೃಗಳಾಜ್ಞಾ ಬಂಧದಲಿ ಶಿಲುಕಿ ॥
ಅರರೆ ಮಾನದ ತೋಳದಲಿ ಬಂ।
ಧುರ ಮಹಾಲಜ್ಜಾಂಧಕಾರದ।
ಲುರುಳುತಿರಲೀಯತನುವೆನ್ನ ಬಾಧಿಸುವವನಕಟ॥

॥ಕಂದ॥ ಎನುತೀಕತ್ತಲೆ ಪರಿವುದೊ।
ಯಂತೀ ಬಂಧನವನುಳಿದು ಕಾಂತನ
ಕಾಂಬುದೆ ಇಂತೆಲ್ಲವ ಸಟೆ ಹಾಹಾ।
ಎಂತೆನುತಾ ಸುಂದರ ಮೂರ್ಛೆಯಾಂ

ತಾಳುತಲೆ॥ ತನುತಪವಧಿಕವಿನ್ನೀ।
ಮನೆಯಲ್ಲಿರಲಾರೆನೆನ್ನವನನ್ಯೆದಿಸಿರೇ।
ಎನಲದಕೇಳುತ ಸಖಿಯರು।
ಘನಕರ ಸುಮವನಕೆ ತಂದರಾಸುಂದರಿಯಾನು ॥

ಇಂತು ಉದ್ಯಾನವನದೋಳ್ ಚಂಪಕ ವೃಕ್ಷದಡಿಯೊಳಾ ಸುಕುಮಾರಿ ಕುಳಿತಿರಲಾ ಸಮಯದೊಳೋರ್ವ ಭೂಸುರನೈತರಲಾತನಂ ಸತ್ಕರಿಸಿ ಶಶಿಕಲಾ ಪೇಳುತ್ತಾಳೆ॥

॥ಪದ॥ ॥ಶಂಕರಾಭರಣ॥ ॥ಆಟತಾಳ॥

ಭೂಸುರಾಗ್ರಣಿ ನಿಮ್ಮ ದರುಶನ। ಶೋಕನಾಶನ ಕಾರಣವಿಂದೀನಾ॥
ವಾಸುದೇವನ ಪಾದಶರಣರು। ಭವರಾಶಿಯ ಗೆಲಿದು ಸಂಚರಿಪರು॥ ॥ಪ॥

ಎಲ್ಲಿಂದಲಿಲ್ಲಿಗಾಗಮನವು ಮುಂ। ದೆಲ್ಲಿಗೆ ಪೋಗುವ ಪಯಣವೂ॥
ಸಲ್ಲಲಿತದಿ ಕೇಳಿರೀವಾಗಯೆನೆ । ಉಲ್ಲಾಸದಲಿ ಪೇಳಿದನಾಗಾ ॥೧॥

ರಾಜವದನೆ ಕೇಳಿಂದಿನಾ। ಭರದ್ವಾಜರಾಶ್ರಮದಿಂದ ಬಂದೆನಾ॥
ಈ ಜಗದೊಳಗೆಲ್ಲ ತಿರುಗೆಂದು ವಿಧಿ। ರಾಜನಪ್ಪಣೆ ಕೇಳೆಮಗಿಂದು ॥೨॥

ಶ್ರೇಷ್ಠ ಮುನೀಂದ್ರನಾಶ್ರಮದಲ್ಲಿ ಉ। ತ್ಕೃಷ್ಟವಸ್ತುಗಳೇನಿದೆಯಲ್ಲಿ
ಸೃಷ್ಟಿಯೊಳತಿಶಯವಾ ಪಡೆದಾಮನ। ಮನಮುಟ್ಟಿ ಪೇಳೀಗಸುಜ್ಞಾನದಾ ॥೩॥

ಇಂತೆಂದ ಸುಕುಮಾರಿಯ ಭಾವವಂ ತಿಳಿದು ಬ್ರಾಹ್ಮಣನು ಪೇಳುತ್ತಾನೆ.

ಪದ ॥ಧನಾಸರಿ॥ ॥ಆದಿತಾಳ॥

ಆಲಿಸು ಸುಂದರ। ಬಾಲಕಿಯೇ ಖುಷಿಯಾಲಯದೊಳಗಿಹ।
ಬಾಲಕನೋರ್ವ ॥ ॥ಪ॥

ಇನವಂಶದ ದೈವ ಸಂದನೃಪಾಲನ। ತನಯ ಸುದರ್ಶನನೆಂಬುವನಾ
ಘನತರರೂಪ ಸೌಂದರ್ಯ ಶೌರ್ಯಗಳ। ಗಣಿಸಲಶಕ್ಯವೆ। ಫಣಿಪತಿಗೇ ॥೧॥

ಆತನ ಮೋಹದ । ನೇತ್ರಾಗಲ್ಯಾತಕೆ॥ ಆತಗೆ ಸಮನಿನ್ನರದೂ
ಭೂತಲದೊಳು ನಿನ। ಗಾತನೆ ವರನೆಂದು। ಧಾತನು ಬರೆದಿಹ ನಿಶ್ಚಯವು ॥೨॥

ಪರಿಪರಿವಿದ್ಯದಿ ಚತುರನು ಧೀರನು। ಸಿರಿ ದೇವಿಯನರ್ಚಿಸುತಿಹನು।
ಪರಮಾನುಗ್ರಹ ಪಡೆದಂಬಿಕೆಯಂ। ಸರ್ವಶಕ್ತಿಯನು ಪೊಂದಿಹನು॥ ॥೩॥

ಇಂತೆಂದು ಪೇಳಿ ವಿಪ್ರನು ತೆರಳಲು ಆಶ್ಚರ್ಯಚಿತ್ತಳಾಗಿ ದೇವಿಯ ವಾಕ್ಯವಂ ಸ್ಮರಿಸುತ್ತಾ ಎಂದಿಗೆ ಎನ್ನಯ ಮನೋಭೀಷ್ಟ ಸಿದ್ಧಿಸುವದೆಂದು ಸಂತಾಪಗೊಳ್ಳುತ್ತಾ। ಸಖಿಯರ ಶೈತ್ಯೋಪಚಾರವಂ ಕೈಕೊಳ್ಳದೇ। ಮನೆಯಂ ಸೇರಿ ಚಿಂತಿಸುತ್ತಿರುವ ಸುಕುಮಾರಿಯ ವಾರ್ತೆಯಂ ಕೇಳಿ ದೂತಿಯರ ಮುಖದಿಂದ ಕೇಳಿ। ಸುಬಾಹುರಾಜನು ಪುತ್ರಿಗೆ ಸ್ವಯಂವರವಂ ಮಾಡಲುಪಕ್ರಮಿಸಿ। ಪಟ್ಟಣವಂ ವಿವಾಹಮಂಟಪವಂ ಶೃಂಗರಿಸವೊಲಾಜ್ಞೆಯಂನಿತ್ತು। ಬಂಧುಬಾಂಧವರಂ ದೇಶಾಧಿಪತಿಗಳಂ ಕರೆಯೆ ಕಳುಹುತ್ತಿರುವ ವಾರ್ತೆಯಂ ಶಶಿಕಲಾದೇವಿ ತನ್ನ ದೂತಿಯರೋಳ್, ಓರ್ವಳಂ ಕರೆದು ಗೋಪ್ಯದಿಂ ಪೇಳುತ್ತಾಳೆ.

॥ಕೋಡಿ॥ ॥ಆದಿತಾಳ॥

ಬಾರೆ ಸಖಿಯೆ ಮುಖದೋರೆಲೆ। ಬೇಗ। ಸಾರಿಪೇಳಿದ ಮಾತೇನೀಗಲೆ ॥ಪ॥

ಇನವಂಶದರಸ ಸ। ದ್ಗುಣದೃಶಸಂಧಿಗೆ॥ ತನಯ ಸುದರ್ಶನಕೊಲಿದಿಹೆ ॥೧॥

ಆತನಲ್ಲದ ಲೋಕ। ಜಾತಪುರುಷರೆಲ್ಲ॥ ತಾತನಂದದಿ ಭಾವಿಸಿರ್ಪೆನೆ ॥೨॥

ಎನ್ನಯ ಮನದಿಷ್ಟ। ವನ್ನು ಪೂರೈಪುದೆಂದು॥ ಮನ್ನಿಸಿ ಜನನಿಗೆ ಪೇಳೆಲೆ ॥೩॥

ಈಗ ವತ್ತ ಇನಿಕೆನಲೋರ್ವ ದೊರೆಯು ಘನ। ಸಂತಸದಿಂದ ಪೇಳೆ ಮಾತೆಯೋಳ್
ಜನಪರಿಗಾಕೆ ಸೂಚಿಸಲು ಕೇಳುತಲಚ್ಚರಿಯೊಂದಿ ಬಂದನಾ।
ತನುಜೆಯನೆತ್ತಿ ಮುದ್ದಿಸುತ ಅಂಕದಿ ಕೂಡಿಸಿ ಕೇಳ್ದನೇನಿದೌ।
ನಿನಗವನರ್ಹನಲ್ಲ ಮುನಿಮಂದಿರ ಸೇರ್ದ ದರಿದ್ರನಂತೆನೇ॥

॥ಕಂದ॥ ದಾರಿದ್ರವೆ ಕಡು ಕಷ್ಟವು।
ನಾರಿಯೇ ನೀ ಬಯಸಬೇಡವಾರಮಣನನು॥
ಭೂರಿ ಸೌಭಾಗ್ಯದ ಭೂಪರೊ।
ಳಾರಿಸು ನೀನೋರ್ವನನ್ನು ಸಂತಸದಿಂದಾ॥

ಇಂತೆಂದ ಪಿತನ ವಾಕ್ಯವಂ ಕೇಳಿ ಪೇಳುತ್ತಾಳೆ.

॥ಕಂದ॥ ವರಿಸಿಹೆನಾತನ ಮನದಲಿ।
ಕರೆಸುವೆ ಯಾಕಿನ್ನು ಬರಿದೆ ಭೂಪಾಲಕರ॥
ವರಿಸುವಳನ್ನಿರ್ವೋನ
ಕರುಣದೊಳೆನ್ನಿಷ್ಟದಂತೆ ನೆರವೇರಿಪುದೈ॥

ಇಂತೆಂದ ಕುಮಾರಿಯ ವಾಕ್ಯವಂ ನಿರಾಕರಿಸಿ। ಸುಬಾಹುರಾಜನು ಮಹಾರಾಜರಂ ಬರಮಾಡುತ್ತಿರಲು। ಶಶಿಕಲಾ ಚಿಂತಾಕ್ರಾಂತಳಾಗಿ। ಒಬ್ಬ ಬ್ರಾಹ್ಮಣನಂ ಕರೆದು ಆತನಂ ಮನ್ನಿಸಿರೆ, ತನ್ನ ಮನೋಭಿಪ್ರಾಯವಂ ಸೂಚಿಸಿ ಭರದ್ವಾಜರ ಆಶ್ರಮಕ್ಕೆ ಕಳುಹಿಸಲು ಆ ಬ್ರಾಹ್ಮಣೋತ್ತಮನು ಋಷ್ಯಾಶ್ರಮದೊಳಿರುವ ರಾಜಪುತ್ರನಂ ಕಂಡು ಮನ್ನಣೆಯಂ ಪಡೆದು ಕುಳಿತುಕೊಂಡು ಪೇಳುತ್ತಾನೆ.

॥ಬೇಹಾಗ್॥ ॥ಆದಿತಾಳ॥

ಕೇಳೈ ಭೂಪ। ರವಿಕುಲದೀಪ॥ ಕೇಳಿ ನಿನ್ನ ಗುಣ। ಶೀಲವನೋರ್ವಳು।
ಬಾಲಕಿಯನುದಿನ। ತಾಳಿಹಳು ವ್ಯಥೆಯಾ॥ ॥೧॥

ವಾರಣಾಸಿಯೊಳು। ಧೀರ ಸುಬಾಹುಕು। ಮಾರಿ ನಿನ್ನನೇ।
ಸೇರಲು ಬಯಸುತ್ತಿಹಳು ॥೨॥

ಈ ಸಮಯದಿಧರ। ಣೀಶಸ್ವಯಂವರ। ವಾ ಸುಕುಮಾರಿಗೆ
ತೋಷದಿ ಮಾಡುತಲಿಹನು ॥೩॥

ಸೇರಿಹರಲ್ಲಿ ಮ। ಹಾರಾಜರು ನೀ। ಸಾರಲು ಮಂಗಳ। ಕೋರುವದಿದು ನಿಜವೀಗ
ವಿಪ್ರನ ನುಡಿಗೇಳುತಲಾ। ಸ್ವಪ್ನದಿ ಸಿರಿದೇವಿ ಪೇಳ್ದ ವಾಕ್ಯವ ಸ್ಮರಿಸಿ ॥೪॥

ಕ್ಷಿಪ್ರದಿ ಮುನಿಪದಕೊಂದಿಸು। ತಪ್ಪಣೆಯಂ ಪಡೆದು ಪೊರಟನಾ ಸುಕುಮಾರ

ಇಂತು ಪ್ರಯಾಣ ಸನ್ನದ್ಧನಾಗಿರುವ ಸುಕುಮಾರನೊಡನೆ ಜನನಿಯಾದ ಮನೋರಮಾ ಪೇಳುತ್ತಾಳೆ॥

॥ವಾರ್ಧಕ॥ ಪುತ್ರ ಕೇಳಲ್ಲಿ ಮಹದೈಶ್ವರ್ಯವಂತರಹ।
ಪ್ರಥ್ವೀಶರ್ರೈತಂದು ನೆರದಿಹರು ಮೇಣ್ನಿನಗೆ।
ಶತ್ರುವಾಗಿಹ ಯುಧಾಜಿತು ಬರ್ಪನಾಸ್ಥಳಕೆ ನೀನೋರ್ವನೈದಲೀಗಾ॥
ಎತ್ತಣರು ಸನ್ಮಾನ ದುರ್ದೆಸೆಯೊಳಿಹಗೆ ಕೃತ
ಕೃತ್ಯನಾಗುವಂತು ಶ್ರೀಜಗನ್ಮಾತೆ ನಿ।
ನ್ನೆತ್ತಿಕೊಂಡಿಹಳವಳೆ ಕಾಪಾಡಬೇಕಲ್ಲ ದನ್ಯರಾರಲ್ಲ ನಮಗೇ॥

ಇಂತೆನಲಾ ಸುದರ್ಶನ ಪೇಳುತ್ತಾನೆ.

ಎಲೌ ಜನನಿಯೆ, ಆ ಜಗನ್ಮಾತೆಯ ಅನುಗ್ರಹವಂ ಪಡೆದಿರುವ ನನಗೆ ಯಾರ ಭಯವು ಇಲ್ಲ. ನಾನು ಮತ್ತೊಬ್ಬರ ಐಶ್ವರ್ಯವನ್ನು ಬಯಸತಕ್ಕವನಲ್ಲ. ನನಗೆ ಶತ್ರುಗಳೊಬ್ಬರೂ ಇಲ್ಲ. ಆಕೆಯ ಅನುಗ್ರಹವಿದ್ದಂತಾಗಲೀ, (ಭವಿತವ್ಯಂ ಭವತ್ಯರ್ಯೋವ) ಆಗಬೇಕಾದ್ದು ಆಗಿಯೇ ತೀರುವುದು ಎಂಬ ನಿರ್ಧಾರದಿಂದಿರುತ್ತೇನೆ ಎಂದು ಪೇಳಿ ತನ್ನೊಡನೆ ಬರುತ್ತೇನೆಂಬ ಮಾತೆಯಿಂದಲೂ ದಾಸಿಯಿಂದಲೂ ಸಹ ಮೂವರೂ ದಿವ್ಯ ರಥದೊಳ್ಕುಳಿತು, ಅನೇಕ ಶುಭಶಕುನಗಳಂ ನೋಡುತ್ತಾ ಕಾಶೀಪಟ್ಟಣಕ್ಕೆ ಬರಲು ಆ ವಾರ್ತೆಯ ಕೇಳಿ ಸುಬಾಹು ರಾಜನೆ ಇದಿರ್ಬಂದು ಈತನಂ ಕರೆದೊಯ್ದು, ಬಹುಮಾನದಿಂ, ಬಿಡದಿಯ ಮನೆಯನ್ನಿತ್ತು ಮನ್ನಿಸಿ–

ಆರ್ಯ॥ ಸುರಪತಿಯಾಸ್ಥಾನವ ನಿಂದಿಸುತಿಹ। ವರವೈವಾಹ ಸುಮಂಟಪದಿ
ಪರಿಪರಿ ದೇಶಾಧೀಶ್ವರೆಲ್ಲರು ಸುರುಚಿರ ಪೀಠದಿ ಸಂಭ್ರಮದಿ ॥ಪ॥

ಕುಳಿತಿರಲಲ್ಲಿಗೆ ಬಂದು ಸುದರ್ಶನ। ನೆಲಸಿಹನು ಚಕ್ರಾಸನದಲ್ಲಿ॥
ಮೊಳಗುತಿಹವು ಮಂಗಳವಾದ್ಯಗಳಾ। ಜಲಜಭವಾಂಡವ ತುಂಬುತಲಿ॥ ॥೧॥

ಆ ಸಮಯದಿ ರಾಜರು ತಮ್ಮೊಳಗೆ ವಿ। ಲಾಸದಿಂದ ಮಾತಾಡುವರಲಿ।
ಈ ಸುದರ್ಶನನೆ ವರನೆಂದೀಪುರ। ವಾಸದ ಜನರಾಡುರ್ರೈಹರು ॥೨॥

ಎಂತೊಲಿಸುವಳೀ ದುರ್ದೆಸೆಯಲಿ ಮುನಿ। ಯಂತೆ ಕಾಡಿನಲಿ ತಿರುಗುವನ
ಕಾಂತೆಗೆ ಮತಿ ಇನ್ನೆಲೆನು ಯುಧಾಜಿತು । ವಾಂತು ನಿಂತನತಿ ಕ್ರೋಧವನ ॥೩॥

ಎಲ್ಲಿಯವರ ನಿವನಾರೊಲಿಸುವರೀ। ಕ್ಷುಲ್ಲನ ಸಂಹರಿಸುವೆನೆಂದು
ಬಲ್ಲಿದನೆನ್ನಯ ಮೊಮ್ಮನಿಗಿವಳನು। ವಲ್ಲಿಭಯನು ಮಾಳ್ಪೆನು ಬೇಗ। ॥೪॥

ರಾಜಕುವರಿ ಮತ್ತು ಏನೆನ್ನುತ್ತಿದ್ದಳು.

॥ಶ್ಲೋಕ॥ ಭಾಗಂ ಸಿಂಹಸ್ಯ ಗೋಮಾಯುಃ ಭೋಕ್ತು ಮಹರ್ತಿವಾಕಥಂ॥
ಕಥಾ ಸುದರ್ಶನೋ ಯಾಂ ವೈ ಕನ್ಯಾರತ್ನಂ ಕಿಮರ್ಹರೆ॥

ಇರತೆನ್ನುವ ಯುಧಾಜಿತುವಂ ನೋಡಿ ಕೇರಳರಾಜ ಪೇಳುತ್ತಾನೆ.

॥ಶ್ಲೋಕ॥ ಧರ್ಮೋರ್ಜಯತಿ ನಾಧರ್ಮಃ ಸತ್ಯಂ ಜಯತಿ ನಾನೃತಂ ॥
ಮಾನಯಂ ಕುರು ರಾಜೇಂದ್ರ ತ್ಯಜಪಾಪಮಿದಂ ಕಿಲ॥

ಯುಧಾಜಿತು ಸಿಂಹದ ಭಾಗವನ್ನು ನಾಯಿಗೆ ಕೊಟ್ಟಂತೆ ಈ ಸುದರ್ಶನನಿಗೆ ಈ ಕನ್ಯೆ ಅರ್ಹಳಲ್ಲ.

॥ಕೇರಳರಾಜ॥ ಧರ್ಮಕ್ಕೇ ಜಯ, ಸತ್ಯಕ್ಕೇ ಜಯ, ಮರ್ಯಾದೆಯಿಂದಿರು, ಪಾಪ ಬುದ್ಧಿಯನ್ನು ಬಿಡು ಎಂದು ಯುಧಾಜಿತುವಿಗೆ ಹೇಳಿ ಮತ್ತೂ ಹೇಳುತ್ತಾನೆ.

॥ಬೇಗಡೆ॥ ॥ಆದಿತಾಳ॥

ಶ್ಯಾಭಾಸೆಲೊ। ಧೊರೆಯೆ। ಏನುಸುರಿದೆ ಬಿಡು। ಶ್ಯಾಬ್ರಾಸೆಲೊದೊರಿಯೆ ॥ಪ॥

ಯಾರಿಲ್ಲದೆ ಇಹ। ಪುರವನು ಸೇರಿ॥ ತೋರಿದೆ ಕ್ರೌರ್ಯವ। ನೀನಲ್ಲಿ॥
ಮೀರಿಸತ್ಯವನು। ಕಿರಿಯಗೆ ರಾಜ್ಯವ। ಸೇರಿಸಿದಂತಾಹುದೆ ಇಲ್ಲಿ ॥೧॥

ದೇಶಾಧೀಶ್ವರ। ರೆಲ್ಲರ ನೋಡಿ। ಆಸುದತೀಮಣಿ ಯಾರಲ್ಲೀ॥
ಆಸೆಯನಿಡುವಳೊ। ಅವನಿಗೀಯುವನೈ। ದೋಷವದೇನೀವಾಗಿಲ್ಲೀ ॥೨॥

ಅದಕ್ಕೆ ಯುಧಾಜಿತು ಪೇಳುತ್ತಾನೆ.

॥ವಾರ್ಧಿಕ ಷಟ್ಪದಿ॥ ಒಪ್ಪಬಹುದೇ ನೀನು ಪೇಳ್ದ ಮಾತಿದು ಸಹಜ।
ವಿಪ್ರರಿಗೆ ಕ್ಷತ್ರಿಯರು ತಮ್ಮ ನಿಜ ಬಾಹುಬಲ।
ದರ್ಪದಿಂ ದಾವುದುಂ ಸಾಧಿಸದೆ ಬಿಡುವರೇ ಕಡು ಹೇಡಿತನವೇತಕೆ॥
ತಪ್ಪದಿಂದಿನ ರಣದೊಳಾವ ಖಡ್ಗಕೆ ವಿಜ
ವಪ್ಪುವವರಿಗೆ ಕೊಡಲಿ ಸುಕುಮಾರಿಯಂ ಸಿಂಹ।
ಕೊಪ್ಪುವೀಭಾಗಮಂ ಶುನಕನೊಯ್ಯೆ ತಿರಸ್ಕಲ್ಕಾರುಸೈರಿಪರೆಂದನು॥

ಇಂತೆನ್ನುವ ದುರಾತ್ಮನ ವಾಕ್ಯವಂ ಕೇಳಿ ರಾಜರು ಸುದರ್ಶನನನ್ನು ಕರೆದು ತಮ್ಮ ಸಮೀಪದೊಳ್ ಕೂಡಿಸಿಕೊಂಡು ಪೇಳುತ್ತಾರೆ.

॥ಭಾಮಿನಿ॥ ಆರುಕರಸಿದರಿಲಿ ನಿನಗಹ।
ಕಾರಿಯವದೇನುಂಟು ಬಾಲಕ।
ಧಾರುಣೀಶ್ವರರಖಿಳ ಸೈನ್ಯವ ಕೂಡಿ ಬಂದಿಹರು॥
ಕ್ರೂರ ನಿನ್ನಯ ಶತೃವೆಂದವಿ।
ಚಾರವನು ಕೇಳಿದೆಯ ಮುಂದಣ
ದಾರಿಯೇನದನೋಡು ಓರ್ವನೆ ಬಂದದನುಚಿತವೈ॥
ಇಂತೆನಲಾ ಸುಕುಮಾರ ಧೈರ್ಯದಿಂ ಹೇಳುತ್ತಾನೆ.

ಕೇಳಿರೆಲ್ಲರು ಎನ್ನ। ಬಾಲಭಾಷೆಯನು॥ ಕಾಲವಶದಿ ಲೋಕವೆಲ್ಲ। ಕೀಳು
ಮೇಲನೊಂದುತಿಹುದು. ॥ಪ॥

ಯಾರು ಎನ್ನ ಕರಸಲಿಲ್ಲ। ಕಾರಿಯವೇನೆನಗದಿಲ್ಲ।
ಮಾರಜನನಿಯಾಜ್ಞೆಯಂತೆ। ಸೇರಿದೆನೀ ಪುರಿಗೆ ನಾನು ॥೧॥

ಎನಗೆ ದ್ವೇಷವಾರಲಿಲ್ಲ। ತನಗೆ ತಾನೆ ಬಂದವನೇ॥
ಅನುಭವಿಸುವನದರ ಫಲವ। ಮನದಿ ಕೊರತೆಯೊಂದುಮಿಲ್ಲ ॥೨॥

ದೈವತಂತ್ರವಲ್ಲದಿನ್ನು। ಕಾವರ್‍ಯಾರು ಕೊಲುವರ್‍ಯಾರು॥
ದೇವಿಯಾಜ್ಞೆಯಲ್ಲದಿ। ನ್ಯಾವನಿಗು ಸ್ವತಂತ್ರವಿಲ್ಲ॥ ॥೩॥

॥ಶ್ಲೋಕ॥ ನ ಬಲಂ ಸಹಾಯಾ ಮೇ। ನ ಕೋಶೋ ದುರ್ಗ ಸಂಶ್ರಯಃ॥
ನಮಿತ್ರಾಣಿ ನ ಸೌಹಾರ್ದಿ ನ ನೃಪಾ ರಕ್ಷಕಾ ಮಮ॥

(ಭವಿತವ್ಯಂ ಭವಿಷ್ಯೈವ್ಯ) ಆಗಬೇಕಾದ್ದೆ ಆಗುವುದು ದೈವೇಚ್ಛೆ ಇದ್ದಂತಾಗಲಿ ಇದೇ ನನ್ನ ನಿಶ್ಚಯವೆಂದು ಪೇಳಲು. ಸರ್ವರೂ ಆಶ್ಚರ್ಯವಂ ಪೊಂದಿ ಸುಮ್ಮನಿರಲೂ ಕಾಶೀರಾಜನು ಅಂತಃಪುರಕೈದಿ ತನ್ನ ಪುತ್ರಿಯಂ ಕರೆದು ಸರ್ವಾಲಂಕಾರಭರಿತಳಾಗಿ ರಾಜಸಭೆಯಂ ಪೊಕ್ಕು ಅಲ್ಲಿರುವ ರಾಜವರ್ಯರೋಳ್ ನಿನ್ನಿಷ್ಟ ಬಂದವರಂ ವರಿಸಿ ಪುಷ್ಪಮಾಲೆಯಂ ನೀಡೆಂದು ಪೇಳಲು ಆಕೆ ಅರೆಖಿನ್ನಳಾಗಿ ಪೇಳುತ್ತಾಳೆ.

॥ಪೀಲು॥ **॥ರೂಪಕತಾಳ॥**

ತಾತಯೆನ್ನ ಮಾತಪ್ರೀತಿ। ಯಾಂತು ಲಾಲಿಸಾ॥ ಈಗ। ಯಾತಂಕಿಂತು
ಪೇಳ್ವೆ ಎನಗೆ। ಪ್ರೀತಿ ಇಲ್ಲವೋ॥ ॥ಪ॥

ಎನ್ನ ಮನದೊಳೊರಿಸಿಹೆನಾ। ಸನ್ನುತಾಂಗನಾ। ನಾ॥ ಕಣ್ಣ ತೆರೆದು ನೋಳ್ಪ
ಳಲ್ಲ। ಅನ್ಯವನ್ನು ನಾ। ನೀಗ ॥೧॥

ಹೇಳಲಿಲ್ಲೆ ಮೊದಲೆ ನಾನು। ಭೂಲಲಾಮನೆ। ಅದ। ಕೇಳದಿಂತು ಕರೆಸಿದ್ಯಾಕೆ
ಭಾಳಮಂದಿಯಾ॥ ಆಹಾ॥ ॥೨॥

ಮನವನೊಬ್ಬನಲ್ಲಲ್ಲಿ ಬೆರಸಿ। ತನುವನೋರ್ವಗೆ॥ ನಾನು॥ ಯೆನಿತು
ನೀಡಲೀ ಅಧರ್ಮ। ನಿನಗೆ ತೋರದೇ॥ ಈಗ॥ ॥೩॥

ಇಂತೆನಲಾ ರಾಜನತ್ಯಂತ ಚಿಂತಾಕ್ರಾಂತನಾಗಿ ವಿವಾಹಮಂಟಪಕೆ ಬಂದು ರಾಜಸಭೆಗೊಂದಿಸಿ ನಿಂದು ದೈನ್ಯಭಾವದಿಂದ ಪೇಳುತ್ತಾನೆ.

ಎಲೈ ಮಹಾತ್ಮರುಗಳಿರಾ, ನನ್ನ ಪುತ್ರಿಯು ಈ ಸಭೆಯಲ್ಲಿರುವ ಸುದರ್ಶನನನ್ನೇ ವರಿಸಿದ್ದೇನೆ ಮತ್ತೊಬ್ಬರನ್ನು ಕಣ್ಣೆತ್ತಿ ನೋಡುವುದಿಲ್ಲವೆಂದು ಪೇಳುತ್ತಾಳೆ. ಯಾರ್‍ಯಾರು ಹೇಳಿದರೂ ಆಕೆಯ ಮನಸ್ಸು ಕರಗುವುದಿಲ್ಲ ಎಂದಾದುದರಿಂದ ಸರ್ವರು ಸಮ್ಮತಿಸಿ ವಿವಾಹಕ್ಕೆ ಅನುಜ್ಞೆಯಂ ಪಾಲಿಸಬೇಕೆಂದು ಕೇಳಲು ಯುಧಾಜಿತು ಕೋಪದಿಂದ ಎದ್ದು ನಿಂದು ಪೇಳುತ್ತಾನೆ.

॥ಸುರಟಿ॥

॥ಪ॥ ಅಹಹಾ ಏನೆಂಬೇ। ಮಾರ್‍ಯೈದು। ಸಹಜವೇನೋ ಮುಂದೆ॥ ॥ಪ॥
ವಿಹಿತವಲ್ಲ ವಿದನಾರೊಪ್ಪುವರೈ। ಬಹುಬಿಂಕದ ಮಾತಾಡುವೆ ನಮ್ಮೊಳು ॥ಅ.ಪ.॥

ಮೊದಲೆ ನಿನ್ನ ಕಾವರೀ। ಚಿತ್ತದೊಳಮನ ವಲಿಸಿರಳು॥ ಮುದದಿ ಸ್ವಯಂ
ವರ। ತಂದೆಗಳಿಗತಿ। ಸದರದಿ ಪತ್ರವ। ಬರಸಿದೆ ಯಾತಕೆ ॥೧॥

ಬರಲಿ ರಾಜಸಭೆಗೆ। ಆಕೆಯು। ಧರಣೀಶ್ವರರೊಳಗೆ॥
ವರಿಸಲೀಗ ಮನ । ಬಂದವರನುತಾ। ತಿರುಕಗೆ ಪತ್ರವ। ಬರೆದಿಹೆಯಾ ನೀ ॥೨॥

ಪಡೆಯಲಿ ನಮ್ಮೊಳವನಾ। ಇದಕೊಡಬಡದಿರೆ ಯುದ್ಧವನಾ।
ತೊಡರಿರೆ ನಾರಿಗೆ। ಜಯ ಸೇರುವದನ। ಪಿಡಿಯಲಿ ನಿಮ್ಮ ಕುಮಾರಿಯ। ಕರವನು॥ ॥೩॥

ಇಂತಂದು ಯುಧಾಜಿತು ನುಡಿವ ವಾಕ್ಯಗಳಂ ಕೇಳಿ

ರಾಜನು ಚಿಂತಾಕ್ರಾಂತನಾಗಿ ಅಂತಃಪುರಕ್ಕೆ ತಂದು ತನ್ನ ಪುತ್ರಿಗೆ ಯಾರ್‍ಯಾರಿಂದಾ ಸಂಮತಿಯಂ ಹೇಳಿಸಿದಾಗ್ಯೂ ಕೇಳದೇ ಮತ್ತೆ ತಂದೆಯೋಳ್ ಪೇಳುತ್ತಾಳೆ.

ಭಾಮಿನಿ॥ ಜನಕ ನೀ ಕೇಳಾನು ತ್ರಿಜಗ।
ಜ್ಜನನಿಯಭಿಮತದಿಂದಲಾತನ।
ಮನದಿ ವರಿಸಿಹೆನಿದಕೆ ಸಂಶಯವೇಕೆ ನೀ ಪೋಗಿ॥

ಜನಪತಿಗಳಿಗೆ ಪೇಳಿ ನಾಳಿನ।
ದಿನ ಸ್ವಯಂವರವೆಂದು ಕಳುಹಿಸಿ।
ಮನೆಗೆ ಈ ರಾತ್ರಿಯಲಿ ಮಾಡು ವಿವಾಹವೆನಗೆಂದಾ॥

॥ಕಂದ॥ ಧೀರ ಸುದರ್ಶನನಗೆನ್ನನು।
ಸೇರಿಸು ಈ ರಾತ್ರಿಯಲ್ಲಿ ದೈವಿಯು ಕೃಪೆಯೆಂಬಳ್॥
ಚಾರುಪತಿವ್ರತೆಯಾಗಿ ಸ। ದಾ
ರಾಜಕುಮಾರನನ್ನು ಸೇವಿಸುತಿರ್ಪೆನು॥

ರಾಜನು ಅದೇ ಪ್ರಕಾರ ಸಭೆಗೆ ಬಂದು ಭೂಪಾಲಕರಿಗೆ ತಿಳಿಸಿ ಸಮಾಧಾನ ಪಡಿಸಿ, ಅವರವರ ಬಿಡಾರಗಳಿಗೆ ಕಳುಹಿಸಿ, ಆ ರಾತ್ರಿಯೋಳ್ ತನ್ನ ಅರಮನೆಯಲ್ಲಿ ಬ್ರಾಹ್ಮಣಸುವಾಸಿನಿಯರಿಂದಲೂ ಮಂತ್ರಿ ಜನ ಪುರೋಹಿತರಿಂದೊಡಗೂಡಿ, ಸುದರ್ಶನ ಮಹಾರಾಜನಂ ಗೋಪ್ಯದಿಂ ಕರೆಸಿ। ನವರತ್ನ ಪೀಠದೊಳ್ಕುಳ್ಳಿರಿಸಿ ಮಧುಪರ್ಕಾದ್ಯು ಪಚಾರಂಗಳಿಂ ಪೂಜಿಸಿ। ಶುಭಲಗ್ನದೊಳ್ಕನ್ಯಾದಾನವಂ ಮಾಡುತಿರ್ಪನು.

॥**ಮೋಹನ**॥

ಕನ್ಯಾದಾನವ ಮಾಡಿದ। ಭೂಪನಿಂದಿಗೆ। ಧನ್ಯತಾನೆನುತಿದ್ದಾ॥ ॥ಪ॥

ವರನಾ ಪಾದವ ತೊಳದು। ತತ್ತೀರ್ಥವ ಶಿರದಲ್ಲಿ ಧರಿಸುತಲೆ।
ತರುಣಿಸಹಿತವಧು। ವರರನನು ಪೂಜಿಸಿ। ಹರುಷ ಮಾನವನಾಗಿ
ಹರಿಗರ್ಪಣವೆನುತ ॥೧॥
ಮಂಗಳಾಪೋಷದಲೀ। ಸುಕನ್ಯೆಗೆ ಮಂಗಳ ಸೂತ್ರ ಕಟ್ಟಲು।
ಅಂಗನೆಯರು ದಿವ್ಯ ಮಂಗಳಾರತಿಯೆತ್ತಿ। ರಂಗಾನರ್ಧಾಂಗಿ।
ನಿಮಗೆ। ಮಂಗಳವೀಯಲೆಂದು॥ ॥೨॥

ಇಂತಾ ರಾತ್ರಿಯೋಳ್ ವಿವಾಹವಂ ಸಾಂಗವಾಗಿ ಪೂರೈಸಿ ಸೂರ್ಯೋದಯಾ ನಂತರ ಕಾಶೀರಾಜನು ಮಹಾರಾಜರ ಸಭೆಗೆ ನಡೆತಂದು, ಎಲೈ ಮಹಾತ್ಮರುಗಳಿರಾ ಎಷ್ಟು ವಿಧವಾಗಿ ಸಮಾಧಾನವಂ ಹೇಳಿದರೂ ನನ್ನ ಪುತ್ರಿಯು ಒಪ್ಪದೇ ಪ್ರಾಣ ತ್ಯಾಗ ಮಾಡುವೆನೆಂದು ಮೂರ್ಖತನವನ್ನು ಮಾಡಿದುರಿಂದ ರಾತ್ರಿಯಲ್ಲೇ ವಿವಾಹವು ಪೂರೈಸಿತು. ತಾವೆಲ್ಲರೂ ದಯವಿಟ್ಟು ನನ್ನ ಮನೆಗೆ ದಯಮಾಡಿಸಿ ನನ್ನ ಉಪಚಾರವಂ ಸ್ವೀಕರಿಸಿ ಕೃತಾರ್ಥನಂ ಮಾಡಬೇಕೆಂದು ಪ್ರಾರ್ಥಿಸಲು, ಕೆಲವರು ವಿಹಿತವೆಂದು

ಒಪ್ಪಿ ಆತನ ಮನೆಗೆ ಬಂದರು. ದುರ್ಬುದ್ಧಿಯಾದ ಯುಧಾಜಿತು ಈ ಮಾತಂ ಕೇಳಿ ಕೋಪದಿಂ ಹೇಳುವನು.

॥ಕಂದ॥ ಆರು ನಮ್ಮನುವಂಚಿಸಿ। ಸುದತಿಯ ನಾರ್ಗಿಕ್ಕೆಯವನ ನಿನ್ನೊಡನೀಗಳ್॥
ಕದನದಿ ತೀರ್ಚುವೆನಲವಂ। ಮುದದಿಂದೆಳದೊಯ್ದು ಮನೆಯ ದಾಸಿಯ ಮಾಳ್ಪೆಂ

॥ವಚನ॥ ಇಂತೆಂದು ಆ ದುಷ್ಟನು ತನ್ನ ಸಾಮಾಜಿಕರಿಂದೊಡಗೂಡಿ ಹೊರಟು ಇವರು ಬರುವ ಮಾರ್ಗದೊಳ್ ಯುದ್ಧ ಸನ್ನದ್ಧನಾಗಿ ಕುಳಿತನು॥ ಈ ವಿಚಿತ್ರವಂ ನೋಡಿ ಕಾಶೀರಾಜನು ಏನೋ ಅನರ್ಥವಾಗುವುದೆಂದು ಯೋಚಿಸಿ, ಆ ಜಗನ್ಮಾತೆಯ ಇಷ್ಟವಿದ್ದಂತಾಗಲೆಂದು ಮನೆಗೆ ಬಂದು ನಾಲ್ಕು ದಿವಸ ವಿವಾಹ ಮಹೋತ್ಸವವಂ ಸಾಂಗದಿಂ ನಡೆಸಿ ಐದನೆಯ ದಿವಸದೊಳ್ ಸ್ತಂಭ ಬಲಿ ಮೆರವಣಿಗೆ ಮುಂತಾದುದಂ ಪೂರೈಸಿ ಸಕಲರಂ ತೃಪ್ತಿಪಡಿಸಿ, ಮಗಳಿಗೆ ಬಳುವಳಿಯಂ ಅಳಿಯನಿಗೆ ಉಡುಗೊರೆಯಂ ಕೊಟ್ಟು ತನ್ನ ಬೀಗಿತ್ತಿಯಾದ ಮನೋರಮಾ ದೇವಿಯ ಸತ್ಕರಿಸಿ। ಇವರೆಲ್ಲರನ್ನು ದಿವ್ಯರಥದಲ್ಲಿ ಕೂರಿಸಿ। ಅನೇಕ ಅಕ್ಷೋಹಿಣಿ ಸೇನೆಯಿಂದೊಡಗೂಡಿ। ತನಗೆ ಮಿತ್ರರಾಗಿರುವ ರಾಜರನ್ನೊಡಗೊಂಡು। ನಾನಾವಿಧ ಮಂಗಳವಾದ್ಯ ಸಂಭ್ರಮದಿಂದ ಪುರದಿಂ ಪೊರಮಟ್ಟು ಬರುತ್ತಿರಲಾ ಮಾರ್ಗದೋಳ್

॥ಖಿಡಕು॥

ಏನೆಂಬೆನಮಮ ಸಾಹಸವ। ಭೂನಾಥ ಕೇಳು ಕೌತುಕವ ॥ಪ॥

ದೊರೆಗಳಲ್ಲಿ ಬರುತಿರಲದ ನೋಡಿ। ದುರುಳ ಯುಧಾಜಿತು ಸಂಜ್ಞೆಯ ಮಾಡಿ।
ಕರಿಯಸೇನೆ ಮಾರ್ಗವ ಕಡೆಮಾಡಿ। ಬರುತಿರಲತಿ ಗರ್ಜನೆಯನು
ಮಾಡಿ। ಮೊರೆವ ಬಹಳ ರಣಭೇರಿಯ ಪೊಯ್ದು। ಪರಿಪರಿ ಶಸ್ತ್ರಗಳ
ನು ಹಿಡಿದು। ಬೆರಸಿ ಹೊಯ್ದರೋರೋರ್ವೊಳು ಮೊಳಗುತ। ಕರ ಶಿರ
ಕಾಲ್ತೊಡೆಗಳನೇ ಕಡಿದು। ಕರಿರಥ ತುರಗವ ಕತ್ತರಿಸಿದರು। ನೆರ
ದುಭಯತ್ರರು ಕಾದುತ್ತಿಹರು । ಧರಣೀಶರು ದೂರದಿ ನೋಡುವರು।
ದುರುಳಗ್ಯಾಕೆ ದುಶ್ಚೇಷ್ಟೆಂಬುವರು। ಮರುಗುತಿದ್ದ ಕಾಶೀಪುರ
ದರಸನು। ಮರೆದಳೆಮ್ಮ ಪರದೇವಿಯು ಎನುತಾ॥

॥ವಚನ॥ ಇಂತಿರುವ ಸಮಯದೊಳ್ ಸುದರ್ಶನನು ದೇವಿಯಂ ಪ್ರಾರ್ಥಿಸುತ್ತಾನೆ.

॥ಜಂಜೂಟಿ॥ ॥ಆದಿತಾಳ॥

ಶಂಕರಿ ಬಾಬಾ। ಜನನಿಯೆ ಬಾಬಾ। ॥ಪ॥

ಓಂಕಾರಿ ಭಯಹರಿ। ಕ್ಲೀಂಕಾರಿ ಶುಭಕರಿ। ಬಾಬಾ॥ ॥ಅ.ಪ.॥

ಪಾಟಲಪಾದರಿಶಶಿ। ಕೋಟಿ ಪ್ರಭೇಧವ ಕೋಟಿಕಾತ್ಯಾಯಿನಿ।
ಕೂಟಸುಸೇವಿತೆ। ಬಾಬಾ ॥೧॥

ವಾರಿಜಧವನುತೆ। ಕ್ಷೀರಾಂಬುಧಿಸುತೆ। ನಾರಸಿಂಹಿಣಿ।
ವಾರಾಹಿ ನಾರಾಯಣಿ। ಬಾಬಾ ॥೨॥

ನರಸಿಂಹಾಲಯೆ। ವರತ್ರಿಗುಣಾಲಯೆ॥
ಸುರಗಿರಿ ವೇಂಕಟನರಸಿ ಕೃಪಾಕರಿ ॥ಬಾಬಾ॥ ॥೩॥

॥ಭಾಮಿನಿ॥ ಕರಯೆ ತನ್ನನು ಭಕ್ತನಲಿ ಸತ್ಕ
ರಣವನು ಬೀರುತ್ತ ಬಂದಳು.
ವರ ಚತುರ್ಭುಜ ಶಂಖ ಚಕ್ರ ಗದಾಬ್ಜವನು ಧರಿಸಿ॥
ತರಣಿ ಕೋಟಿ ಸುತೇಜದಲಿ
ಹೂಂಕರಿಪ ಸಿಂಹವನೇರಿ ನಗೆಮೊಗ।
ದುರು ಜಗನ್ಮೋಹನೆ ಮಹಾಹವದೆಡೆಗೆ ವಹಿಲದಲೀ॥

ಇಂತು ಮೈದೋರಿದ ಜಗನ್ಮಾತೆಯ ಪಾದಾರವಿಂದ್‌ದೋಳ್ ದಂಡಾಕಾರವಾಗಿ ಬಿದ್ದೆದ್ದು ಆನಂದಸಾಂದ್ರನಾಗಿ ಸೋತ್ರವಂ ಮಾಳ್ಪನು

॥ಸುರುಟಿ॥ ॥ಆದಿತಾಳ॥

ನಮೋಸ್ತುತೆ ಜಗದೀಶ್ವರಿ ಜಯ ಜಯ। ಕಮಲಾಲಯೆ ಕರುಣಾಕರಿ ದೇವಿ ॥ಪ॥

ದರಹಸಿತಾನನೆ। ಶರದಿಂದುವದನೆ॥ ಸುರ ಮುನಿಪಂ ಸೇವಿತಚರಣೆ ॥೧॥

ಕಾತ್ಯಾಯಿನಿ ಕಮಲಾಸನ ಸನ್ನುತೆ। ಸಚಿತ್ಸುಖಪರಿಪೂರ್ಣೆ ॥೨॥

ಅಷ್ಟಸಿದ್ಧಿ ಷಠ್ಕತಿ ಸ್ವರೂಪಿಣಿ। ಶ್ರೇಷ್ಟ ಸುರಾಚಲವಾಸಿನಿ ॥ದೇವಿ॥ ॥೩॥

॥ವಾರ್ಧಕ ಷಟ್ಪದಿ॥ ನಿಟ್ಟಿಸುಕಲಾದೇವಿಯಂ ಯುಧಾಜಿತು ಬಹಳ।
ಸಿಟ್ಟಿನಿಂ ಪೇಳ್ದ ತನ್ನವರಿಗೆಲವೆಲವೊ ಮತಿ।
ಗೆಟ್ಟಿರೇತಕೆ ಹೆಂಗಸಿಂದಲೇನಹುದು ನೀವ್ ಶತ್ರುಗಳ ಕರಿವುದೆನಲೂ॥
ತಟ್ಟನಾ ನುಡಿಗೇಳ್ದು ದೇವಿ ಕಡು ಸೌಮ್ಯದಿಂ ।
ದಟ್ಟಹಾಸವ ಮಾಡಲೊರಗಿ ಕರಿಸೇನೆ
ಕಂ। ಗೆಟ್ಟು ಹಲರೋಡಿದರೆ ಕಣನೊಳಗೆ ಕಾದುವರ್ಕಾಣೆನಾಕಾಲದೊಳಗೆ॥

॥ಕಂದ॥ ಲೀಲಾಮಾತ್ರದಿ ದೇವಿಯು।
ಖೂಳಯುಧಾಜಿತುವನವನ ಮೊಮ್ಮನಶಿರವಂ॥
ಕೋಲೆರಡರದಿಂದಲಿಳುಹಲ್।
ಮೇಲಿಹ ಸುರರುಲಿದು ಸುಮವಚೆಲ್ಲಿದರಾಗಳ್॥
ಆ ಕಾಲದೋಳ್ ದೇವಿಯಂ ಸರ್ವರೂ ಸ್ತೋತ್ರ ಮಾಡುತ್ತಾರೆ.

ಶ್ಲೋಕ॥ ಲಕ್ಷ್ಮೀಂ ಕ್ಷೀರಸಮುದ್ರರಾಜತನಯಾಂ
ಶ್ರೀರಂಗ ಧಾಮೇಶ್ವರೀಂ । ದಾಸೀಭೂತ ಸಮಸ್ತಲೋಕ
ವನಿತಾಂ। ಲೋಕೈಕ ದೀಪಾಂಕುರಾಂ। ಶ್ರೀಮನ್ ಮಂದ
ಕಟಾಕ್ಷ ಲಬ್ಧ ವಿಭ್ರಮಾಂ ಬ್ರಹ್ಮೇಂದ್ರ ಗಂಗಾಧರಾಂ।
ತ್ವಾಂತ್ರೈಲೋಕ್ಯ ಕುಟುಂಬಿನೀಂ ಸರಸಿಜಾಂ
ವಂದೇ ಮುಕುಂದಪ್ರಿಯಾಂ॥

ಇಂತೆಂದು ಸಕಲರೂ ದೇವಿಯಂ ಕೊಂಡಾಡಿ ತಮ್ಮತಮ್ಮ ಪುರಿಗೈದಲು, ಕಾಶೀರಾಜನು ಜಗಜ್ಜನನಿಗೊಂದಿಸಿ

ಶ್ಲೋಕ॥ ಕಿಂ ವರ್ಣಯಾಮಿ ತವ ದೇವಿ ವಿಚಿತ್ರಮೇತತ್।
ಯದ್ರಕ್ಷಿತೋಸ್ತಿ ವಿಷಮೇತ್ರ ಸುದರ್ಶನೋಯಂ॥
ಶತ್ರೂ ಹತೌ ಸುಬಲಿನೌ ತರಸಾ ತ್ವಯಾ ಯತ್
ಭಕ್ತಾನುಕಂಪಚರಿತಂ ಪರಮಂ ಪವಿತ್ರಂ॥

ಎಲೌ ಮಾತೆಯೇ ನೀನಿದೇ ರೂಪದಿಂ ಕಾಶೀಕ್ಷೇತ್ರದಲ್ಲಿ ದುಷ್ಟನಿಗ್ರಹ ಶಿಷ್ಟಪರಿಪಾಲನಾರ್ಥವಾಗಿ ನೆಲಸಬೇಕೆನ್ನಲು ತನ್ನಂಶದಿಂದಲಾದುರ್ಗಿಯಂ ನೆಲೆಗೊಳಿಸಿರುವಳು. ಆ ಸ್ಥಳವು ದುರ್ಗಾಘಾಟ್ ಎಂದು ಪ್ರಸಿದ್ಧವಾಯಿತು.

ಆರ್ಯ॥ ಸಿರಿದೇವಿಯು ನಿಜ ಭಕ್ತನ ಪಾಲಿಸಿ। ಹರುಷದಿ ರಾಜ್ಯವ
ನಾಳೆಂದು॥ ಸಿರಿಸಂಪದವನುಭವಿಸಲಂತ್ಯದಲಿ। ಪರಮ
ಪದವ ನೀಯುವೆನೆಂದು ॥೧॥

ಪೇಳುತಲಂತರ್ಹಿತೆಯಾಗಲು ಭೂ। ಲೋಲನೊಡನೆ
ಮುನಿಯಾಶ್ರಮಕೆ॥ ಬಾಲಕನ್ಯೆತಂದೆರಗಿದ ಸದ್ಗುಣ।
ಶೀಲೆಯೊಡನೆ ಮೌನಿಯ ಪದಕೆ ॥೨॥

ವಂದಿಸಲಾ ಸರ್ವರ ಮುನಿ ಪರಸುತ। ಕಂದನೆ ರಾಜ್ಯವ
ನಾಳೆಂದು॥ ಇಂದಿರೆಯನು ಬಿಡದಾರಾಧಿಸುರೆತಿರು। ಯೆಂದ
ನುಜ್ಞೆ ನೀಡಿದನಂದು ॥೩॥

ವರಶುಭಲಗ್ನದಿ ಬಂದರಯೋಧ್ಯಾ। ಪುರಿಗೆಲ್ಲರು ಬಹು
ವಿಭವದಲೀ॥ ಗುರುವಸಿಷ್ಠರಾಜ್ಞಾನು ಸಾರದಲಿ। ಪುರವ
ನಲಂಕರಿಸಿದರಲ್ಲೀ ॥೪॥

॥ಭಾಮಿನಿ॥ ಪರಮ ಸಂಭ್ರಮದಿಂದಯೋಧ್ಯಾ।
ಪುರನಿವಾಸಿಗಳೆಲ್ಲ ಹರಿ ವಿಷ್ಠರದೊಳಂದು
ಸುದರ್ಶನನ ಸತಿ ಸಹಿತ ಕುಳ್ಳಿರಿಸಿ॥
ಪರಿಪರಿಯ ವಿಭವದಲಿ ಪೊಗಳು।
ತ್ತಿರಲು ಮುನಿಗಳ ವೇದಘೋಷದಿ।
ವಿರಚಿಸಿದ ಮೂರ್ಧಾಭಿಷೇಕ ವಿಶಿಷ್ಟ ಮುನಿವರನೂ॥

ಇಂತು ಗುರುಗಳ ಅನುಗ್ರಹದಿಂದ ರಾಜ್ಯಧಿಪತ್ಯವಂ ಪಡೆದು ಸಕಲ ಸೌಭಾಗ್ಯವನ್ನು ಅನುಭವಿಸುತ್ತಾ ನಿರಂತರ ದೇವಿಯಂ ಆರಾಧಿಸುತಿರ್ದನು. ಕೇಳೈ ಜನಮೇಜಯ ರಾಜನೇ ಆದ್ದರಿಂದ ದೇವಿಯನ್ನು ನಂಬಿದವರಿಗೆ ಎಂದಿಗೂ ಭಯವಿಲ್ಲ.

॥ಭಾಮಿನಿ॥ ಅರಿದು ಮರೆದಾಗೊಮ್ಮೆ ತನ್ನನು।
ಸ್ಮರಿಸುತಿಹ ಮಾನವರ ಬಿಡದುದ್ಧರಿಪ
ತ್ರಿಜಗನ್ಮಾತೆಯನು ಬಿಟ್ಟನ್ಯದೈವಗಳ॥

ಮರೆಯ ಹೋಗಲುದ್ಧರಿಪರೇ ತಾ।
ಯ್ಗಿರುವ ಮಮತೆಯು ಸುತರಲಿನ್ನೊ।
ಬ್ಬರಿಗೆ ನಿಜವಾಗಿಲ್ಲ ನಿಶ್ಚಯ ಲೋಕಸಮ್ಮತವು॥

ಭಜಿಸು ಭಜಿಸು ಸುಖಿಯಾಗು ಎಲೆ ಮನವೇ

॥ಮಾಯಾಮಾಳವಗೌಳ॥ ॥ಆದಿತಾಳ॥

ಶಂಕರಿ ದೇಹಿಮೇ ಶುಭಮಂಗಳಂ॥

೩೯. "ಶ್ರೀಮದ್ರಾಮಾಯಣಕಥಾಸಂಗ್ರಹ" ಕೀರ್ತನಗ್ರಂಥ ಪರಿಚಯ

ತಿಮ್ಮಪ್ಪದಾಸರು ತಾವು ಬರೆದ ಅನೇಕ ಕೃತಿಗಳನ್ನು ಹತ್ತಾರು ನೋಟುಬುಕ್ಕುಗಳಲ್ಲಿ ಕ್ರಮಬದ್ಧವಾಗಿ ಬರೆದಿಟ್ಟಿದ್ದರು. ಅವುಗಳನ್ನು ತೆಗೆದುಕೊಂಡು ಹೋದವರು ಕೊಡದೆ ಮತ್ತೆ ಕೆಲವು ಕಳೆದುಹೋಗಿ ಮತ್ತೆ ಕೆಲವು ಅವರ ಮಕ್ಕಳು ಏನು ಮಾಡಿದರೋ ತಿಳಿಯದಾಗಿದೆ. ತಿಮ್ಮಪ್ಪದಾಸರ ಮೊಮ್ಮಗ ವೆಂಕಟದಾಸಪ್ಪನವರ ಬಳಿ ಶಶಿರೇಖಾ ಪರಿಣಯ ಮತ್ತು ಶ್ರೀಮದ್ರಾಮಾಯಣಕಥಾಸಂಗ್ರಹ ಹಸ್ತಪ್ರತಿಗಳು ದೊರೆತವು ಆ ಪೈಕಿ ಶಶಿರೇಖಾ ಪರಿಣಯ ಹರಿಕಥೆಯನ್ನು ಇಲ್ಲಿ ಪೂರ್ಣವಾಗಿ ಪ್ರಕಟಿಸಿದೆ. ರಾಮಾಯಣ ಕಥೆಯ ಕೀರ್ತನ ಗ್ರಂಥದ ಹಸ್ತಪ್ರತಿ ೧೩೦ ಪುಟಗಳನ್ನು ಒಳಗೊಂಡಿದ್ದು ಅದನ್ನು ಪ್ರತ್ಯೇಕ ಗ್ರಂಥವನ್ನಾಗಿ ಪ್ರಕಟಿಸುವ ಉದ್ದೇಶವಿರುವುದರಿಂದ ಇಲ್ಲಿ ಆ ಗ್ರಂಥವನ್ನು ಪರಿಚಯಿಸಿದೆ.

ಈ ಗ್ರಂಥವು ಇಷ್ಟದೇವತಾ ಸ್ತೋತ್ರದಿಂದ ಪ್ರಾರಂಭವಾಗಿದೆ.

ಶ್ರೀ ಭೂಮಿ ಕುಚಕುಂಭಮಾಂಕಿತಲಸದ್ವಕ್ಷಸ್ಥಳಂ ನಿರ್ಮಲಂ।
ಭೂಭಾರಾಖಿಳ ದುಷ್ಟದೈತ್ಯಮಥನಂ ಭಕ್ತಾದಿ ಸಂರಕ್ಷಣಂ॥
ಶೋಭಾಲಂಕೃಕ ದಿವ್ಯಸುಂದರತಮಾಶಂಭಾದಿಹಸ್ತಂ ಹರಿಂ॥
ಭೂಭಾಗೇ ಸುರಶೈಲಮಧ್ಯನಿಲಯಂ ವಂದೇ ಸದಾವೇಂಕಟಂ॥

ಅನಂತರ ಆರಾಧ್ಯದೇವ ವೆಂಕಟೇಶನನ್ನು ಸ್ತುತಿಸಿದ್ದಾರೆ.

ಶ್ರೀಶ ಪೊರೆ ಜಗ। ದೀಶ ಸರ್ವೇಶಾ । ಶ್ರೀವೆಂಕಟೇಶ ॥ಪಲ್ಲವಿ॥

ಶ್ರೀಶ ನುತಜನ॥ ಪೋಷ ನಿಂಮಯ ।
ದಾಸನು ದಾಸರ॥ ದಾಸ್ಯವನಿತ್ತೆನ್ನ । ॥ಅನುಪಲ್ಲವಿ॥

ಸಿಂಧು ಶಯನನೆ। ಒಂದು ತವಪದ। ಹೊಂದಿದೆನು ದಯ।
ದಿಂದ ಪಾಲಿಸೋ ನಂದನಾ ಕಂದ। ಮುಕುಂದ ಗೋವಿಂದ ಆ।
ನಂದಾದಿ ಭಕ್ತರ ನಿಂದೆ ಕಾಯ್ದೊಂದಾಗಿ॥

ಇದರಲ್ಲಿ ರಾಮಾಯಣದ ಕಥಾಭಾಗವನ್ನು ಅಧ್ಯಾತ್ಮರಾಮಾಯಣದಿಂದ ತೆಗೆದುಕೊಂಡಿದ್ದಾರೆ:

ನಿನ್ನ ಮಹಿಮೆಗಳ್ನು ಪೊಗಳಲು । ಪನ್ನಗೇಂದ್ರನಿ । ಗಿನ್ನು ಶಕ್ಯವೆ।
ಕುನ್ನಿಯಾದೆನ್ನ ತಪ್ಪನ್ನು ಮನ್ನಿಸಿ। ನಿನ್ನಾ ಚರಿತ್ರಂಗ। ಳೆನ್ನಿಂದ ನುಡಿಸುತ
ಧೀರಕನಕಮಂ । ದಾರ ಸುಮನ ಪ। ರಿವಾರ ಪೋಷಣ । ಸಾರ ಸಾಂಖಿಕ॥
ದಾರೀಯ ಕೋರೀವು। ದ್ಧಾರ ಮಾಡೆನ್ನುತ। ಸುರಾಚಲಾಗ್ರವಿ । ಹಾರ ಜನಾರ್ದನ

ಇಲ್ಲಿ ಜನಾರ್ದನ ಅಂದರೆ ಜನರನ್ನು ಕಾಪಾಡುವವನು. ನನಗೆ ದಾರಿ ತೋರಿಸಿ ಕಾಪಾಡು ಎಂದು ಬೇಡಿಕೊಂಡಿದ್ದಾರೆ. ಎನ್ನ ತಪ್ಪನ್ನು ಮನ್ನಿಸು. ನಿನ್ನ ಚರಿತ್ರವನ್ನು ನನ್ನಿಂದ ನುಡಿಸು ಎಂದು ಭಕ್ತಿಭಾವದಿಂದ ಬೇಡಿಕೊಂಡಿದ್ದಾರೆ.

ಶ್ರೀ ಗಣಪತಿ ಸ್ತುತಿ

(ಗುರು ಚರಣಾ ಅನ್ನುವಂತೆ)

ಆದಿತಾಳ

ಶ್ರೀಗಜವದನ। ಸಲಹೈನಮ್ಮ। ಯೋಗಿಜನಾವನ। ಸುಗುಣಾಭರಣ।
ಅಜಸುರ ನಮಿತ। ಅಮಿತ ಸುಚರಿತ। ಭಜಕಜನಾರ್ಚಿತ। ಭವಸುತ ಪೂತ।
ಪಾಶಾಂಕುಶ ಧರ। ಪರಮದಯಾಕರ। ದೋಷವಿದೂತಾ।
ದೈತ್ಯವಿದಾರಾ। ವೆಂಕಟಾಚಾರ್ಯ। ಕರೆಯಲು ಮತಿಯಾ। ಕಿಂಕರಗೀಯ। ಬೇಕೆನ್ನಯಾ

ವಿನಾಯಕನಿಗೆ ಈ ಕಥೆಗೆ ನಿರ್ವಿಘ್ನವು ಮಾಡಯ್ಯ ಎಂದು ಬೇಡಿಕೊಂಡಿದ್ದಾರೆ. ಮುಂದಿನ ಪದ್ಯದಲ್ಲಿ ತಾವು ಬರೆಯುತ್ತಿರುವ ಹರಿಕಥೆಗೆ ಈ ಕಾರ್ಯದಲ್ಲಿ ಒದಗುವ ವಿಘ್ನಗಳನ್ನು ಬರದಂತೆ ಮಾಡು. ವಿಘ್ನ ಬರುವುದು ಬೇಡ, ಹೋಗುವುದೂ ಬೇಡ, ಕೆಸರು ಬಳಿದುಕೊಳ್ಳುವುದು ಬೇಡ, ಮೈ ತೊಳೆದುಕೊಳ್ಳುವುದು ಬೇಡವೆಂದು ನುಡಿಯಲ್ಲಿನ ಈ ಬೇಡಿಕೆ ಸುಂದರವಾಗಿದೆ.

ಭಾಮಿನಿ

ಸುಜನ-ಕುಜನರು ನಿಂಮ್ಮ ಪಾದವ। ಭಜಿಸುತಿಹರರಿಂದನೀನೇ॥
ಸೃಜಿಸಿಕೊಂಡಿಹೆವು ಭಯನಾಮವ ಕಾರ್ಯ ಸಾಧಿಪಕೆ।

ಸುಜನಂಗೆ ವಿಘ್ನಾರಿ ಮತ್ತಾ। ಕುಜನರಿಗೆ ವಿಘ್ನೇಶನೆಂಬುದು
ನಿಜವು ನಿಜವೀ ಹರಿಕಥೆಗೆ ನಿರ್ವಿಘ್ನವನು ಮಾಡೈ ॥೧॥

ಶಾರದಾಸ್ತುತಿ

ರಾಗ-ಭೂದೇವಿಗೆ ಛಾಯೆ

ವಾಣಿ ಪಾಲಿಸೆನ್ನನು ಫಣಿ। ವೇಣಿಯೆ ॥ಪಲ್ಲವಿ॥

ಕಮಲ ಭವನರಾಣಿ। ನಮಿಸುವೆ ಸುಶೋಣಿ।
ಭ್ರಮರಕುಂತಳೆ ಶುಕ। ವಾಣಿಯೇ ॥೧॥

ನಿರುತ ಜಿಹ್ವಾಗ್ರದಿ ಸು। ಸ್ಥಿರಳಾಗಿ ಹರಿನಾಮ
ಸ್ಮರಣೆ ಮಾಡಿಸು ಸರಸವೀಣಾಕರೇ ॥೨॥

ಸುರಗಿರೀಶನ ದಿವ್ಯ। ಚರಿತವ ನಿರತವು।
ಮರೆಯದಂದದಿ ಮಾಡು ಮಾತೆಯೇ ॥೩॥

ಇಲ್ಲಿ "ಸುರಗಿರೀಶನ ದಿವ್ಯ ಚರಿತ" ಮರೆಯಬಾರದು ನಾಲಿಗೆಯ ವಾಣಿ ನುಡಿಸುವುದೆಲ್ಲಾ ಎಂದು ಶಾರದಾಸ್ತುತಿ ಎಂದಿದ್ದಾರೆ.

ಆಕೆಯ ಕೈಹಿಡಿದ ಪತಿ ಲೋಕನಿರ್ಮಾಣ ಕಲಾಕೋವಿದನೆನಿಸಿದಂ
ಅವಳ ಕೈಪಿಡಿದು ರಾ। ಜೀವಭವಂ ನಿಖಿಳಲೋಕನಿರ್ಮಾಣ ಕಲಾ।
ಕೋವಿದನೆನಿಸಿದನಾ ವಾ। ಗ್ದೇವತೆ ಸುರಿಮತಿಯನಿತ್ತು ಸಲಹಲೀಜಗವ॥

ಇಲ್ಲಿ ದಾಸರು ಬಯಸುವುದು ಕೇವಲ ತನಗಾಗಿ ಅಲ್ಲ, ಇಡಿ ಜಗತ್ತಿಗಾಗಿ, ಜಗತ್ತನ್ನು ಸಲಹಬೇಕು, ಜಗದ ಜನರಿಗೆ ಏನೆಲ್ಲಾ ಇದೆ, ಆದರೆ ಜಗತ್ತಿಗೇ ಇರುವ ಕೊರತೆ "ಮತಿ" ಅದು "ಸನ್ಮತಿ". ಅದೊಂದು ದೊರೆತರೆ ಸಾಕು, ಜಗತ್ತಿನ ಸಂರಕ್ಷಣೆಗೆ ನಿರಾತಂಕ ಅನ್ನುವ ಬೇಡಿಕೆ ಬಹು ದೊಡ್ಡದು. ಲೋಕ ಅಜ್ಞಾನದಲ್ಲಿ ಮುಳುಗಿದೆ. ಒಳ್ಳೆ ಕೆಲಸಗಳಿಗೆ ಬೇಕಾದ ಸುಜ್ಞಾನವನ್ನು ವಾಗ್ದೇವಿ ಕರುಣಿಸಲಿ ಎಂಬುದಾಗಿ ಬೇಡುವುದು ದಾಸರ ಹಂಬಲವಾಗಿರುತ್ತದೆ.

ಸರಸ್ವತಿ ಪ್ರಾರ್ಥನೆ ನಂತರ ನಾರಾಯಣ ಸ್ತುತಿ ಮಾಡಿದ್ದಾರೆ

ಇಲ್ಲಿ ಪ್ರಸಂಗ: ಭೂ ಭಾರ ನಿವಾರಣೆಗಾಗಿ ಸರ್ವ ದೇವತೆಗಳೂ ಭೂದೇವಿ ಸೇರಿ ಮಹಾವಿಷ್ಣುವನ್ನು ಪ್ರಾರ್ಥಿಸುವುದು.

ಓಂ ನಾರಾಯಣಾಯ. ಈ ನಾರಾಯಣ ಮಂತ್ರವು ತಾರಕವೆನಿಸಿದೆ. ಈ ನಾರಾಯಣ ಸ್ಮರಣೆ ಬೆಳಕು ಮಾಡುವವನಿಗೆ ರಾತ್ರಿ ಮಾಡಿದ ಪಾಪ ನಾಶ. ಸಂಜೆ ಮಾಡುವವನಿಗೆ ದಿವಸ ಕೃತ ಪಾಪ ನಾಶ. ನಡುಹಗಲಲ್ಲಿ ಆದಿತ್ಯಾಭಿಮುಖನಾಗಿ ಸ್ಮರಿಸುವವನಿಗೆ ಎಲ್ಲಾ ಪಾಪ ಪರಿಹಾರ. ಹೀಗೆಲ್ಲಾ ಸಾರಿ ಹೇಳುತ್ತದೆ ಶ್ರುತಿ. ನಾರಾಯಣ ಎಂದು ಪ್ರಾರಂಭವಾಗುವ ಈ ತಿಮ್ಮಪ್ಪದಾಸರ ಕೃತಿ ಇವರ ಪರಂಪರೆಯವರ ನಾಲಿಗೆಯಲ್ಲಿ ನಿರಂತರ ಮೊಳಗುತ್ತಿದೆ.

ರಾಗ- ಕಮಾಚ್ ರೂಪಕ ತಾಳ. ಪಂತವರಾಳಿಯನ್ನು ಕೂಡ ಸೂಚಿಸಿದ್ದಾರೆ.

ನಾರಾಯಣ ನಿಗಮ ವಿನುತ। ಕ್ಷೀರಾಂಬುಧಿ ಶಯನ ಸದಯಪ ॥ಪಲ್ಲವಿ॥

ಸುಂದರಕರ ಕರುಣಾಕರ। ಮಂದರ ಗಿರಿಧರಣ ಸದಾ।
ನಂದ ಸಕಲ ಸುಜನಾವನ। ಕುಂದರದನ ಕಮಲ ನಯನ ॥೧॥

ವಾಸವನುತ ಪರಮೇಶ್ವರ। ದೋಷರಹಿತ ಪೊರೆ ಸಂತತ॥
ಶೇಷ ಶಯನ ಪುರುಷೋತ್ತಮ। ವಾಸುದೇವ ವರ ಗುಣಯುತ ॥೨॥

ತೋರಿಸು ನಿನ್ನಯ ಪದವನು। ಸೇರಿಸು ನಮಗತಿಮುದವಂ।
ಭಾರವನಿಳಿಸೀ ಧರಣಿಯ । ಧೀರನೆ ಸುರಶೈಲೇಶ್ವರ ॥೩॥

ಇಲ್ಲಿ ದಾಸರ ಅಂಕಿತ ಮೊದಲೇ ತಿಳಿಸಿದಂತೆ "ಸುರಶೈಲೇಶ್ವರ" ಎಂದು ವ್ಯಕ್ತವಾಗಿದೆ.

ಈ ಉತ್ತಮವಾದ ಕೃತಿ ವೇದೋಪನಿಷತ್ತಿನಲ್ಲಿ ಬರುವ ನಾರಾಯಣ ಮಂತ್ರ ಹಾಗೂ ನಾರಾಯಣ ಸೂಕ್ತದ ಅರ್ಥವನ್ನೂ ತಿಳಿಸುತ್ತದೆ.

ಶ್ರೀರಾಮ ಜನನದ ನಂತರ ಕೌಸಲ್ಯಾದೇವಿಯು ಪೂರ್ವ ತಪಃ ಪ್ರಭಾವದಿಂದ ಆವಿರ್ಭವಿಸಿದ ಪರಮಾತ್ಮನು ದಿವ್ಯ ದೃಷ್ಟಿಯಿತ್ತು ತನ್ನ ನಿಜ ರೂಪವನ್ನು ತೋರಿ ದೇವಕಾರ್ಯ ವಿಚಾರ ತಿಳಿಸುತ್ತಾನೆ. ಆಗ ಕೌಸಲ್ಯಾ ಭಗವತ್ಸರೂಪವನ್ನು ನೋಡಿ ನಮಿಸಿ ಸ್ತುತಿಸುತ್ತಾಳೆ. ಈ ವಿಚಾರ ಜ್ಞಾನಿ ತಿಮ್ಮಪ್ಪದಾಸರ ಕೃತಿಯಲ್ಲಿ ಹೀಗೆ ಮೂಡಿಬಂದಿದೆ.

ರಾಗ – ಸಾವೇರಿ ಆದಿತಾಳ

ನಿನ್ನ ನೋಡಿ ಧನ್ಯಳಾದೆ। ಪನ್ನಗೇಂದ್ರ ಶಯನಾ ॥ಪ॥

ಸನ್ನುತಾಂಗಪಾ। ವನ್ನ ಚರಿತಗುಣ। ರನ್ನ ಪರಾತ್ಪರ।
ಚಿನ್ಮಯಾ ರೂಪನೆ ॥ಅ.ಪ.॥

ಅಕ್ಷಯ ರೂಪ ಅ। ಧೋಕ್ಷ ಜ ನತಜನರಕ್ಷಾ। ಧ್ಯಕ್ಷ।
ಪಕ್ಷಿ ವಾಹನ ಮುಮುಕ್ಷು ವರದ ನತದಕ್ಷ । ತಾರ್ಕ್ಷ
ರಕ್ಷ ಮಾರಪಿತ। ದಕ್ಷವೈರಿನುತ। ಕಕ್ಷಿಗತ ಜಗದ್ರಕ್ಷರ ಮಾಧವ ॥೧॥

ನೀಲವರ್ಣಸುವಿ। ಶಾಲವಕ್ಷ ವನಮೌಲಾ। ಲೋಲ।
ಮೂಲಪುರುಷ ದುಶ್ಶೀಲ ದೈತ್ಯಜನ। ಜಾಲಾ। ಕಾಲ।
ಬಾಲಚಂದ್ರ ನಿಭ। ಫಾಲ ತುಲಸೀವನ। ಮಾಲಾಧಾರ ಗೋಪಾಲ ನಿರಂತರ॥೨॥

ಧ್ಯಾನಗಮ್ಯಮುನಿ। ಮಾನಸಾಂಬುಜನಿವಾಸ। ಶ್ರೀ ಶಾ।
ದೀನ ವತ್ಸಲ। ಕೃಪಾನಿಧಿ ಹೇ ಪರಮೇಶಾ । ಈಶ।
ನೀನಗಿತ್ತ ಶ್ರೀ ಮಾನುಷ ಲೀಲೆ। ಧೇನು ಎನಗೆ ಪರಮಾನುಗ್ರಹವೈ ॥೩॥

ಇದೊಂದು "ಬಾಲಕಾಂಡ"ದಲ್ಲಿ ಬರುವ ಕೌಸಲ್ಯದೇವಿಯು ಶ್ರೀರಾಮಚಂದ್ರನ ದಿವ್ಯರೂಪವನ್ನು ಕಂಡು ಹಾಡಿರುವ ಹಾಡು. ಗೋಪಾಲ ಭೂಮಿಯನ್ನು ಉದ್ಧರಿಸಿದವನು.

ಶ್ರೀರಾಮಚಂದ್ರ ಕಥಾ ಕೀರ್ತನೆಯನ್ನು ಬರೆಯಹೊರಟಿರುವ ದಾಸವರ್ಯರು "ರಾಮಕಾರ್ಯಕ್ಕೆ ಸಾರಥಿ" ಆಗಿರುವ ಮಾರುತಿಯನ್ನು ಮೊದಲು ಸ್ತುತಿಸಿದ್ದಾರೆ. ಅವರ ಪಾಲಿಗೆ ಸುರಗಿರಿಯರಸ ಬೇರೆಯಲ್ಲ ಭೂ ಮಧ್ಯದಲ್ಲಿರುವ ಅಮರಗಿರಿಶಿಖರಗತ ಮಂದಿರದ ಅತ್ಯುನ್ನತಿಯಲ್ಲೂ ವಿರಾಜಮಾನವಾಗಿರುವ ಜನಾರ್ದನ ಬೇರೆಯಲ್ಲ. ಶ್ರೀರಾಮ ಸನ್ನಿಧಿ ಸೇರಲು ಒಂದೊಂದು ಮೆಟ್ಟಲುಗಳನ್ನು ಏರಿ ಏರಿ ಹಂತ ಹಂತವಾಗಿ ಮೇಲೇರಲೇ ಬೇಕಾಗಿದೆ. ಆ ದಾರಿಯನ್ನು ತೋರಿಸಲು (ಅಮರಗಿರಿಯ ಬುಡದ ಬಾಗಿಲಲ್ಲಿ ಕಾಯುತ್ತಾ ಕುಳಿತಿರುವ ಶ್ರೀರಾಮ ಭಕ್ತ ಮಾರುತಿ ಅವನಿಗೆ ವಂದಿಸಿ ಪೂಜೆ ಸಲ್ಲಿಸಿ ಮೇಲೇರುವುದು ಇಲ್ಲಿಯ ಸಂಪ್ರದಾಯ) ಅವನಾದರೊ ಬೆಟ್ಟವನ್ನೇ

ಕಿತ್ತ ಸಾಹಸಿ, ಬೆಟ್ಟದ ಮೇಲೂ ಇರುವವ. ದಾಸರು ಬೆಟ್ಟವಿಳಿದು ಬೇಗ ಬಾರೋ, ಜಗಜಟ್ಟಿ ವೀರ ಹನುಮನಿಗೆ ಸಮನಾರೋ ಎಂದು ಭಾವಿಸಿ ವಂದಿಸಿ ಬರೆದಿರುವ ಈ ಕೃತಿ ಸುರಗಿರೀಶನನ್ನು ಭಾಜಿಪ ತೆರನ ತೋರಿಸೈ ಎಂದು ಬೇಡಿದ್ದಾರೆ. ಕಾರಣ ಅವರ ಆರಾಧ್ಯ ದೇವರ ಮೇಲಿನ ಭಕ್ತಿ ರೂಪಕ ಇದಾಗಿರುತ್ತದೆ.

ಮಾರುತಿ ಸ್ತುತಿ

ರಾಗ: ಜಂಜೂಟಿ **ತಾಳ: ರೂಪಕ**

ಶ್ರೀರಾಮ ಕಾರ್‍ಯಾರ್ಥ ಕಾರ್‍ಯ ಸಲಹೋ ಮಾರುತಿ ಸಾರಥಿ ನೀ ॥ಪ॥

ವೀರಾಧಿವೀರ ಭಜಿಪೆ ಸತತ। ನಿನ್ನ ಕೀರುತೀ ॥ಅ.ಪ.॥

ಶರಧಿಯನ್ನು ದಾಂಟುತೈದಿ । ತ್ವರಿತದಿ ಲಂಕೆಯಾ॥
ಪುರದೊಳಪೋಗುತ ತಂದೆ ಜಗ। ನ್ಮಾತೆ ಸೀತೆಯಾ ॥೧॥

ರಾಮನಾಮದುಂಗರವಂ । ಕಾಮಿನಿಗಿತ್ತೆ॥
ಕ್ಷೇಮವಾರ್ತೆಯರುಹಿ ಚೂಡಾ। ರತ್ನವನನಾಂತೆ। ॥೨॥

ವನವ ಮುರಿದು ದೈತ್ಯರನ್ನು। ಹನನಗೈಯ್ಯುತ್ತಾ॥
ಧನುಜನಗರಿಯುರುಹಿ ಬಂದೆ। ವನಧಿವಾಂಟುತಾ ॥೩॥

ರಘು ಕುಲೇಶ್ವರನ್ನ ನಿನ್ನ। ಪೆಗಲೊಳೇರಿಸಿ॥ ಜಗದ
ಭಾರ ಇಳುಹಿಸಿದ್ಯೆ। ಪರಮ ಸಾಹಸೀ ॥೪॥

ನಿರತ ನಿನ್ನ ಚರಣ ಯುಗಳ। ಕೆರುಗುತಿರ್ಪೆನೈ॥
ಸುರಗಿರೀಶನನ್ನು ಭಜಿಪ ತೆರನ ತೋರಿಸೈ ॥೫॥

ಇದೊಂದು ಮಾರುತಿಯನ್ನು ಅನನ್ಯ ಭಕ್ತಿ ಭಾವದಿಂದ ಬೇಡಿರುವ ಕೃತಿ. ಶ್ರೀರಾಮನನ್ನು ಹೆಗಲೊಳಿರಿಸಿ ಭೂಭಾರವಿಳಿಸಿದ ಮಾರುತಿಯನ್ನು ಕುರಿತು ತನ್ನ ಪ್ರಭುವನ್ನು ಭಜಿಸಿ ಒಲಿಸಿಕೊಳ್ಳಬೇಕು. ತನ್ನ ಅಂಗೈನಲ್ಲಿ ಪ್ರಭುವನ್ನು ನಿಲಿಸಿಕೊಂಡು ನೋಡಿ ಆನಂದಿಸಿದ ಮಾರುತಿಗಿಂತ ಮತ್ತಾರು ಅರ್ಹರು. ಅವನು ಕೃಪೆ ಮಾಡಿ

ತೋರಿಸಿದ ಹಾದಿಯಲ್ಲೆ ಹೆಜ್ಜೆ ಹಾಕುತ್ತಾ ಮುಂದೆ ಆ ಶ್ರೀರಾಮನನ್ನೇ ಶ್ರೀ ರಘುವರ ಸಲಹು ಎಂದು ದಾಸರು ಬೇಡಿದ್ದಾರೆ.

ಶ್ರೀ ರಘುವರ ಸಲಹೈ

ಶ್ರೀ ರಘುವರ ಕರುಣಾಕರ ಸಲಹೈ॥
ನೀರಜಪತ್ರ ನೇತ್ರ। ಸನಕ ನಾರದ ವಿನುತಾ ॥ಪಲ್ಲವಿ॥

ಆನಂದ ಸಚ್ಚಿದಾನಂದ ರೂಪ। ಧ್ಯಾನಗಮ್ಯನೇ॥
ಮೌನೀಂದ್ರ ವಂದ್ಯಪಾದ। ದುರಿತ ಕಾನನ ದಹನಾ ॥೧॥

ಲೀಲಾ ಮನುಷ್ಯ ದೇಹ ಮೌನಿ। ಜಾಲ ಪಾಲಕಾ॥
ಬಾಲೇಂದು ಮೌಳಿವಂದ್ಯ। ಭಜಕ ಪಾಲನ ಚತುರಾ ॥೨॥

"ದೇವಾದ್ರಿವಾಸ" ದೀನ ಘೋಷ। ರಾವಣಾಂತಕಾ।
ದೇವಾದಿ ದೇವ ಸೇವ್ಯ। ಚರಣ ಪಾವನ ಚರಿತಾ ॥೩॥

ಇಲ್ಲಿ ಅವರ ಅಂಕಿತದ ಗುರುತು "ದೇವಾದ್ರಿವಾಸ" ಎಂದಾಗಿರುತ್ತದೆ. ಅಂದರೆ ಅಮರಗಿರಿ ಅದ್ರಿಗಿರಿ ಸಮಾನ ಎಂದು ತಿಳಿಯಬೇಕು.

ಈ ಕಥೆಯಲ್ಲಿ ಮುಂದುವರಿದು ಭೂ ಭಾರ ನಿವಾರಣೆಗಾಗಿ ಭೂ ಮಾತೆಯ ಮನವಿಯನ್ನು ತಿಳಿದ ಬ್ರಹ್ಮಾದಿ ದೇವತೆಗಳು ಶ್ರೀ ಮಹಾವಿಷ್ಣುವನ್ನು ಪ್ರಾರ್ಥಿಸಲು ಅವನ ಸನ್ನಿಧಿಗೆ ಬಂದು ಪ್ರಾರ್ಥಿಸಿದರು. ಆಗ ಬ್ರಹ್ಮ ಮಾಡಿದ ಪ್ರಾರ್ಥನೆಯನ್ನು ದಾಸರು ಹೀಗೆ ಚಿತ್ರಿಸಿದ್ದಾರೆ.

ರಾಗ: ಕಾನಡ

ಪೊರೆಯ್ಯೆ। ಕರುಣಾಳುವೆ। ಪೊರೆಯ್ಯೆ ॥ಪಲ್ಲವಿ॥

ಸೃಷ್ಟಿ। ಸ್ಥಿತಿ ಲಯ। ವಷ್ಟು ಕಾರ್ಯವು। ನಿನ್ನ ದೃಷ್ಟಿ ಮಾತ್ರದಿ।
ಮಾಯೆ। ಯಷ್ಟು ಮಾಡಿಪಳಯ್ಯ ॥೧॥

ಸತತ ತನ್ಮಾಯ ಮೋಹಿತನಾಗದಂತೆನ್ನ।
ಪತಿಕರಿಸುತ ಭಕ್ತಿ। ಪಥವ ತೋರಿಸುತೀಗ ॥೨॥

ದುರುಳ ರಾವಣ ನನ್ನ। ವರದಿಂದ ಕೊಬ್ಬಿನಿ। ರ್ಜರರ
ಬಾಧಿಸುತ್ತಿಪ್ಪ। ನರುಹಲಗಾಧವೈ ॥೩॥

ಮನುಜರಿಂ ಮರಣ ವೆಂ। ದೆನುತಿತ್ತ ವರವನಿಗೆ।
ಮನುಜಾವ ತಾರದೊಳ್। ಸೀಳ್ದನತಿ ದೈತ್ಯರ ಗೆಲ್ಲುತ ॥೪॥

ಮೂರು ಲೋಕವನೆಲ್ಲ। ಸೂರೆ ಮಾಡುವ ಕಲಿದರ್ಪ
ಧೀರಾ ಸುರಾದ್ರಿ ವಿಹಾರ ಶ್ರೀ ವೇಂಕಟ ॥೫॥

ಬಾಲಕಾಂಡದಲ್ಲಿ ದಶರಥನ ನಾಲ್ಕು ಮಕ್ಕಳು ಜನನದ ನಂತರ ಅರಮನೆಯಲ್ಲಿನ ನಾರಿಯರೆಲ್ಲ ತೊಟ್ಟಿಲುಗಳನ್ನು ಶೃಂಗರಿಸಿ ತೊಟ್ಟಿಲಲ್ಲಿ ಶ್ರೀರಾಮಚಂದ್ರ ಮೊದಲಾದವರನ್ನು ಮಲಗಿಸಿ ತೊಟ್ಟಿಲು ತೂಗುವ ಜೋಗುಳ ಪದ ಇದು.

ಜೋ ಜೋ ಕ್ಷೀರಾಬ್ಧಿಶಯನ

ರಾಗ: ಆನಂದ ಭೈರವಿ **ತಾಳ: ಅಷ್ಟ ತಾಳ**

ಜೋ ಜೋ ಕ್ಷೀರಾಬ್ಧಿ ಶಯನ ಪನ್ನಗತಲ್ಪ
ಸುರನುತ ಚರಣ ಜೋ ಜೋ ॥ಪ॥

ಜೋ ಜೋ ಭೂ ಭಾರ ಹರ ದಶವಿಧ ರೂಪ
ಸುಗುಣ ಕಲಾಪ ಜೋ ಜೋ ॥ಅ.ಪ.॥

ದುರುಳ ಸೋಮಕನ ಸಂ। ಹರಿಸಿ ವೇದವ ತಂದು
ಪರಮೇಷ್ಠಿಗಿತ್ತು ಮತ್ತೆ
ಶರಧಿಯಳ್ಮುಳುಗಿ ಮಂ। ದರ ಶೈಲವನು ಪೊತ್ತು
ಸುರಪನ ಸಲವಿದ ಪರಮ ಪಾವನಮೂರ್ತಿ ॥೧॥

ಧರಣಿ ದೇವಿಯ ನಪಹ। ರಿಸಿದವನ ಕೊಂದೆ
ವರಾಹಾವತಾರದಲ್ಲಿ॥
ತರಳ ಬಾಬಾ ಎಂದು। ಕಲೆಯೆ ಕಂಭದಿ ಬಂದೆ।
ಕರುಣಾದಿ ಬಲಿಯನುದ್ಧರಿಸಿದ ಪರಮಾತ್ಮ ॥೨॥

ಪರಶು ಪಿಡಿದು ದುಷ್ಟ ಧರಣಿ ಪಾಲರ ವಂಶ।
ತರಿದು ಭಾರ್ಗಪನೆನ್ನಿಸಿ॥
ಪರಮೇಷ್ಠಿ ನುತಿಸಲು ದೊರೆ ದಶರಥನಿಂಗೆ
ತರಳನಾಗಿಹ ಸುಂದರ ರಾಮಚಂದ್ರಾ ॥೩॥

ದುರುಳ ಕಂಸಾದಿ ದುಷ್ಟರನು ಮರ್ದಿಸುತ ಪಾಂಡ
ವರ ಪರಿಪಾಲಿಸಿದಾ
ನೆರೆಸಾಬೌದ್ಧಕಲ್ಕಿ ರೂಪದಿ ಭೂಮಿಭಾರವ
ಪರಿಹರಗೈದ ಶ್ರೀಪರಮಪುರುಷನಹ ॥೪॥

ನೆರೆನಾಲ್ಕು ರೂಪದಿಂ ತರಳರಾಗಿಯೆ ನೃಪ
ವರನಿಗಾನಂದವಿತ್ತೆ
ಹರಿ ನಿನ್ನ ಮಹಿಮೆ ಯಾರರರಿವರು ಕಡೆಯಲ್ಲಿ
ಸುರಗಿರಿಯಲ್ಲಿ ನೆಲಸಿರುವ ವೆಂಕಟರಾಯ ॥೫॥

ಈ ಸ್ತುತಿ ರೂಪವಾದ ಈ ಜೋಗುಳದಲ್ಲಿ ಸ್ವಾಮಿಯ ಹಿಂದಿನ ಅವತಾರಗಳನ್ನು ಹೇಳಿದೆ. ಇಂದಿನ ಸ್ಥಿತಿಯಲ್ಲಿ ಹರಿಯ ಮಹಿಮೆಯನ್ನು ಬಲ್ಲವರಾರು? ಮುಂದೆ ಏನೇನಾದಿತೋ ಕಂಡವರಾರು. ಇಂದಿನ ಆನಂದವೇ ನಮ್ಮ ಪಾಲಿಗೆ ನಿಜವಾದಾನಂದ ಎಂದು ಸಡಗರ ಪಟ್ಟರೂ, ಆ ಸಡಗರದ ನಡುವೆ ಸುರಗಿರಿಯಲಿ ನೆಲಸಿರುವ ವೆಂಕಟರಮಣನನ್ನು ಮರೆಯದಿರುವ ಎಚ್ಚರ ಸ್ತುತಿಯಲ್ಲಿ ಬಹಳ ಮೋಹಕವಾಗಿ ಮೂಡಿ ಬಂದಿದೆ.

"ಅಹಲ್ಯಾ ಶಾಪ ವಿಮೋಚನೆ"

ಪ್ರಾತಃ ಸ್ಮರಣೀಯ ನಾರೀಮಣಿಯರಲ್ಲಿ ಮೊದಲಿಗಳು "ಅಹಲ್ಯೆ". ಸತ್ಯಾಸತ್ಯತೆಯ ಒರೆಗಲ್ಲಿನಲ್ಲಿ ಸಾಂದರ್ಭಿಕ ಋಷಿ ಶಾಪದಿಂದ ವಂಚಿತಳಾಗಿ ಶಿಲೆಯಂತೆ ಆಶ್ರಮದ

ಶೂನ್ಯತೆಯಲ್ಲಿ ಬಿಡುಗಡೆಯಾಗಿ ಕಾದು ಕುಳಿತ ಮಹಾಮಾತೆ. ಕೊನೆಗೊಮ್ಮೆ ರಾಮ ಪಾದಸ್ಪರ್ಶದಿಂದ ಸಮಾಧಿಯಿಂದ ಹೊರಬಂದ ಶಿಲಾ ತಪಸ್ವಿನಿ ತನ್ನ ಬಯಕೆ ಫಲಿಸಿದ ಹರುಷದಲ್ಲಿ ಅದಕ್ಕೆ ಕಾರಣನಾದ ಶ್ರೀರಾಮನನ್ನು ಕುರಿತು ಸ್ತುತಿಸಿರುವ ದಾಸರ ಈ ಪರಿಪಕ್ವ ಮನಸ್ಸಿನ ಸ್ತೋತ್ರ ಹೇಗೆ ಮೂಡಿಬಂದಿದೆ ನೋಡಿ.

ರಾಗ: ಸುರಭಿ **ರೂಪಕ ತಾಳ**

ಮಂಗಳಾರತಿಯನೆತ್ತಿರೆ ಎಂಬತೆ

ಉಧೋ ಕೃತಾರ್ಥಳಾದೆ ನಿನ್ನ ಪಾದಧೂಳಿಯಿಂ। ಮಹಾನು
ಭಾವರರಿಯರಿದನು ಬ್ರಹ್ಮರುದ್ರರುಂ ॥ಪ॥

ವಿಚಿತ್ರ ವೈಮಸ್ಯ ಭಾವದಿಂದ ತೋರಿಪೆ?।
ಅಚಂಚಲಿಂಗದೆಂತು ಚಲನ ಮಾಯಾತೀತಗೆ ॥೧॥

ಅದಾರಪಾದ ರಜದಿ ಶುದ್ಧಲಾದ ಗಂಗೆಯು।
ಸದಾ ಪವಿತ್ರಗೈವಳೆಲ್ಲರಾ ಸ್ವರೂಪಮಂ ॥೨॥

ನಿರೀಕ್ಷಸಲ್ಕದಾವ ಪೂರ್ವಪುಣ್ಯ ಪುಂಜವೋ
ನರಸ್ವರೂಪ ದಿವ್ಯಸುಂದರಾಂಗ ಪಾಹಿಮಾಂ ॥೩॥

ಪರಾತ್ಮ ನಿನ್ನ ಮಾಯೆಯಿಂ ಗುಣ ಪ್ರಭೇದದಿಂ।
ವಿರಂಚಿ ವಿಷ್ಣು ರುದ್ರ ರೂಪರಾಗಿ ಲೋಕದೊಳೆ ॥೪॥

ಸರಾಗದಿಂದ ಗೈವ ಸೃಷ್ಟಿ ಸ್ಥಿತಿ ಲಯಂಗಳಂ।
ನಿರಾಕಾರಂಗದೆಂತು ಪೋದಿಸಲ್ಕೆ ಯೋಗ್ಯವೂ ॥೫॥

ವಿಚಿತ್ರ ಕಾರ್ಯ ಕಾರಣಾದಿ ಭೇದವೆಲ್ಲವೂ।
ಅಚುಂಬಿತ ಪ್ರಭಾವ ನಿನ್ನ ಮಾಯಾ ಕಾರ್ಯವೂ ॥೬॥

ಯೀ ನಿನ್ನ ಮಾಯೆಯಿಂದ ನಿನ್ನ। ನರಿಯದಜ್ಞರು।
ಮಾನುಷ್ಯ ರೂಪನೆಂದು ಭಾವಿಸುತ್ತಲಿರ್ಪರು ॥೭॥

'ಸುರಾಚಲಾಗ್ರ ವಾಸ' ಭಕ್ತಜಾಲ ಪಾಲಕಾ।
ನಿರಂತರಂತವಾಂಘ್ರಿ ಭಕ್ತ ಭೂಪದೇಹಿಮೇ ॥೮॥

ಜೀವನದ ಅತಿಮುಖ್ಯ ಕಾಲವನ್ನೆಲ್ಲಾ ಶಿಲೆಯಂತೆ ಕಳೆದಿದ್ದ ತಪಸ್ವಿನಿಗೆ ಒಮ್ಮೆಗೇ ಶ್ರೀರಾಮದರ್ಶನವಾದ ನಂತರ ಬೇರೇನೂ ಬೇಡ. ಭಗವಂತನ ಪಾದ ಕಮಲ ದಿವ್ಯದರುಶನ ಹೊರತು ಬೇರೇನು ಬೇಡವೆನ್ನಿಸುತ್ತದೆ. ಅಹಲ್ಯೆ ಸಾಮಾನ್ಯ ತಪಸ್ವಿನಿಯಲ್ಲ, ಬ್ರಹ್ಮಜ್ಞಾನ ಪಡೆದವಳು.- ಬ್ರಹ್ಮನಲ್ಲಿ ಲೀನವಾದ ಮೇಲೆ ಬೇರೇನು ಅನ್ನುವ ಹಾಗೆ. ಇಂತಹ ಉನ್ನತ ಮಟ್ಟಕ್ಕೆ ದಾಸರು ಈ ಕೃತಿಯಲ್ಲಿ ಸ್ವಾಮಿಯ "ನಿರಾಕಾರ" ಸ್ವರೂಪವನ್ನು ಜಗತ್ತಿನ ಮಾಯಾರೂಪ, ಸೃಷ್ಟಿ ಸ್ಥಿತಿ ಲಯ ಎಲ್ಲವನ್ನೂ ವಿವರಿಸಿದ್ದಾರೆ.

ಮಿಥಿಲೆಗೆ ರಾಮನ ಆಗಮನ

ಇಲ್ಲಿ ಶ್ರೀರಾಮಚಂದ್ರನು ವಿಶ್ವಾಮಿತ್ರರ ಸಹಿತ ಅನುಜರ ಜೊತೆಯಲ್ಲಿ ಮಿಥಿಲೆಗೆ ಬರುತ್ತಿರುವ ಸಮಯ. ಊರಿನಲ್ಲಿ ಈ ವಿಚಾರ ನಗರದಲ್ಲಿ ಸುದ್ದಿಯಾಗಿ ನಗರ ಸಂಭ್ರಮಿಸುತ್ತದೆ. ಊರ ಮಧ್ಯಭಾಗದಲ್ಲಿ ರಾಮ ಬರುತ್ತಿದ್ದಾನೆ. ಅರಸು ಕುಮಾರನನ್ನು ನೋಡುವ ಸಂಭ್ರಮದ ವರ್ಣನೆ. ಮಿಥಿಲಾಪುರಿಯಲ್ಲಿ ಹೇಗೆ ಬಂದಿದೆ ನೋಡಿ. ಸಖಿಯೊಬ್ಬಳ ಬಾಯಲ್ಲಿ ಬರುವ ಸುಂದರ ಹಾಡು ವರ್ಣನೆ ರೂಪದಲ್ಲಿ–

ರಾಗ– ದರ್ಬಾರ್ **ರೂಪಕ–ತಾಳ**

ಶ್ರೀರಾಮ ಚಂದ್ರ ಬರುವ। ನಾರೀ ಮಣಿಯೆ। ಬಾರೆ ನೋಡುವಾ ॥ಪಲ್ಲವಿ॥

ವಾರಿಜ ದಳ ನೇತ್ರ ಸುಕು । ಮಾರ। ವೀರ। ಧೀರನಾಗಿಹ ॥ಅ.ಪ.॥

ದಶರಥ ಸುಕುಮಾರನಂತೆ। ಕುಶಿಕಜನೊಡನೈತಹನಂತೆ।
ಅಸುರೆ ತಾಟಕಿ ಗೆಲಿದವನಂತೆ। ಋಷಿಯ ದುಃಖವ ಕಾಯ್ದನಂತೆ ॥೧॥

ಅನುಜ ಲಕ್ಷ್ಮಣನಿರುವನಂತೆ। ಜನಕನ ಮನೆಗೈದುವರಂತೆ।
ಧನುವನೀತನುನೋಳ್ಪನಂತೆ। ಘನತರ ಸಾಹಸಿಗರಂತೆ ॥೨॥

ಸಾಸಿರ ರವಿ ಭಾಸನಂತೆ। ದೋಷರಹಿತ ಚರಿತನಂತೆ।
ಭಾಸುರಾಂಗನಾದ ಶ್ರೀ। ನಿವಾಸನಂತೆ ವರದನಂತೆ ॥೩॥

ಇಲ್ಲಿ ಶ್ರೀನಿವಾಸ ಮಹಾವಿಷ್ಣುವಿನ ರೂಪದಲ್ಲಿ ಬರುವನೆಂದು ಶ್ರೀನಿವಾಸ ಎಂಬುದರಿಂದ ಅವನು ಸೀತಾಪತಿ ಆಗುವನು ಅನ್ನುವ ಸೂಚನೆ ಇಲ್ಲಿದೆ..! ಇಲ್ಲಿ ಬರುವ ಸುಂದರ ವರ್ಣನೆ ರಾಮನ ಮುಖವರ್ಣನೆ ಚಂದ್ರ ಆಹ್ಲಾದ ಕೊಡುವವನು ಅಂತಹ ಷೋಡಶ ಕಳಾಪರಿಪೂರ್ಣನಾದ ಚಂದ್ರ, ಇವನೇ ಆನಂದದಾಯಕ. ಇವನ ಕಣ್ಣೋಟ ಕಣ್ಣು ಕಮಲ ದಳದಂತೆ. ಇನ್ನು ಸ್ವಯಂವರಕ್ಕೆ ತಕ್ಕ ವರನಂತೆ ಸುಕುಮಾರ, ಪರಾಕ್ರಮಿ, ಧೈರ್ಯ ಎಲ್ಲಾ ಉಳ್ಳವನು ವೀರ, ಧೀರ ಖ್ಯಾತನಾಮದ ದಶರಥನ ಸುಕುಮಾರ, ಧನುವನ್ನು ನೋಡುವನಂತೆ. ಶ್ರೀನಿವಾಸ ಅಷ್ಟು ಸಾಲದೆ ವರದ ಇಷ್ಟ ಪೂರ್ತಿ ಮಾಡುವವ ಪುರಜನರಿಗೆ "ಸೀತಾ ಕಲ್ಯಾಣ" ನೋಡುವ ಹಂಬಲವನ್ನು ದಾಸರು ಚತುರ ಶಬ್ದಗಳಲ್ಲಿ ವರ್ಣಿಸಿದ್ದಾರೆ.

ಸೀತಾ ಕಲ್ಯಾಣ

ಜನಕನು ರಾಮನಿಗೆ ಸೀತೆಯನ್ನು ಧಾರೆ ಎರೆದು ಕೊಡುತ್ತಾನೆ. ಈ ಪ್ರಸಂಗವನ್ನು ತಿಮ್ಮಪ್ಪದಾಸರು ಬಹಳ ಸುಂದರವಾಗಿ ದ್ವಿಜಾವಂತಿ ಎಂಬ ರಾಗ ಅಷ್ಟತಾಳದಲ್ಲಿ ಒಂಬತ್ತು ದೊಡ್ಡ ನುಡಿಗಳಲ್ಲಿ ವಿವರಿಸಿರುತ್ತಾರೆ. ಶಿವ ಧನುಸ್ಸು ಮುರಿದ ರಾಮನ ಕೊರಳಿಗೆ ಮಾಲೆ ಬೀಳುತ್ತದೆ. ಎಲ್ಲ ಪುತ್ರರಿಗೂ ವಿವಾಹವಾಗುತ್ತದೆ. ಎಲ್ಲವನ್ನು ಜಾಣ್ಮೆಯಿಂದ ಚಿತ್ರಿಸಿದ್ದಾರೆ. ಪ್ರಕೃತದಲ್ಲಿ ಮುಂದಿನ ಕಥೆಯಲ್ಲಿ ಬರುವ ಕೆಲವು ಕೃತಿಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಕಲ್ಯಾಣದ ನಂತರ ಬರುವ ಉರುಟಣೆ ಹಾಡುಗಳನ್ನು ಬಹಳ ಚೆನ್ನಾಗಿ ರಚಿಸಿರುತ್ತಾರೆ. ನಮ್ಮ ನಾಡಿನ ಉದ್ದಗಲಕ್ಕೂ ಹಲವಾರು ಶತಮಾನಗಳಿಂದ ನಡೆದು ಬಂದ ವಿವಾಹ ಪದ್ಧತಿಯನ್ನು ವರ್ಣಿಸಿದ್ದಾರೆ. ವಧೂ-ವರರ ನಡುವೆ ಸರಸ ವಿನೋದಕರವಾದ, ಉರುಟಣೆ, ಉಯ್ಯಾಲೆ, ಚೆಂಡಾಟ, ಅರಿಸಿನ ಕುಂಕುಮ ಓಕಳಿ ಆಟ, ಅರಸಿನೆಣ್ಣೆ ಎಂಬ ಮಂಗಳಕರ ಸಮಾರಂಭಗಳು ಎಂಟು ದಿನ ಕಾಲ ಬಂಧು ಬಾಂಧವರು ಕೂಡಿ ಸಂತಸ ಪಡುವ ಪದ್ಧತಿ ಇದ್ದಿತು. ಮಿಥಿಲೆ ಅರಮನೆಯಲ್ಲಿ ಆ ಕಾಲದಲ್ಲಿ ವಿವಾಹ ಹೇಗೆ ನಡೆಯಿತು ತಿಳಿದವರಾರು? ಆದರೆ ದಾಸರು ಸೀತಾ-ರಾಮ ವಿವಾಹ ಪ್ರಸಂಗದಲ್ಲಿ ನಮ್ಮ ಕಾಲದ ಸ್ಥಿತಿಯನ್ನು ಅಳವಡಿಸಿ ಸಂತಸ ಪಟ್ಟಿದ್ದಾರೆ. ಮೊದಲು ಸೀತಾದೇವಿ ರಾಮಚಂದ್ರನನ್ನು ಉರುಟಣೆಗೆ ಕರೆದ ಹಾಡು, ನಂತರ ರಾಮನ ಸರದಿ - ಹೀಗೆ ಎರಡೂ ಹಾಡುಗಳನ್ನೂ ಅಳವಡಿಸಿದ್ದಾರೆ.

ಜಯ ಜಯ ಸನ್ನುತ ಕಾಯ । ಜಯ ಜಯ ಸನ್ನುತಿ ಹೃದಯ ।
ಜಯ ಜಯ ಸನ್ನಿಹಿತ ಕಾಯಾ । ಜಯ ಜಯ ರಾಮ ಜಯ ।

ಬಹಳ ಮನೋಜ್ಞವಾಗಿ ಇಲ್ಲಿ ಅನೇಕ ಜಾನಪದ ಹಾಡುಗಳನ್ನು ಚಿತ್ರಿಸಿ ಪೋಣಿಸಿದ್ದಾರೆ. ಇಲ್ಲಿ ಶ್ರೀರಾಮನ ಧರಣಿಮಣಿ ಭೂಮಾತೆಯ ಶ್ರೇಷ್ಠ ಪುತ್ರಿ ಎಂದು ಮುಂತಾಗಿ ವರ್ಣಿಸಿದೆ. ರಾಮನನ್ನು ಮೃದು ಹಾಗೂ ವಿಮಲವಾದ ಕರ ಕಮಲ ಎಂದು ಮುಂದುವರಿದ "ಸಪ್ತಪದೀ" ವಿಚಾರ ಕೊನೆಯ ಚರಣದಲ್ಲಿ ಮೂಡಿ ಬಂದಿದೆ.

ಅಯೋಧ್ಯಾಕಾಂಡದ ಪ್ರಾರಂಭದ ಪ್ರಾರ್ಥನಾ ರೂಪದಲ್ಲಿ ಈ ಕೀರ್ತನೆಯಿದೆ.

ರಾಗ: ಜಂಜೂಟಿ **ತಾಳ: ಆದಿ**

ಶ್ರೀರಾಮಂ ಭಜೇ । ರಘುರಾಮಂ ಭಜೇ । ಭಜರೇ ಮಾನಸ ರಾಮಂ ॥ಪ॥

ಸುಂದರ ರೂಪಂ । ಸುಗುಣ ಕಲಾಪಂ । ಬೃಂದಾರಕ ಪರಿಪಾಲಂ ।
ಚಂದನ ಚರ್ಚಿತ । ಚಾರುಶರೀರಂ । ಬಂಧುರ ದುರಿತ ವಿದಾರಂ ॥೧॥

ಕರಧೃತ ಚಾಪಂ । ಕಮನೀಯ ರೂಪಂ । ಖರಮುಖ ದೈತ್ಯವಿದಾರಂ ।
ನರವರ ವೇಷಂ । ನತಜನಪೋಷಂ । ಪರಮಾನಂದ ವಿಲಾಸಂ ॥೨॥

ಧರಜಾ ಲೋಲಂ । ಧರಣೀ ಪಾಲಂ । ನಿರುಪಮ ನಿತ್ಯ ನಿರಾಕಾರಂ ।
ಸುರಗಿರಿ ನಿಲಯಂ । ಸುಮನಸಗೇಯಂ । ಸಿರಿವರ ವೇಂಕಟ ರೂಪಂ ॥೩॥

ಜಗನ್ನಾಯಕ ಶ್ರೀರಾಮನನ್ನು ಕುರಿತು 'ಕಲಹ' ಪ್ರಿಯ ನಾರದರ ಸ್ತುತಿ

ಶ್ರೀರಾಮಾಯಣ ಕಥಾಸಂಕೀರ್ತನೆಯಲ್ಲಿ ರಾಮನ ರಾಜ್ಯಾಭಿಷೇಕದ ಸಂದರ್ಭ. ಆಗ ರಾಮನಿಗೆ ಅವತಾರ ಕಾರಣವನ್ನು ಸೂಚಿಸಿ ರಾಜ್ಯಾಭಿಷೇಕ ಮಾಡಿಕೊಂಡು ಕುಳಿತರೆ ಭೂಭಾರೋದ್ಧಾರ ಆಗುವುದೆಂದು ಹೇಳಬೇಕಿದೆ. ಅದಕ್ಕೆ ಮುನ್ನ ರಾಮನನ್ನು ಕುರಿತು ಈ ಸ್ತುತಿಯನ್ನು ನೋಡಿ.

ರಾಗ: ಶಂಕರಾಭರಣ **ಅಷ್ಟತಾಳ**

ರಾಮಚಂದ್ರಾ । ರಾಜ ಕುಲೇಂದ್ರ ॥ಪ॥

ಭ್ರಾಮಕಗೊಳಿಸದಿ। ಪ್ರಸದ್ಗುಣ ಸಾಂದ್ರಾ ॥ಅ.ಪ.॥

ಸಂಸಾರಿಯೆಂಬೆ ನೀ। ಸತ್ಯವೀ ನುಡಿಯು।
ಸಂಸಾರವೀಕೀಳು। ಲೋಕಕ್ಕೆ ಧಣಿಯು ॥೧॥

ಗೃಹವೆ ಮೂರ್ಲೋಕವು। ಗೃಹಿಣಿಯೆ ಮಾಯೆ॥
ಅಹಹ ನಿನ್ನಾಜ್ಞೆಯೊ। ಳೈ ಸಹಿಸಿರ್ಪಳೆಲ್ಲಾ ॥೨॥

ಪುರುಷ ವಾಕ್ಯಗಳೆಲ್ಲ। ಹರಿ ನೀನೆ ನಿಜವೂ।
ಅರಿಯ ಸ್ತ್ರೀ ವಾಚ್ಯವೆಲ್ಲವು ಸೀತೆ ದಿಟವೂ ॥೩॥

ಅದರಿಂದ ನೀವೀರ್ವ । ರಲ್ಲದೆ ಬೇರೇ॥
ಪದಿನಾಲ್ಕು ಲೋಕದಿ । ಬೇರಿಲ್ಲ ತೋರೇ ॥೪॥

ಸಕಲ ಚರಾಚರಾ। ತ್ಮಕ ಸರ್ವಸಾಕ್ಷಿ॥
ಅಕಲಂಕ–ಚರಿತ ಪಾ। ಲಿಸೋ ವಿಶ್ವಕುಕ್ಷೀ ॥೫॥

ತರವಲ್ಲ – ಈ ಕೋಪ

ರಾಮ ವನವಾಸದ ಸೂಚನೆ ತಂದೆಯಿಂದ ಇದನ್ನು ಕೇಳಿದ ಲಕ್ಷ್ಮಣ ತಂದೆ ದಶರಥನ ಮೇಲೆ ಕೋಪೋದ್ರಿಕ್ತನಾಗುತ್ತಾನೆ. ಅವನ ಆ ಕೋಪವನ್ನು ತಡೆದು ಶ್ರೀರಾಮಚಂದ್ರ ತಮ್ಮನಿಗೆ ವಿವೇಕ ಹೇಳುತ್ತಿರುವುದು: ಸಂಸಾರದಲ್ಲಿ ಹಿರಿಯರೆನ್ನಿಸಿಕೊಂಡವರು ಹೇಗೆ ವರ್ತಿಸಬೇಕು ಅನ್ನುವುದನ್ನು ಬಹಳ ಸುಂದರವಾಗಿ ರೂಪಿಸಿದ್ದಾರೆ.

ರಾಗ: ಶಂಕರಾಭರಣ **ಅಷ್ಟ ತಾಳ**

ತರವಲ್ಲಾ। ಈ ಕೋಪವು ತರವಲ್ಲಾ ॥ಪ॥

ತರವಲ್ಲವೀಕೋಪ। ಹಿರಿಯರ ಮೇಲೆ ನಿ। ಷ್ಠುರವನಾಡಲು
ಘೋರನರಕ ತಪ್ಪದು ತಮ್ಮಾ ॥ಅ.ಪ.॥

ತೋರುತ್ತ ಬರುವ ಲೋಕಗಳು। ಈಗ ಸೇರುವದೆಂಬ ರಾಜ್ಯಗಳೂ।
ಇದಸೇರಿ ಭೋಗಿಪ ದೇಹಾದಿಗಳು। ಬರಿ ತೋರಿಕೆ
ಮಾತ್ರವಲ್ಲದೆ ಸತ್ಯವಾದರೆ । ಧೀರ ನಿನ್ನ ಸಾಹಸವು ಸಾರ್ಥಕವಾಯ್ತು ॥೧॥

ಧನ ಧಾನ್ಯ ಭೋಗ ಭಾಗ್ಯಗಳು। ದೊಡ್ಡ ಜನಪದ ರಾಜ್ಯ ಕೋಶಗಳು।
ನೋಡೆ ವನಿತಾದಿ ಸಕಲ ಬಂಧುಗಳು। ಕೂಡೆ ಕ್ಷಣ ಭಂಗುರವಲ್ಲ
ದಣುಮಾತ್ರವಿಹುದಲ್ಲ ಘನತರ ಸತ್ಯವೊಂದನೆ ಸಾಧಿಸಬೇಕು ॥೨॥

ಕೋಪದಿಂಸಂತಾಪಗಳೂ। ಈ ಕೋಪದಿಂ ಸರ್ವ ಬಂಧಗಳು।
ದುಷ್ಟ ಕೋಪದಿಂ ನಾಶ ಧರ್ಮಗಳು। ತಮ್ಮ ಕೋಪವೇ ಯಮನ
ವೈತರಣಿಯೆಂಬದೆ ತೃಷ್ಣೆಯೀ ಪರಿಯಂತು ನಿಷ್ಕೋಪನಾಗಿರು ಕಂಡ್ಯ ॥೩॥

ಅನುದಿನ ಸ್ವಕುಲ ಧರ್ಮಗಳ। ಬಹು ವಿನಯದಿ ಹಿರಿಯರಾಜ್ಞೆಗಳ।
ಮೀರದನುಸರಿಸುತಲೆ ಕಾರ್ಯಗಳ। ಇಂತು ಘನತರ ಕೀರ್ತಿ
ಸದ್ಗತಿಯ ಸಾಧಿಸುತಿರ್ಪ। ಮನುಜೋತ್ತಮನೆಂದು ಜನರು ಪೇಳುವರಯ್ಯ ॥೪॥

ಜನನಿ ನೀನಿದ ತಿಳಿದಿರಿಸು । ನಿನ್ನ ಮನದಲ್ಲಿ ಪತಿಯ ಸಂತೈಸು॥
ಬೇಗವನದಿಂದ್ಯೆತಹೆ। ಚಿಂತೆ ತ್ಯಜಿಸು। ತಾಯೆ। ಕನಸಿನಂತಿರುವ
ಸಂಸ ತಿಯ ಭ್ರಾಂತಿಯ ಬಿಟ್ಟು। ಅನುದಿನ ಸುರಗಿರೀಶನ ಪಾದ ಧ್ಯಾನಿಸು ॥೫॥

ಇಲ್ಲಿ ಪಿತೃವಾಕ್ಯ ಪರಿಪಾಲಕನಾದ ರಾಮನ ನುಡಿಗಳು ಮನಮುಟ್ಟುವಂತೆ ಬಂದಿದೆ.

ಸದಾ ವಸತಿ ನಿನಗೆ

ರಾಮ ವನವಾಸದ ಸಮಯ. ಚಿತ್ರಕೂಟ ಪರಿಸರದಲ್ಲಿ ವಾಲ್ಮೀಕಿಗಳ ಪರ್ಣಕುಟಿಯಲ್ಲಿ ಬಂದು ಸೇರುತ್ತಾರೆ. ವನ ಉಪಚಾರದ ನಂತರ ಶ್ರೀರಾಮನು ವಾಲ್ಮೀಕಿಗಳನ್ನು ಕುರಿತು ತಮ್ಮೊಂದಿಗೆ ನಾವು ಕಾನನದಲ್ಲಿ ಇರಬೇಕು, ನೀವು ಎಲ್ಲಾ ತಿಳಿದವರು, ನಮ್ಮ ಕಥೆಯೆಲ್ಲ ನಿಮಗೆ ಗೊತ್ತಿದೆ. ದಯಮಾಡಿ ನಮಗೆ ಈ ಪರಿಸರದಲ್ಲಿ ಇರಲು ಒಂದು ಸುಖವಸತಿ ತೋರಿಸಿ ಎಂದು ಮನುಷ್ಯ ಸಹಜವಾಗಿ ಬೇಡುತ್ತಾನೆ. ಆಗ ವಾಲ್ಮೀಕಿಗಳು ಸರ್ವಶಕ್ತನಾದವನನ್ನು ಮನಗಂಡು ಅವನ ನಿಜವಸತಿಯನ್ನು ತೋರಿಸುತ್ತಾರೆ.

ರಾಗ: ಸುರಟಿ **ಆದಿತಾಳ**

ಸದಾ ವಸತಿ ನಿನಗೆ । ರಾಘವ। ಸದಾ ವಸತಿ ನಿನಗೆ ॥ಪ॥

ಸದಾ ವಸತಿ ನಿನಗದೀಗ ಸಂತರ। ಹೃದಬ್ಜಮಧ್ಯದಿ ವಧೂ ಸಹಿತಲಿರು॥ಅ.ಪ.॥

ಶಾಂತರಾಗಿ ನಿಶ್ಚಿಂತರಾಗಿ ಬಲು। ದಾಂತರಾಗಿ ನಿ। ರಂತರದಿ।
ಅಂತರಹಿತ ರಾಮಾನಂದಮೃತ ಆಂತಿರುವ ಸಜ್ಜನರ ಹೃದಬ್ಜವೆ ॥೧॥

ಧರ್ಮಾಧರ್ಮಗಳನ್ನುಳಿದು । ಸತತ ನಿಮ್ಮನೆ ಭಜಿಸುತಲಿರುತಿರ್ಪಾ
ನಿಮ್ಮ ನಾಮಮಂತ್ರಗಳಂ ಜಪಿಸುತ । ಕರ್ಮಬಂಧಕಳಿದಿಹರ ಹೃದಬ್ಜವೆ ॥೨॥

ನಿತ್ಯಾನಿತ್ಯವಿವೇಕದಿ ಸರಸ। ದ್ವಸ್ತುವರಿತು ನಿರಂತದಿ ಕೃತ್ಯಾ
ಕೃತ್ಯವ ಮರೆದು ನೀನೆ ಸ। ರ್ವೋತ್ತಮನೆಂ ದಾನಂದಿಪ ಪರಿ ಹೃದಯ।

ಅರಣ್ಯಕಾಂಡ ಪ್ರಸಂಗ ವನವಾಸಿಗಳಾಗಿ ರಾಮ, ಸೀತಾ ಲಕ್ಷ್ಮಣರು ಋಷಿಮುನಿಗಳ ಯೋಗಕ್ಷೇಮ ನಿರತರಾಗಿರುತ್ತಾರೆ. ಸಂಚರಿಸುವ ಮಾರ್ಗದಲ್ಲಿ "ಸುತೀಕ್ಷ್ಣ"ರೆಂಬುವರ ಆಶ್ರಮಕ್ಕೆ ಬರುತ್ತಾರೆ. ಆಗ ಸೀತಾ ರಾಮರನ್ನು ಸತ್ಕರಿಸಿ ಋಷಿಗಳು ಸ್ತೋತ್ರ ಮಾಡುತ್ತಾರೆ.

ಆದಿತಾಳ **ಊಯ್ರೀ ರಾಗ**

ರಾಮ ಪಾಲಯ । ಶ್ರೀರಾಮ ಸದಯಾ ॥ಪಲ್ಲ॥

ದಶರಥ ಬಾಲ । ದಶಮುಖ ಕಾಲಾ
ಕುಶಿಕ ತನಯ ಮಖ । ಪಾಲ। ಸುಕಲಾ ॥೧॥

ಕರಧೃತ ಚಾಪ । ಕಮನೀಯ ರೂಪಾ ।
ಪರಿವೃತಪುರಹರ। ಚಾಪ ಸುಪಾ ॥೨॥

ಸುರಗಿರಿವಾಸಾ । ಸುರಗಣ ಪೋಷಾ ।
ಪರಮ ಪಾವನ ವೇಂಕ। ಟೇಶ । ಸರಸಾ ॥೩॥

ವನವಾಸದಲ್ಲಿ ಮುಂದುವರಿಯುತ್ತಾ ಲೋಕ ಕಲ್ಯಾಣಕ್ಕಾಗಿ ಉತ್ತರದಿಂದ ದಕ್ಷಿಣಕ್ಕೆ ಬಂದು ನೆಲಸಿದ ಅಗಸ್ತ್ಯ ಮಹಾಮುನಿಗಳ ಆಶ್ರಮಕ್ಕೆ ಬರುತ್ತಾರೆ. ಬಂದವರಿಗೆ ಉಪಚರಿಸಿ ಆ ಮುನಿವರರು ಶ್ರೀರಾಮ ದೇವರನ್ನು ಕುರಿತು ಮಾಡುತ್ತಿರುವ ಸ್ತೋತ್ರ ರೂಪವಿದು.

ರಾಗ: ಶಂಕರಾಭರಣ **ರೂಪಕ ತಾಳ**

ರಾಮ ರಾಕೇಂದು ಸುಂದರಾ । ಶ್ರೀ ರಮಾರಮಣ ॥ಪ॥

ರಾಮ ರಾಕೇಂದು ಸುಂದರಾ । ರಾಜಸೇವ್ಯ ನಳಿನ ನಯನ ।
ರಾಜಸೇವ್ಯ ಚರಣಯುಗಳ । ರಾಮಮನುಜ ರಾಜತೇಜ । ॥ಅ.ಪ॥

ನಿನ್ನ ದರ್ಶನವನ್ನು ಬಯಸುತಾ । ಪಗಲಿರುಳು ನಾನು ।
ನಿನ್ನ ನಾಮಗಳನು ಪಾಡುತಾ । ಮುನ್ನಗೈದ ಸುಕೃತ ಫಲಗ ।
ಳಿನ್ನು ಸಫಲವಾಯಿತಿಂದು । ಧನ್ಯನಾದೆ ತವಪದಾಬ್ಜ ।
ವನ್ನು ನೋಡಿಂ ಪರಮ ಪುರುಷ ॥೧॥

ಧರೆಯ ಭಾರವನಿಳುಹ ಲೋಸುಗ ।
ನೀ ಮನುಜನಾಗಿ । ಬರುವನೆಂದು ಕಾಯ್ದುನಿಂದೆನಾ ।
ದೊರಕಿದೆಂದು ಪರಮಭಾಗ್ಯ । ವರದೆ ಶೃತಿ ಸಮೂಹವನಿಶ ।
ವರಿಸಿ ಕಾಣಲರಿಯದಮಳ । ಚರಿತ ನಿನ್ನ ಕಂಡೆನೀಗ ॥೨॥

ನಿತ್ಯ ತೃಪ್ತ ನಿಗಮಗೋಚರ । ನಿರ್ವಿಕಾರ । ಪ್ರತ್ಯ
ಗಾತ್ಮನೀ ಚರಾಚರಾ । ವಸ್ತುಗಳಲಿ ಬೆರೆದು ಚೇತನಿತ್ತು ।
ತೋರಿ-ತೋರದಂತೆ ನಿತ್ಯ ಸಾಕ್ಷಿಯೆನಿಸಿ ।
ಜಗಕೆ ಕರ್ತೃವಾದ ಸುರಗಿರೀಶ ॥೩॥

ಧೀರ ರಜತ ಶೈಲವಾಸ

ಸೀತಾ ಅಪಹರಣಕೆಂದೇ ಬಂದ ರಾವಣ ಯತಿ ವೇಷದಲ್ಲಿ ಶಿವಭಕ್ತನಾಗಿ ತನ್ನ ಕಾರ್ಯಸಿದ್ಧಿಗೆ ಅಲ್ಲದೆ ರಾವಣ ಶಿವಭಕ್ತ ತನ್ನ ಮುಖಗಳಿಂದಲೇ ಶಿವಪೂಜೆ ಮಾಡಿದವನು, ಕೈಲಾಸ ಬೆಟ್ಟವನ್ನೇ ಸ್ತುತಿಸಿದವನು. ಸೀತೆಯನ್ನು ವಂಚಿಸಿ ಶಿವಧ್ಯಾನವನ್ನು ಮಾಡುತ್ತಾ ಬರುತ್ತಾನೆ. ಇಲ್ಲಿ ವಿಷ್ಣು "ಸುರ ಶೈಲ ವಾಸನಾದರೆ" ಶಿವ – "ರಜತ ಶೈಲ ವಾಸ"

ರಾಗ: ಸುರಟಿ **ಆದಿತಾಳ**

ಗೌರೀಪತೇ। ಶಂಭೋ ॥ಪ॥

ಕಾಲ ಕಾಲ ವ್ಯಾಳ ಕೃತ್ತಿ । ಚೇಲ ಸುಜನ ಪಾಲ ಕೃಪಾ ।
ಪಾಲಕೈಲಾಸನಾಥ । ಪಾಲಯಮ ವಿಮಲಶೀಲ ॥೧॥

ಅಕ್ಷಿ ವಿಜಿತಮದನ ಸಂ । ರಕ್ಷಿತಾಮರೇಶಧನಾ । ಧ್ಯಕ್ಷ
ಸಖ ಮಹೋಕ್ಷ ತುರಗ । ಪಕ್ಷಿವಾಹನವರ ಮಹೇಶ ॥೨॥

ವೀರವರ ಮನೋಜ್ಞ ರೂಪ । ವಾರರಿಜಾಸನಾದಿ ವಂದ್ಯ ।
ಧೀರ ರಜತಶೈಲವಾಸ । ಸೂರಿಜಾತ ಪಾರಿಜಾತ ॥೩॥

ಜಟಾಯು ಪಕ್ಷಿಜನ ಬಯಸಿದ ಗೃಧ್ರ. ಬರಿ ಗೃಧ್ರವಲ್ಲ, ಗೃಧ್ರರಾಜ. ದಶರಥನ ಆಪ್ತಸಖಿ-ಮಿತ್ರ ಕೂಡ. ರಾವಣನಿಂದ ಸೀತೆಯನ್ನು ಬಿಡಿಸಲು ಹೋರಾಡಿ ಏಟು ಬಿದ್ದಿರುತ್ತದೆ. ಸೀತೆಯನ್ನು ಹುಡುಕುತ್ತಾ ಬಂದ ಶ್ರೀರಾಮನಿಗೆ ಸೀತೆ ಕಥೆ ಹೇಳಿ ಪ್ರಾಣ ತ್ಯಾಗ ಮಾಡುತ್ತದೆ. ಮುಂದೆ ರಾಮಲಕ್ಷ್ಮಣರು ಸದ್ಗತಿ ಕಾಣಿಸುತ್ತಾರೆ. ದಿವ್ಯ ಶರೀರ ಪಡೆದ ಜಟಾಯು ಹೊರಡುತ್ತದೆ. ಆಗ ಜಟಾಯು ಬಹಳ ಭಕ್ತಿಯಿಂದ ರಾಮನನ್ನು ಸ್ತುತಿ ಮಾಡುತ್ತದೆ. ಈ "ರಾಮಸ್ತೋತ್ರ" ದಾಸರಿಂದ ಸಂಸ್ಕೃತದಲ್ಲಿ ಸುಂದರ ಪದಬಂಧದಿಂದ ಕೂಡಿದೆ.

ರಘುವಂದನಂ ಪ್ರಪದ್ಯೇ

ರಾಗ: ಬೇಹಾಗ್ **ಆದಿತಾಳ**

ರಾಮ ಹರೇ ರಘುರಾಮಹರೇ ತವ । ನಾಮ ವದಾಮಿ ಸದಾ ನೃಹರೇ ॥ಪ॥

ಅಗಮಿತಗುಣಮಪ್ರಮೇಯಮಾಂದ್ಯಂ। ಸಕಲ ಜಗಸ್ಥಿತಿ ಸಂಯಮಾದಿಹೇತುಂ।
ಉಪರಮಮಪರಂ ಪರಾತ್ಮಭೂತಂ । ಸತತಮಹಂ ರಘುನಂದನಂ ಪ್ರಪದ್ಯೆ ॥೧॥

ನಿರವಧಿ ಸುಖಮಿಂದೀವರಾಕಟಾಕ್ಷ । ಕ್ಷಪಿತ ಸುರೇಂದ್ರ ಚತುರ ಖಾದಿ ದುಃಖಂ।
ನರವರಮನಿಶಾನತೋಽಸ್ಮಿ ರಾಮಂ ವರದಮಹಂ ಶಿರಚಾಪ ಬಾಣಪಾಣಿಂ ॥೨॥

ತ್ರಿಭುವನ ಕಮನೀಯ ರೂಪಮಾದ್ಯಂ। ರವಿಶತಭಾಸುರಮೀಪ್ಸಿತ ಪ್ರದಾನಂ ।
ಸುಶರಣಮನಿಶಂ ಸುರಾಗ್ರ ಮೂಲೇ। ಕೃತನಿಲಯಂ। ರಘುನಂದನಂ ಪ್ರಪದ್ಯೇ॥೩॥

ಕಿಷ್ಕಿಂಧಾಕಾಂಡಕ್ಕೆ ಕಥೆ ಮುಂದುವರಿಸುವಾಗ ಒಂದು ಸುಂದರ ರಾಮಸ್ತುತಿ ತಿಮ್ಮಪ್ಪದಾಸರಿಂದ ಬಹಳ ಸುಂದರವಾಗಿ ಮೂಡಿಬಂದಿರುವ ಮಂಗಳ ಪದ್ಯ ಇದು.

ರಾಗ: ಭೈರವಿ **ರೂಪಕತಾಳ**

ಜಯರಾಮ । ಜಿತಕಾಮ। ಜಗದೀಶ ಪರಂಧಾಮ ॥ಪಲ್ಲವಿ॥

ಲೀಲಾ ಮಾನುಷ ವೇಷ। ಲಾಲಿತ ಸನ್ಮೃದು ಭಾಷ ॥೧॥

ಖರ ಮುಖ ದೈತ್ಯ ವಿಹಾರ । ದುರಿಕಾರಣ್ಯ ಕುಠಾರ ॥೨॥

"ಅಮರಾಚಲ" ನಿಜಧಾಮ । ಲಾಲಿತ ಜನ ಸುಪ್ರೇಮ ॥೩॥

ಪ್ರಥಮ ಭೇಟಿ ಸಮಯದಲ್ಲಿ ಹನುಮನು ಮಾಡಿದ ರಾಮಸ್ತುತಿ:

ರಾಗ: ಕಾಪಿ ರೂಪಕತಾಳ

ಧನ್ಯನಾದೆನಾ। ಧರೆಯೊಳೀಗ ॥ಪ॥

ಧನ್ಯನಾದೆನೆನ್ನ ಪೂರ್ವ । ಪುಣ್ಯತರವು ಫಲಿಸಿತಂದು ॥ಅ.ಪ.॥

ಧರೆಯ ಭಾರವಾ। ನವತರಿಸಲೋಸುಗಾ ।
ನರರ ಪರಿಯ ಚರಿಸುತಿಪ್ಪ। ಪರಮ ಪುರುಷರಿವರ ಕಂಡು ॥೧॥

ಮೂರು ರೂಪದೀ। ಚರಿಸಿ। ಮೂರು ಕಾರ್ಯವಂ।
ಮೂರು ಲೋಕ ತೋರಿ। ತೋರದಂತೆ ಇಹನ ಕಂಡು ॥೨॥

ಲೋಕ ಕರ್ತನಾ। ಸಕಲ ಲೋಕ ಪೂಜ್ಯನಾ। ಶ್ರಿತ
ಕಟಾಕ್ಷವನ್ನು ಪಡೆದ । ನೇಕಸುಖವನೊಂದಿದೆ ॥೩॥

ರಾಮಾಯಣ ಕಿಷ್ಕಿಂಧಾ ಕಾಂಡದಲ್ಲಿ ಸುಗ್ರೀವ ಮತ್ತು ಶ್ರೀರಾಮರ ಸಖ್ಯವಾಗುತ್ತದೆ. ಸುಗ್ರೀವನ ಹಿತರಕ್ಷಣೆ ಪ್ರತಿಜ್ಞೆಯನ್ನು ಶ್ರೀರಾಮ ಮಾಡುತ್ತಾನೆ. ಸುಗ್ರೀವನಿಗೆ ತುಂಬಾ ಸಂತೋಷವಾಗುತ್ತದೆ. ಆಗ ಸುಗ್ರೀವ ರಾಮನನ್ನು ಸ್ತುತಿಸುತ್ತಾನೆ. ಇದು ಸುಗ್ರೀವನ ಆತ್ಮಸಮರ್ಪಣೆಯಾದ ಪ್ರಸಂಗವಾದರೂ ಇಲ್ಲಿ ದಾಸರ ಆತ್ಮಸಮರ್ಪಣೆಯನ್ನು ಭಕ್ತಸಾಮಾನ್ಯನು ಹೇಗೆ ಮಾರ್ಗದರ್ಶನವಾಗಿದೆ ನೋಡಿ. ಈ ಸುಂದರ ಕೃತಿ ದಾಸರ ಮನೆಯವರಲ್ಲಿ ಎಲ್ಲರ ಬಾಯಲ್ಲೂ ನಲಿದಾಡುತ್ತಿತ್ತು.

ನಿನ್ನ ವಿನಾ ಅನ್ಯರ ಕಾಣೆ

ರಾಗ: ತೋಡಿ ತಾಳ: ರೂಪಕ

ನಿನ್ನವಿನಾ ಅನ್ಯರ ಕಾಣೆ । ನಾ ನೀರಜಾ ನಯನ ॥
ಇನಕುಲ ಪತಿ ಸಕಲಲೋಕ । ಜನಕ ದಯಾವನದಿ ರಾಮ॥ ॥ಪ॥

ಕೊಡುವರೊಳಗೆ ನೀನೆಯಂದು । ಬಡವನಾದ ನಾನು ಬಂದು
ಉಡಿಯನೊಡ್ಡಿ ಬೇಡುವೆನೀಗ । ದೃಢದಿ ವರವ ಪಾಲಿಸುಬೇಗ ॥೧॥

ತನುಮನ ಧನ ವನಿತೆಯಾಸೆ । ಯಮಗದೇಕೆ ನಿನ್ನ ಪಾದ
ವನಜ ಸೇವೆಯೊಂದೇ ಸಾಕು । ಚಿನುಮಯಾತ್ಮ ಪರಮಪುರುಷ ॥೨॥

ನಿನ್ನ ನಾಮಗಳನೆ ಪಾಡಿ । ನಿನ್ನ ದಾಸರುಗಳ ಕೂಡಿ
ನಿನ್ನ ಸೇವೆ ಮಾಡಿ ಮಾಡಿ । ಧನ್ಯನಾದೆ ಸುರಗಿರೀಶ ॥೩॥

ಯುದ್ಧಕಾಂಡದಲ್ಲಿ ರಣದೃಶ್ಯವನ್ನು ಕಂಡ ನಾರದರು ಭಕ್ತಿಯುಕ್ತವಾದ ಗದ್ಗದ ಸ್ವರದಿಂದ ಶ್ರೀರಾಮನನ್ನು ಸ್ತುತಿಸುತ್ತಾರೆ.

ದೇವ ದೇವ ಜಗನ್ನಾಥ ನಮೋ

ದೇವ ದೇವ ಜಗನ್ನಾಥ ನಮೋ ಹರೇ।
ಪಾವನಾಂಗ ಪರಮಾತ್ಮ ನಮೋ ॥ಪಲ್ಲವಿ॥

ನಾರಾಯಣ ನರಸಿಂಹ ನಮೋ ರಘು।
ವರಾಶ್ರಿತ ಪರಿಪಾಲ ನಮೋ ॥೧॥

ಮಾಯಾ ಮಾನುಷ ರೂಪ ನಮೋ ಜಿತ।
ಮಾಯಾ ಕಾರ್ಯ ವಿಲಾಸ ನಮೋ। ॥೨॥

ನಾಶ ರಹಿತ ಸರ್ವೇಶ ನಮೋ ಭವ।
ಪಾಶ ವಿದಾರ ಸುರೇಶ ನಮೋ ॥೩॥

ನಿತ್ಯಾನಂದ ಪರಮಾತ್ಮ ನಮೋ ನಮೋ।
ಸಚ್ಚಿತ್ಸುಖ ಪರಿಪೂರ್ಣ ನಮೋ॥ ॥೪॥

ಮಂಗಳಾಂಗ ಶ್ರೀರಾಮ ನಮೋ।
ಗಂಗಾ ಜನಕ ಶುಭಾಂಗ ನಮೋ॥ ॥೫॥

ಚಿಂತೆ ಯಾತಕೋ

ಯುದ್ಧದಲ್ಲಿ ರಾವಣನ ಸಂಹಾರವಾಗಿರುತ್ತದೆ. ತಮ್ಮ ವಿಭೀಷಣ ಶೋಕಾಕುಲನಾಗಿದ್ದಾನೆ. ಅವನನ್ನು ಲಕ್ಷ್ಮಣನು ಸಮಾಧಾನಗೊಳಿಸುವಾಗ ತಿಮ್ಮಪ್ಪದಾಸರ ಬಾಯಲ್ಲಿ ವೇದಾಂತದ ಮತ್ತು ವೈರಾಗ್ಯದ ನುಡಿಗಳನ್ನು ನೋಡಿ. ಕಡೆಯಲ್ಲಿ ದಾಸರು ತಮ್ಮ ಗುರುಗಳಾದ ರಾಮಣ್ಣಾರ್ಯರ ಅಂಕಿತ ಸ್ಮರಣೆ ಮಾಡಿದಂತೆ ಕಾಣುತ್ತದೆ. ಏಕೆಂದರೆ ದಾಸರಲ್ಲಿ ಬಾಣಾವರದ ರಾಮಣ್ಣಾರ್ಯರ ಶಿಷ್ಯ ಶ್ರೀಕೃಷ್ಣಯೋಗೀಶ್ವರರ ಪ್ರಭಾವ ಸಹ ಇದೆ. ಇದೊಂದು 'ತತ್ವ ದೃಷ್ಟಿಯ ಕೃತಿ', ವೈರಾಗ್ಯ ಪ್ರಧಾನವಾದುದು.

(ಏಸು ಧನ್ಯಳೋ ಗೋಪಿ ಎಂಬಂತೆ)

ಚಿಂತೆ ಯಾಕೋ। ಬಯಲ। ಭ್ರಾಂತಿ ಯಾತಕೆ
ಅಂತರಂಗದೊಳರಿತು । ನಿಶ್ಚಿಂತನಾಗಿ ಹರಿಯ ಭಜಿಸು। ॥ಪ॥

ಯಾರಿಗಾಗಿ ಶೋಕಿಪೆ ನೀ। ನಾರು ಬಂಧುಬಳಗವ್ಯಾರು।
ತೋರಿ ಅಡಗಿಬುದ್ಬುದಾ। ಕಾರವಾದ ದೇಹಗಳಿಗೆ ॥೧॥

ಸತ್ಯದಿಂದ ತಿಳಿಯೆ ಆ। ಸತ್ಯವಾಗಿ ತೋರಿಸುತ್ತಾ।
ಚಿತ್ತು ಮಾಯೆ ಕೂಡಿ ವಿ। ಚಿತ್ರವಾಗಿ ನಿರ್ಮಿಸುವುದು ॥೨॥

ಗಂಡು ಹೆಣ್ಣಿನಂತೆ ಕೂಡಿ। ಹಿಂಡು ಬಳಗವಾಗು ನಾವು। ದಂ
ಡ ಮಹಿಮ ಈಶನೆಂದು। ಕಂಡು ಮನದಿ ಸುಖಿಸದೀಗ ॥೩॥

ಸ್ವಾಮಿ ರಾಮಚಂದ್ರನೊಳು। ಈ ಮಹಾ ಬ್ರಹ್ಮಾಂಡಗಾಳು।
ರೋಮ ರೋಮ ಕೂಪದಲ್ಲಿ। ನೇಮವಿಲ್ಲದಿರುತಲಿಹುದು ॥೪॥

ಜಾಳು ವಿಷಯಗಳನೆ ಬಯಸಿ। ಕೀಳು ಕರ್ಮಗಳನೆ ಮಾಡಿ
ಬೀಳಬೇಡ ಜನನ ಮರಣ ಕೊಳವೆಂಬ। ಸೆರೆಯೊಳೀಗ ॥೫॥

ಕಡಿದು ಅರಿಗಳಾರ್ವರನ್ನು। ತೊಡದು ಬಿಡಲು ಮಮತೆ ಹಮ್ಮು।
ಒಡೆಯ ಮೆಚ್ಚಿ ಮುಕ್ತಿ ಸುಖದ। ಉಡುಗೊರೆಯ ಕೊಡುವ ಭಾಗ್ಯ ॥೬॥

ಪ್ರೇಮ ಭಕ್ತಿಯಿಂದ ಗುರು ರಾಮ ಬ್ರಹ್ಮನೆಂಬ ನಿಜ।
ಧಾಮವೇರಿದವನ ಜನ್ಮಯೀ। ಮಹಿಯೊಳ್ ಫಲವಾಯ್ತು ॥೭॥

"ಯುದ್ಧಕಾಂಡ" ವಿಭೀಷಣನ ರಾಜ್ಯಾಭಿಷೇಕವಾಗಿದೆ. ನಂತರ ಲಕ್ಷ್ಮಣಾದಿ ಎಲ್ಲರೂ ಸೇರಿ ಶ್ರೀರಾಮನನ್ನು ವಂದಿಸಿ ಸ್ತೋತ್ರಗೈಯುತ್ತಿರುವುದು. ಈ ರಚನೆಯಲ್ಲಿ ಇದು ಆಧಾರಿತವಾದುದರಿಂದ ಕಡೆಯಲ್ಲಿ ವೇದಾಂತ ಪ್ರಧಾನರಾದ ದಾಸರು ಬಾಣಾವರದ ಕೃಷ್ಣಯೋಗೀಶ್ವರರನ್ನು ನೆನೆದಿದ್ದಾರೆಯೇ? ಎಂಬ ಅನುಮಾನ ಬರುತ್ತದೆ. ಕಡೇ ನುಡಿ "ಶ್ರೀಕಾಂತಯೋಗಿವರ ಚಿಂತನೀಯ" ಎಂಬ ಮಾತಿದೆ. ತಮ್ಮ ವೇದಾಂತ ಗುರುಗಳನ್ನು ಕೀರ್ತನದ ಕಡೆಯಲ್ಲಿ ನೆನೆವುದು ಅಥವಾ ನಮಿಸುವುದು ರೂಢಿಯೇ? ಅಥವಾ ಹೊಳೇನರಸೀಪುರದ ಇವರ ಗುರುಗಳಾದ ಯೋಗಾನಂದೀಶ್ವರ ಮಠದ ಶ್ರೀರಾಮ ಬ್ರಹ್ಮಾನಂದರು ಇರಬಹುದೇ? ಇದು ಹೇಗೆ ಎಂದು ತಿಳಿದುಬರುವುದಿಲ್ಲ. ಅದೇನೇ ಇರಲಿ, ಈ ಕೀರ್ತನೆ ಬಹಳ ಸೊಗಸಾಗಿದೆ.

ರಾಗ: ಕಲ್ಯಾಣಿ **ಆದಿತಾಳ**

ಪಾಹಿ ರಾಘವೇಶಾ। ಹರೇ ರಾಮ। ಪಾಹಿ ರಾಘವೇಶಾ ॥ಪ॥

ಬಹುಗುಣ ಕಲಾಪಾ। ಕುಶಾರ್ಙ್ಗ ಚಾಪ। ಸುಪ್ರತಾಪ।
ಚತುರ್ಮುಖ॥ ಸೇವ್ಯಯೋಗಿವರ. ಭಾವ್ಯ ಪದ್ಮಮುಖ।
ದಿವ್ಯ ಲಕ್ಷ್ಮಣಾಂಚಿತ ಪದಯುಗಳಾ ॥೧॥

ಕಂಜದಳ ನಿಭಾಕ್ಷ। ಸುಜನರಕ್ಷ। ಧನುಜ ಶೀಕ್ಷ।
ಪ್ರವೀಣ ಸುರಂಜನಾತಿ ಮೃದು। ಮಂಜುಭಾಷ ನಿ ।
ರಂಜನಾಗಣಿತ । ನಿರುಪಮಶೀಲಾ ॥೨॥

ದಂತಿರಾಜವರದಾ। ರಾತ್ರಿ ಚಿರದಾ। ವಾಗ್ಮಿ ಶರದಾ
ಪ್ರಜಾಶ್ರೀ। ಕಾಂತ ಯೋಗಿವರ। ಚಿಂತನೀಯವನೇ।
ದಾಂತ ವೇದ್ಯ ಕೋಸಲಪುರ ನಿಲಯ। ॥೩॥

ಇನ್ನೊಂದು ಸುಂದರ ಸನ್ನಿವೇಶ. ಸೀತಾ ಅಗ್ನಿ ಪ್ರವೇಶದ ನಂತರ ಇಂದ್ರಾದಿ ಸಕಲ ದೇವತೆಗಳು ಶ್ರೀರಾಮನನ್ನು ಸ್ತುತಿಸುವ ಈ ಸುಂದರ ರಚನೆ ದಾಸವರೇಣ್ಯರಿಂದ ಹೇಗೆ ಬಂದಿದೆ ನೋಡಿ. ಇದೊಂದು ದಾಸರ ಹಿಂದಿನ ಎಲ್ಲಾ ಕೃತಿಗಳ ಜಾಡಿನಲ್ಲೇ ಬಂದಿರುವುದರಿಂದ ಇದು ತಿಮ್ಮಪ್ಪದಾಸರದೇ ಎಂದು ಹೇಳಬಹುದು. ಆದರೆ ಇಲ್ಲಿ ಅಂಕಿತ 'ಮೋಹನ ರಂಗ ಹರೇ' ಎಂದಿದೆ. ಪರಿಶೀಲಿಸಿ ತಿಳಿಯಬೇಕು. ಬೇರೆ ಯಾರದಾದರೂ ಇದ್ದರೆ ಇದ್ದಂತೆ ಗೌರವಿಸಬೇಕು.

ಮೋಹನ ರಂಗ ಹರೇ

ರಾಗ: ಭೈರವಿ ತ್ರಿಪುಟ

ರಾಮ ಪಾಲಯ ಮಾಂಹರೆ। ಹರೇ ಸೀತಾ। ರಾಮ। ॥ಪ॥

ರಾಮ ರವಿಕುಲ ಸೋಮ। ಜಗದಭಿ। ರಾಮ ನೀರದ।
ಶ್ಯಾಮ ದಶರಥ। ರಾಮ ॥ಅ.ಪ.॥

ನಾರದ ಯಾವನಾ ವೀಕ್ಷಣಾ ಸರ್ವ। ಸಾಧೂನಿಕರ ಸಂರಕ್ಷಣಾ
ಧೀರಲೋಕೋ। ದ್ಧಾರ ತರುಚರ। ವಾರ ಪೋಷಣ। ಸಾರಸಾಂಬಿತ ॥೧॥

ಭಂಡನ ಹತಕರದೂಷಣಾ। ಅಖಂಡರಾರ್ಚಿತ ದಿವ್ಯ ಭೂಷಣಾ
ವರದಂಡಕಾವನ ಮುನಿಪೋಷಣಾ। ಪರಿ । ವಾರಿತ ವಿನುತ ವಿಭೀಷಣಾ
ದಂಡಿಕಾಸುವ। ಮಂಡಲಾದ್ಭುತ। ಚಂಡಕರ ಕೋ । ದಂಡ ಪಾಯಕ ॥೨॥

ಅನುಪಮ ನಿಜ ಸತ್ಯಭಾಷಣಾ। ಮಾಯಾ। ತನುಧಾರಿ।
ಮಾರೀಚ ವಿಭೀಷಣಾ। ಘೋರ। ವನನಿಧಿ ಘನಮನಪೋಷಣಾ॥
ಮೋಹನ ರಂಗ ಹರೀ ಭಜನತೋಷಣ।
ಇನತನೂಭವ। ವಿನುತ ವೈಭವ। ಜನಿತಕೋಸಲ ನಮಿತ ಪರಬಲ। ॥೩॥

ಶ್ರೀರಾಮಂಭಜರೇ

ಶ್ರೀರಾಮಂ ಭಜರೇ। ಮಾನಸ। ಶ್ರೀ ರಾಮಂಭಜರೇ ॥ಪ॥

ನಾರಾಯಣಮಾದ್ಯಂತ ವಿರಹಿತಂ।
ಪಾರರಹಿತ ಚರಿತಂ। ಮನಸಾ ॥೧॥

ನಿತ್ಯಾನಂದಂ ಸತ್ಯಮನಂತಂ।
ಪ್ರತ್ಯಗ್ರೂಪಮಜಂ। ಮನಸಾ ॥೨॥

ಸೃಷ್ಟಿ ಸ್ಥಿತಿ ಲಯ ಕಾರಣ ಕರ್ತಂ ।
ಕಷ್ಟ ಕಲುಷ ಹರಣಂ । ಮನಸಾ ॥೩॥


ತ್ರಿಗುಮಾತೀತಂ ತ್ರಿಜಗದ್ಭರಿತಂ ।
ನಿಗಮಾಗಮವೇದ್ಯಂ। ಮನಸಾ ॥೪॥

ಮಾಯಾಮಾನುಷ ಲೀಲಾಕಾರಂ।
ಮಾಯಾಗುಣ ರಹಿತಂ। ಮಾನಸ ॥೫॥

ಶ್ರೀರಾಮ ದಿಗ್ವಿಜಯ ನಂತರದಲ್ಲಿ ಪುಷ್ಪಕ ವಿಮಾನದಲ್ಲಿ ಕುಳಿತು ಹಿಂದಿರುಗುವ ಸಂದರ್ಭ. ಭರದ್ವಾಜಾಶ್ರಮದಲ್ಲಿ ಅವರು ತಂಗಿರುತ್ತಾರೆ. ಭರದ್ವಾಜ ಮಹರ್ಷಿಗಳು ಆ ಸಮಯದಲ್ಲಿ ರಾಮಸ್ತುತಿ ಮಾಡಿರುತ್ತಾರೆ. ಕವಿ ವಾಣಿಯಲ್ಲಿ ಈ ಕೃತಿಯು ಗ್ರಂಥದಲ್ಲಿ ಕೊನೆಯದು. ಇಲ್ಲಿ ಪರಮಾತ್ಮನ ಸುಗುಣ ಸ್ಥಿತಿಯಿಂದ ಆರಂಭಿಸಿ ನಿರ್ಗುಣ ಸ್ಥಿತಿಗೆ ಕೊನೆ ಮಾಡಿರುವ ಅತ್ಯಂತ ಸರಳ ರೀತಿಯ ಕೃತಿ.

ಭಾಗ – ೩

ತಿಮ್ಮಪ್ಪದಾಸರ ಮಗ ಅನಂತರಾಮಯ್ಯನವರ ಪುತ್ರ ಶ್ರೀ॥ ವೆಂಕಟದಾಸಪ್ಪನವರು ರಚಿಸಿದ ಕೀರ್ತನೆಗಳು



ವೆಂಕಟೇಶಾಂಕಿತ
ಶ್ಯಾ॥ ವೆಂಕಟದಾಸಪ್ಪ ಅವರ ಪರಿಚಯ

ಶ್ಯಾ॥ ವೆಂಕಟದಾಸಪ್ಪ ಅವರು ತಿಮ್ಮಪ್ಪದಾಸರ ಕೊನೆಯ ಮಗ ಅನಂತರಾಮಯ್ಯನವರ ಪುತ್ರರು. ಇವರು ಕಬ್ಬೂರಹಳ್ಳಿಯಲ್ಲಿ ವಾಸವಿದ್ದರು.

ವೆಂಕಟದಾಸಪ್ಪನವರು ಹಾರನಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಅರಸೀಕೆರೆಯಲ್ಲಿ ಮೆಟ್ರಿಕ್ ಪಾಸ್ ಮಾಡಿದರು. ಅನಂತರ ಯಳವಾರೆ ಹಳ್ಳಿ ಬಳಿಯ ಕಬ್ಬೂರಹಳ್ಳಿಯಲ್ಲಿ ವಾಸ ಮಾಡತೊಡಗಿ, ತೋಟದ ಕೆಲಸ ಮತ್ತು ವ್ಯವಸಾಯದಲ್ಲಿ ನಿರತರಾದರು. ಇವರ ತಮ್ಮನೇ ಹಾರನಹಳ್ಳಿ ರಾಮಸ್ವಾಮಿ ಅವರು. ರಾಮಸ್ವಾಮಿಯವರಿಗೆ ಶಿಕ್ಷಣ ಕೊಡಿಸಿ ಲಾ ಪದವೀಧರರನ್ನಾಗಿ ಮಾಡಿದರು. ತಂದೆಯವರಿಂದ ಬಂದ ಯಳವಾರೆ ಶಾನುಭೋಗಿಕೆಯನ್ನು ವಹಿಸಿಕೊಂಡು ಹೆಸರುವಾಸಿಯಾದರು. ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದ ದೇವನೂರು ಪುರಾಣಿಕರಿಂದ ಸಂಸ್ಕೃತ ವಿದ್ಯಾಭ್ಯಾಸ ಮಾಡಿ ಆದಿಶಂಕರರ ಕೃತಿಗಳನ್ನು ಕರತಲಾಮಲಕ ಮಾಡಿಕೊಂಡರು. ಕನ್ನಡದಲ್ಲೂ ಪರಿಣಿತಿ ಪಡೆದು ಲಕ್ಷ್ಮೀಶ, ಕುಮಾರವ್ಯಾಸರ ಕೃತಿಗಳನ್ನು ವ್ಯಾಖ್ಯಾನಿಸುವಷ್ಟು ಸಾಮರ್ಥ್ಯ ಗಳಿಸಿದರು. ಅನಂತರ ಕೃತಿರಚನೆಗೆ ತೊಡಗಿದರು. ಇವರದೊಂದು ವಿಚಿತ್ರ ಸ್ವಭಾವವಿತ್ತು. ಅದೇನೆಂದರೆ ಕೃತಿಗಳನ್ನು ರಚನೆ ಮಾಡಿದಾಗ ಆ ಕೃತಿ ಬರೆದ ಹಾಳೆಗಳನ್ನು ಗೋಡೆ ಮೇಲೆ ಇರುತ್ತಿದ್ದ ದೇವರ ಪಟಗಳ ಹಿಂದೆ ಇಡುತ್ತಿದ್ದರು. ಅವುಗಳನ್ನು ಮಕ್ಕಳು ಗಮನಿಸಿ ಜೋಪಾನ ಮಾಡುತ್ತಿದ್ದರು. ಉಪನಿಷತ್ತು, ಬ್ರಹ್ಮಸೂತ್ರ, ಗೀತೆಗಳ ಬಗ್ಗೆ ಪಾಂಡಿತ್ಯಪೂರ್ಣವಾಗಿ ಬಂದವರೊಡನೆ ಚರ್ಚಿಸುತ್ತಿದ್ದರು. ಆದರೆ ಸಾರ್ವಜನಿಕವಾಗಿ ಉಪನ್ಯಾಸಗಳನ್ನು ನೀಡಲು ಇಷ್ಟಪಡುತ್ತಿರಲಿಲ್ಲ.

ಇವರು ಅನೇಕ ಕೃತಿಗಳನ್ನು ರಚಿಸಿದ್ದರೂ ದೊರೆತದ್ದು ಕೆಲವೇ ಕೃತಿಗಳು. ಅವುಗಳನ್ನು ಇಲ್ಲಿ ಕೊಟ್ಟಿದ್ದೇವೆ.

ಶ್ಯಾ॥ ವೆಂಕಟದಾಸಪ್ಪ ಅವರ ಕೃತಿಗಳು

೧. ಕುಲದೇವತಾಸ್ತುತಿ

ನಿನ್ನನು ನೆರೆನಂಬಿದೆನು ನಾ
ಉನ್ನತಗುಣಾರ್ಣವ
ಘನಮಹಿಮ ಶ್ರೀ ವೆಂಕಟೇಶಾ ॥ಪ॥

ನೀರಜಾಕ್ಷ ನಿತ್ಯ ಶುದ್ಧ
ನಿನ್ನಪೊಗಳಲಳವೇ ಎನಗೆ
ಸನ್ನುತಾಂಗ ಸಾಕೋ ದೇವಾ
ಇನ್ನು ಪರುಕಿಸಲೇಕೆ ಎನ್ನನು ॥೧॥

ದೇಹ ಮತಿಯು ಚಿತ್ತನಾಶ
ಸೋಽಹವೆನಿಪೋ ನೀನೇ ವ್ಯಾಪಕ
ಸಾಹಸಮೇಕೆನಗೆ ನಿನ್ನೊಳು
ಮೋಹಮಾಯೆ ಬಿಡಿಸೋ ದೇವನೆ ॥೨॥

ಮಂಗಳಾಂಗ ಮರೆತೆಯೇಕೋ
ಭಂಗವೆನಗೆ ಬರ್ಪುದೇಕೋ
ಸಂಗದೋರ ಸಾಕ್ಷಿರೂಪ
ಭಂಗರಹಿತ ಶ್ರೀವೆಂಕಟೇಶ ॥೩॥

೨. ಕಲ್ಯಾಡಿ ಶ್ರೀ ಭೈರವೇಶ್ವರ ಸ್ತುತಿ

ಗಿರಿಯಮಧ್ಯದೊಳಿರುವ
ಗುರುವೆ ಭೈರವರಾಯ
ಚರಣಕಾನತನಾಗಿ
ಮೊರೆಹೊಕ್ಕೆನೋ ॥೧॥

ಘೋರತರ ಸಂಸಾರ
ಭೂರಿ ಕಾನನದೊಳಗೆ
ಕ್ರೂರತರ ವನಮೃಗಗಳು
ಹಾರಿ ಬೀಳುತಿವೆ ॥೨॥

ಮೀರುತಿಹುದು ಕತ್ತಲೆಯು
ದಾರಿಕಾಣದೆ ಬಂದೆ
ಸೇರುತಿಹೆನು ನಿನ್ನಡಿಗೆ
ಗುರುದೇವನೇ ॥೩॥

ತ್ರೀಗುಣರಹಿತನೆ ನಿನ್ನಾ
ಸುಗುಣಗಳ ಬಲ್ಲೆನೇ
ಖಗಸೋಮಶಿಖಿನೇತ್ರ
ನಿಗಮವಿದಿತಾ ॥೪॥

ಜಗದಾದಿಕಾರಣನೆ
ಮೃಗಚರ್ಮಧಾರಿಯೇ
ಬಗೆತೋರಿ ಕರುಣದಿಂ
ಕಾಪಾಡೋ ದೇವಾ ॥೫॥

ಶಂಕರ ಚಂದ್ರಧರ
ವಿಷಧರ ಪಶುಪತಿಯೇ
ಪಂಕಜಾಕ್ಷನ ಸಖನೇ
ಪರಮಪುರುಷಾ ॥೬॥

ಅಂಕದಲಿ ಪಾರ್ವತಿಯನು
ಧರಿಸಿ ಮೆರೆಯುತಿಹ ದೇವಾ
ಸಂಕಟವ ಪರಿಹರಿಸೋ
ಶ್ರೀ ವೆಂಕಟೇಶಾ ॥೭॥

೩. ಸತ್ಯಸ್ವರೂಪ ನಾರಾಯಣ

ರಾಗ: ಕಾಪಿ ಝಂಪೆತಾಳ

ಸತ್ಯಸ್ವರೂಪ ನಾರಾಯಣ ದೇವನೆ
ನಿತ್ಯನಿರ್ಮಲ ಸುಪ್ರಕಾಶ ಚಿದ್ರೂಪ
ಧರೆಯೊಳಗೆ ಹೊರಗಿರುವ ಚರಣಾತ್ಮಕನಾಗಿ
ಪರಿಪೂರ್ಣನೀನಂತೆ ಅರಸುತಿಹೆನೋ ॥೧॥

ಕರಣಗಳು ಇಂದ್ರಿಯವು ಮರೆಮಾಡಿ ಮೋಹಿಸಿ
ತೆರಪುಗೊಂಡಿಹವೆಲ್ಲಾ ನಿನ್ನ ಸರಿಯಲ್ಕೆ
ಮನವೆಂಬ ಮರ್ಕಟವು ಮಣಿಯದಲೆ ಮಾರಾಂತು
ಘನತರದಿ ವಿಷಯಸುಖಕೆಳಸಿಹುದು ॥೨॥

ಆಮಿಷವು ಅಡ್ಡಬರೆ ಅನ್ಯತ ವಾದಿಸುತಲೆ
ಕಾಮಿನೀ ಕಾಂಚಾಣ ಕ್ಷೇತ್ರದಾಸೆಯಲಿ
ನೇಮದಲಿ ನಿನ್ನನೆಲೆ ಎಂದು ಕಾಂಬುವೆನಯ್ಯ
ತಾಮರಸದಳನಯನ ಶ್ರೀ ವೆಂಕಟೇಶಾ ॥೩॥

೪. ಅಪರಾಧಗಳ ಮರೆತು

ತಾಳ: ಝಂಪೆ **ರಾಗ: ಅಠಾಣ**

ಅಪರಾಧಗಳ ಮರೆತು ಕೃಪೆ ತೋರೋ ದೇವಾ
ಚಪಲತೆಯ ಪರಿಹರಿಸಿ ವಿಪುಲ ಮತಿಯನ್ನಿತ್ತು ॥ಪ॥

ಕರ್ಮಜಾಲದ ಬಲೆಯ ಮರ್ಮವನು ತಿಳಿಯದಲೆ
ಕರ್ಮಪಾಶದಿ ಎನ್ನ ಕೆಡಹಿ ಕಟ್ಟಿಹಾಕುವೆಯಾ
ಕರ್ಮಕರ್ತೃವು ನೀನೇ ಕರ್ಮಭೋಕ್ತೃವು ನೀನೇ
ಕೂರ್ಮೆಯಿಂ ತಿಳುಹೆನಗೆ ಧರ್ಮಮಾರ್ಗವನು ॥೧॥

ಜಗದ ಚೇತನ ನೀನೆ ಜಗವೆಲ್ಲ ಜಡವಿಹುದು
ಜಗಕೆಲ್ಲಿ ಸ್ವಾತಂತ್ರ್ಯ ಜಗನ್ನಾಥನೇ
ಮಿಗಿಲಾದ ಮಮತೆಯಿಂ ಬಗೆಯರಿಯದಿಹ ದುಃಖ
ದುಗುಡಗಳ ಭ್ರಾಮಕವ ನೀಗಿಸಯ್ಯಾ ॥೨॥

ನೀನಿಲ್ಲದಿನ್ನಿಲ್ಲ ನಿನ್ನನ್ನೆ ನಂಬಿಹೆನು
ನಿನ್ನಪಾದವ ಭಜಿಸಿ ನಿನ್ನ ನುತಿಗೈವೆ
ಅನ್ಯವನು ಕಾಣೆನಾ ಪನ್ನಂಗಶಯನನೇ
ಸನ್ನುತಾಂಗನೆ ದೇವಾ ಶ್ರೀವೆಂಕಟೇಶಾ ॥೩॥

೫. ಮನ್ನಿಸೆನ್ನನು ಮಹಾನುಭಾವ

ಮನ್ನಿಸೆನ್ನನು ಮಹಾನುಭಾವ
ಘನ್ನಮಹಿಮೆ ಸುಬ್ರಹ್ಮಣ್ಯ
ಸ್ವಾಮಿಯೇ ಶ್ರೀವನಿತೆಯರಸ
(ನೇಮದಿ) ಪರಮಭಕ್ತನ್ನೈ ॥೧॥

ಕಾವುದೆನ್ನನು ಕರುಣದಿಂದ
ಭಾವಭಕ್ತಿಯಿಂದ ಬೇಡಿಕೊಂಬೆ ನಾನು
ಜಗವಪೊತ್ತಿಹ ಅಗಣಿತ ಮಹಿಮ
ಸುಗುಣವಾರಿನಿಧೇ ಸೌಭಾಗ್ಯವೀಯೋ ॥೨॥

ನಗಧರಾಭಕ್ತ ನಿಗಮಾದಿವಿನುತ
ಜಗದಾದಿಶೇಷ ಜರಾಮೃತ್ಯುರಹಿತ
ಭಾಸುರಾಂಗನೆ ಭಯಾನಾಶನೆ
ಪೋಷಿಸೆನ್ನನು ಲೇಸನಿತ್ತು ದೇವಾ ॥೩॥

೬. ಹಿರಿಯರ ಸ್ತುತಿ

ರಾಗ: ಸಾವೇರಿ

ನಿನ್ನ ನಾನೆಂತು ಮರೆಯಲಯ್ಯ?
ಉನ್ನತನ ಗುಣನಿಧಿಯ ಚನ್ನಿಗನ ಭಕ್ತನಾ ॥ಪ॥

ನಾವಿಕನು ನೀನಾಗಿ ನಾವೆ ದಡ ಸೇರಿಸಿದೆ
ನೋವು ಕೇಡುಗಳೊಂದು ತಾಕದಂತೆ
ಭಾವನಕನು ನೀನಯ್ಯ ಸರ್ವಸಮತೆಯಲಿರುವ
ಭಾವವನು ತೋರಿಸಿದೆ ಹಿರಿಯನಾಗಿ ॥೧॥

ವ್ಯವಹಾರ ಧರ್ಮದೊಳು ಸನ್ಮಾರ್ಗದಲಿ ಕ್ರಮಿಸಿ
ಭುವಿಯೊಳಗೆ ಸನ್ಮಾರ್ಗವ ತೋರಿಸಿದೆಯೈ
ಸವಿನಯವು ಸದ್ಧರ್ಮ ಸದ್ಗುಣವು ಸದ್ಭಕ್ತಿ
ತವೆ ರೂಪುಗೊಂಡಂತೆ ನಿನ್ನ ದರ್ಶನವು ॥೨॥

ಗುರುಗಳಲಿ ಗುರು ನೀನೆ ಹಿರಿಯರಲಿ ಹಿರಿಯನೋ
ಭರವಸೆಯ ಸಂಸಾರಿಗಾದರ್ಶ ನೀನೇ
ಮರೆಯಲಳವೇ ನಿನ್ನ ರೂಪವದು ತೊರೆದಿಹುದು
ಕರುಣಿಸೆನೆಗಾದರ್ಶ ಶ್ರೀವೆಂಕಟೇಶಾ ॥೩॥

(ದಿವಂಗತ ಅರಸೀಕೆರೆ ದಾಸಪ್ಪನವರ ಕುರಿತಾಗಿ)

೭. ದೇಶಭಕ್ತಿಗೀತೆ

ತಪವಗೈಯುತಿಹನಿಲ್ಲಿ ಪರಮೇಶ್ವರ
ಎಚ್ಚರಿಕೆ, ಎಚ್ಚರಿಕೆ, ಎಚ್ಚರಿಕೆ ನಿಮಗೆ
ಭಾರತವು ಆತ್ಮರೂಪು ತಾನಾಗಿ
ಜಗದ ಶಾಂತಿಯ ಕಾಯಲಾಚರಿಸುತಿಹನಿಲ್ಲಿ

ಮುಕ್ಕಣ್ಣ ತಾನಾಗಿ ಮೂಜಗವ ಕಾಯಲ್ಕೆ
ಧವಳಗಿರಿ ಶಿಖರದಲಿ ಮೌನದಿಂದಿಹನು
ಸೂರ್ಯನೇತ್ರದಿ ಧಾರುಣಿಯೊಳಗೆಲ್ಲಾ

ಭಾರತದಾಶಯವ ನಲಿಸುತಿಹನು
ಚಂದ್ರನೇತ್ರದಲಿ ಪ್ರೇಮಸುಧೆಯ
ಸಂದೇಶವನು ಜಗಕ್ಕೆಲ್ಲಾ

ತಪವ ಭಂಗಿಸಬೇಡ ಹೇ ಮರ್ತ್ಯಕುಬ್ಜ
ಕೆರಳಿ ಪಾಲಾಗ್ನಿ ಬಿಡೆ ಜಗವೆಲ್ಲಾ ಭಸ್ಮ
ನಿನ್ನಳವ ನೀ ತಿಳಿ ಮರ್ತ್ಯ ಇನ್ನೆಂದು ಸಾಹಸವು ವ್ಯರ್ಥ

(೧೯೬೨ರಲ್ಲಿ ಚೀನೀಯರು ಯುದ್ಧ ಸಾರಿದಾಗ ರಚಿಸಿದ ದೇಶಭಕ್ತಿಗೀತೆ)

೮. ಮೆರೆಯಲೀ ಬಾವುಟವು

ಮೆರೆಯಲೀ ಬಾವುಟವು
ಧರೆಯೊಳತಿಎತ್ತರದಿ ||ಪ||

ನಿರುತಶಾಂತಿಯನಿತ್ತು
ಪೊರೆಯಲೀ ಬಾವುಟವು ||ಅ.ಪ.||

ಕರ್ಮಯೋಗೀ ಗಾಂಧಿ
ನಿರ್ಮಲದಿ ಶಕುತ ತಾ
ಕರ್ಮಮಾರ್ಗವ ತೋರ್ಪ
ನಿರ್ಮಮತೆ ಬಾವುಟವು ||೧||

ಪಶುಶಕುತಿಯನು ಜೈಸ
ಲಸು ತೊರೆದರೆನಿತೋ ಜನ
ಅಸಮುಸತ್ವದಿ ಕೊಡಿ
ಜಸೆವಡೆದ ಬಾವುಟವು ||೨||

ಪರಮಾಣುಯುಗದಲ್ಲಿ
ಪರಿಹಾರ ಕಾಣದಲೆ
ಪರಿತಪಿಪ ಜಗಕೆಲ್ಲಾ
ಪರಿಹಾರವೀ ಬಾವುಟವು ||೩||

೯. ಶರಣಾದೆನೆನಲು

(ವರ್ಣ ಅಟ್ಟತಾಳ)

ಪೊರೆಯೋ ಎನ್ನನು ದೇವನೇ
ಶರಣರ ಕಾವನೆ
ಚರಣಕಾನತ ಭಕ್ತನ ಕರುಣಿಸೆ
ಕರಪಿಡಿದು ||ಪ||

ತರಳೆ ದ್ರೌಪದಿ ತಾನು
ಶರಣಾದೆನೆನಲು
ಭರದಿ ಪೊರೆದೆ ನೀನು
ಶರಣು ಶರಣ್ಯೆ ಕರುಣಿ ಕರುಣಿಸು
ಪರಮಪುರುಷನೆ ಪತಿತಪಾವನೆ
ಕರಿವದನ ಕಮನೀಯರೂಪ ||೧||

ಘೋರ ದುರಿತಕೋಟಿ ತಾರಕನಾದ
ಧೀರ ನಿನ್ನನು ನಂಬಿದೆ
ಭೂರಿ ಭಯವನು ಸೆಳೆದು ಎನ್ನನು
ನಾ ರಥದ ಪಥದಿಂದ ಕಾಯ್ಯೆ
ಮಾರಜನಕ ಮಂದರೋದ್ಧಾರ ||೨||

ಜ್ಞಾನದಾತನು ನೀನೆ ನೋಡಲು ಸಮ್ಯಕ್
ಜ್ಞಾನಚಕ್ಷುವು ನೀನೆ
ಜ್ಞಾನ ಭಕ್ತಿಯನರಿಯೆ
ಸಾನುರಾಗದಿ ಕರುಣಿಸೋ
ದೀನಬಂಧು ಶ್ರೀವೆಂಕಟೇಶಾ ||೩||

೧೦. ಶ್ರೀರಾಮಭಕ್ತಿಗೀತೆ

(ರಾಗ: ದ್ವಿಜಾವಂತಿ)

ಶ್ರೀರಾಮಚಂದ್ರ ಭಜೇಽಹಂ
ರಘು ರಾಮಚಂದ್ರ ಭಜೇಽಹಂ ॥ಪ॥

ಸಕಲಕಲ್ಯಾಣ ಗುಣಪರಿಪೂರ್ಣಂ
ಸಚ್ಚಿದಾನಂದ ಸ್ವರೂಪಂ
ನಿಖಿಲಾಮ್ನಾಯ ಸೇವಿತಂ
ನಿರ್ಮಲಾನಂದ ಸಾಗರಂ ॥೧॥

ರಘುಕುಲ ಜಾತವರೇಣ್ಯಂ
ರಾಕಾನಿಶಾಕರ ವದನಂ
ರಾಜೀವಲೋಚನಂ ರಾಜೇಂದ್ರಂ
ರಮಣೀಯನಾಮಂ ಶ್ಯಾಮಲಂ ॥೨॥

ಸರ್ವಲೋಕ ದುಃಖಹರಣಂ
ಸರ್ವದೈತ್ಯಕುಲ ಕುಠಾರಂ
ಸರ್ವೇಶ್ವರ ಸರ್ವಭರಿತಂ
ಸದಾಶ್ರೀ ವೆಂಕಟೇಶಾರ್ಚಿತಂ ॥೩॥

೧೧. ನರಸ್ತೋತ್ರವಾ ನಾ ಮಾಡಲಾರೆ

ರಾಗ: ಷಣ್ಮುಖಪ್ರಿಯ ತಾಳ: ಆದಿತಾಳ

ನರಸ್ತೋತ್ರವಾ ನಾ ಮಾಡಲಾರೆ
ಹರಿ ನಿನ್ನ ಧ್ಯಾನಸ್ಮರಣೆಯ ಮಾಡೋ ॥ಪ॥

ನರಕಾಂತಕ ಸುರಸೇವಿತ
ನಾರದಾದಿ ವಂದ್ಯ ನಿರುಪಮ ರೂಪ ॥ಅ.ಪ॥

ಧರೆಯ ಭೋಗದಿ ಇರುವೆನಿತ್ಯವೆಂದು
ಧರೆಯ ಮಧ್ಯೆ ತ್ರಾಣ ಬರಿಭ್ರಮೆಯಿಂದ
ಪರಮ ನಿನ್ನ ಮರೆತು ದುರಹಂಕಾರದಿಂದ
ನಿರುತ ಬೀಗಿ ಬರಿದೆ ಮೆರೆಯುತಿರುವಂಥ ॥೧॥

ತಾನೆ ಜ್ಞಾನಿಯೆಂದು ತಾನೇ ಸುಗುಣಿಯೆಂದು
ತಾನೇ ಧನಿಕನೆಂದು ತನಗೆ ಮಿಗಿಲಿಲ್ಲವೆಂದು
ತಾನೇ ದೇಹವೆಂದು ತನುವೇ ನಿತ್ಯವೆಂದು
ತನ್ನೊಳಿರುವ ಚೈತನ್ಯವನ್ನೇ ಮರೆತ ॥೨॥

ನೀನೇ ವ್ಯಾಪಕ ವಿಶ್ವಕಾರಣ
ನೀನೇ ಜೀವನ ವಿಶ್ವ ಚೇತನಾ
ಸಾನುರಾಗದಿಂದ ಏನುಮಾಳ್ಪೆ ನಿನ್ನ
ಅನಘ ವೆಂಕಟೇಶಾ ಅಮರಾದ್ರಿವಾಸ ॥೩॥

೧೨. ಮನವ ನಿಲ್ಲಿಸೋ

ಮನವ ನಿಲ್ಲಿಸೋ ನಿನ್ನ ಚರಣ ಕಮಲದೊಳು
ಅನುದಿನ ಶ್ರೀಹರಿಯೇ ॥ಪ॥

ವನರುಹಲೋಚನ । ವನಜನಾಭನೆ ಕೇಳೋ
ವನಜಸಂಭವ ಮುಖ್ಯ । ರನುಮೇಶರೊಡೆಯನೆ
ಪರಮಪುರುಷ । ಕರುಣಸಾಗರ ಕೇಳೋ
ಪರಿಪರಿ ಜನ್ಮದಿ ಪರಿಭ್ರಮಿಸಿ ರಮಿಸೀಗ॥ ॥೧॥

ನರ ದೇಹದಲಿ ಪುಟ್ಟಿ । ಹರಿಯಾಜ್ಞೆ ಬಯಸದೆ
ಅರಿತು ಅರಿಯದಂತೆ । ಪರರ ಬಾಗಿಲ ಕಾದೆ
ಶರಧಿಮಂದರ ಶ್ರೀಧರಾ । ನಿನ್ನ ಪರಮ ಮಂಗಳನಾಮವ
ಸ್ಮರಿಸಲಾರದೆ ಅಂಗಗಳಿಲಿ । ಆ ಸ್ಮರಣೆ ಧ್ಯಾನವ ಮರೆತೆ ॥೨॥

ಹಿಂದಿನಾ ಅನುಭವನೊಂದನಾನರಿಯೆ
ಮುಂದೆ ಬರುವದೆಂತೊ ಮೊದಲೆ ನಾನರಿಯೆ
ಹಿಂದಿನಾ ಭವವೆಲ್ಲ ಬಂಧನದೊಳು ಸಿಲುಕಿ
ನಿಂದಿರೆ ಕರ್ಮವಾಪರಿಯ ನಾನೊಂದ ನಲಿಯೆ ॥೩॥

ನಿನ್ನ ನಾಮವ ನೆನೆದು ನಿನ್ನ ಪಾದವ ನಂಬಿ
ನಿನ್ನವನೆಂದೆಣಿಸಿ ಬಹುಸ್ತುತಿಸಿಯೋಗ
ಎನ್ನ ಶರೀರ ಅಡಗಿಸಿ ಶ್ರೀರಘುವರನಿಗೆ
ಚೆನ್ನದಾರತಿಯ ಭೂರಿ ಹರುಷದಿ ಗೈವೆನೀಗ ॥೪॥

ಧರಣೀದೇವಿಯ ಮೊರೆಯನು ಕೇಳೀ
ನರರೂಪದೊಳವತಾರವ ತಾಳೀ
ಪರಿಪರಿಲೀಲೆಯ ಕೋರುತಲಾಗ
ಹರುಷದಿ ನೃಪತಿಗೆ ವಂದಿಸಿದೇ ॥೫॥

ದನುಜ ತಾಟಕಿಯ ಸಂಹರಿಸುತ್ತ
ಮುನಿಜನಯಜ್ಞವ ಸಂರಕ್ಷಿಸುತಾ
ಅನುಪಮ ಗುಣವತಿಯಾದ ಅಹಲ್ಯೆಯ
ಘನತರ ದಯೆಯಿಂ ರಕ್ಷಿಸಿದಂ ॥೬॥

ಗಂಗಾನದಿಯ ದಾಟುತ ಮುನಿಪ
ತುಂಗನೊಡನೆ ಮಿಥಿಲೆಗೆ ಪೋಗುತ
ಭಂಗವಗೈಯಲು ಸುರರು ಪೊಗಳೇ
(ಮಂಗಳೆ) ಶುಭಾಂಗಿ ಜಾನಕಿಕರಪಿಡಿದಾ ॥೭॥

೧೩. ಶ್ಯಾ॥ ವೆಂಕಟದಾಸಪ್ಪನವರ ವಿರಚಿತ ಶ್ರೀ ಲಕ್ಷ್ಮೀವೆಂಕಟೇಶ್ವರ ಅಕಾರ ಅಷ್ಟೋತ್ತರಶತನಾಮ

೧. ಓಂ ಅಗಣಿತ ಗುಣ ನಿಲಯಾಯ ನಮಃ
೨. ಓಂ ಅಪ್ರಮೇಯಾಯ ನಮಃ
೩. ಓಂ ಅತೀಂದ್ರಿಯಾಯ ನಮಃ
೪. ಓಂ ಅನಘಾಯಾ ನಮಃ
೫. ಓಂ ಅಮರವಂದಿತಾಯ ನಮಃ
೬. ಓಂ ಅವಿನಾಶಾಯ ನಮಃ
೭. ಓಂ ಅವಿಕಾರಾಯ ನಮಃ
೮. ಓಂ ಅಲಿಪ್ತಾಯ ನಮಃ
೯. ಓಂ ಅಮಿತವಿಕ್ರಮಾಯ ನಮಃ
೧೦. ಓಂ ಅವ್ಯಕ್ತಾಯ ನಮಃ
೧೧. ಓಂ ಅಜಾಯ ನಮಃ
೧೨. ಓಂ ಅಚಲಾಯ ನಮಃ
೧೩. ಓಂ ಅನಾಮಯಾಯ ನಮಃ
೧೪. ಓಂ ಅನಂತಾಯ ನಮಃ
೧೫. ಓಂ ಅಸಕ್ತಾಯ ನಮಃ
೧೬. ಓಂ ಅನ್ನದಾಯ ನಮಃ
೧೭. ಓಂ ಅನಿರುದ್ಧಾಯ ನಮಃ
೧೮. ಓಂ ಅಜ್ಞಾನನಿವಾರಣಾಯ ನಮಃ
೧೯. ಓಂ ಅಹಂಕಾರನಾಶಿನೇ ನಮಃ
೨೦. ಓಂ ಅಪರೋಕ್ಷಜ್ಞಾನದಾಯಕಾಯ ನಮಃ
೨೧. ಓಂ ಅಧರ್ಮಾಭ್ಯುತ್ಥಾನಾಯ ನಮಃ
೨೨. ಓಂ ಅಗ್ನಿರೂಪಾಯ ನಮಃ
೨೩. ಓಂ ಅಜಿತಾಯ ನಮಃ
೨೪. ಓಂ ಅಸಮಾನಾಯ ನಮಃ
೨೫. ಓಂ ಅಧಿಕಾರರಹಿತಾಯ ನಮಃ

೨೬. ಓಂ ಅಪ್ರತಿಮ ಪ್ರಭಾಯ ನಮಃ
೨೭. ಓಂ ಅದೃಷ್ಟಾಯ ನಮಃ
೨೮. ಓಂ ಅಚ್ಯುತಾಯ ನಮಃ
೨೯. ಓಂ ಅಧೋಕ್ಷಜಾಯ ನಮಃ
೩೦. ಓಂ ಅರವಿಂದಾಕ್ಷಾಯ ನಮಃ
೩೧. ಓಂ ಅಧ್ಯಾತ್ಮ ನಿಲಯಾಯ ನಮಃ
೩೨. ಓಂ ಅಧಿಭೂತಾಯ ನಮಃ
೩೩. ಓಂ ಅಧಿದೈವಾಯ ನಮಃ
೩೪. ಓಂ ಅಧಿಯಜ್ಞಾಯ ನಮಃ
೩೫. ಓಂ ಅಂತಕಾಂತಕಾಯ ನಮಃ
೩೬. ಓಂ ಅಥರ್ವವೇದಾಯ ನಮಃ
೩೭. ಓಂ ಅಕ್ಷರಾಯ ನಮಃ
೩೮. ಓಂ ಅನುಶಾಸನಕಾಯ ನಮಃ
೩೯. ಓಂ ಅಣೋರಣೀಯಾಯ ನಮಃ
೪೦. ಓಂ ಅಚಿಂತ್ಯರೂಪಾಯ ನಮಃ
೪೧. ಓಂ ಅಭ್ಯಾಸಯೋಗಫಲದಾಯಕಾಯ ನಮಃ
೪೨. ಓಂ ಅವಿನಾಶಾಯ ನಮಃ
೪೩. ಓಂ ಅಂತಃಸ್ಥಾಯ ನಮಃ
೪೪. ಓಂ ಅನಸೂಯಾಯ ನಮಃ
೪೫. ಓಂ ಅಕಾಮಿನೇ ನಮಃ
೪೬. ಓಂ ಅಕ್ರೋಧಿನೇ ನಮಃ
೪೭. ಓಂ ಅಲೋಭಾಯ ನಮಃ
೪೮. ಓಂ ಅಶುಭಮೋಕ್ಷಿಣೇ ನಮಃ
೪೯. ಓಂ ಅಸಂಸಾರಿಣೇ ನಮಃ
೫೦. ಓಂ ಅಪ್ರಾಪ್ಯಪದಾಯ ನಮಃ
೫೧. ಓಂ ಅಧ್ಯಕ್ಷಾಯ ನಮಃ
೫೨. ಓಂ ಅಮೋಘಾಯ ನಮಃ
೫೩. ಓಂ ಅಮೋಘಕರ್ಮಿಣೇ ನಮಃ
೫೪. ಓಂ ಅಮೋಘಜ್ಞಾನಸ್ವರೂಪಾಯ ನಮಃ
೫೫. ಓಂ ಅನೇಕಾನಾಮೇಕಾಯ ನಮಃ


೫೬. ಓಂ ಅಹಂಕ್ರತುವೇ ನಮಃ
೫೭. ಓಂ ಅಹಂಯಜ್ಞಾಯ ನಮಃ
೫೮. ಓಂ ಅಹಂಸ್ವಧಾಯ ನಮಃ
೫೯. ಓಂ ಅಹಮೋಷಧಯ ನಮಃ
೬೦. ಓಂ ಅಹಂ ಮಂತ್ರಾಯ ನಮಃ
೬೧. ಓಂ ಅಹಂಆಜ್ಞಾಯ ನಮಃ
೬೨. ಓಂ ಅಹಂಅಗ್ನಯೇ ನಮಃ
೬೩. ಓಂ ಅಹಂಹರ್ತ್ಯವೇ ನಮಃ
೬೪. ಓಂ ಅಹಂಮೋಂಕಾರಾಯ ನಮಃ
೬೫. ಓಂ ಅಹಂಋಗೇ ನಮಃ
೬೬. ಓಂ ಅಹಂಸಾಮಗಾಯ ನಮಃ
೬೭. ಓಂ ಅಹಂಯಜುರೇ ನಮಃ
೬೮. ಓಂ ಅಗಣಿತಗುಣದಾಯಕಾಯ ನಮಃ
೬೯. ಓಂ ಅಮೃತಾಯ ನಮಃ
೭೦. ಓಂ ಅನನ್ಯಭಕ್ತಿದಾತಾಯ ನಮಃ
೭೧. ಓಂ ಅಶಾಂತನಾಶಾಂತಿದಾಯಕಾಯ ನಮಃ
೭೨. ಓಂ ಅನಿತ್ಯಸಂಸಾರನಾಶಿನೇ ನಮಃ
೭೩. ಓಂ ಅನಾದಿಪುರುಷಾಯ ನಮಃ
೭೪. ಓಂ ಅಸಮ್ಮೂಢಜನಾಶ್ರಯಾಯ ನಮಃ
೭೫. ಓಂ ಅಶ್ವತ್ಥಾಯ ನಮಃ
೭೬. ಓಂ ಅಘನಾಶಿನೇ ನಮಃ
೭೭. ಓಂ ಅಚಿಂತ್ಯಾಯ ನಮಃ
೭೮. ಓಂ ಅವ್ಯಯಾಯ ನಮಃ
೭೯. ಓಂ ಆರ್ಯಮಾಚಾಸ್ಮಿನೇ ನಮಃ
೮೦. ಓಂ ಅಕ್ಷರಾಣಾಮಕಾರರೂಪಿಣೇ ನಮಃ
೮೧. ಓಂ ಅರ್ಜುನರೂಪಿಣೇ ನಮಃ
೮೨. ಓಂ ಅನೇಕವಕ್ತ್ರಾಯ ನಮಃ
೮೩. ಓಂ ಅನೇಕಾದ್ಭುತದರ್ಶನಾಯ ನಮಃ
೮೪. ಓಂ ಅನೇಕಾದಿವ್ಯಾಯುಧಧರಾಯ ನಮಃ
೮೫. ಓಂ ಅನಿಂದ್ಯಾಯ ನಮಃ

೮೬. ಓಂ ಅಪಶ್ಯದ್ದೇವದೇವಾಯ ನಮಃ
೮೭. ಓಂ ಅಚ್ಛೇಧ್ಯಾಯ ನಮಃ
೮೮. ಓಂ ಅದಾಹ್ಯಾಯ ನಮಃ
೮೯. ಓಂ ಅಕ್ಲೇದ್ಯಾಯ ನಮಃ
೯೦. ಓಂ ಅಶೋಚ್ಯಾಯ ನಮಃ
೯೧. ಓಂ ಅನಿಕೇತನಿಕೇತನಾಯ ನಮಃ
೯೨. ಓಂ ಅಹಿಂಸಾರತಾಯ ನಮಃ
೯೩. ಓಂ ಅಸುರಕೋಟಿಹರಾಯ ನಮಃ
೯೪. ಓಂ ಅವಿದ್ಯಾತಮಸಾಮರ್ಕಾಯ ನಮಃ
೯೫. ಓಂ ಅಮರೇಂದ್ರಪೂಜಿತಾಯ ನಮಃ
೯೬. ಓಂ ಅಖಿಲಜಗದ್ವ್ಯಾಪಕಾಯ ನಮಃ
೯೭. ಓಂ ಅಮರಗಿರಿನಿವಾಸಾಯ ನಮಃ
೯೮. ಓಂ ಅಂತಶ್ಶರೀರಸ್ಥಾಯ ನಮಃ
೯೯. ಓಂ ಅಷ್ಟಾಧಾಪ್ರಕೃತಿನಿಯಮಕಾಯ ನಮಃ
೧೦೦. ಓಂ ಆದಿದೇವಾಯ ನಮಃ
೧೦೧. ಓಂ ಆತ್ಮನೇ ನಮಃ
೧೦೨. ಓಂ ಆಕಾರರಹಿತಾಯ ನಮಃ
೧೦೩. ಓಂ ಆನಂದನಿಲಯಾಯ ನಮಃ
೧೦೪. ಓಂ ಆದಿತ್ಯಕೋಟಿತೇಜಸೇ ನಮಃ
೧೦೫. ಓಂ ಆಬ್ರಹ್ಮಭುವನಾಲೋಕಪರಿಪಾಲಕಾಯ ನಮಃ
೧೦೬. ಓಂ ಆಶ್ರಿತಜನರಕ್ಷಕಾಯ ನಮಃ
೧೦೭. ಓಂ ಆದಿಮಧ್ಯಾಂತರಹಿತಾಯ ನಮಃ
೧೦೮. ಓಂ ಅಮರಾದ್ರಿನಿವಾಸಾಯ ನಮಃ

ಶ್ರೀಲಕ್ಷ್ಮೀವೆಂಕಟೇಶಾಯ ನಮಃ

ಭಾಗ – ೪

ಕೆಲ್ಲಂಗೆರೆ ತಿಮ್ಮಪ್ಪದಾಸರ ಮಗ
ಅರಸೀಕೆರೆ ರಾಮದಾಸರ
ಜೀವನ ಮತ್ತು ಕೃತಿಗಳು



ಅರಸೀಕೆರೆ ರಾಮದಾಸರು (ರಾಂಮೇಷ್ಟ್ರು) ಪರಿಚಯ

ತಿಮ್ಮಪ್ಪದಾಸರ ನಂತರ ಅವರ ಮನೆಯಲ್ಲಿ ದಾಸಪರಂಪರೆಯನ್ನು ಮುಂದುವರಿಸಿಕೊಂಡು ಹೋದವರಲ್ಲಿ ಅವರ ನಾಲ್ಕನೇ ಪ್ರೀತಿಯ ಮಗ 'ರಾಮದಾಸರು' ಒಬ್ಬರು. ಇವರೂ ಉಪಾಧ್ಯಾಯವೃತ್ತಿ ಹಾಗೂ ಸಂಗೀತ, ಹರಿಕಥಾ ಕಾಲಕ್ಷೇಪವನ್ನು ತಂದೆಯವರ ಜಾಡಿನಲ್ಲೇ ಮುಂದುವರಿಸಿಕೊಂಡು ಹೋದವರು.

ಬಹಳ ಚಿಕ್ಕಂದಿನಲ್ಲೇ ಇವರನ್ನು ತಿಮ್ಮಪ್ಪದಾಸರು ಮೈಸೂರಿನ ಬಿಡಾರಂ ಕೃಷ್ಣಪ್ಪನವರಲ್ಲಿ ಬಿಟ್ಟರು. ಸಂಗೀತ ಶಿಕ್ಷಣದ ಕ್ರಮಪಾಠವನ್ನು ಪಿಟೀಲು ಚೌಡಯ್ಯನವರ ಜೊತೆಯಲ್ಲೇ ಪ್ರಾರಂಭಿಸಿದರು. ಬಿಡಾರಂ ಕೃಷ್ಣಪ್ಪನವರು ರಾಮಣ್ಣನ ಕಂಠಸಿರಿಗೆ ಮಾರುಹೋಗಿ ಇವನನ್ನು ತಮ್ಮ ಅಚ್ಚುಮೆಚ್ಚಿನ ಶಿಷ್ಯನನ್ನಾಗಿ ಸ್ವೀಕರಿಸಿ, ಮೈಸೂರಿನಲ್ಲಿ ಶ್ರೀರಾಮನವಮಿ ಕಾಲದ ಎಲ್ಲಾ ಕಛೇರಿಗಳಿಗೂ ಜೊತೆಗೆ ರಾಮಣ್ಣನನ್ನು ಕರೆದೊಯ್ಯುತ್ತಿದ್ದರು. ಇದರಿಂದ ರಾಮಣ್ಣನಿಗೆ ಹೆಚ್ಚಿನ ಶಿಕ್ಷಣ ಅನುಭವ, ವಿದ್ವಾಂಸರುಗಳ ಪರಿಚಯ ಆಗಲು ಕಾರಣವಾಯ್ತು.

ರಾಮಣ್ಣ ತಮ್ಮ ವೃತ್ತಿ ಜೀವನವನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ ಪ್ರಾರಂಭಿಸಿ ಆಗಿನ ಕಾಲದಲ್ಲಿ ಕನ್ನಡ ಅಕ್ಷರಮಾಲೆಯನ್ನು ಶಾಲೆಯಲ್ಲಿ ಚಿತ್ರಗಳ ಮೂಲಕ ಬಿಡಿಸಿ ಹೊಸ ಮಾದರಿ ಶುರುಮಾಡಿ ಶಿಕ್ಷಣ ಇಲಾಖೆಯವರಿಂದ ಎಲ್ಲರ ಮೆಚ್ಚಿಗೆ ಸಂಪಾದಿಸಿದ್ದವರು. ಶಿಸ್ತುಬದ್ಧ ಉಪಾಧ್ಯಾಯರಾಗಿದ್ದ ಇವರು ಶಾಲೆಗೆ ಎಂದೂ ರಜಾ ಹಾಕಿದವರಲ್ಲ.

ದಿನ ಕಳೆದಂತೆ ತಮ್ಮಲ್ಲಿ ಕಂಡುಬಂದ ಸಂಗೀತ ಪ್ರತಿಭೆಯನ್ನು ಬಳಸಿಕೊಂಡು ಉತ್ತಮ ಗಾಯಕರಾದರು. ಆಗಿನ ಕಾಲದ ಹಿರಿಯ ಕಲಾವಿದರಾದ ಆರ್.ಕೆ. ಶ್ರೀಕಂಠನ್, ರಾಜಯ್ಯಂಗಾರ್, ಚೆಂಬೈ ಇವರುಗಳ ಸರಿಸಮ ಹಾಡುವವರಾದರು. ತಂದೆಯವರಿಂದ ಬಂದ ಸಂಗೀತ, ಸಂಸ್ಕೃತ, ಹಳೆಗನ್ನಡ, ಮರಾಠಿ ಭಾಷೆಗಳಲ್ಲಿ ಇವುಗಳ ಪಾಂಡಿತ್ಯ ಹೊಂದಿದ್ದರು. ಇವರಲ್ಲಿನ ಒಂದು ವಿಶೇಷವೆಂದರೆ ಎಲ್ಲಾ ತರಹದ ಪಕ್ಕ ವಾದ್ಯಗಳನ್ನೂ ನುಡಿಸುವುದರಲ್ಲಿ ಪಾಂಡಿತ್ಯ ಪಡೆದಿದ್ದರು. ಪಿಟೀಲು, ವೀಣೆ, ಮೃದಂಗ, ಹಾರ್ಮೋನಿಯಂ, ಕೊಳಲು, ಜಲತರಂಗ್, ಖಂಜರ ನುಡಿಸಿ ಎಲ್ಲರನ್ನು ಬೆರಗುಗೊಳಿಸುತ್ತಿದ್ದರು. ಕಾರಣ ಇವರು ಮೈಸೂರಿನಲ್ಲಿ ಕಲಿತ ಶಿಕ್ಷಣ ಹಾಗಿತ್ತು. ಇದೂ ಅಲ್ಲದೇ ರಾಮಣ್ಣದಾಸರು ಹೊಸ, ಹೊಸ ರಾಗಸಂಯೋಜನೆ ಸಹ

ಮಾಡುತ್ತಿದ್ದರಂತೆ. ಇವರ ಸಂಗೀತ, ಭಜನೆ ಮತ್ತು ಮರಾಠಿ ಅಭಂಗಗಳನ್ನು ಇವರ ಬಾಯಲ್ಲಿ ಕೇಳುವುದೇ ಬಲು ಸೊಗಸು. ಇಂದಿಗೂ ಸಹ ಅನೇಕ ಹಿರಿಯರು ಇವರ ಹಾಡುಗಾರಿಕೆಯನ್ನು ಸ್ಮರಿಸಿಕೊಳ್ಳುತ್ತಾರೆ.

ಇಷ್ಟೆಲ್ಲಾ ವಿದ್ಯೆ ಇದ್ದರೂ ಇವರೂ ಸಹ ತಂದೆಯವರಂತೆ ಪ್ರಚಾರಪ್ರಿಯರಲ್ಲ. ತಮ್ಮ ಅರಸೀಕೆರೆಯಲ್ಲೇ ನೂರಾರು ವಿದ್ಯಾರ್ಥಿಗಳನ್ನು ಹಾಗೂ ಹೆಣ್ಣುಮಕ್ಕಳನ್ನು ಸಂಗೀತದಲ್ಲಿ ತಯಾರು ಮಾಡಿದ್ದರು. ಇವರ ಶಿಕ್ಷಣ ಪಾಠವೆಲ್ಲಾ ಸೇವಾಮನೋಭಾವದಿಂದ ಕೂಡಿರುತ್ತಿತ್ತು. ಇವರಿಗೆ ಶೃತಿ, ತಾಳ, ಲಯಬದ್ಧರಾಗಿ ಹಾಡುವವರನ್ನು ಕಂಡರೆ ಎಲ್ಲಿಲ್ಲದ ಪ್ರೀತಿ. ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದರು.

ಮುಂದಿನ ದಿನಗಳಲ್ಲಿ ರಾಮಣ್ಣ 'ರಾಮದಾಸರಾಗಿ' ರೂಪುಗೊಂಡು ತಂದೆಯವರು ಬರೆದ ಕಥಾಕಾಲಕ್ಷೇಪಗಳನ್ನೇ ಮಾಡಿ ಪ್ರಸಿದ್ಧರಾದರು. ರಾಮನವಮೀ ಕಾಲದಲ್ಲಿ, ಹೊಳೇನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಕಡೂರು, ಬೀರೂರು. ಮಾಲೇಕಲ್ಲು ತಿರುಪತಿ, ಇತರ ಕಡೆಗಳಲ್ಲಿ ಹರಿಕಥಾ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದವರಾಗಿದ್ದರು.

ಇವರೂ ಸಹ ಸ್ವಂತ ಅನೇಕ ಕೃತಿ ರಚನೆ ಮಾಡಿದವರು. ಹಿಂದೊಮ್ಮೆ ರಾಷ್ಟ್ರನಾಯಕ ಗಾಂಧೀಜಿಯವರ ಆಕಸ್ಮಿಕ ಮರಣದಿಂದ ನೊಂದವರಾಗಿ, ಗಾಂಧಿ, ನೇತಾಜಿ, ಪಟೇಲ್ ಇವರುಗಳ ಮೇಲೆ ಭಾಮಿನೀ ಷಟ್ಪದಿಯಲ್ಲಿ ೩೦ಕ್ಕೂ ಹೆಚ್ಚು ಕೃತಿ ರಚನೆ ಮಾಡಿದ್ದರು.

ಕನ್ನಡ ನಾಡಿನ ಹಿರಿಯ ಸಾಹಿತಿಗಳಾದ ಡಿ.ವಿ.ಜಿ.ಯವರು ಹಿಂದೆ ಅರಸೀಕೆರೆಗೆ ಬಂದಾಗ ತಮ್ಮ ತಂದೆಯವರು ಬರೆದ 'ಶ್ರೀಮದ್ರಾಮಾಯಣಕಥಾಸಂಗ್ರಹ'ದ ಹರಿಕಥಾ ರೂಪಕದ ಶ್ರವಣ ಮಾಡಿಸಿದರು. ಇದಕ್ಕಾಗಿ ಡಿವಿಜಿ ಎರಡು ದಿನಗಳ ಕಾಲ ಮನೆಯಲ್ಲೇ ಉಳಿದುಕೊಂಡಿದ್ದರು. ತಿಮ್ಮಪ್ಪದಾಸರ ರಾಮಾಯಣ ಕೃತಿಯನ್ನು ಬಹಳವಾಗಿ ಮೆಚ್ಚಿಕೊಂಡರು. ಡಿವಿಜಿ ಅವರ ಶ್ರೀರಾಮಪರೀಕ್ಷಣಂನಲ್ಲಿ ೯ನೇ ಭಾಗವಾಗಿ ಸೇರಿಸಿರುವ ವಾಲ್ಮೀಕಿ ವಿಜಯಂ ಎಂಬ ಕವಿತಾಭಾಗವನ್ನು ತಿಮ್ಮಪ್ಪದಾಸರ ಬಗ್ಗೆ ರಚಿಸಿದರು. ಅದಕ್ಕೆ ರಾಮಣ್ಣದಾಸರು ಹಲವು ಸೂಚನೆ ನೀಡಿ, ರಾಗ ಮಾಲಿಕೆ ನಂತರ ಶ್ರೀರಾಗ ದೇವಗಾಂಧಾರಿ, ಮೋಹನ, ಸಾವೇರಿ, ಸುರಭಿ ರಾಗಗಳನ್ನು ಪದ್ಯಗಳಿಗೆ ಹೊಂದಿಸಿಕೊಟ್ಟರು. ರಾಮಣ್ಣದಾಸರ ಹಸ್ತಾಕ್ಷರದಲ್ಲೇ ಇದರ ಎರಡು ಪದ್ಯಗಳನ್ನು ರಾಮಾಯಣದ ಪ್ರತಿಯಲ್ಲಿ ಕಾಣಬಹುದು. ಇದರಿಂದ ರಾಮಣ್ಣದಾಸರ ಬಗ್ಗೆ ಡಿವಿಜಿಯವರಿಗೆ ಹೆಚ್ಚಿನ ಗೌರವವಿತ್ತು ಎನ್ನಬಹುದು.

ಹಿಂದೊಮ್ಮೆ ನಮ್ಮ ದ.ರಾ. ಬೇಂದ್ರೆಯವರು ಅರಸೀಕೆರೆಗೆ ಬಂದಾಗ ಅವರು ಬರೆದ ಸಖೀಗೀತ, ಗಂಗಾವತರಣ, ಕುಣಿಯೋಣು ಬಾರ ಹೀಗೆ ಇವುಗಳನ್ನು ಸಂಗೀತಕ್ಕೆ ಅಳವಡಿಸಿ ಪ್ರಸ್ತಾರ ಹಾಕಿ ತೋರಿಸಿ ಬೇಂದ್ರೆಯವರನ್ನೇ ಬೆರಗುಗೊಳಿಸಿದ್ದರು.

ಇವರ ಸಂಗೀತ ವಿದ್ವತ್ತು ಎಲ್ಲರನ್ನು ಮೆಚ್ಚಿಸುವಂತಹುದು. ಇವರು ಮಾಡುತ್ತಿದ್ದ ಹೆಚ್ಚಿನ ಹರಿಕಥೆಗಳು ಬಹಳ ವಿದ್ವತ್‌ಪೂರ್ಣವಾಗಿರುತ್ತಿದ್ದವು. ಇವರ ಅಣ್ಣನ ಮಗ ವಿಶ್ವೇಶ್ವರನನ್ನು ಭಾಗವತರನ್ನಾಗಿ ತಯಾರು ಮಾಡಿದರು. ಇವರು ಬೇಲೂರಿನಲ್ಲಿ ಬಹಳ ಪ್ರಸಿದ್ಧಿ ಪಡೆದಿದ್ದರು. ತಮ್ಮ ಮನೆಯವರನ್ನೇ ಪಕ್ಕವಾದ್ಯಗಳಿಗೆ ತಯಾರು ಮಾಡಿದ್ದರು–ಅಣ್ಣನ ಮಗ ಹಾರ್ಮೋನಿಯಂ ವಿದ್ವಾನ್ ಕೃಷ್ಣಪ್ಪ, ಮಗ ಪಿಟೀಲಿನ ಶ್ರೀನಿವಾಸ, ಇನ್ನೊಬ್ಬ ಮಗ ಮೃದಂಗದ ವೆಂಕಟದಾಸು ಇವರುಗಳು ಪ್ರಸಿದ್ಧರಾಗಿದ್ದರು.

ವೆಂಕಟದಾಸು ಬೆಂಗಳೂರಿನ ನ್ಯಾಷನಲ್ ಸ್ಕೂಲಿನಲ್ಲಿ ಸಂಗೀತ ಶಿಕ್ಷಕರಾಗಿ, ಮೃದಂಗ ವಿದ್ವಾಂಸರಾಗಿ ಘಟಂ ಮಂಜುನಾಥ್‌ರವರ ಜೊತೆ ಆಕಾಶವಾಣಿ ಕಲಾವಿದರಾಗಿ ಸೇವೆ ಸಲ್ಲಿಸಿದರು.

ಪ್ರಸಿದ್ಧ ನ್ಯಾಯವಾದಿ, ಹಿರಿಯ ರಾಜಕಾರಣಿ, ಕಾನೂನು ಸಚಿವರಾಗಿದ್ದ ಹಾರನಹಳ್ಳಿ ರಾಮಸ್ವಾಮಿಗಳು ತಿಮ್ಮಪ್ಪದಾಸರ ಕಡೇ ಮಗ ಶ್ಯಾ॥ ಅನಂತರಾಮಯ್ಯನವರ ಮಕ್ಕಳು. ರಾಮಸ್ವಾಮಿಗಳ ಅಣ್ಣಂದಿರಾದ ಶ್ಯಾ॥ ವೆಂಕಟದಾಸಪ್ಪನವರು ಮಹಾವಿದ್ವಾಂಸರು, ಭಗವದ್‌ಗೀತೆ, ಉಪನಿಷತ್ತುಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದವರು. ತಿಮ್ಮಪ್ಪದಾಸರ ಜಾಡಿನಲ್ಲೇ ಅನೇಕ ಕೃತಿ ರಚನೆಗಳನ್ನು ಮಾಡಿರುತ್ತಾರೆ. ಇಂದಿಗೂ ಸಹ ದಾಸರಮನೆ ಹೆಣ್ಣುಮಕ್ಕಳು ಬಹಳ ಸುಶ್ರಾವ್ಯವಾಗಿ ಹಾಡುವವರಿದ್ದಾರೆ. ದೇಶ ವಿದೇಶಗಳಲ್ಲಿ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ದೂರದ ಅಮೇರಿಕಾ ದೇಶದಲ್ಲಿ ರಾಮಸ್ವಾಮಿಯವರ ಮೊಮ್ಮಕ್ಕಳು ನೃತ್ಯ ಸಂಗೀತಗಳಲ್ಲಿ ಹೆಸರು ಗಳಿಸಿದವರೂ ಇದ್ದಾರೆ. ಮಗ ಅರವಿಂದ ಹಾರನಹಳ್ಳಿ ಕಂಪ್ಯೂಟರ್‌ನಲ್ಲಿ ವಿದೇಶದಲ್ಲಿ ಪ್ರಶಸ್ತಿ ಗಳಿಸಿದವರು. ಹೀಗೆ ತಿಮ್ಮಪ್ಪದಾಸರ ಬಂಧುಗಳ ಪಟ್ಟಿ ದೊಡ್ಡದಿದೆ.

೧. ದೀಪವಿದ ಬೆಳಗುವೆನು ದೇವ ನೀ ನೋಡು

ದೀಪವಿದ ಬೆಳಗುವೆನು ದೇವ ನೀ ನೋಡು
ವ್ಯಾಪಿಸುವ ತಿಮಿರವನು ಪರಿಹರಿಸಿ ಕೊಂಬಂಥ । ॥ಪ॥

ಸಕಲ ದೇಹಾತ್ಮನಲಿ ತಿಲ ತೈಲವಾಗಿರುವ
ಅಖಿಳ ಶ್ರುತಿವರ್ತಿಯಿಂ ಸಮ್ಮಿಳಿತವಾಗಿ
ಪ್ರಕಟದಿಂದಲೆ ಮೂರು ರೂಪದೊಳು ಒಂದಾಗಿ
ವಿಕಸ ರೂಪದಿ ಮೂರು ಲೋಕಗಳ ಬೆಳಗುತಿಹ ॥೧॥

ಜ್ಞಾನವೇ ಗೋಘೃತವು ಮಾತುಗಳೆ ವರ್ತಿಗಳು
ನೀನದಕೆ ಮೂಲಕಾರಣ ವಸ್ತುವೆನಿಸಿ ।
ಸ್ವಾನುಕೂಲಗಳಿಂದ ಒಂದಾಗಿ ಚಿತ್ತದೊಳು
ಲೀನವಾಗಿರುವ ತಿಳಿ ಘೃತವು ಸೇರಿರುವ ॥೨॥

ಎನ್ನ ಜೀವವೆ ದೀಪ ನಿಮ್ಮ ಪಾದವೆ ಬ್ರಹ್ಮ
ಭಿನ್ನ ಭಾವನೆ ಅಳಿದ ಪೂರ್ಣರೂಪದೊಳು
ನಿನ್ನೊಳಗೆ ನಿಲಿಸೆನ್ನ ಪುಣ್ಯಸಮವೆಂದೆನಿಸು ।
ಸ್ವರ್ಣಮಯ ತಿರುಪತಿಯ ವೆಂಕಟರಮಣ ॥೩॥

೨. ರಾಮನೆ ನಿನ್ನಯ ನಾಮದ ರುಚಿಯನು

ಹಿಂದೂಸ್ತಾನಿ ಕಾಪಿ ರಾಗ

ರಾಮನೆ ನಿನ್ನಯ । ನಾಮದ ರುಚಿಯನು।
ಆ ಮಹೇಶ ಬಲ್ಲ । ಹರೇ.... ರಾಮಾ.... ॥ಪಲ್ಲವಿ॥

ಆ ಮುನಿ ಗೌತಮ ಭಾಮೆಯು ನಿನ್ನಯ
ಪ್ರೇಮದ ಪಾದದ ಮಹಿಮೆಯ ಬಲ್ಲದು ॥ಅ.ಪ॥

ನಿನ್ನಯ ಬಾಹುಗಳ ಘನ್ನ ಪರಾಕ್ರಮ
ವನ್ನು ಈಶ ಚಾಪ ಚೆನ್ನಾಗಿ ಬಲ್ಲದು
ನಿನ್ನಯ ಚಾಪದ ಸನ್ನುತ ಗತಿ ವೇಗ
ಮುನ್ನ ಪಯೋಧಿನಿ ಚೆನ್ನಾಗಿ ಬಲ್ಲದು ॥೧॥

ಘೋರಾರಣ್ಯದಿ ಘೋರ ಪಂದಿಯು
ಸಾರುತ ಮೇಲಣ ಕೋರಯಿಂ ತಿವಿಯಲು
ಮೀರಿದ ಕ್ರೋಧದಿ ಹಾ ರಾಮ ಎನ್ನಲು
ಭೂರಿ ಭಕ್ತಿಯಿಂದ ಕಾರಣನಾದನೋ ॥೨॥

....
....
....
.... ॥೩॥

೩. ಮರೆಯಾದೆಯಾ ಪರಮಪೂಜ್ಯ ಗಾಂಧಿ

ಷಣ್ಮುಖಪ್ರಿಯ ರಾಗ **ಆದಿತಾಳ**

ಮರೆಯಾದೆಯ ಪರಮಪೂಜ್ಯ ಗಾಂಧಿ
ಪರಿಪರಿ ಸೇವೆ ವಿರಚಿಸಿ ಜಗಕೆ । ಮರೆಯಾದೆಯ ॥ಪ॥

ಅಪಕಾರಿಗಳಿಗೆ ಉಪಕಾರ ಗೈದು
ಸುಪವಿತ್ರನಾಗಿ ಕೃಪೆಯಿಂದ ಕೂಡಿ ॥ಅ.ಪ॥

ಸತ್ಯವನ್ನೇ ಹಿಡಿದು ಸತ್ಯವನ್ನೇ ನುಡಿದು
ಸತ್ಯಮಾರ್ಗದಲ್ಲಿ ನಡೆಸುತ್ತ ಜಗವ
ಮಿಥ್ಯವೆಂದು ತಿಳಿದು ಮಾಯವನ್ನ ಕಳೆದು
ಸತ್ಯರೂಪನಲ್ಲಿ ಸತ್ಯನಾಗಿ ನೀ ಕಣ್ಮರೆಯಾದೆಯ ॥೧॥

ಶಾಂತಿಯನ್ನೆ ಹಿಡಿದು ಶಾಂತಿಯನ್ನೆ ನುಡಿದು
ಶಾಂತಿ ಮಾರ್ಗದಲ್ಲಿ ನಡೆಸುತ್ತ ಜಗವ
ಶಾಂತರಾಗಿರೆಂದು ಸಂತತವು ಪೇಳಿ
ಶಾಂತರೂಪನಲ್ಲಿ ಶಾಂತನಾಗಿ ನೀ ಕಣ್ಮರೆಯಾದೆಯ ॥೨॥

ಭೋಗವನ್ನು ತೊರೆದು ರಾಗ ನೀಗಿ ಕರ್ಮ
ಯೋಗಿಯಾಗಿ ಹರಿಜನರಲ್ಲಿ ಅನುರಾಗವನ್ನು ಬೀರಿ
ಭೋಗಿಶಾಯಿಯಾಗಿ ದೇಗುಲಾವ ತೋರ್ದ
ತ್ಯಾಗಮೂರ್ತಿಯೆ ಕಣ್ಮರೆಯಾದೆಯ ॥೩॥

ಹಿಂಸಮಾರ್ಗದಿಂದ ಜಗದನಾಶವು
ಅಹಿಂಸ ಮಾರ್ಗದಿಂದ ಜಗಕೆ ಸೌಖ್ಯವೆಂದು
ಸಂಶಯವನೆಲ್ಲ ಕಳೆಯುತ್ತ ಪರಮ-
ಹಂಸ ರೂಪನಲ್ಲಿ ಸೋಹಂಭಾವದಿಂ ಕಣ್ಮರೆಯಾದೆಯ ॥೪॥

ಪಾರತಂತ್ರದಿಂದ ಪಾರನೊಂದಿರುವ
ಭಾರತದ ಬಂಧ ಪಾರುಮಾಡುತ
ಭೂರಿ ಹರುಷದಿಂದ ತೋರಿ ಶಿಷ್ಯರಿಗಾಪಾರಾ
ಭಾರವನ್ನು ಹೇಳಿ ವೀರ ನೀ ಕಣ್ಮರೆಯಾದೆಯ ॥೫॥

ಕಾಮಹರನು ಸದಾ ನೇಮದಿಂದ ಜಪಿಸಿ
ಭೂಮಿಜನರ ದುಃಖ ಪ್ರೇಮದಿಂದ ಕಳೆವ
ರಾಮನಾಮವ ನಿಷ್ಕಾಮದಿಂದ ನುಡಿದು
ರಾಮದಾಸನಾಗಿ ಕಾಮವನ್ನು ತುಳಿದು ॥೬॥

೪. ರಾಮನ ಸೇರಿಸುವ ದೂತನೆ

ರಾಗ: ಬೇಹಾಗ್ ಆದಿತಾಳ

ರಾಮನ ಸೇರಿಸುವ । ದೂತನೆ ॥ಪ॥

ಕರಣರಕ್ಷಸರೆನ್ನ । ಹರಣಗೈದಿಹರೆನ್ನ
ಕೊರಗುತಿಹೆ ರಾಮ । ಪರಿಯನರಿಯದಿನ್ನ ॥೧॥

ಕಾಮರಹಿತ ಶ್ರೀ । ರಾಮ ನಾಮಾಂಗುಲಿ
ಪ್ರೇಮದೊಳೀಯುತೆ । ತಾಮಸಕಳೆಯುತೆ ॥೨॥

ಶಮದದುಗುಣ ಕಪಿ । ಯಮಿಕಸೇನೆಯಗೂಡೀ
ಭ್ರಮೆಯ ಸುರರ ಕೊಲ್ಲೆ । ನಮಿಪೆ ರಾಯನ ತಾರೋ ॥೩॥

ರಾಮನೊಡೆನೆಯೆನ್ನ । ನೇಮದಿ ಕೂಡಿಸೆ
ಪ್ರೇಮಹಾರವನೀವೆ । ನೀ ಮನಮಾಡೋ ಶ್ರೀ ॥೪॥

ಭಾಗವತರ ಪಾದ । ಬೇಗ ಪಿಡಿವ ಪುಣ್ಯ
ಭಾಗಿಯ ಮಾಡೆನ್ನ ನೀ । ತ್ಯಾಗಿಗಳೊಡೆಯ ಶ್ರೀ ॥೫॥

ಅನುಬಂಧ – ೧

ಕೃತಜ್ಞತೆಗಳು

ಈ ಕೆಳಕಂಡ ಮಹನೀಯರು ತಿಮ್ಮಪ್ಪದಾಸರ ಮತ್ತು ಅವರ ಮನೆತನದವರ ಬಗ್ಗೆ ಜೀವನದ ವಿವರಗಳನ್ನು ಮತ್ತು ಕೀರ್ತನೆಗಳನ್ನು ಸಂಗ್ರಹಿಸಲು ನೆರವಾಗಿದ್ದಾರೆ. ಅವರೆಲ್ಲರಿಗೂ ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

೧. ಕೆಲ್ಲಂಗೆರೆ ಕೆ. ವೆಂಕಟದಾಸಪ್ಪನವರು (ತಿಮ್ಮಪ್ಪದಾಸರ ಮೊಮ್ಮಗ)

೨. ಹೊನ್ನವಳ್ಳಿ ಹೆಚ್.ಸಿ. ಕೇಶವಮೂರ್ತಿಗಳು (ಕನ್ನಡ ಸಂಸ್ಕೃತ ಪಂಡಿತರು)

೩. ಕೆಲ್ಲಂಗೆರೆ ಶ್ಯಾನುಭೋಗ ವೆಂಕಟರಾಮಯ್ಯನವರು

೪. ಅರಸೀಕೆರೆ ವೆಂಕಟೇಶ್ವರ ಕಾಫಿ ವರ್ಕ್ಸ್‌ನ ಮಾಲಿಕರು ಮತ್ತು ಅವರಣ್ಣಂದಿರಾದ ನಾಗಣ್ಣನವರು (ತಿಮ್ಮಪ್ಪದಾಸರ ಮೊಮ್ಮಕ್ಕಳು)

೫. ಹೆಚ್.ಡಿ. ಗುಂಡಪ್ಪ ಮತ್ತು ಪತ್ನಿ ಜಾನಿಕಮ್ಮ ಅವರು ಮತ್ತು ಇವರ ಹಿರಿಯ ಮೊಮ್ಮಗ ದಾಸಪ್ಪನವರ ಮಕ್ಕಳು

೬. ಕೆ.ಆರ್. ಗೋಪಾಲ್ (ರಾಮಣ್ಣದಾಸರ ಪುತ್ರರು)

೭. ಬಾಣಾವರದ ಉಪಾಧ್ಯಾಯ ವೃತ್ತಿಯ ದಿ॥ ಸುಬ್ಬರಾಯರು

೮. ಮತ್ತೂರು ಶಾಮಣ್ಣನವರು ಮತ್ತು ಇವರ ತಾಯಿಯವರು

೯. ಕೆ. ರಾಮಗೋವಿಂದ್ (ಶ್ರೀನಿವಾಸಮೂರ್ತಿ ಅವರ ಅಣ್ಣಂದಿರು)

೧೦. ಸಕ್ಕರಾಯಪಟ್ಟಣದ ಜಯಮ್ಮನವರು

೧೧. ಯಳವಾರೆ ಶ್ಯಾನುಭೋಗ ವೆಂಕಟದಾಸಪ್ಪನವರ ಮಗ ನ್ಯಾ॥ ವೆಂಕಟೇಶಮೂರ್ತಿ

೧೨. ವೆಂಕಟಲಕ್ಷ್ಮಮ್ಮ, ರಂಗಮ್ಮ, ಭವಾನಮ್ಮ (ತಿಮ್ಮಪ್ಪದಾಸರ ಮಕ್ಕಳು)

೧೩. ಹಾರನಹಳ್ಳಿ ರಾಮಸ್ವಾಮಿ (ತಿಮ್ಮಪ್ಪದಾಸರ ಮಗ ಅನಂತರಾಮಯ್ಯನವರ ಪುತ್ರ)

೧೪. ತಳಲೂರು ಶ್ಯಾ. ಕೃಷ್ಣಮೂರ್ತಿಗಳು


೧೫. ವಿದ್ವಾನ್ ಕೃಷ್ಣಪ್ಪನವರು (ಹಾರ್ಮೋನಿಯಂ ವಿದ್ವಾಂಸರು)

೧೬. ಶ್ರೀ ಕೆ. ವೆಂಕಟದಾಸಪ್ಪನವರು (ಹಾರನಹಳ್ಳಿ ರಾಮಸ್ವಾಮಿ ಅವರ ಹಿರಿಯಣ್ಣನವರು)

ಅನುಬಂಧ - ೨


ತಿಮ್ಮಪ್ಪದಾಸರ ವಂಶವೃಕ್ಷ

ಮೂಲ ಪುರುಷ ಯಳವಾರೆ ತಿಮ್ಮಪ್ಪಯ್ಯ



ಅನಂತರಾಮಯ್ಯನವರನ್ನು ದತ್ತು ತೆಗೆದುಕೊಂಡ ದಾಸಪ್ಪನವರ ಮನೆತನದ ವಂಶವೃಕ್ಷ

(ಬಿ) ಅಯ್ಯಾಜಯ್ಯ






ಕೆಲ್ಲಂಗೆರೆ ತಿಮ್ಮಪ್ಪದಾಸರು
(1834–1926)



ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ/
ಶ್ರೀ ಗೋವಿಂದರಾಜ ಸ್ವಾಮಿ (ಮಾಲೇಕಲ್ ತಿರುಪತಿ, ಅರಸೀಕೆರೆ)



ಪದ್ಮಾವತಿ ಅಮ್ಮನವರು (ಮಾಲೇಕಲ್ ತಿರುಪತಿ)



ಉತ್ಸವಮೂರ್ತಿ, ಮಾಲೇಕಲ್ ತಿರುಪತಿ



ಕ್ಷೇತ್ರರಕ್ಷಕ ಕೆಂಚರಾಯ



ಮಾಲೇಕಲ್ ತಿರುಪತಿ ಬೆಟ್ಟದ
ಶ್ರೀ ವೆಂಕಟೇಶ್ವರಸ್ವಾಮಿ



ಮಾಲೇಕಲ್ ತಿರುಪತಿ ಬೆಟ್ಟದ
ಮಹಾಲಕ್ಷ್ಮೀ ಅಮ್ಮನವರು




ತಿಮ್ಮಪ್ಪದಾಸರು ಕೆತ್ತನೆಯ ಎಕ್ಕದ ಗಣಪತಿ

ತಿಮ್ಮಪ್ಪದಾಸರ ಮಕ್ಕಳು



ಹಿರಿಯ ಮಗ ದಾಸಪ್ಪ




ಎರಡನೆಯ ಮಗ ನಾರಾಯಣಪ್ಪ

ತಿಮ್ಮಪ್ಪದಾಸರ ಮಕ್ಕಳು




ನಾಲ್ಕನೆಯ ಮಗ ರಾಮಣ್ಣದಾಸರು




ಕೊನೆಯ ಮಗ ಅನಂತರಾಮಯ್ಯನವರು


ತಿಮ್ಮಪ್ಪದಾಸರ ಮೊಮ್ಮಕ್ಕಳು




ರಾಮದಾಸಪ್ಪನವರ ಪುತ್ರ ಶ್ರೀನಿವಾಸಯ್ಯ



ಅನಂತರಾಮಯ್ಯನವರ ಪುತ್ರ
ವೆಂಕಟದಾಸಪ್ಪ



ಅನಂತರಾಮಯ್ಯನವರ ಪುತ್ರ
ತಿಮ್ಮಪ್ಪಯ್ಯ



ಅನಂತರಾಮಯ್ಯನವರ ಪುತ್ರ ಹಾರನಹಳ್ಳಿ ರಾಮಸ್ವಾಮಿ



ಮಾಲೇಕಲ್ ತಿರುಪತಿ ದೇವಸ್ಥಾನ



ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ರಥ
(ಮಾಲೇಕಲ್ ತಿರುಪತಿ)



ಶ್ರೀ ಲಕ್ಷ್ಮೀನಾರಾಯಣ
(ಕೆಲ್ಲಂಗೆರೆ)

ಕೆಲ್ಲಂಗೆರೆ ತಿಮ್ಮಪ್ಪದಾಸರು ಕನ್ನಡನಾಡಿನಲ್ಲಿ ಅದ್ವೈತ ಹರಿದಾಸರಲ್ಲಿ ಪ್ರಮುಖರಲ್ಲಿ ಒಬ್ಬರು. ಅರಸೀಕೆರೆ ತಿಮ್ಮಪ್ಪದಾಸರು ಎಂತಲೂ ಅವರನ್ನು ಜನ ಕರೆಯುತ್ತಾರೆ. ಆಧ್ಯಾತ್ಮಪ್ರವೀಣರಾಗಿ, ಹರಿಕಥಾ ವಿದ್ವಾಂಸರಾಗಿ, ಕಲಾವಿದರಾಗಿ ಸಾರ್ವಜನಿಕ ಸೇವಾ ದುರಂಧರರಾಗಿ ಸಜ್ಜನ ಸದ್ಗ್ರಹಸ್ಥರಾಗಿ ಅಪೂರ್ವ ಕೀರ್ತನೆಗಳನ್ನು, ಹರಿಕಥೆಗಳನ್ನು ರಚಿಸಿ ಭಕ್ತಕವಿಗಳಾಗಿ ನಾಡಿನಾದ್ಯಂತ ಕಳೆದ ಶತಮಾನದ ಪ್ರಾರಂಭದಲ್ಲಿ ಪ್ರಖ್ಯಾತರಾದವರು ತಿಮ್ಮಪ್ಪದಾಸರು.



ಶ್ರೀ ವೆಂಕಟೇಶ ಮೂಲ ಮಂತ್ರ ಜಪಿಸಿರಿ

ಓಂ ಕ್ಲೀಂ ವೆಂಕಟೇಶಾಯ ಪುರುಷಾಯ ಮಹಾತ್ಮನೇ
ಪ್ರಣತಕ್ಲೇಷನಾಶಾಯ ಗೋವಿಂದಾಯ ನಮೋ ನಮಃ

ರಚನೆ: ಕೀರ್ತಿಶೇಷ ಕೆಲ್ಲಂಗೆರೆ ಶ್ರೀ ತಿಮ್ಮಪ್ಪದಾಸರು

ಶ್ರೀನಿವಾಸ ಪುಸ್ತಕ ಪ್ರಕಾಶನ